ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ

ಮಾನವನ ದೇಹದಲ್ಲಿ ಹಂದಿಯ ಹೃದಯವೇ? ವೈದ್ಯಕೀಯ ಜಗತ್ತಿನ ಅಪರೂಪದ ಶಸ್ತ್ರಚಿಕಿತ್ಸೆ ತೆರೆದಿಟ್ಟ ಹೊಸ ಸಾಧ್ಯತೆಗಳು ಮತ್ತು ಉಳಿಸಿದ ಪ್ರಶ್ನೆಗಳು



ಜಲವಿವಾದ: ಫೆಬ್ರುವರಿಯಲ್ಲಿ ಸರ್ವ ಪಕ್ಷ ಸಭೆ- ಸಿ.ಎಂ 5

ಗರಿಷ್ಠ ಪರೀಕ್ಷೆ ನಡೆಸಿದ ರಾಜ್ಯಗಳ ಸಾಲಿನಲ್ಲಿ ಕರ್ನಾಟಕಕ್ಕೆ ಮೂರನೇ ಸ್ಥಾನ

ಗೋವಾ ಶಾಸಕರ ದಾಖಲೆ ಪಕ್ಷಾಂತರ 7

6 ಕೋಟಿ ದಾಟಿದ ಕೊರೊನಾ ಪರೀಕ್ಷೆ 8

ಚುನಾವಣೆಗಷ್ಟೇ ದಿವ್ಯಾಸ್ತ್ರ • ಅಧಿಕಾರ ಹಿಡಿಯುತ್ತಲೇ ಮರೆತು ಬಿಡುವ ರಾಜಕಾರಣಿಗಳು

ಮಾತಷ್ಟೇ ಜೋರು: ಹರಿಯದ ನೀರು

• ಎಸ್.ರವಿಪ್ರಕಾಶ್

ಬೆಂಗಳೂರು: ಪ್ರತಿ ವಿಧಾನಸಭೆ, ಲೋಕಸಭೆ ಚುನಾವಣೆಯ ಹೊತ್ತಿಗೆ ಮತ ಗಿಟ್ಟಿಸಲು ಬಳಕೆಯಾಗುವ ಕೃಷಿ, ನೀರಾವರಿ ಯೋಜನೆಗಳು ಮತದಾನ ಮುಗಿಯುತ್ತಿದ್ದಂತೆ ನೇಪಥ್ಯಕ್ಕೆ ಸರಿಯುತ್ತವೆ. ಅಧಿಕಾರ ಹಿಡಿಯುತ್ತಿದ್ದಂತೆ ಹಿಂದೆ ನೀಡಿದ್ದ ವಾಗ್ದಾನ, ಭರವಸೆಗಳನ್ನೆಲ್ಲ ರಾಜಕಾರಣಿಗಳು ಅದೇ ನೀರಿನಲ್ಲಿ ತೊಳೆದುಬಿಡುತ್ತಾರೆ. ಮತ್ತೊಂದು ಚುನಾವಣೆಯ ಕಸರತ್ತು ಶುರುವಾಗುವವರೆಗೆ 'ದಿವ್ಯಾಸ್ತ್ರ'ವನ್ನು ಜೋಪಾನ ಮಾಡಿ ಇಟ್ಟುಕೊಳ್ಳುವುದು ರಾಜಕಾರಣಿಗಳ ಜಾಯಮಾನ.

ಅಧಿಕಾರಸ್ಥರನ್ನು ಇಳಿಸಿ, ಅಧಿಕಾರದ ಪೀಠ ಏರಲೂ ಎಲ್ಲ ಪಕ್ಷಗಳಿಗೂ ರೈತ, ಕೃಷಿ, ನೀರಾವರಿಯ ಮೆಟ್ಟಿಲುಗಳಿರುವ ಏಣಿಯೇ ಬೇಕು. ಅದರಲ್ಲೂ ಕೃಷ್ಣಾ ಮತ್ತು ಕಾವೇರಿ ನದಿ ನೀರಿನ ವಿಚಾರ ಕಿತ್ತೂರು ಕರ್ನಾಟಕ ಮತ್ತು ಹಳೇ ಮೈಸೂರು ಭಾಗದಲ್ಲಿ 90 ರ ದಶಕದಿಂದಲೂ ಪ್ರತಿಯೊಂದು ಚುನಾವಣೆಯ ಮುಖ್ಯ ವಿಷಯ. ಯೋಜನಾ ವೆಚ್ಚದ ಹೆಚ್ಚಳ, ಜಲ ವಿವಾದ, ಅನುಮತಿಯಲ್ಲಿ ವಿಳಂಬ, ಭೂಸ್ವಾಧೀನದ ತೊಡಕು ಮತ್ತು ಹಣಕಾಸಿನ ಮುಗ್ಗಟ್ಟಿನಿಂದಾಗಿ ನೀರಾವರಿ ಯೋಜನೆಗಳು ತೆವಳುತ್ತಾ ಸಾಗುತ್ತಿರುವುದು ಮಾತ್ರ ವಾಸ್ತವ.

2010 ರಲ್ಲಿ ಕೃಷ್ಣಾ ನದಿ ನೀರಿನ ಹಂಚಿಕೆಯ ತೀರ್ಪು ಬಂದಾಗ, ಮುಂದಿನ ದಶಕವನ್ನು ನೀರಾವರಿ ದಶಕ ಎಂದು ಘೋಷಿಸಿ ಪೂರ್ಣಗೊಳಿಸಲಾಗುವುದು ಎಂದು ಅಂದಿನ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹೇಳಿದ್ದರು. 2013 ರ ವಿಧಾನಸಭಾ ಚುನಾವಣೆಗೆ ಮುನ್ನ ಉತ್ತರ ಕರ್ನಾಟಕದ ಮತದಾರರನ್ನು ಸೆಳೆಯಲು 'ಕಾಂಗ್ರೆಸ್ ನಡಿಗೆ ಕೃಷ್ಣೆಯ ಕಡೆಗೆ' ಎಂಬ ಪಾದಯಾತ್ರೆ ನಡೆಸಿದ್ದ ಕಾಂಗ್ರೆಸ್ ನಾಯಕರು ಅಧಿಕಾರಕ್ಕೆ ಬಂದರೆ ಪ್ರತಿ ವರ್ಷ ₹10 ಸಾವಿರ ಕೋಟಿಯಂತೆ ಒಟ್ಟು ₹50 ಸಾವಿರ ಕೋಟಿ ಖರ್ಚು ಮಾಡುವುದಾಗಿ ವಾಗ್ದಾನ ಮಾಡಿದ್ದರು.

ಕಳೆದ ಚುನಾವಣೆ ಹೊತ್ತಿಗೆ ಮಹದಾಯಿ ಯೋಜನೆ ಪ್ರಮುಖ ವಿಷಯವಾಗಿತ್ತು. ಲೋಕಸಭೆ ಚುನಾವಣೆ ಪ್ರಚಾರದ ವೇಳೆ ಕೇಂದ್ರ ಸಚಿವರು, ರಾಜ್ಯ ನಾಯಕರು ಬಿಜೆಪಿ ಅಧಿಕಾರಕ್ಕೆ ಬಂದರೆ ಯೋಜನೆ ಜಾರಿ ಮಾಡಿಯೇ ಸಿದ್ಧ ಎಂದು ಘೋಷಿಸಿದ್ದರು. ಅಂದು ಶಾಸಕರಾಗಿದ್ದ ಈಗಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಆ ವೇದಿಕೆಯಲ್ಲಿಯೇ ಇದ್ದರು. ಆದರೆ, ಲೋಕಸಭೆ ಚುನಾವಣೆ ಮುಗಿದು ಮೂರು ವರ್ಷ ಸಮೀಪಿಸುತ್ತಿದ್ದರೂ ಡಬಲ್ ಎಂಜಿನ್ ಸರ್ಕಾರ, ಯೋಜನೆಯನ್ನು ಮುಂದಕ್ಕೆ ಕೊಂಡೊಯ್ಯಲೇ ಇಲ್ಲ.

ಇದೀಗ ಮೇಕೆದಾಟು ಯೋಜನೆಯ ಅನುಷ್ಠಾನಕ್ಕೆ ಒತ್ತಾಯಿಸಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಪಾದಯಾತ್ರೆ ಆರಂಭಿಸಿದ್ದು, ಕೋವಿಡ್‌ನಿಂದಾಗಿ ಮೊಟಕುಗೊಂಡಿದೆ.

ಯಾವುದೇ ಯೋಜನೆಗಳನ್ನು ಪೂರ್ಣಗೊಳಿಸುವುದು ಭಾರಿ ಸಂಖ್ಯೆಯಲ್ಲಿ ಜನ ಸೇರಿಸಿ ಹೋರಾಟ ಅಥವಾ ಪಾದಯಾತ್ರೆ ಮಾಡಿದಷ್ಟು ಸುಲಭವಲ್ಲ. ಕೇಂದ್ರ ಅರಣ್ಯ–ಪರಿಸರ ಸಚಿವಾಲಯದ ಅನುಮತಿ ಪಡೆಯದೇ, ಅಂತರರಾಜ್ಯ ಜಲ ವಿವಾದದ ವ್ಯಾಪ್ತಿಗೆ ಒಳಪಡುವ ನದಿ ನೀರಿನ ವಿಷಯದಲ್ಲಿ ಅಗತ್ಯ ಮುನ್ನೆಚ್ಚರಿಕೆ ತೆಗೆದುಕೊಳ್ಳದೇ ಚುನಾವಣೆಯಲ್ಲಿ ಮತಗಳಿಸಲು ಅಥವಾ ಜನಪ್ರಿಯತೆ ಪಡೆಯಲು ತರಾತುರಿಯಲ್ಲಿ ಅನೇಕ ಯೋಜನೆಗಳನ್ನು ಘೋಷಣೆ ಮಾಡಿದ್ದೇ ಯೋಜನೆ ವಿಳಂಬಕ್ಕೆ ಪ್ರಮುಖ ಕಾರಣ.

6ನೇ ಪುಟ ನೋಡಿ

ಒಳನೋಟ

ಮುಗಿಯದ ನೀರಾ'ವರಿ'

ಪ್ರತಿಕ್ರಿಯಿಸಿ: 9606038256
feedback@prajavani.co.in

ಎತ್ತಿನ ಹೊಳೆ

₹8,323.50 ಕೋಟಿ (2012)
ಮೂಲ ಅಂದಾಜು

₹12,912.32 ಕೋಟಿ (2014)
ಪರಿಷ್ಕೃತ ಅಂದಾಜು

₹25,000 ಕೋಟಿ
ಹಾಲಿ ವೆಚ್ಚದ ಉದ್ದೇಶ

ಹಾಸನ, ಚಿಕ್ಕಮಗಳೂರು, ತುಮಕೂರು, ಬೆಂಗಳೂರು ಗ್ರಾಮಾಂತರ, ರಾಮನಗರ, ಚಿಕ್ಕಬಳ್ಳಾಪುರ ಮತ್ತು ಕೋಲಾರಗಳಿಗೆ ಕುಡಿಯುವ ನೀರು ಪೂರೈಕೆ ಮತ್ತು 527 ಕೆರೆಗಳನ್ನು ತುಂಬಿಸಲು 24.01 ಟಿಎಂಸಿ ಬಳಕೆ.



ಸಾಂದರ್ಭಿಕ ಚಿತ್ರ

10 ವರ್ಷದಲ್ಲಿ ಮಾಡಿದ ಖರ್ಚು

ವರ್ಷ	ವೆಚ್ಚ	ಬಜೆಟ್‌ನಲ್ಲಿ ನಿಗದಿ ಮಾಡಿದ್ದು (₹ ಕೋಟಿಗಳಲ್ಲಿ)	ನೀರಾವರಿ ಪ್ರದೇಶ
2010–2015	₹29,729	₹34,494	3.08 ಲಕ್ಷ ಹೆಕ್ಟೇರ್
2015–2020	₹57,335	₹73,195	1.39 ಲಕ್ಷ ಹೆಕ್ಟೇರ್

ಜಲ ವಿವಾದ, ಅನುಮತಿ ಸಿಗದೇ ಯೋಜನೆಗಳಿಗೆ ಹಿನ್ನಡೆ: ಕಾರಜೋಳ

ನೀರಾವರಿ ಯೋಜನೆಗಳಿಗೆ ಅರಣ್ಯ ಮತ್ತು ಪರಿಸರ ಇಲಾಖೆ ಅನುಮತಿ ಸಿಗದೇ ಇರುವುದು, ಅಂತರ ರಾಜ್ಯ ಜಲ ವಿವಾದಗಳಿಂದ ದೊಡ್ಡ ಹೊಡೆತ ಬಿದ್ದಿದೆ. ಇದರಿಂದ ವೆಚ್ಚ ಹಲವು ಪಟ್ಟು ಹೆಚ್ಚಾಗಿ ಕುಂಟುತ್ತಾ ಸಾಗಿವೆ ಎನ್ನುತ್ತಾರೆ ಜಲ ಸಂಪನ್ಮೂಲ ಸಚಿವ ಗೋವಿಂದ ಕಾರಜೋಳ.


ಅನುಮೋದನೆ ಪಡೆದ ಮೂಲ ಯೋಜನೆಗೆ ತಕ್ಕಂತೆ ಕಾರ್ಯಗತಗೊಳಿಸಿದರೆ, ನೀರಾವರಿ ನಾಲೆಗಳ ಕಟ್ಟ ಕಡೆಯ ರೈತನಿಗೂ ನೀರು ಸಿಗುತ್ತದೆ. ಆದರೆ ಪ್ರಭಾವಿಗಳು ಮತ್ತು ಕೆಲವು ರಾಜಕಾರಣಿಗಳು ಕೊನೆಯ ಹಂತದಲ್ಲಿ ತಮಗೆ ಬೇಕಾದಂತೆ ಪ್ರದೇಶಗಳನ್ನು ಸೇರಿಸುತ್ತಾ ಹೋದ ಪರಿಣಾಮ, ನೀರಾವರಿಗೆ ಒಳಪಡಿಸುವ ಪ್ರದೇಶ ಹಿಗ್ಗುತ್ತಾ ಹೋಗಿ ಕೊನೆಯ ಹಂತದ ರೈತರಿಗೆ ನೀರು ಸಿಗಲಾರದ ಪರಿಸ್ಥಿತಿ ನಿರ್ಮಾಣವಾಗಿದೆ ಎನ್ನುತ್ತಾರೆ ಅವರು.

ನೀರಾವರಿ ಪ್ರದೇಶಗಳಲ್ಲಿ ನಾಲೆಗಳ ನಿರ್ವಹಣೆ ಕಾರ್ಯ ಸರಿಯಾಗಿ ನಡೆಯುತ್ತಿಲ್ಲ. ನೀರು ಬಳಕೆದಾರರ ಸಹಕಾರ ಸಂಘಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ. ಹಿಂದೆ ನೀರುಗಂಟಿಗಳು ಮತ್ತು ಕಂದಾಯ ಇಲಾಖೆ ಸಿಬ್ಬಂದಿ ಇದರ ನಿರ್ವಹಣೆಯನ್ನು ಸಮರ್ಪಕವಾಗಿ ಮಾಡುತ್ತಿದ್ದರು. ರೈತರಿಂದ ಸಾಂಕೇತಿಕವಾಗಿ ಶುಲ್ಕಪಡೆದು ನಿರ್ವಹಣೆ ಸರಿಯಾಗಿ ಮಾಡುತ್ತಿದ್ದರು. ಈಗ ಆ ವ್ಯವಸ್ಥೆಯೇ ಹಳಿ ತಪ್ಪಿದೆ ಎಂದು ವಿವರಿಸುತ್ತಾರೆ.

ಇನ್ನಷ್ಟು ಸುದ್ದಿಗಳು 6

ವಿದ್ಯುತ್, ಹಾಲಿನ ದರ ಏರಿಕೆ ಇಲ್ಲ: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: ನೀರು, ಹಾಲು ಮತ್ತು ವಿದ್ಯುತ್ ದರ ಏರಿಕೆ ವಿಚಾರದಲ್ಲಿ ರಾಜ್ಯ ಸರ್ಕಾರ ಅವಸರದ ತೀರ್ಮಾನಗಳನ್ನು ಕೈಗೊಳ್ಳುವುದಿಲ್ಲ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ನೀರಿನ ದರ ಏರಿಕೆಗೆ ಬೆಂಗಳೂರು ಜಲಮಂಡಳಿ ಪ್ರಸ್ತಾವ ಸಲ್ಲಿಸಿದೆ. 'ವಿದ್ಯುತ್ ದರ ಏರಿಕೆ ಅನಿವಾರ್ಯ' ಎಂದು ಇಂಧನ ಸಚಿವ ವಿ. ಸುನಿಲ್ ಕುಮಾರ್ ಶುಕ್ರವಾರ ಹೇಳಿಕೆ ನೀಡಿದ್ದರು. ಹಾಲಿನ ದರ ಹೆಚ್ಚಳ ಮಾಡುವಂತೆ ಕರ್ನಾಟಕ ಹಾಲು ಮಹಾಮಂಡಳ (ಕೆಎಂಎಫ್) ಕೂಡ ಬೇಡಿಕೆ ಇಟ್ಟಿದೆ.

ದರ ಏರಿಕೆ ಪ್ರಸ್ತಾವವನ್ನು ವಿಧಾನ ಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತೀವ್ರವಾಗಿ ವಿರೋಧಿಸಿದ್ದರು.

ಅದರ ಬೆನ್ನಲ್ಲೇ ಪ್ರತಿಕ್ರಿಯಿಸಿರುವ ಬೊಮ್ಮಾಯಿ, 'ನೀರು, ಹಾಲು ಮತ್ತು ವಿದ್ಯುತ್ ದರ ಏರಿಕೆಗೆ ಪ್ರಸ್ತಾವಗಳು ಬಂದಿರುವುದು ನಿಜ. ಆದರೆ, ದರ ಏರಿಕೆ ಮಾಡಲಾಗುತ್ತಿದೆ ಎಂಬುದು ಕೇವಲ ಊಹಾಪೋಹ. ಎಲ್ಲ ಆಯಾಮಗಳಲ್ಲೂ ಚರ್ಚೆ ಮಾಡಿ ತೀರ್ಮಾನಿಸಲಾಗುವುದು' ಎಂದರು.

ಮುಳಬಾಗಿಲು ಸರ್ಕಾರಿ ಶಾಲೆಯಲ್ಲಿ ನಮಾಜ್‌ಗೆ ಅವಕಾಶ: ಘರ್ಷಣೆ

ಗುಂಪು ಚದುರಿಸಲು ಲಘು ಲಾಠಿ ಪ್ರಹಾರ

ಪ್ರಜಾವಾಣಿ ವಾರ್ತೆ

ಕೋಲಾರ: ಜಿಲ್ಲೆಯ ಮುಳಬಾಗಿಲಿನ ಸೋಮೇಶ್ವರಪಾಳ್ಯದ ಬಳೇ ಚೆಂಗಪ್ಪ ಸರ್ಕಾರಿ ಕನ್ನಡ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮುಸ್ಲಿಂ ವಿದ್ಯಾರ್ಥಿಗಳಿಗೆ ನಮಾಜ್ ಮಾಡಲು ಅವಕಾಶ ನೀಡಿದ ಪ್ರಕರಣ ಖಂಡಿಸಿ ಪ್ರತಿಭಟನೆ ಮಾಡಲೆತ್ನಿಸಿದ ಬಿಜೆಪಿ ಕಾರ್ಯಕರ್ತರು, ಬಜರಂಗ ದಳದ ಸದಸ್ಯರು ಹಾಗೂ ಮತ್ತೊಂದು ಕೋಮಿನ ಜನರ ನಡುವೆ ಶನಿವಾರ ಘರ್ಷಣೆ ನಡೆದಿದೆ. ಪರಿಸ್ಥಿತಿ ನಿಯಂತ್ರಿಸಲು ಪೊಲೀಸರು ಲಘು ಲಾಠಿ ಪ್ರಹಾರ ನಡೆಸಿದರು.

'ಶಾಲೆಯ ಮುಖ್ಯ ಶಿಕ್ಷಕಿ ಉಮಾದೇವಿ ಅವರು ಮುಸ್ಲಿಂ ವಿದ್ಯಾರ್ಥಿಗಳಿಗೆ ಶಾಲೆಯಲ್ಲಿ ನಮಾಜ್ ಮಾಡಲು ಅವಕಾಶ ನೀಡಿರುವುದು ಖಂಡನೀಯ. ಹೀಗಾಗಿ, ಅವರನ್ನು ಸೇವೆಯಿಂದ ಅಮಾನತು ಮಾಡಬೇಕು' ಎಂದು ಆಗ್ರಹಿಸಿ ಬಿಜೆಪಿ ಮತ್ತು ಬಜರಂಗ ದಳದ ಸದಸ್ಯರು ಶಾಲೆ ಬಳಿ ಪ್ರತಿಭಟನೆ ಮಾಡಲು ಮುಂದಾದರು. ಆ ವೇಳೆಗಾಗಲೇ ಅಲ್ಲಿ ಜಮಾಯಿಸಿದ್ದ ಮತ್ತೊಂದು ಕೋಮಿನ ಜನರು ಇದಕ್ಕೆ ವಿರೋಧ ವ್ಯಕ್ತಪಡಿಸಿದರು.

ಎರಡೂ ಗುಂಪುಗಳ ನಡುವೆ ಮಾತಿನ ಚಕಮಕಿ ನಡೆದು ಸ್ಥಳದಲ್ಲಿ ಬಿಗುವಿನ ವಾತಾವರಣ ಸೃಷ್ಟಿಯಾಯಿತು. ಶಾಲಾ ಆವರಣ ಪ್ರವೇಶಿಸಿದ ಉಭಯ ಗುಂಪುಗಳ ಜನರ ನಡುವೆ ವಾಗ್ವಾದ ತಾರಕಕ್ಕೇರಿತು. ಪರಿಸ್ಥಿತಿ ಕೈಮೀರುತ್ತಿರುವುದನ್ನು ಮನಗಂಡ ಪೊಲೀಸರು ಲಘು ಲಾಠಿ ಪ್ರಹಾರ ನಡೆಸಿ ಗುಂಪು ಚದುರಿಸಿದರು. ಬಳಿಕ ಪರಿಸ್ಥಿತಿ ತಿಳಿಯಾಯಿತು.

5ನೇ ಪುಟ ನೋಡಿ



ಮುಳಬಾಗಿಲಿನ ಬಳೇ ಚೆಂಗಪ್ಪ ಸರ್ಕಾರಿ ಕನ್ನಡ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಬಳಿ ಶನಿವಾರ ಜಮಾಯಿಸಿದ್ದ ಜನರ ಗುಂಪು

> ಶಾಲೆಯ ಮುಖ್ಯಶಿಕ್ಷಕಿ ಉಮಾದೇವಿ ಅವರಿಗೆ ನೋಟಿಸ್ ಜಾರಿ ಮಾಡುವಂತೆ ಸೂಚಿಸಿದ್ದೇನೆ. ಅವರನ್ನು ಬೇರೆ ಶಾಲೆಗೆ ವರ್ಗಾವಣೆ ಮಾಡಲಾಗುತ್ತದೆ
>
> **ಎಚ್. ನಾಗೇಶ್**
> ಮುಳಬಾಗಿಲು ಶಾಸಕ

ಪ್ರಜಾಮತ

ಪ್ರಜಾವಾಣಿ ಕನ್ನಡ ಧ್ವನಿ ಪಾಡ್‌ಕಾಸ್ಟ್

ಉತ್ತರ ಪ್ರದೇಶ, ಪಂಜಾಬ್, ಗೋವಾ, ಉತ್ತರಾಖಂಡ, ಮಣಿಪುರ ಐದು ರಾಜ್ಯಗಳ ವಿಧಾನಸಭಾ ಚುನಾವಣೆಯ ನಿಷ್ಪಕ್ಷಪಾತ ಸುದ್ದಿ, ವಿಶ್ಲೇಷಣೆಗಳಿಗೆ ಆಲಿಸಿರಿ ಪ್ರಜಾವಾಣಿ ಪಾಡ್‌ಕಾಸ್ಟ್ ಪ್ರತಿ ರಾತ್ರಿ 9.00 ಗಂಟೆಗೆ ಸೋಮವಾರದಿಂದ ಆರಂಭ

ಮತಾಂತರಕ್ಕೆ ಮಾವನಿಂದ ಒತ್ತಡ: ದೂರು ದಾಖಲು

ಹೊಸದುರ್ಗ: ಕ್ರೈಸ್ತ ಧರ್ಮಕ್ಕೆ ಮತಾಂತರವಾಗುವಂತೆ ಒತ್ತಡ ಹಾಕಿದ ಮಾವ, ಆತನ ತಂದೆ ಹಾಗೂ ಹಲ್ಲೆ ನಡೆಸಿದ ಸಂಬಂಧಿಕರ ವಿರುದ್ಧ ಹೊಸಪೇಟೆಯ ವ್ಯಕ್ತಿಯೊಬ್ಬರು ಹೊಸದುರ್ಗ ಪೊಲೀಸ್ ಠಾಣೆಯಲ್ಲಿ ಶುಕ್ರವಾರ ದೂರು ದಾಖಲಿಸಿದ್ದಾರೆ. 5

'ಕೊರೊನಾ ಲಕ್ಷಣ ಇದ್ದರಷ್ಟೇ ತಪಾಸಣೆ'

ಬೆಂಗಳೂರು: 'ರಾಜ್ಯದಲ್ಲಿ ಕೊರೊನಾ ಲಕ್ಷಣ ಇರುವವರಿಗೆ ಮಾತ್ರ ಐಸಿಎಂಆರ್ ಮಾರ್ಗಸೂಚಿಯಂತೆ ತಪಾಸಣೆ ನಡೆಸಲಾಗುವುದು' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು. 8

ರ‍್ಯಾಲಿ, ರೋಡ್ ಶೋ ನಿಷೇಧ ಜನವರಿ 31ರವರೆಗೆ ವಿಸ್ತರಣೆ

ನವದೆಹಲಿ (ಪಿಟಿಐ): ವಿಧಾನಸಭೆಗೆ ಚುನಾವಣೆ ನಡೆಯಲಿರುವ ಉತ್ತರ ಪ್ರದೇಶ, ಪಂಜಾಬ್, ಗೋವಾ, ಉತ್ತರಾಖಂಡ ಮತ್ತು ಮಣಿಪುರದಲ್ಲಿ ಭೌತಿಕ ರ‍್ಯಾಲಿಗಳು ಮತ್ತು ರೋಡ್ ಶೋಗಳಿಗೆ ಇದ್ದ ನಿಷೇಧವನ್ನು ಚುನಾವಣಾ ಆಯೋಗವು ಜನವರಿ 31ರವರೆಗೆ ವಿಸ್ತರಿಸಿದೆ. ಆದರೆ, ಮೊದಲ ಹಂತದಲ್ಲಿ ಮತದಾನ ನಡೆಯಲಿರುವ ಕ್ಷೇತ್ರಗಳಲ್ಲಿ ಸ್ಪರ್ಧಿಸಿರುವ ಪಕ್ಷಗಳು ಮತ್ತು ಅಭ್ಯರ್ಥಿಗಳು ಜನವರಿ 28ರಿಂದ ಮತ್ತು ಎರಡನೇ ಹಂತದಲ್ಲಿ ಮತದಾನ ನಡೆಯಲಿರುವ ಕ್ಷೇತ್ರಗಳಲ್ಲಿ ಸ್ಪರ್ಧಿಸಿರುವ ಪಕ್ಷಗಳು ಮತ್ತು ಅಭ್ಯರ್ಥಿಗಳು ಫೆ.1ರಿಂದ ಬಹಿರಂಗ ಪ್ರಚಾರ ನಡೆಸಬಹುದು ಎಂದು ಶನಿವಾರ ಹೇಳಿದೆ.

ಮನೆ ಮನೆ ಪ್ರಚಾರದಲ್ಲಿ ಈವರೆಗೆ ಐವರಿಗೆ ಮಾತ್ರ ಅವಕಾಶ ಇತ್ತು. ಈ ಸಂಖ್ಯೆಯನ್ನು 10ಕ್ಕೆ ಏರಿಸಲಾಗಿದೆ.

'ಬೀಟಿಂಗ್ ರಿಟ್ರೀಟ್'ನ ಸಮಾರೋಪ: ಗಾಂಧೀಜಿಗೆ ಇಷ್ಟವಾದ ಗೀತೆಗೆ ಕೊಕ್

ನವದೆಹಲಿ: ಗಣರಾಜ್ಯೋತ್ಸವ ಕಾರ್ಯಕ್ರಮಗಳಿಗೆ ತೆರೆಎಳೆಯುವ ನಿಮಿತ್ತ ಜ.29ರಂದು ಇಲ್ಲಿನ ವಿಜಯ್‌ಚೌಕ್‌ನಲ್ಲಿ ನಡೆಸುವ ಬೀಟಿಂಗ್ ರಿಟ್ರೀಟ್ ಕಾರ್ಯಕ್ರಮದಿಂದ 'ಅಬೈಡ್ ವಿತ್ ಮಿ' ಗೀತೆ ಕೈಬಿಡಲು ಸರ್ಕಾರ ನಿರ್ಧರಿಸಿದೆ.

ಇದು, ಮಹಾತ್ಮಗಾಂಧಿ ಅವರಿಗೆ ಅತ್ಯಂತ ಪ್ರಿಯವಾದ ಗೀತೆಯಾಗಿತ್ತು. ಬೀಟಿಂಗ್ ರಿಟ್ರೀಟ್ ಕಾರ್ಯಕ್ರಮ ಮುಗಿಯುವ ದ್ಯೋತಕವಾಗಿ ನುಡಿಸಲಾಗುತ್ತಿತ್ತು. ಶತಮಾನಗಳಷ್ಟು ಹಳೆಯದಾದ ಸೇನಾ ಸಂಪ್ರದಾಯದಲ್ಲಿ ಇದು ಬಳಕೆಯಲ್ಲಿದೆ. 'ಶಾಶ್ವತ ಜ್ಯೋತಿ'ಯನ್ನು ಇಂಡಿಯಾ ಗೇಟ್ ಬಳಿಯ ಅಮರ್ ಜವಾನ್ ಜ್ಯೋತಿ ಸ್ಥಳದಿಂದ ರಾಷ್ಟ್ರೀಯ ಯುದ್ಧ ಸ್ಮಾರಕ ಸ್ಥಳಕ್ಕೆ ಸ್ಥಳಾಂತರಿಸಿದ್ದ ತೀರ್ಮಾನದ ಹಿಂದೆಯೇ ಸರ್ಕಾರದ ಈ ನಿರ್ಧಾರವೂ ಹೊರಬಿದ್ದಿದೆ.

ಕಾಂಗ್ರೆಸ್ ಶಾಸಕ ಎಚ್.ಪಿ.ಮಂಜುನಾಥ್ ಆರೋಪ

'ಕ್ಷೇತ್ರದ ಅನುದಾನ ಗುತ್ತಿಗೆದಾರರಿಗೆ ಮಾರಾಟ'

ಪ್ರಜಾವಾಣಿ ವಾರ್ತೆ

ಮೈಸೂರು: 'ಗುತ್ತಿಗೆದಾರರಿಂದ ಶೇ 40 ಅಲ್ಲ, 50ರಷ್ಟು ಲಂಚ ವಸೂಲಿ ಮಾಡಲಾಗುತ್ತಿದೆ. ಶಾಸಕರಿಗೂ ಗೊತ್ತಿಲ್ಲದಂತೆ ಗುತ್ತಿಗೆದಾರರೇ ಹೋಗಿ ಕಮಿಷನ್ ನೀಡಿ ರಾಜ್ಯ ಸರ್ಕಾರದಿಂದ ಕಾಮಗಾರಿಗೆ ಅನುಮತಿ ಪಡೆದುಕೊಂಡು ಬರುತ್ತಿದ್ದಾರೆ' ಎಂದು ಹುಣಸೂರು ಕ್ಷೇತ್ರದ ಕಾಂಗ್ರೆಸ್ ಶಾಸಕ ಎಚ್.ಪಿ.ಮಂಜುನಾಥ್ ಗಂಭೀರ ಆರೋಪ ಮಾಡಿದರು.

'ಜಿಲ್ಲೆಯ ವಿಧಾನಸಭಾ ಕ್ಷೇತ್ರಗಳಿಗೆ ಅನುದಾನ ನೀಡುವ ವಿಚಾರದಲ್ಲಿ ಬಿಜೆಪಿ ಸರ್ಕಾರ ತಾರತಮ್ಯ ಮಾಡುತ್ತಿದೆ. ಕೆಲವರ ಕ್ಷೇತ್ರಗಳಿಗೆ ಬಿಡುಗಡೆಯಾಗಿರುವ ಅನುದಾನವನ್ನು ಬೇರೆ ಕ್ಷೇತ್ರಗಳಿಗೆ ವರ್ಗಾಯಿಸಿದೆ. ನಮ್ಮ ಕ್ಷೇತ್ರದ ಅನುದಾನವನ್ನು ಗುತ್ತಿಗೆದಾರರಿಗೆ ಮಾರಾಟ ಮಾಡಿದ್ದಾರೆ. ಆ ಬಗ್ಗೆ ತನಿಖೆ ನಡೆಯಲಿ' ಎಂದು ಶನಿವಾರ ಇಲ್ಲಿ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಆಗ್ರಹಿಸಿದರು.

'ಸಚಿವ ಎಸ್.ಟಿ.ಸೋಮಶೇಖರ್ ಅವರಿಗೆ ಗೊತ್ತಿಲ್ಲದೇ ಈ ಕೆಲಸ ಹೇಗೆ ನಡೆಯುತ್ತದೆ? ಆ ಬಗ್ಗೆ ಕೇಳಿದರೆ 'ನೀವು ತಿಂದಿಲ್ಲವೇ' ಎಂದು ಕೇಳುತ್ತಾರೆ. ನಾವು ಒಣಗೊಬ್ಬರ ತಿಂದರೆ ನೀವು ಹಸಿಗೊಬ್ಬರವನ್ನೇ ತಿನ್ನುತ್ತಿದ್ದೀರಿ ಎನ್ನಬೇಕಾದ ಪರಿಸ್ಥಿತಿ ಬಂದಿದೆ' ಎಂದು ಹರಿಹಾಯ್ದರು.

ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಮಾತನಾಡಿ, 'ಕಮಿಷನ್ ನೀಡದೆ ಯಾವ ಕೆಲಸವೂ ನಡೆಯಲ್ಲ. ಲೋಕೋಪಯೋಗಿ ಇಲಾಖೆಯಿಂದ ಜಿಲ್ಲೆಯ ಐದು ತಾಲ್ಲೂಕುಗಳ ಹೊಸ ಕಾಮಗಾರಿಗೆ ಹಂಚಿಕೆಯಾದ ₹ 6.5 ಕೋಟಿ ಅನುದಾನವನ್ನು ಪಿರಿಯಾಪಟ್ಟಣ ಒಂದೇ ಕ್ಷೇತ್ರಕ್ಕೆ ಹಂಚಲಾಗಿದೆ. ಇಲಾಖೆಯ ಎಸ್‌ಡಿಪಿ–ಸಾಮಾನ್ಯ ಅನುದಾನದಲ್ಲಿ ಅನುಮೋದನೆಗೊಂಡ ಕಾಮಗಾರಿಗಳನ್ನು ರದ್ದುಪಡಿಸಿ ಕಾಂಗ್ರೆಸ್ ಶಾಸಕರ ಕ್ಷೇತ್ರಗಳಿಗೆ ಅನ್ಯಾಯ ಮಾಡಲಾಗಿದೆ' ಎಂದರು.

ಎಚ್.ಡಿ.ಕೋಟೆ ಶಾಸಕ ಅನಿಲ್ ಕುಮಾರ್, 'ಹಿಂದುಳಿದ ತಾಲ್ಲೂಕುಗಳಿಗೆ ಮಂಜೂರಾದ ಅನುದಾನದಲ್ಲೂ ತಾರತಮ್ಯ ಎಸಗುತ್ತಿದ್ದಾರೆ. ಬೇಕಾದ ಕ್ಷೇತ್ರಗಳಿಗೆ ವರ್ಗಾವಣೆ ಮಾಡಲಾಗುತ್ತಿದೆ' ಎಂದು ದೂರಿದರು.

'ಶಿಷ್ಟಾಚಾರ ಉಲ್ಲಂಘಿಸಿ ಅವಮಾನ'

ಮೈಸೂರು: 'ನಗರದಲ್ಲಿ ನಡೆದ ಜಲಮಂಡಳಿ ಕಟ್ಟಡ ಉದ್ಘಾಟನೆಗೆ ಗ್ರಾಮಾಂತರ ಕ್ಷೇತ್ರಗಳ ಶಾಸಕರನ್ನು ಆಹ್ವಾನಿಸದೆ ಶಿಷ್ಟಾಚಾರ ಉಲ್ಲಂಘಿಸಿ ಅವಮಾನ ಮಾಡಲಾಗಿದೆ. ಅಗೌರವ ತೋರಿರುವ ಅಧಿಕಾರಿಗಳನ್ನು ಅಮಾನತುಗೊಳಿಸದಿದ್ದರೆ ಸಚಿವ ಎಸ್.ಟಿ.ಸೋಮಶೇಖರ್ ಅವರಿಗೆ ಕಪ್ಪು ಬಾವುಟ ತೋರಿಸಿ ಅಸಹಕಾರ ಚಳವಳಿ ನಡೆಸಲಾಗುವುದು' ಎಂದು ಕಾಂಗ್ರೆಸ್ ಶಾಸಕರು ಎಚ್ಚರಿಕೆ ನೀಡಿದರು.

'ಇದೇನು ಸಚಿವರ ಮನೆಯ ಗೃಹ ಪ್ರವೇಶವೇ, ಮದುವೆ ಕಾರ್ಯಕ್ರಮವೇ? ಅಥವಾ ಬಿಜೆಪಿ ಕಾರ್ಯಕ್ರಮವೇ' ಎಂದು ಶನಿವಾರ ಇಲ್ಲಿ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಶಾಸಕರಾದ ಎಚ್.ಪಿ.ಮಂಜುನಾಥ್, ಡಾ.ಯತೀಂದ್ರ ಸಿದ್ದರಾಮಯ್ಯ, ಸಿ.ಅನಿಲ್ ಕುಮಾರ್ ಪ್ರಶ್ನಿಸಿದರು. 'ಇದು ಕ್ಷೇತ್ರದ ಜನರಿಗೆ ಮಾಡಿದ ಅವಮಾನ. ಈ ಬಗ್ಗೆ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರಿಗೆ ದೂರು ಸಲ್ಲಿಸಲಿದ್ದೇವೆ. ಅಧಿಕಾರಿಗಳ ವಿರುದ್ಧ ಹಕ್ಕುಚ್ಯುತಿ ಮಂಡಿಸಲಾಗುವುದು' ಎಂದರು.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಭಾನುವಾರದ ಉಷ್ಣಾಂಶ 30° ಗರಿಷ್ಠ 16° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಬೆಳಿಗ್ಗೆ ಮಂಜು ಮುಸುಕಿದ ವಾತಾವರಣ. ನಂತರ, ಶುಭ್ರ ಆಕಾಶ ಇರಲಿದೆ.

ಹವಾಮಾನ: ಸೋಮವಾರ 29° 18° | ಮಂಗಳವಾರ 28° 17° | ಬುಧವಾರ 28° 17°

ಆರ್‌ಎಸ್‌ಎಸ್ ಕಚೇರಿಯಲ್ಲಿ ಚರ್ಚಿಸಿ ನಿರ್ಧಾರ–ಆರೋಪ


ರಾಮಲಿಂಗಾ ರೆಡ್ಡಿ

ಬೆಂಗಳೂರು: 'ಬಿಜೆಪಿ ಸರ್ಕಾರದ ಅವಧಿಯಲ್ಲಿ ಯಾವುದೇ ವಿಚಾರ ಚಾಮರಾಜಪೇಟೆಯಲ್ಲಿರುವ ಆರ್‌ಎಸ್‌ಎಸ್ ಕಚೇರಿಯಲ್ಲಿ ನಿರ್ಧಾರವಾದ ಬಳಿಕ ವಿಧಾನಸೌಧಕ್ಕೆ ಬರುತ್ತದೆ. ಇದು ಎಲ್ಲರಿಗೂ ಗೊತ್ತಿರುವ ವಿಚಾರ' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, 'ಬಿಬಿಎಂಪಿ ಚುನಾವಣೆ ಏಪ್ರಿಲ್‌ನಲ್ಲಿ ನಡೆಯುವುದು ಖಚಿತ. ನ್ಯಾಯಾಲಯಕ್ಕೆ ಸರ್ಕಾರ ಪ್ರಮಾಣಪತ್ರ ಸಲ್ಲಿಸಿದೆಯೊ ಇಲ್ಲವೋ ಗೊತ್ತಿಲ್ಲ. ಆದರೆ, ಚಾಮರಾಜಪೇಟೆಯ ಬಿಜೆಪಿ ಶಕ್ತಿ ಕೇಂದ್ರದಲ್ಲಿ ನಾಯಕರನ್ನು ಕರೆದು ಚರ್ಚಿಸಿ, ಹಸಿರು ನಿಶಾನೆ ಕೊಟ್ಟಿದ್ದಾರೆ' ಎಂದರು.

'ಕ್ಷೇತ್ರಗಳ ಮರು ವಿಂಗಡಣೆಯನ್ನು ಬಿಬಿಎಂಪಿ ಮುಖ್ಯ ಆಯುಕ್ತರು ಮಾಡಬೇಕಿತ್ತು. ಆದರೆ, ಬಿಜೆಪಿಯವರ ಕಚೇರಿಯಲ್ಲಿ ಮಾಡಿ ಅದನ್ನು ತಂದಿಡಲು ಪ್ರಯತ್ನಿಸುತ್ತಿದ್ದಾರೆ. ಕ್ಷೇತ್ರ ವಿಂಗಡಣೆ ಮನಸ್ಸಿಗೆ ಬಂದಂತೆ ಮಾಡಿದ್ದಾರೆ. 243 ವಾರ್ಡ್ ಮಾಡಲು ವಿಧಾನಮಂಡಲ ಅಧಿವೇಶನದಲ್ಲಿ ಅನುಮೋದನೆ ನೀಡಲಾಗಿದೆ. ಇದನ್ನು ಅವರಿಗೆ ಅನುಕೂಲವಾಗುವಂತೆ ಅವೈಜ್ಞಾನಿಕವಾಗಿ ಮಾಡುತ್ತಿದ್ದಾರೆ' ಎಂದು ಟೀಕಿಸಿದರು.

ಉಚಿತ ಆಹಾರ ಕೊಡಿ: 'ಸೋಂಕಿತರ ಪೈಕಿ ಹೆಚ್ಚಿನವರು ಮನೆಯಲ್ಲಿಯೇ ಪ್ರತ್ಯೇಕವಾಸದಲ್ಲಿದ್ದಾರೆ. ಆದರೆ, ಅವರಿಗೆ ವೈದ್ಯಕೀಯ ಕಿಟ್ ಸರಿಯಾಗಿ ತಲುಪುತ್ತಿಲ್ಲ. ಹೀಗಾಗಿ ಅವರಿಗೆ ಎರಡು ತಿಂಗಳ ಆಹಾರ ಪದಾರ್ಥ ಉಚಿತವಾಗಿ ನೀಡಬೇಕು. ಕಟ್ಟಡ ಕಾರ್ಮಿಕರು, ಅಸಂಘಟಿತ ಕಾರ್ಮಿಕರು, ಬೀದಿ ವ್ಯಾಪಾರಿಗಳು, ಚಾಲಕರಿಗೆ ಈ ಬಾರಿಯಾದರೂ ಸರಿಯಾಗಿ ಪರಿಹಾರ ನೀಡಬೇಕು' ಎಂದು ಆಗ್ರಹಿಸಿದರು.

'ಕೋವಿಡ್ ಮೊದಲ ಅಲೆಯಲ್ಲಿ ಜನರಿಗೆ ಸರ್ಕಾರ ಸರಿಯಾಗಿ ಸ್ಪಂದಿಸಲಿಲ್ಲ. ಎರಡನೇ ಅಲೆಯಲ್ಲಿ ಸರಿಯಾಗಿ ನಿರ್ವಹಣೆ ಮಾಡದ ಪರಿಣಾಮ ಹೆಚ್ಚಿನ ಸಾವು ಸಂಭವಿಸಿತು. ಐಸಿಎಂಆರ್ ಪ್ರಕಾರ ವಿವಿಧ ರೀತಿಯ 40 ಕಾಯಿಲೆ ಇರುವವರು ಕೋವಿಡ್ ಸೋಂಕಿನಿಂದ ಸತ್ತರೂ, ಅದನ್ನು ಕೋವಿಡ್ ಸಾವು ಎಂದು ಪರಿಗಣಿಸುವುದಿಲ್ಲ. ಹೀಗಾಗಿ ಕೇವಲ 37 ಸಾವಿರ ಜನ ಮಾತ್ರ ಕೋವಿಡ್‌ನಿಂದ ಸತ್ತಿದ್ದಾರೆ ಎಂದು ಅಂಕಿ ಅಂಶ ತೋರಿಸುತ್ತಿದ್ದಾರೆ. ಆ ಜನರಲ್ಲಿ ಶೇ 5ರಷ್ಟು ಜನರಿಗೆ ಮಾತ್ರ ಪರಿಹಾರ ಕೊಡುತ್ತಾರೆ. ವಾಸ್ತವದಲ್ಲಿ ಕೋವಿಡ್‌ನಿಂದ 3 ಲಕ್ಷಕ್ಕೂ ಹೆಚ್ಚು ಜನ ಸತ್ತಿದ್ದಾರೆ' ಎಂದರು.

ಕೆಪಿಸಿಸಿ ಮಾಧ್ಯಮ ಹಾಗೂ ಸಂವಹನ ವಿಭಾಗದ ಸಹ ಸಂಚಾಲಕರಾದ ರಾಮಚಂದ್ರಪ್ಪ, ಪ್ರಚಾರ ಸಮಿತಿ ಮುಖ್ಯಸ್ಥ ಮನೋಹರ್ ಇದ್ದರು.

ವಿಂಡ್ ಟನಲ್ ರಸ್ತೆ ವಿಸ್ತರಣೆ • ₹65 ಕೋಟಿ ಮೊತ್ತದ ಯೋಜನೆ ರದ್ದು

ಒಂದೇ ಯೋಜನೆಯ ಹಣ 102 ಕಾಮಗಾರಿಗೆ ಹಂಚಿಕೆ!

• ವಿಜಯಕುಮಾರ್ ಎಸ್.ಕೆ.

ಪ್ರಜಾವಾಣಿ ವಿಶೇಷ

ಬೆಂಗಳೂರು: ಬೆಳ್ಳಂದೂರು ವಾರ್ಡ್‌ನ ವಿಂಡ್ ಟನಲ್ ರಸ್ತೆ ಅಭಿವೃದ್ಧಿ ಯೋಜನೆಗೆ ರಕ್ಷಣಾ ಇಲಾಖೆಯಿಂದ (ಎಚ್‌ಎಎಲ್) ಭೂಮಿ ಪಡೆದುಕೊಳ್ಳಲು ವಿಫಲವಾಗಿರುವ ಬಿಬಿಎಂಪಿ, ಈ ಯೋಜನೆಯನ್ನೇ ರದ್ದುಪಡಿಸಿದೆ. ನಿಗದಿ ಮಾಡಿದ್ದ ₹65 ಕೋಟಿ ಮೊತ್ತವನ್ನು ಮಹದೇವಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ 102 ಕಾಮಗಾರಿಗಳಿಗೆ ಹಂಚಿಕೆ ಮಾಡಿದೆ.

ಹೊರ ವರ್ತುಲ ರಸ್ತೆಗೆ ಸಂಪರ್ಕ ಕಲ್ಪಿಸಲು ಹಳೆ ವಿಮಾನ ನಿಲ್ದಾಣ ರಸ್ತೆಗೆ ಪರ್ಯಾಯವಾಗಿ ವಿಂಡ್ ಟನಲ್ ರಸ್ತೆ ಇದೆ. ಅತೀ ಕಿರಿದಾಗಿರುವ ಈ ರಸ್ತೆ ವಿಸ್ತರಣೆ ಮಾಡಲು 2018ರಲ್ಲಿ ಪ್ರಸ್ತಾಪಿಸಲಾಗಿತ್ತು. 'ಮುಖ್ಯಮಂತ್ರಿಗಳ ನವ ಬೆಂಗಳೂರು' ಯೋಜನೆಯಡಿ 2019ರಲ್ಲಿ ₹65 ಕೋಟಿಗೆ ಅನುಮೋದನೆಯನ್ನೂ ಸರ್ಕಾರ ನೀಡಿತ್ತು.

ರಸ್ತೆ ವಿಸ್ತರಣೆ ಮಾಡಿ ಅಭಿವೃದ್ಧಿಪಡಿಸಲು ಬಿಬಿಎಂಪಿ ಯೋಜನಾ ವಿಭಾಗವು ಯೋಜನೆಯನ್ನೂ ಸಿದ್ಧಪಡಿಸಿತ್ತು. ಭೂಸ್ವಾಧೀನ ಪ್ರಕ್ರಿಯೆಯನ್ನೂ ಆರಂಭಿಸಲಾಗಿತ್ತು. ರಕ್ಷಣಾ ಸಚಿವರಾಗಿದ್ದ ನಿರ್ಮಲಾ ಸೀತಾರಾಮನ್ ಅವರೂ ಈ ರಸ್ತೆ ವಿಸ್ತರಣೆ ಸಂಬಂಧ ಸಭೆ ನಡೆಸಿದ್ದರು.

ಬಿಬಿಎಂಪಿ ಮತ್ತು ಎಚ್‌ಎಎಲ್ ನಡುವೆ ಒಪ್ಪಂದವೂ ಏರ್ಪಟ್ಟಿತ್ತು.

ಆದರೆ, ರಸ್ತೆ ವಿಸ್ತರಣೆಗೆ ಅಗತ್ಯ ಇರುವ ಜಾಗ ಬಿಟ್ಟುಕೊಡಲು ಎಚ್‌ಎಎಲ್ ಒಪ್ಪದ ಕಾರಣ ರಸ್ತೆ ವಿಸ್ತರಣೆ ಯೋಜನೆ ನನೆಗುದಿಗೆ ಬಿದ್ದಿತ್ತು. ಈ ನಡುವೆ 2021ರ ಡಿಸೆಂಬರ್ 30ರಂದು ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಪತ್ರ ಬರೆದಿದ್ದ ಮಹದೇವಪುರ ಶಾಸಕ ಅರವಿಂದ ಲಿಂಬಾವಳಿ ಅವರು, ನಿಗದಿಯಾಗಿರುವ ಅನುದಾನವನ್ನು 110 ಹಳ್ಳಿ ಯೋಜನೆಯ ಕಾಮಗಾರಿಗೆ ವರ್ಗಾಯಿಸುವಂತೆ ಕೋರಿದ್ದರು. ಅದನ್ನು ಆಧರಿಸಿ ಮುಖ್ಯ ಆಯುಕ್ತರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದರು. ವಿಂಡ್ ಟನಲ್ ರಸ್ತೆ ವಿಸ್ತರಣೆ ಯೋಜನೆಯನ್ನು ರದ್ದುಪಡಿಸಿರುವ ಸರ್ಕಾರ, ₹65 ಕೋಟಿ ಮೊತ್ತವನ್ನು ಮಹದೇವಪುರ ಕ್ಷೇತ್ರ ವ್ಯಾಪ್ತಿಯ 102 ಕಾಮಗಾರಿಗಳಿಗೆ ಹಂಚಿಕೆ ಮಾಡಿ ಜ.18ರಂದು ಸರ್ಕಾರ ಆದೇಶ ಹೊರಡಿಸಿದೆ.

'ಒಂದು ಕಾಮಗಾರಿಗೆ ನಿಗದಿಯಾಗಿದ್ದ ಅನುದಾನವನ್ನು 102 ಕಾಮಗಾರಿಗಳಿಗೆ ಹಂಚಿಕೆ ಮಾಡಿಕೊಳ್ಳಲಾಗಿದೆ ಎಂದರೆ ಇದರ ಹಿಂದಿನ ಉದ್ದೇಶ ಬೇರೆಯೇ ಇದೆ. ಕೇಂದ್ರ ಮತ್ತು ರಾಜ್ಯದಲ್ಲಿ ಎರಡೂ ಕಡೆ ಬಿಜೆಪಿಯೇ ಆಡಳಿತದಲ್ಲಿದೆ. ಡಬಲ್ ಎಂಜಿನ್ ಸರ್ಕಾರ ಎಂದು ಹೇಳಿಕೊಳ್ಳುವವರು ಸಾರ್ವಜನಿಕರಿಗೆ ಅನುಕೂಲ ಆಗುತ್ತಿದ್ದ ರಸ್ತೆ ವಿಸ್ತರಣೆಗೆ ಜಮೀನು ಬಿಟ್ಟುಕೊಡುವಂತೆ ರಕ್ಷಣಾ ಇಲಾಖೆಯನ್ನು ಒಪ್ಪಿಸಲು ಆಗಲಿಲ್ಲ ಎಂದರೆ ಏನರ್ಥ' ಎಂಬುದು ಸ್ಥಳೀಯರ ಪ್ರಶ್ನೆ.

ಹಳೇ ವಿಮಾನ ನಿಲ್ದಾಣ ರಸ್ತೆಯಲ್ಲಿ ಸದಾ ವಾಹನ ದಟ್ಟಣೆ ಇರುತ್ತದೆ. ಹೊರ ವರ್ತುಲ ರಸ್ತೆಗೆ ಹೋಗಲು ಈಗ ಮಾರತಹಳ್ಳಿ ಜಂಕ್ಷನ್‌ಗೆ ಹೋಗಿಯೇ ಮುಂದೆ ಸಾಗಬೇಕಿದೆ. ಈ ರಸ್ತೆ ವಿಸ್ತರಣೆಯಾಗಿದ್ದರೆ ಐ.ಟಿ ಕಂಪನಿಗಳಿಗೆ ತೆರಳುವ ವಾಹನಗಳು ವಿಂಡ್ ಟನಲ್ ರಸ್ತೆ ಬಳಸಲು ಅವಕಾಶ ಸಿಗುತ್ತಿತ್ತು' ಎನ್ನುತ್ತಾರೆ ಸ್ಥಳೀಯರು.

'ಬೆಂಗಳೂರಿನ ಐ.ಟಿ ಕಾರಿಡಾರ್ ಎನಿಸಿಕೊಂಡರೂ ಬೆಳ್ಳಂದೂರು ಯಾವುದೇ ಪ್ರಮುಖ ಮೂಲಸೌಕರ್ಯಗಳನ್ನು ಹೊಂದಿಲ್ಲ. ರಸ್ತೆ ವಿಸ್ತರಣೆ ಯೋಜನೆಗಳಿಗೆ ಭೂಸ್ವಾಧೀನವೇ ದೊಡ್ಡ ತೊಡಕಾಗಿ ಕಾಡುತ್ತಿದೆ. ವಿಂಡ್ ಟನಲ್ ರಸ್ತೆ ವಿಸ್ತರಣೆ ಯೋಜನೆಗೂ ಇದೇ ಕಾರಣಕ್ಕೆ ಹಿನ್ನಡೆ ಆಗಿದೆ. ಸರ್ಜಾಪುರ ರಸ್ತೆ, ಕಸವನಹಳ್ಳಿ ರಸ್ತೆ, ಹರಳೂರು ರಸ್ತೆಯ ಮೇಲ್ಸೇತುವೆ ಯೋಜನೆಗಳಿಗೂ ಇದೇ ರೀತಿಯ ಅಡ್ಡಿಗಳಿವೆ. ಭೂಸ್ವಾಧೀನ ಸಮಸ್ಯೆ ಪರಿಹಾರಕ್ಕೆ ಟಿಡಿಆರ್ ನೀತಿಯನ್ನು ಪರಿಷ್ಕರಿಸಿ ಡಿಸೆಂಬರ್ ವೇಳೆಗೆ ಜಾರಿಗೆ ತರುವ ಬಗ್ಗೆ ಕಳೆದ ಸೆಪ್ಟೆಂಬರ್‌ನಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ವಿಧಾನಸಭೆ ಅಧಿವೇಶನದಲ್ಲಿ ಭರವಸೆ ನೀಡಿದ್ದರು. ಆದರೆ, ಏನೂ ಆಗಿಲ್ಲ. ಟಿಡಿಆರ್ ನೀತಿಯನ್ನು ಕೂಡಲೇ ಪರಿಷ್ಕರಿಸಿ ಜಾರಿಗೆ ತರಬೇಕು' ಎಂದು ಕಸವನಹಳ್ಳಿ ವಿಷ್ಣುಪ್ರಸಾದ್ ಅವರು ಒತ್ತಾಯಿಸಿದರು.

'ಎಲ್ಲ ರೀತಿಯ ಪ್ರಯತ್ನ ನಡೆದಿತ್ತು'

'ರಸ್ತೆ ವಿಸ್ತರಣೆಗೆ ಎಚ್‌ಎಎಲ್‌ನಿಂದ ಭೂಮಿ ಪಡೆಯಲು ಎಲ್ಲ ರೀತಿಯ ಪ್ರಯತ್ನ ನಡೆಸಲಾಯಿತು. ಆದರೆ, ಅಲ್ಲಿನ ಅಧಿಕಾರಿಗಳು ಒಪ್ಪಲಿಲ್ಲ. ಆದ್ದರಿಂದ ನಿಗದಿಯಾಗಿದ್ದ ಅನುದಾನವನ್ನು ಸರ್ಕಾರ ಬೇರೆ ಕಾಮಗಾರಿಗೆ ವರ್ಗಾಯಿಸಿದೆ' ಎಂದು ಬಿಬಿಎಂಪಿ ಮುಖ್ಯ ಎಂಜಿನಿಯರ್ (ಯೋಜನೆ) ಎಂ. ಲೋಕೇಶ್ ಸ್ಪಷ್ಟಪಡಿಸಿದರು.

'ಜಾಗ ಬಿಟ್ಟುಕೊಡಲು ಎಚ್‌ಎಎಲ್ ಅಧಿಕಾರಿಗಳು ಮೊದಲಿಗೆ ಒಪ್ಪಿಗೆ ಸೂಚಿಸಿದ್ದರು. ರಸ್ತೆ ಅವರಿಗೆ ಅಗತ್ಯ ಇಲ್ಲ ಎನಿಸಿದ್ದರಿಂದ ಜಾಗ ಬಿಟ್ಟುಕೊಡಲು ಮನಸು ಮಾಡಲಿಲ್ಲ' ಎಂದು ಅವರು ಹೇಳಿದರು.

ಸುದ್ದಿ 2 ನಿಮಿಷ

'ವಿಶ್ವಸಂಸ್ಥೆಯಲ್ಲಿ ಕನ್ನಡದ ಕಂಪು ಪಸರಿಸಿದ್ದ ಅನಂತ ಕುಮಾರ್'

ಬೆಂಗಳೂರು: 'ಅನಂತ ಕುಮಾರ್ ಅವರಿಂದಾಗಿ ವಿಶ್ವಸಂಸ್ಥೆಯಲ್ಲಿ ಕನ್ನಡದ ಮಾತು ಕೇಳಲು ಸಾಧ್ಯವಾಯಿತು. ಅವರು ಆಡಿದ ಕೆಲವೇ ಪದಗಳಿಂದ ನಮ್ಮ ಭಾಷೆಯ ಕಂಪು ವಿಶ್ವಮಟ್ಟದಲ್ಲಿ ಪಸರಿಸಿತು' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್.ನಾಗಾಭರಣ ಹೇಳಿದರು.

ಅನಂತ ಕುಮಾರ್ ಪ್ರತಿಷ್ಠಾನವು 'ಅನಂತ ಪಥ' ಸಂಚಿಕೆ ಬಿಡುಗಡೆಗಾಗಿ ಆನ್‌ಲೈನ್‌ನಲ್ಲಿ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.



'ಭಾರತೀಯ ಪರಂಪರೆಯಲ್ಲಿ ಕರ್ನಾಟಕದ ಮತ್ತು ಕನ್ನಡಿಗರ ವಿಶ್ವಮಾನವ ತತ್ವವನ್ನು ರೂಢಿಸಿಕೊಂಡು, ಬೆಳೆಸಿದವರು ಅನಂತಕುಮಾರ್. ಭಾಷೆ ಮತ್ತು ಸಾಂಸ್ಕೃತಿಕ ರಾಯಭಾರಿಯಾಗಿದ್ದ ಅವರು ಕನ್ನಡಕ್ಕಾಗಿ ನಿರಂತರ ಕೆಲಸ ಮಾಡಿದ ಬಹುಮುಖ್ಯ ರಾಜಕೀಯ ನಾಯಕ' ಎಂದರು.

'ಕನ್ನಡ ಭಾಷೆ, ನೆಲ ಮತ್ತು ಜಲದ ವಿಚಾರದಲ್ಲಿ ಯಾವುದೇ ತೊಂದರೆ ಎದುರಾದರೂ ಅದರ ನಿವಾರಣೆಗಾಗಿ ಮುಂಚೂಣಿಯಲ್ಲಿ ನಿಂತು ಶ್ರಮಿಸುತ್ತಿದ್ದರು. ತಾರ್ಕಿಕ ಅಂತ್ಯಕ್ಕೆ ತಲುಪಿಸುತ್ತಿದ್ದರು. ಕನ್ನಡ ಕಾರ್ಯಕರ್ತರಿಗೆ ಅವರ ಮನೆ ತೆರೆದ ಬಾಗಿಲು. ಅವರ ಆತಿಥ್ಯ ಪಡೆಯದ ಕನ್ನಡ ಕಾರ್ಯಕರ್ತ ಇರಲು ಸಾಧ್ಯವಿಲ್ಲ' ಎಂದು ಹೇಳಿದರು.

ಮಾರ್ಚ್‌ವರೆಗೆ ಸದಸ್ಯತ್ವ ನೋಂದಣಿ ಅಭಿಯಾನ– ಡಿ.ಕೆ. ಶಿವಕುಮಾರ್

ಬೆಂಗಳೂರು: 'ಮಾರ್ಚ್‌ವರೆಗೂ ಪಕ್ಷದ ಸದಸ್ಯತ್ವ ನೋಂದಣಿ ಅಭಿಯಾನ ನಡೆಯಲಿದೆ. ನಂತರವೂ ಸದಸ್ಯತ್ವ ನೀಡಲಾಗುವುದು. ಆದರೆ, ಪಕ್ಷದ ಆಂತರಿಕ ಚುನಾವಣೆಗಳಲ್ಲಿ ಮತದಾನದ ಹಕ್ಕು ಪಡೆಯಬೇಕಾದರೆ ಈ ಅಭಿಯಾನದ ಅವಧಿಯಲ್ಲಿ ಸದಸ್ಯತ್ವ ನೋಂದಣಿ ಮಾಡಿಸಿಕೊಳ್ಳಲೇಬೇಕು' ಎಂದು ಪಕ್ಷದ ಮುಖಂಡರಿಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಸದಸ್ಯತ್ವ ನೋಂದಣಿ ಅಭಿಯಾನ ಕುರಿತಂತೆ ಪಕ್ಷದ ವಿವಿಧ ಘಟಕಗಳ ರಾಜ್ಯ ಮತ್ತು ಜಿಲ್ಲಾ ಪದಾಧಿಕಾರಿಗಳು, ಶಾಸಕರು, ಮಾಜಿ ಶಾಸಕರು ಮತ್ತಿತರ ಮುಖಂಡರ ಜತೆ ಕೆಪಿಸಿಸಿ ಕಚೇರಿಯಲ್ಲಿ ಅವರು ಜೂಮ್ ಮೂಲಕ ಶನಿವಾರ ವಿಡಿಯೊ ಸಂವಾದ ನಡೆಸಿದರು.

'ನಾವು ಆನ್‌ಲೈನ್ ಹಾಗೂ ಆಫ್‌ಲೈನ್ ಸದಸ್ಯತ್ವ ನೋಂದಣಿ ಅಭಿಯಾನ ಮಾಡುತ್ತಿದ್ದೇವೆ. ಪ್ರತಿಯೊಬ್ಬರಿಗೂ ಆನ್‌ಲೈನ್ ಸದಸ್ಯತ್ವ ಅವಕಾಶ ನೀಡಲಾಗಿದೆ. ಪ್ರತಿ ಬೂತ್‌ಗೆ ಇಬ್ಬರು ಕಾರ್ಯಕರ್ತರ ನೇಮಿಸಿಕೊಳ್ಳಲು ಸೂಚಿಸಲಾಗಿದೆ. ಆನ್‌ಲೈನ್ ಸದಸ್ಯತ್ವ ಹೇಗೆ ಮಾಡಬೇಕು ಎಂಬ ಬಗ್ಗೆ ತರಬೇತಿ ನೀಡಲಾಗುತ್ತಿದೆ' ಎಂದರು.

ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಎಐಸಿಸಿ ಸದಸ್ಯತ್ವ ನೋಂದಣಿ ಉಸ್ತುವಾರಿ ಕೆ. ರಾಜು, ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಸಲೀಂ ಅಹಮದ್, ರಾಮಲಿಂಗಾರೆಡ್ಡಿ, ಧ್ರುವನಾರಾಯಣ್, ಕೆಪಿಸಿಸಿ ಡಿಜಿಟಲ್ ಸದಸ್ಯತ್ವ ನೋಂದಣಿ ಸಂಚಾಲಕ ರಘುನಂದನ್ ರಾಮಣ್ಣ, ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಪುಷ್ಪಾ ಅಮರನಾಥ್ ಪಾಲ್ಗೊಂಡಿದ್ದರು.

ಕೋವಿಡ್: 35,140 ಮಂದಿ ಚೇತರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 50 ಸಾವಿರದ ಗಡಿ ಸಮೀಪಿಸಿದ್ದ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ಶನಿವಾರ 42,470ಕ್ಕೆ ಇಳಿಕೆಯಾಗಿದೆ. ಸೋಂಕಿತರಲ್ಲಿ 35,140 ಮಂದಿ ಚೇತರಿಸಿಕೊಂಡಿದ್ದಾರೆ.


ಶುಕ್ರವಾರ ಬೆಂಗಳೂರಿನಲ್ಲಿ 29,068 ಪ್ರಕರಣಗಳು ಹೊಸದಾಗಿ ದೃಢಪಟ್ಟಿದ್ದವು. ಆ ಸಂಖ್ಯೆ 17,266ಕ್ಕೆ ಇಳಿಕೆಯಾಗಿದೆ. ಜಿಲ್ಲೆಗಳಲ್ಲಿ ಪ್ರಕರಣಗಳ ಸಂಖ್ಯೆ ಏರುಗತಿ ಪಡೆದುಕೊಂಡಿದೆ. ಒಂದು ದಿನದ ಅವಧಿಯಲ್ಲಿ 2.19 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣ ಶೇ 19.33 ರಷ್ಟಿದೆ. ಐದು ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ನಾಲ್ಕು ಅಂಕಿ, 22 ಜಿಲ್ಲೆಗಳಲ್ಲಿ ಮೂರು ಅಂಕಿಯಲ್ಲಿದೆ.


ಕೆ.ಆರ್.ಮಾರುಕಟ್ಟೆ ಬಳಿ ಬಿಬಿಎಂಪಿಯ ಆರೋಗ್ಯ ಸಿಬ್ಬಂದಿಯೊಬ್ಬರು ಕೋವಿಡ್ ಪರೀಕ್ಷೆಗಾಗಿ ಮಹಿಳೆಯ ಗಂಟಲು ದ್ರವವನ್ನು ಶನಿವಾರ ಸಂಗ್ರಹಿಸಿದರು – ಪ್ರಜಾವಾಣಿ ಚಿತ್ರ

ಮೈಸೂರಿನಲ್ಲಿ 4,601, ತುಮಕೂರಿನಲ್ಲಿ 3,417, ಹಾಸನದಲ್ಲಿ 2,679, ಮಂಡ್ಯದಲ್ಲಿ 1,822, ಹಾಗೂ ಕೋಲಾರದಲ್ಲಿ 1,417 ಮಂದಿ ಹೊಸದಾಗಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ಸಾವಿರಕ್ಕಿಂತ ಕಡಿಮೆ ಇವೆ. ಈವರೆಗೆ ವರದಿಯಾದ ಒಟ್ಟು ಪ್ರಕರಣಗಳ ಸಂಖ್ಯೆ 34.67 ಲಕ್ಷಕ್ಕೆ ಏರಿಕೆಯಾಗಿದೆ.

ಸೋಂಕಿತರಲ್ಲಿ ಬೆಂಗಳೂರಿನಲ್ಲಿಯೇ 22,511 ಮಂದಿ ಹೊಸದಾಗಿ ಚೇತರಿಸಿಕೊಂಡಿದ್ದಾರೆ. ರಾಜ್ಯದಲ್ಲಿ ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆ 30.98 ಲಕ್ಷಕ್ಕೆ ತಲುಪಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ ಮತ್ತಷ್ಟು ಹೆಚ್ಚಳವಾಗಿದ್ದು, ಸದ್ಯ ಆಸ್ಪತ್ರೆ ಸೇರಿದಂತೆ ವಿವಿಧೆಡೆ 3.30 ಲಕ್ಷ ಮಂದಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಇವರಲ್ಲಿ ಬೆಂಗಳೂರಿನಲ್ಲಿಯೇ 2.18 ಲಕ್ಷ ಮಂದಿ ಇದ್ದಾರೆ.

ಕೋವಿಡ್ ಪೀಡಿತರಲ್ಲಿ 26 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. ಬೆಂಗಳೂರಿನಲ್ಲಿ ಆರು ಮಂದಿ, ಬಾಗಲಕೋಟೆ, ಬೆಳಗಾವಿ, ದಕ್ಷಿಣ ಕನ್ನಡದಲ್ಲಿ ತಲಾ ಮೂವರು ಮೃತಪಟ್ಟಿದ್ದಾರೆ. ರಾಜ್ಯದಲ್ಲಿ ಮರಣ ಪ್ರಮಾಣ ದರವು ಶೇ 0.06 ರಷ್ಟು ವರದಿಯಾಗಿದೆ. ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 38,563ಕ್ಕೆ ಏರಿಕೆಯಾಗಿದೆ.



ಕೋವಿಡ್ ಪರಿಹಾರಕ್ಕೆ ಒತ್ತಾಯಿಸಿ ನಾಳೆ ಮನೆಯಿಂದಲೇ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಮೂರನೇ ಅಲೆ ನಿಯಂತ್ರಣಕ್ಕೆ ಕ್ರಮ ವಹಿಸಲು ಹಾಗೂ ಸಂಕಷ್ಟದಲ್ಲಿರುವ ಕುಟುಂಬಗಳಿಗೆ ಪರಿಹಾರ ವಿತರಿಸಲು ಒತ್ತಾಯಿಸಿ ಜ.24ರಂದು ಮನೆ– ಮನೆಯಿಂದಲೇ ಪ್ರತಿಭಟನೆ ನಡೆಸಲು ಏಳು ಪಕ್ಷಗಳ ಜಂಟಿ ಸಮಿತಿ ನಿರ್ಧರಿಸಿದೆ.

ಸಿಪಿಐ, ಸಿಪಿಐ(ಎಂ), ಸೋಷಿಯಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯುನಿಸ್ಟ್), ಸಿಪಿಐ (ಎಂಎಲ್, ಲಿಬರೇಷನ್), ಅಖಿಲ ಭಾರತ ಫಾರ್ವರ್ಡ್ ಬ್ಲಾಕ್ (ಎಐಎಫ್‌ಬಿ), ಆರ್‌ಪಿಐ (ಅಂಬೇಡ್ಕರ್ ವಾದ), ಸ್ವರಾಜ್ ಇಂಡಿಯಾ ಸೇರಿದಂತೆ ಒಟ್ಟು 7 ಪಕ್ಷಗಳ ಮುಖಂಡರು ಶನಿವಾರ ಜಂಟಿ ಪತ್ರಿಕಾಗೋಷ್ಠಿ ನಡೆಸಿ, ಮುಖ್ಯಮಂತ್ರಿಗೆ ಬರೆದಿರುವ ಬಹಿರಂಗ ಪತ್ರವನ್ನು ಬಿಡುಗಡೆ ಮಾಡಿದರು.

'ಮದುವೆ ಸಮಾರಂಭಗಳಿಗೆ 200 ಜನ ಸೇರಬಹುದು. ಜನರ ಹೋರಾಟಗಳಿಗೆ ಮಾತ್ರ ಅವಕಾಶ ನೀಡದಿರುವುದು ಪ್ರಜಾಪ್ರಭುತ್ವ ವಿರೋಧಿ ಕ್ರಮ. ಈ ನಿರ್ಬಂಧಗಳನ್ನು ಕೂಡಲೇ ತೆರವುಗೊಳಿಸಬೇಕು' ಎಂದು ಸಿಪಿಐ(ಎಂ) ಕಾರ್ಯದರ್ಶಿ ಯು.ಬಸವರಾಜ ಒತ್ತಾಯಿಸಿದರು.

'ಮನೆ ಆರೈಕೆಯಲ್ಲಿರುವ ಸೋಂಕಿತರಿಗೆ ಅಗತ್ಯ ನೆರವು ನೀಡಬೇಕು. ವಾರ್ಡ್‌ವಾರು ಸಮುದಾಯ ಅಡುಗೆ ಮನೆಗಳನ್ನು ತೆರೆದು ಪೌಷ್ಟಿಕ ಆಹಾರವನ್ನು ಉಚಿತವಾಗಿ ಒದಗಿಸಬೇಕು. ಕೋವಿಡ್ ಸೋಂಕಿತರಿಗೆ ಉಚಿತ ಚಿಕಿತ್ಸೆ ನೀಡಬೇಕು. ಮೃತರ ಕುಟುಂಬದವರಿಗೆ ₹4 ಲಕ್ಷ ಪರಿಹಾರ ನೀಡಬೇಕು. ಕೋವಿಡ್ ಯೋಧರ ಜೀವನ ಭದ್ರತೆಗೂ ಕ್ರಮ ವಹಿಸಬೇಕು' ಎಂದು ಆಗ್ರಹಿಸಿದರು.

ಆದಾಯ ತೆರಿಗೆ ವ್ಯಾಪ್ತಿಯಿಂದ ಹೊರಗಿರುವ ಪ್ರತಿ ಕುಟುಂಬಕ್ಕೂ ₹10 ಸಾವಿರ ನೀಡಬೇಕು. ಪ್ರತಿ ಕುಟುಂಬಕ್ಕೆ 10 ಕೆ.ಜಿ. ಪಡಿತರವನ್ನು ಉಚಿತವಾಗಿ ವಿತರಿಸಬೇಕು ಎಂದು ಒತ್ತಾಯಿಸಿದರು.

'ಉದ್ಯೋಗ ಖಾತ್ರಿ ಯೋಜನೆಯಡಿ 200 ದಿನ ಉದ್ಯೋಗ ನೀಡಿ ಕೂಲಿಯನ್ನು ₹600ಕ್ಕೆ ಹೆಚ್ಚಿಸಬೇಕು. ಶಾಲಾ ಕಾಲೇಜುಗಳ ಶುಲ್ಕ ಮನ್ನಾ ಮಾಡಬೇಕು' ಎಂದು ಸಿಪಿಐ ರಾಜ್ಯ ಮುಖಂಡ ಪಿ.ವಿ. ಲೋಕೇಶ್ ಮತ್ತು ಎಸ್‌ಯುಸಿಐ(ಸಿ) ಮುಖಂಡ ಎಂ.ಎನ್. ಶ್ರೀರಾಮ್ ಆಗ್ರಹಿಸಿದರು.


ಆರ್‌ಪಿಐ (ಅಂಬೇಡ್ಕರ್ ವಾದ) ಅಧ್ಯಕ್ಷ ಮೋಹನ್‌ರಾಜ್, 'ಮತಾಂತರ ನಿಷೇಧ ಮಸೂದೆ ಹಿಂದಕ್ಕೆ ಪಡೆಯಬೇಕು. ಬೆಲೆ ಏರಿಕೆ ನಿಯಂತ್ರಣಕ್ಕೆ ಕ್ರಮ ವಹಿಸಬೇಕು. ಸರ್ಕಾರಿ ಆಸ್ಪತ್ರೆಗಳ ಸಂಖ್ಯೆ ಹೆಚ್ಚಿಸಬೇಕು. ಆರೋಗ್ಯ ವಲಯಕ್ಕೆ ಬಜೆಟ್‌ನಲ್ಲಿ ಅನುದಾನ ಹೆಚ್ಚಿಸಿ, ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಬಲಪಡಿಸಬೇಕು' ಎಂದು ಒತ್ತಾಯಿಸಿದರು.

ಒಟ್ಟು 15 ಬೇಡಿಕೆಗಳನ್ನು ಒಳಗೊಂಡ ಬಹಿರಂಗ ಪತ್ರವನ್ನು ಮುಖ್ಯಮಂತ್ರಿಗೆ ಕಳುಹಿಸಲಾಗಿದೆ. ಮನೆ– ಮನೆಯಿಂದಲೇ ಪ್ರತಿಭಟನೆ ನಡೆಸಿ ಆನ್‌ಲೈನ್‌ನಲ್ಲೂ ಮನವಿ ಸಲ್ಲಿಸಲಾಗುವುದು ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಕೆ.ಎನ್.ಉಮೇಶ್ ತಿಳಿಸಿದರು.

'ವಾರಾಂತ್ಯದ ಕರ್ಫ್ಯೂನಲ್ಲೂ ರಾಜಕೀಯ'

'ಸೋಂಕು ಪ್ರಮಾಣ ಕಡಿಮೆ ಇದ್ದಾಗ ವಾರಾಂತ್ಯದ ಕರ್ಫ್ಯೂ ವಿಧಿಸಿದವರು, ಹೆಚ್ಚಾದಾಗ ಹಿಂಪಡೆದಿದ್ದಾರೆ. ರಾಜಕೀಯ ಕಾರಣಕ್ಕೆ ಅವರು ಈ ರೀತಿ ಮಾಡುತ್ತಿದ್ದಾರೆ' ಎಂದು ಸರ್ಕಾರದ ವಿರುದ್ಧ ಡಿ.ಕೆ. ಶಿವಕುಮಾರ್ ಆಕ್ರೋಶ ವ್ಯಕ್ತಪಡಿಸಿದರು.

ವಾರಾಂತ್ಯ ಕರ್ಫ್ಯೂ ಹಿಂತೆಗೆದುಕೊಂಡ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ನಾನು ಈ ಹಿಂದೆಯೇ ಇದು ಬಿಜೆಪಿ ಕರ್ಫ್ಯೂ ಎಂದಿದ್ದೆ. ಅವರಿಗೆ ಬೇಕಾದಾಗ ವಿಧಿಸುತ್ತಾರೆ, ಬೇಡವಾದಾಗ ತೆರವುಗೊಳಿಸುತ್ತಾರೆಂದು. ಸರ್ಕಾರ ಅವೈಜ್ಞಾನಿಕವಾಗಿ ನಿಯಮಗಳನ್ನು ಜಾರಿ ಮಾಡುತ್ತಿದೆ. ಆಂಧ್ರ, ತೆಲಂಗಾಣ, ಇತರ ರಾಜ್ಯಗಳಲ್ಲಿ ಇಲ್ಲದ ನಿಯಮ ಇಲ್ಲಿ ಯಾಕೆ' ಎಂದು ಪ್ರಶ್ನಿಸಿದರು.



'ಲತಾ ಮಂಗೇಶ್ಕರ್ ಆರೋಗ್ಯದಲ್ಲಿ ಚೇತರಿಕೆ'

ಮುಂಬೈ(ಪಿಟಿಐ): ಕೋವಿಡ್‌ನಿಂದಾಗಿ ಆಸ್ಪತ್ರೆಗೆ ದಾಖಲಾಗಿರುವ ಗಾಯಕಿ ಲತಾ ಮಂಗೇಶ್ಕರ್ ಅವರ ಆರೋಗ್ಯದಲ್ಲಿ ಚೇತರಿಕೆ ಕಂಡುಬಂದಿದೆ. ಆದರೆ, ಅವರು ಇನ್ನೂ ತೀವ್ರ ನಿಗಾ ಘಟಕದಲ್ಲೇ ಇದ್ದಾರೆ ಎಂದು ವೈದ್ಯರು ಶನಿವಾರ ತಿಳಿಸಿದ್ದಾರೆ.


ಲತಾ ಮಂಗೇಶ್ಕರ್

'ಅವರನ್ನು ಎಷ್ಟು ದಿನಗಳ ವರೆಗೆ ಆಸ್ಪತ್ರೆಯಲ್ಲಿ ಇಟ್ಟುಕೊಳ್ಳಬೇಕು ಎಂಬುದನ್ನು ಈಗಲೇ ಹೇಳಲು ಸಾಧ್ಯವಿಲ್ಲ' ಎಂದೂ ಹೇಳಿದ್ದಾರೆ.

ಜನವರಿ 8ರಂದು ಕೋವಿಡ್ ದೃಢಪಟ್ಟ ಬಳಿಕ 92 ವರ್ಷದ ಲತಾ ಅವರನ್ನು ನಗರದ ಬ್ರೀಚ್ ಕ್ಯಾಂಡಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅವರ ಕುಟುಂಬಕ್ಕೆ ಆಪ್ತರಾಗಿರುವ ಅನುಷಾ ಶ್ರೀನಿವಾಸ್ ಅಯ್ಯರ್ ಅವರು ಈ ಬಗ್ಗೆ ತಿಳಿಸಿದ್ದಾರೆ.

ಚಿತ್ರಾವಳಿ


ವಿಜಯಪುರದ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯವನ್ನು ರದ್ದುಗೊಳಿಸುವ ನಿರ್ಧಾರ ಕೈ ಬಿಡುವಂತೆ ರಾಜ್ಯ ಸರ್ಕಾರದ ಮೇಲೆ ಒತ್ತಡ ಹೇರುವಂತೆ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ಪದಾಧಿಕಾರಿಗಳು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದರು. ಅಕ್ಕೈ ಪದ್ಮಶಾಲಿ, ಲೀಲಾದೇವಿ ಆರ್ ಪ್ರಸಾದ್, ಡಾ. ಸಬೀಹಾ, ವಸುಂಧರಾ ಭೂಪತಿ ಇದ್ದರು.


ಕಾವೇರಿ, ಮಹಾದಾಯಿ ಸೇರಿದಂತೆ ರಾಜ್ಯಕ್ಕೆ ಸಂಬಂಧಿಸಿದ ವಿವಿಧ ನದಿ ನೀರು ಯೋಜನೆಗಳ ಕುರಿತು ರಾಜ್ಯ ಸರ್ಕಾರ ದಿಟ್ಟ ನಿಲುವು ತಳೆಯಬೇಕು. ಮಹಾರಾಷ್ಟ್ರ ಏಕೀಕರಣ ಸಮಿತಿಯನ್ನು (ಎಂಇಎಸ್) ಶೀಘ್ರವೇ ನಿಷೇಧಿಸಬೇಕು ಎಂದು ಆಗ್ರಹಿಸಿ ವಾಟಾಳ್ ಕನ್ನಡ ಪಕ್ಷದ ವಾಟಾಳ್ ನಾಗರಾಜ್ ಹಾಗೂ ಸಾ.ರಾ. ಗೋವಿಂದು ನೇತೃತ್ವದಲ್ಲಿ ಕನ್ನಡಪರ ಹೋರಾಟಗಾರರು ಪುರಭವನದ ಎದುರು ಶನಿವಾರ ಪ್ರತಿಭಟನೆ ನಡೆಸಿದರು–ಪ್ರಜಾವಾಣಿ ಚಿತ್ರ

‘ಮೋದಿ ಆಡಳಿತದಲ್ಲಿ ಅಘೋಷಿತ ತುರ್ತು ಪರಿಸ್ಥಿತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರಧಾನಿ ನರೇಂದ್ರ ಮೋದಿ ಅವರ ಆಡಳಿತದಲ್ಲಿ ಅಘೋಷಿತ ತುರ್ತು ಪರಿಸ್ಥಿತಿ ನಿರ್ಮಾಣವಾಗಿದೆ. ಅರವಿಂದ್ ನರೇನ್ ಅವರ ‘ಇಂಡಿಯಾಸ್ ಅನ್–ಡಿಕ್ಲೇರ್ಡ್ ಎಮರ್ಜೆನ್ಸಿ: ಕಾನ್‌ಸ್ಟಿಟ್ಯೂಷನಲಿಸಂ ಆ್ಯಂಡ್ ದಿ ಪಾಲಿಟಿಕ್ಸ್ ಆಫ್ ರೆಸಿಸ್ಟನ್ಸ್’ ಪುಸ್ತಕ ಅದರ ವಿವಿಧ ಮಜಲುಗಳ ಮೇಲೆ ಬೆಳಕು ಚೆಲ್ಲುತ್ತದೆ’ ಎಂದು ಸುಪ್ರೀಂ ಕೋರ್ಟ್‌ನ ವಕೀಲರಾದ ಶಾರುಖ್ ಆಲಂ ತಿಳಿಸಿದರು.

ಈ ಪುಸ್ತಕದ ಕುರಿತು, ಆಲ್ ಇಂಡಿಯಾ ಲಾಯರ್ಸ್ ಅಸೋಸಿಯೇಷನ್ ಫಾರ್ ಜಸ್ಟಿಸ್ (ಎಐಎಲ್‌ಎಜೆ) ಹಮ್ಮಿಕೊಂಡಿದ್ದ ಆನ್‌ಲೈನ್ ಸಂವಾದದಲ್ಲಿ ಅವರು ಶನಿವಾರ ಮಾತನಾಡಿದರು.

‘ಮೋದಿ ಅವರ ಅತಿರೇಕದ ನಿರ್ಧಾರಗಳಿಂದಾಗಿ ದೇಶದಲ್ಲಿ ಸಮಸ್ಯೆಗಳು ತಲೆದೋರಿವೆ. ಜನರಿಗೂ ಅದು ನಿಧಾನವಾಗಿ ಮನದಟ್ಟಾಗುತ್ತಿದೆ. ಜನರು ಅಟಲ್ ಬಿಹಾರಿ ವಾಜಪೇಯಿ ಛಾಯೆಯಿಂದ ಹೊರಬಂದು ಮೋದಿ ಅವರ ಆಡಳಿತವನ್ನು ಅವಲೋಕಿಸಲು ಈ ಪುಸ್ತಕ ನೆರವಾಗುತ್ತದೆ’ ಎಂದರು.

‘ಮೋದಿ ನೇತೃತ್ವದ ಸರ್ಕಾರವು ದೇಶದಲ್ಲಿ ಅಘೋಷಿತ ತುರ್ತು ಪರಿಸ್ಥಿತಿ ಸೃಷ್ಟಿಸಿ, ಪ್ರಜಾಪ್ರಭುತ್ವದ ಮೌಲ್ಯಗಳನ್ನು ನಾಶಪಡಿಸುತ್ತಿದೆ. ಸಾಂವಿಧಾನಿಕ ಮೌಲ್ಯಗಳ ಮೇಲೂ ದಾಳಿ ನಡೆಸುತ್ತಿದೆ. ನಾಗರಿಕ ಸಂಸ್ಥೆಗಳನ್ನು ಹಾಗೂ ಸರ್ಕಾರಿ ಉದ್ದಿಮೆಗಳನ್ನು ತನ್ನ ಹಿಡಿತಕ್ಕೆ ಪಡೆದು ಅವುಗಳನ್ನು ದಿವಾಳಿಯತ್ತ ದೂಡುತ್ತಿದೆ. ಈ ಕುರಿತೂ ಪುಸ್ತಕದಲ್ಲಿ ವಿವರಗಳಿವೆ’ ಎಂದು ತಿಳಿಸಿದರು.

‘ದೇಶದಲ್ಲಿ ಮೂಲಭೂತ ಹಕ್ಕುಗಳ ಮೇಲೆ ಹಾಗೂ ಸಾಂವಿಧಾನಿಕ ಮೌಲ್ಯಗಳ ಮೇಲೆ ನಿರಂತರವಾಗಿ ದಾಳಿಗಳು ನಡೆಯುತ್ತಿವೆ. ಪರಿಸ್ಥಿತಿ ಹೀಗೆ ಮುಂದುವರಿದರೆ ದೇಶದಲ್ಲಿ ಸರ್ವಾಧಿಕಾರಿ ಆಡಳಿತ ಕಾಣಬೇಕಾದೀತು’ ಎಂದು ಕೃತಿಯ ಲೇಖಕ ಅರವಿಂದ್ ನರೇನ್ ಕಳವಳ ವ್ಯಕ್ತಪಡಿಸಿದರು.

‘ನಾಗರಿಕರ ಹಕ್ಕುಗಳನ್ನು ಎತ್ತಿಹಿಡಿಯುವಲ್ಲಿ ನ್ಯಾಯಾಲಯಗಳ ಪಾತ್ರ ಮಹತ್ವದ್ದು. ದೇಶವು ಸರ್ವಾಧಿಕಾರದತ್ತ ಹೊರಳುವುದನ್ನು ತಪ್ಪಿಸಲು ಪ್ರತಿರೋಧದ ಮನೋಭಾವ ಮೈಗೂಡಿಸಿಕೊಳ್ಳಬೇಕು’ ಎಂದು ಅವರು ಅಭಿಪ್ರಾಯಪಟ್ಟರು.

ಆಲ್ ಇಂಡಿಯಾ ಲಾಯರ್ಸ್ ಅಸೋಸಿಯೇಷನ್ ಫಾರ್ ಜಸ್ಟಿಸ್ ಸದಸ್ಯೆ ಟಿ.ಮಧುಲಿಕಾ, ಮೈತ್ರೇಯಿ ಕೃಷ್ಣನ್ ಇದ್ದರು.

ಮೂಗಿನ ಮೇಲಿನ 500 ಗ್ರಾಂ ಗಡ್ಡೆಗೆ ಯಶಸ್ವಿ ಶಸ್ತ್ರಚಿಕಿತ್ಸೆ

ಪ್ರಜಾವಾಣಿ ವಾರ್ತೆ



ಮೂಗಿನ ಮೇಲೆ ಬೆಳೆದಿದ್ದ ಗಡ್ಡೆ



ಶಸ್ತ್ರಚಿಕಿತ್ಸೆ ನಡೆಸಿದ ನಂತರ

ಬೆಂಗಳೂರು: ವ್ಯಕ್ತಿಯೊಬ್ಬರ ಮೂಗಿನ ಮೇಲೆ ಬೆಳೆದಿದ್ದ 500 ಗ್ರಾಂ ತೂಕದ ಗಡ್ಡೆಯನ್ನು (ರೈನೋಫಿಮಾ) ಇಲ್ಲಿನ ಕೆಂಪೇಗೌಡ ವೈದ್ಯಕೀಯ ವಿಜ್ಞಾನ ಸಂಸ್ಥೆಯ (ಕಿಮ್ಸ್) ವೈದ್ಯರು ಅಪರೂಪದ ಶಸ್ತ್ರಚಿಕಿತ್ಸೆಯ ಮೂಲಕ ತೆಗೆದಿದ್ದಾರೆ.

48 ವರ್ಷದ ಟೈಲರ್ ಒಬ್ಬರಿಗೆ 10 ವರ್ಷಗಳ ಹಿಂದೆ ಮೂಗಿನ ಮೇಲೆ ಕಾಣಿಸಿಕೊಂಡಿದ್ದ ಗಡ್ಡೆ, ದೊಡ್ಡದಾಗಿ ಬೆಳೆದಿತ್ತು. ಇದರಿಂದ ಅವರ ಮುಖದ ಸ್ವರೂಪ ಬದಲಾಗಿದ್ದಲ್ಲದೇ, ಉಸಿರಾಟ ಸೇರಿದಂತೆ ದೈನಂದಿನ ಜೀವನ ನಿರ್ವಹಣೆಗೂ ಸಮಸ್ಯೆ ಎದುರಾಗಿತ್ತು. ಮಾನಸಿಕವಾಗಿಯೂ ಕುಗ್ಗಿದ್ದ ಅವರಿಗೆ, ಕಿಮ್ಸ್ ಆಸ್ಪತ್ರೆಯ ಇಎನ್‌ಟಿ ವಿಭಾಗದ ಮುಖ್ಯಸ್ಥ ಡಾ. ಜಗನ್ನಾಥ್ ಬಿ. ಅವರ ಮಾರ್ಗದರ್ಶನದಲ್ಲಿ ಡಾ. ಸ್ಮಿತಾ ಎಸ್. ಜಿ ಹಾಗೂ ಡಾ. ಸುಹಾಸಿನಿ ಎಚ್. ಅವರು ರೈನೋಪ್ಲಾಸ್ಟಿ ಶಸ್ತ್ರಚಿಕಿತ್ಸೆಯನ್ನು ನಡೆಸಿದ್ದಾರೆ. ₹ 2 ಲಕ್ಷ ವೆಚ್ಚದ ಶಸ್ತ್ರಚಿಕಿತ್ಸೆಗೆ ₹ 35 ಸಾವಿರ ವೆಚ್ಚವಾಗಿದೆ. ಇದರಲ್ಲಿ ಔಷಧದ ವೆಚ್ಚವೂ ಸೇರಿದೆ.

‘ವ್ಯಕ್ತಿಯ ಮೂಗಿನ ಭಾಗದಲ್ಲಿ ಗಡ್ಡೆ ಕಾಣಿಸಿಕೊಂಡಾಗ ಅವರು ಪ್ರಾರಂಭಿಕ ದಿನಗಳಲ್ಲಿ ಕಡೆಗಣಿಸಿದ್ದರು. ವರ್ಷಗಳು ಕಳೆದಂತೆ ಇದು ದೊಡ್ಡದಾಗಿ ಬೆಳೆದಿತ್ತು. ಕ್ಯಾನ್ಸರ್ ಅಲ್ಲದ ಈ ಗಡ್ಡೆಯನ್ನು ತೆಗೆಯಲು 45 ನಿಮಿಷ ಶಸ್ತ್ರಚಿಕಿತ್ಸೆ ನಡೆಸಲಾಗಿದೆ. ಅವರು ಒಂದು ವಾರ ಆಸ್ಪತ್ರೆಯಲ್ಲಿ ಆರೈಕೆಯಲ್ಲಿದ್ದರು. ಅವರ ಮೂಗು ಮೊದಲಿನ ಸ್ವರೂಪಕ್ಕೆ ಮರಳಿದೆ. ಶಸ್ತ್ರಚಿಕಿತ್ಸೆ ಬಳಿಕ ಸಂಪೂರ್ಣ ಚೇತರಿಸಿಕೊಂಡಿದ್ದಾರೆ. ಗಡ್ಡೆ ಬೆಳೆಯುವುದಕ್ಕೆ ಕಾರಣವಾಗುವ ಕೋಶಗಳನ್ನು ತೆಗೆದುಹಾಕಿರುವುದರಿಂದ ಈ ಸಮಸ್ಯೆ ಮರುಕಳಿಸುವುದಿಲ್ಲ’ ಎಂದು ಡಾ. ಸುಹಾಸಿನಿ ಎಚ್. ‘ಪ್ರಜಾವಾಣಿ’ಗೆ ತಿಳಿಸಿದರು.

‘ಈ ಗಡ್ಡೆಯು ಆಲೂಗಡ್ಡೆಯ ರೀತಿಯಲ್ಲಿ ಬೆಳೆಯುತ್ತದೆ. ಇದಕ್ಕೆ ನಿಖರ ಕಾರಣವಿಲ್ಲ. ಹೆಚ್ಚಾಗಿ ಮೂಗಿನ ಮೇಲೆ ಕಾಣಿಸಿಕೊಳ್ಳುತ್ತದೆ. ಶೇ 2ರಿಂದ ಶೇ 5 ರಷ್ಟು ಮಂದಿಯಲ್ಲಿ ಈ ಸಮಸ್ಯೆ ಕಾಣಿಸಿಕೊಳ್ಳುತ್ತದೆ. ಶಸ್ತ್ರಚಿಕಿತ್ಸಾ ವೆಚ್ಚ ದುಬಾರಿ ಎಂಬ ಕಾರಣಕ್ಕೆ ಈ ಸಮಸ್ಯೆ ಎದುರಿಸುವವರು ಅದನ್ನು ತೆಗೆಸಲು ಹಿಂದೇಟು ಹಾಕುತ್ತಾರೆ. ನಾವು ಕಡಿಮೆ ವೆಚ್ಚದಲ್ಲಿ ಶಸ್ತ್ರಚಿಕಿತ್ಸೆ ನಡೆಸಿದ್ದೇವೆ’ ಎಂದು ವಿವರಿಸಿದರು.

ಮುಂಬೈ: 20 ಅಂತಸ್ತಿನ ಕಟ್ಟಡದಲ್ಲಿ ಅಗ್ನಿ ಅವಘಡ, ಆರು ಜನರ ಸಾವು

ಮುಂಬೈ (ಪಿಟಿಐ): ಇಲ್ಲಿನ ತಾರ್ಡಿಯೊ ಪ್ರದೇಶದ ಭಾಟಿಯಾ ಆಸ್ಪತ್ರೆ ಬಳಿಯ ಬಹುಮಹಡಿ ವಸತಿ ಕಟ್ಟಡದ 19ನೇ ಮಹಡಿಯಲ್ಲಿ ಶನಿವಾರ ಬೆಳಿಗ್ಗೆ ಅಗ್ನಿ ಅವಘಡ ಸಂಭವಿಸಿದ್ದು, ಆರು ಮಂದಿ ಮೃತಪಟ್ಟಿದ್ದಾರೆ ಹಾಗೂ 23ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ.

20 ಮಹಡಿಯ ಸಚಿನಮ್ ಹೈಟ್ಸ್ ಕಟ್ಟಡದಲ್ಲಿ ಬೆಳಿಗ್ಗೆ 7 ಗಂಟೆ ಸುಮಾರಿಗೆ ಬೆಂಕಿ ಕಾಣಿಸಿಕೊಂಡಿತು. ಆ ವೇಳೆ ಕಟ್ಟಡದ ಹಲವು ನಿವಾಸಿಗಳು ಇನ್ನೂ ಮಲಗಿದ್ದರು ಎಂದು ಬೃಹನ್ ಮುಂಬೈ ಮುನ್ಸಿಪಲ್ ಕಾರ್ಪೊರೇಷನ್ (ಬಿಎಂಸಿ) ಅಧಿಕಾರಿ ಹೇಳಿದ್ದಾರೆ.

‘ಗಾಯಗೊಂಡವರನ್ನು ದಾಖಲಿಸಿಕೊಳ್ಳಲು ಸಮೀಪದ ಆಸ್ಪತ್ರೆ ನಿರಾಕರಿಸಿದ್ದರಿಂದ ಹೆಚ್ಚಿನ ಸಾವು, ನೋವುಗಳು ಸಂಭವಿಸಿವೆ’ ಎಂದು ಬಿಜೆಪಿ ನಾಯಕ ದೇವೇಂದ್ರ ಫಡಣವಿಸ್ ಆರೋಪಿಸಿದರು. ಇದಕ್ಕೆ ಕಾರಣರಾದವರ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಅವರು ಒತ್ತಾಯಿಸಿದರು.



ಅಗ್ನಿ ಅವಘಡ ಸಂಭವಿಸಿದ ಬಹುಮಹಡಿ ವಸತಿ ಕಟ್ಟಡ –ಪಿಟಿಐ ಚಿತ್ರ

ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಈ ದುರಂತ ಸಂಭವಿಸಿದ್ದು ಮೇಲ್ನೋಟಕ್ಕೆ ಗೊತ್ತಾಗಿದೆ ಎಂದು ರಾಜ್ಯದ ಪ್ರವಾಸೋದ್ಯಮ ಸಚಿವ ಆದಿತ್ಯ ಠಾಕ್ರೆ ಹೇಳಿದ್ದಾರೆ.

‘ಇದು ನೆಲಮಹಡಿ ಒಳಗೊಂಡಿರುವ 20 ಅಂತಸ್ತಿನ ಕಟ್ಟಡವಾಗಿದ್ದು, 19ನೇ ಮಹಡಿಯಲ್ಲಿ ಬೆಂಕಿ ಕಾಣಿಸಿಕೊಂಡಿತು. ಮಾಹಿತಿ ದೊರೆತ ಕೂಡಲೇ ಅಗ್ನಿಶಾಮಕ ದಳದ ಸಿಬ್ಬಂದಿ ಮತ್ತು ಪೊಲೀಸರು ಸ್ಥಳಕ್ಕೆ ಧಾವಿಸಿ ರಕ್ಷಣಾ ಕಾರ್ಯ ಕೈಗೊಂಡು, ಹಲವರನ್ನು ರಕ್ಷಿಸಿದ್ದಾರೆ. ಅವರಲ್ಲಿ ಕೆಲವರು ಗಾಯಗೊಂಡಿದ್ದು, 29 ಜನರನ್ನು ಸಮೀಪದ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಕೆಲ ನಿವಾಸಿಗಳು ಉಸಿರುಗಟ್ಟುವಿಕೆಯ ಸಮಸ್ಯೆ ಎದುರಿಸಿದರು’ ಎಂದು ಘಟನೆಯ ಕುರಿತು ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಪರಿಹಾರ: ಘಟನೆಯ ಬಗ್ಗೆ ಟ್ವೀಟ್ ಮಾಡಿ ಆಘಾತ ವ್ಯಕ್ತಪಡಿಸಿರುವ ಪ್ರಧಾನಿ ನರೇಂದ್ರ ಮೋದಿ, ಮೃತರ ಬಂಧುಗಳಿಗೆ ಪ್ರಧಾನಿ ರಾಷ್ಟ್ರೀಯ ಪರಿಹಾರ ನಿಧಿಯಿಂದ ತಲಾ ₹2 ಲಕ್ಷ ಹಾಗೂ ಗಾಯಗೊಂಡವರಿಗೆ ತಲಾ ₹50 ಸಾವಿರ ಪರಿಹಾರ ಪ್ರಕಟಿಸಿದ್ದಾರೆ. ಮಹಾರಾಷ್ಟ್ರ ಸರ್ಕಾರ ಮೃತರ ಕುಟುಂಬಗಳಿಗೆ ₹5 ಲಕ್ಷ ಪರಿಹಾರ ಪ್ರಕಟಿಸಿದೆ.

ನಾಲ್ವರಿಗೆ ನೆರವಾದ ಯುವಕನ ಅಂಗಾಂಗಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆ ಅಪಘಾತದಲ್ಲಿ ಗಾಯಗೊಂಡು ಮಿದುಳು ನಿಷ್ಕ್ರಿಯಗೊಂಡಿದ್ದ 28 ವರ್ಷದ ಯುವಕನ ಅಂಗಾಂಗಗಳನ್ನು ಕುಟುಂಬಸ್ಥರು ದಾನ ಮಾಡುವ ಮೂಲಕ ನಾಲ್ವರಿಗೆ ನೆರವಾಗಿದ್ದಾರೆ.

ಹೊಸಕೋಟೆ ತಾಲ್ಲೂಕಿನ ಆನಂದ್ ಕುಮಾರ್ ಎನ್ನುವವರು ರಸ್ತೆ ಅಪಘಾತದಲ್ಲಿ ಗಾಯಗೊಂಡು, ಇಲ್ಲಿ ಸ್ಪರ್ಶ ಆಸ್ಪತ್ರೆಗೆ ದಾಖಲಾಗಿದ್ದರು. ಅವರಿಗೆ ವೈದ್ಯರು ಹೆಚ್ಚಿನ ಚಿಕಿತ್ಸೆ ಒದಗಿಸಿದರೂ ಚೇತರಿಸಿಕೊಳ್ಳಲಿಲ್ಲ. ಅವರ ಮಿದುಳು ನಿಷ್ಕ್ರಿಯಗೊಂಡಿರುವುದನ್ನು ಖಚಿತಪಡಿಸಿದ ವೈದ್ಯರು, ಕುಟುಂಬದ ಸದಸ್ಯರಿಗೆ ಅಂಗಾಂಗಗಳ ದಾನದ ಬಗ್ಗೆ ವಿವರಿಸಿದರು.

ಯುವಕನ ಅಂಗಾಂಗಗಳ ದಾನಕ್ಕೆ ಕುಟುಂಬದವರು ಸಮ್ಮತಿ ನೀಡಿದ ಬಳಿಕ, ರಾಜ್ಯ ಸರ್ಕಾರದ ಜೀವಸಾರ್ಥಕತೆ ಕಾರ್ಯಕ್ರಮದಡಿ ಹೆಸರು ನೋಂದಾಯಿಸಿಕೊಂಡವರಿಗೆ ಅಂಗಾಂಗಗಳನ್ನು ಒದಗಿಸಲಾಗಿದೆ. ಹೃದಯವನ್ನು ಮಣಿಪಾಲ್ ಆಸ್ಪತ್ರೆಗೆ ಸಾಗಿಸಿ, ಹೃದಯ ಸಮಸ್ಯೆ ಇರುವವರಿಗೆ ಕಸಿ ಮಾಡಲಾಗಿದೆ. ಯಕೃತ್ತು ಮತ್ತು ಎರಡು ಮೂತ್ರಪಿಂಡಗಳನ್ನು ಸ್ಪರ್ಶ ಆಸ್ಪತ್ರೆಯಲ್ಲಿ ರೋಗಿಗಳಿಗೆ ಕಸಿ ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಪ್ರಿಯಾಂಕಾಗೆ ಬಾಡಿಗೆ ತಾಯಿ ಮೂಲಕ ಮಗು


ಪ್ರಿಯಾಂಕಾ ಚೋಪ್ರಾ

ಮುಂಬೈ (ಪಿಟಿಐ): ನಟಿ ಪ್ರಿಯಾಂಕಾ ಚೋಪ್ರಾ ಹಾಗೂ ಅವರ ಪತಿ ಗಾಯಕ ನಿಕ್ ಜೊನಾಸ್ ಅವರು ಬಾಡಿಗೆ ತಾಯಿಯ ಮೂಲಕ ಮಗು ಪಡೆದಿದ್ದಾರೆ.

ಈ ವಿಚಾರವನ್ನು ಇಬ್ಬರೂ ಇನ್‌ಸ್ಟಾಗ್ರಾಂನಲ್ಲಿ ಹಂಚಿಕೊಂಡಿದ್ದಾರೆ. 'ನಾವು ಬಾಡಿಗೆ ತಾಯಿಯ ಮೂಲಕ ಮಗು ಪಡೆದಿದ್ದೇವೆ. ಈ ವಿಶೇಷ ಸಂದರ್ಭದಲ್ಲಿ ಎಲ್ಲರೂ ನಮ್ಮ ಖಾಸಗಿತನವನ್ನು ಗೌರವಿಸಬೇಕು ಎಂದು ಕೇಳಿಕೊಳ್ಳುತ್ತೇನೆ. ಈಗ ನಮ್ಮ ಕುಟುಂಬದ ಮೇಲೆ ಗಮನ ಹರಿಸಿದ್ದೇವೆ' ಎಂದು ಅವರಿಬ್ಬರು ಹೇಳಿಕೊಂಡಿದ್ದಾರೆ.

ಪ್ರಿಯಾಂಕಾ ಹಾಗೂ ನಿಕ್ 2018 ರ ಡಿಸೆಂಬರ್‌ನಲ್ಲಿ ಜೈಪುರದಲ್ಲಿ ಮದುವೆಯಾಗಿದ್ದರು. ಸದ್ಯ ಅಮೆರಿಕದಲ್ಲಿ ನೆಲೆಸಿದ್ದಾರೆ. ಈ ಸುದ್ದಿಯನ್ನು ಹಂಚಿಕೊಂಡಿದ್ದಕ್ಕೆ ನಿಕ್ ದಂಪತಿಗೆ ಸಾಮಾಜಿಕ ಜಾಲತಾಣಗಳಲ್ಲಿ ಅಭಿಮಾನಿಗಳು, ಹಿತೈಷಿಗಳು ಶುಭಾಶಯ ಕೋರುತ್ತಿದ್ದಾರೆ.


ಶಿವಸೇನೆ ರ‍್ಯಾಲಿ ರದ್ದು

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಬೆಳಗಾವಿ, ಬೆಂಗಳೂರಿನಲ್ಲಿ ಶಿವಸೇನಾ ಮತ್ತು ಎಂಇಎಸ್ ಕಾರ್ಯಕರ್ತರ ಮೇಲೆ ದಾಖಲಿಸಿರುವ ದೇಶದ್ರೋಹ ಪ್ರಕರಣ ಹಿಂಪಡೆಯಲು ಆಗ್ರಹಿಸಿ ಆಗ್ರಹಿಸಿ ಮಹಾರಾಷ್ಟ್ರದಿಂದ ಬೆಳಗಾವಿವರೆಗೆ ರ‍್ಯಾಲಿ ಕಾರ್ಯಕ್ರಮವನ್ನು ಕೊನೆ ಕ್ಷಣದಲ್ಲಿ ರದ್ದುಪಡಿಸಿದರು.

'ಕಾರ್ಯಕರ್ತರಿಗೆ ಜಾಮೀನು ಸಿಗುತ್ತಿರುವ ಕಾರಣ ರದ್ದುಪಡಿಸಲಾಗಿದೆ' ಎಂದು ಮುಖಂಡರು ತಿಳಿಸಿದ್ದಾರೆ.

ಐತಿಹಾಸಿಕ ಹೆಗ್ಗುರುತು ದೇವನಹಳ್ಳಿ ಕೋಟೆ


ದೇವನಹಳ್ಳಿ ಕೋಟೆ –ಪ್ರಜಾವಾಣಿ ಚಿತ್ರ

● ಮನೋಹರ್ ಎಂ.

ಬೆಂಗಳೂರು: ದೇವನಹಳ್ಳಿ ಕೋಟೆಯು ಬೆಂಗಳೂರಿನ ಐತಿಹಾಸಿಕ ಹೆಗ್ಗುರುತು. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿಯಲ್ಲಿ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪವೇ ಇರುವ ಈ ಕೋಟೆಯು 500 ವರ್ಷಗಳಿಗೂ ಹಳೆಯದು. ರಾಷ್ಟ್ರೀಯ ಹೆದ್ದಾರಿ–7ರ ಪಕ್ಕದಲ್ಲಿರುವ ಈ ಕೋಟೆಯು ನಗರದ ಪ್ರಮುಖ ಪ್ರವಾಸಿ ತಾಣಗಳಲ್ಲೊಂದು.

ಈ ಕೋಟೆಯು ಆಮೆಯ ಆಕಾರದಲ್ಲಿ ಹಾಗೂ ಅಂಡಾಕಾರದಲ್ಲಿದ್ದು, ನಿಯಮಿತ ಮಧ್ಯಂತರಗಳಲ್ಲಿ 12 ಅರೆ ವೃತ್ತಾಕಾರದ ಕೊತ್ತಲಗಳನ್ನು ಹೊಂದಿದೆ. ಕೋಟೆಯನ್ನು ಕಲ್ಲು, ಸುಣ್ಣ ಹಾಗೂ ಇಟ್ಟಿಗೆಗಳಿಂದ ನಿರ್ಮಿಸಲಾಗಿದೆ.

ಗೋಡೆಯುದ್ದಕ್ಕೂ ಅಲ್ಲಲ್ಲಿ 'ವಿ' ಆಕಾರದ ಚಿಕ್ಕ ರಂಧ್ರಗಳಿವೆ. ಹೊರಗಿನಿಂದ ಆಕ್ರಮಣ ನಡೆಯುವ ಬಗ್ಗೆ ನಿಗಾ ಇಡಲು ಈ ರಂಧ್ರಗಳನ್ನು ನಿರ್ಮಿಸಲಾಗಿದೆ. ಈ ಕಿಂಡಿಗಳಿಂದ ಕೋಟೆಯ ಹೊರಗಿನ ಚಿತ್ರಣವನ್ನು ಕಾಣಬಹುದು.

ದಾಳಿಯಿಂದ ತಪ್ಪಿಸಿಕೊಳ್ಳಲು ಕಳ್ಳದಾರಿಗಳೂ ಇವೆ. ಕೋಟೆಯ ಮೇಲೆ ಕಾವಲು ಗೋಪುರಗಳಿವೆ. ರಕ್ಷಣೆಗಾಗಿ ಕೋಟೆಯ ಸುತ್ತ ಕಂದಕ ತೋಡಿ, ಅದರಲ್ಲಿ ನೀರು ತುಂಬಿಸಿ ಮೊಸಳೆಗಳನ್ನು ಬಿಟ್ಟಿದ್ದರು ಎಂದು ಊರಿನ ಹಿರಿಯರು ಹೇಳುತ್ತಾರೆ.

ಕೋಟೆಗೆ ಎರಡು ದ್ವಾರಗಳಿದ್ದವು. ಪೂರ್ವದ್ವಾರ ಹಾಳಾಗಿ ಪಟ್ಟಣಕ್ಕೆ ಸೇರಿಕೊಂಡಿದೆ. ಪಶ್ಚಿಮದ ಬಾಗಿಲು ಭದ್ರವಾಗಿದೆ. ಕೋಟೆಯ ಒಳಗೆ ನೂರಾರು ನಿವಾಸಗಳಿದ್ದು, ದೇವನಹಳ್ಳಿಗೆ ಇಂದಿಗೂ ರಕ್ಷಾಕವಚದಂತಿದೆ.

ಕೋಟೆಯ ಒಳಭಾಗದಲ್ಲಿ ಪುರಾತನವಾದ ವೇಣುಗೋಪಾಲಸ್ವಾಮಿ ದೇವಾಲಯ ಇದೆ. ಇಲ್ಲಿ ವರ್ಷಕ್ಕೊಮ್ಮೆ ನಡೆಯುವ ವೇಣು ಗೋಪಾಲ ಸ್ವಾಮಿ ಜಾತ್ರೆ ಮತ್ತು ರಥೋತ್ಸವಕ್ಕೆ ಲಕ್ಷಾಂತರ ಜನ ಸೇರುತ್ತಾರೆ. ಆಗ ಕೋಟೆಯಲ್ಲೂ ಜನಜಂಗುಳಿ ಇರುತ್ತದೆ.

ಈ ಕೋಟೆಯ ಐತಿಹಾಸಿಕ ಸಂಗತಿಗಳು ಶತಮಾನಗಳು ಕಳೆದಂತೆ ಜನರ ನೆನಪಿನಿಂದ ಮರೆಯಾಗುತ್ತಲೇ ಇದೆ. ಕೋಟೆಯ ಜಾಡು ಹಿಡಿದು ಹೋದವರಿಗೆ 'ಇದು..ಟಿಪ್ಪು ಕೋಟೆ' ಎನ್ನುವ ರೂಢಿ ಮಾತು ಬಿಟ್ಟರೆ, ಹೆಚ್ಚೇನು ಮಾಹಿತಿ ಸಿಗುವುದಿಲ್ಲ. ಇತಿಹಾಸ ವಿವರಿಸುವ ಯಾವುದೇ ಫಲಕಗಳನ್ನು ಇಲ್ಲಿ ಅಳವಡಿಸಿಲ್ಲ.

'ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಾಣಗೊಂಡ ಬಳಿಕ ದೇವನಹಳ್ಳಿ ಜಾಗತಿಕ ಮಟ್ಟದಲ್ಲಿ ಪ್ರಸಿದ್ಧಿ ಪಡೆದಿದೆ. ಆದರೆ, ಪ್ರವಾಸೋದ್ಯಮಕ್ಕೆ ಪೂರಕವಾಗಿರುವ ಎಲ್ಲ ಅಂಶಗಳು ಇಲ್ಲಿದ್ದರೂ ಸರ್ಕಾರಗಳ ನಿರ್ಲಕ್ಷ್ಯದಿಂದ ಕೋಟೆ ಮೆರುಗು ಕಳೆದುಕೊಳ್ಳುತ್ತಿದೆ' ಎಂದು ಸ್ಥಳೀಯರು ಬೇಸರ ವ್ಯಕ್ತಪಡಿಸುತ್ತಾರೆ.

'ಆಗೊಮ್ಮೆ ಈಗೊಮ್ಮೆ ಭೇಟಿ ನೀಡುವ ಪ್ರವಾಸಿಗರು ಕೋಟೆಯ ಹೆಬ್ಬಾಗಿನ ಮುಂದೆ ಸೆಲ್ಫಿ ಕ್ಲಿಕ್ಕಿಸಿಕೊಂಡು, ಅಪೂರ್ಣ ಮಾಹಿತಿಯೊಂದಿಗೆ ಹಿಂತಿರುಗುತ್ತಿದ್ದಾರೆ. ಕೋಟೆಯ ಇತಿಹಾಸ ವಿವರಿಸುವ ಗೈಡ್‌ಗಳೂ ಇಲ್ಲಿಲ್ಲ. ಕೋಟೆಯ ಗೋಡೆಗಳ ಮೇಲೆ ಪ್ರೇಮದ ಕುರುಹುಗಳನ್ನು ಕೆತ್ತಿ ಹಾಳು ಮಾಡಿದ್ದಾರೆ. ಕಾವಲು ಸಿಬ್ಬಂದಿ ಇಲ್ಲದಿರುವುದರಿಂದ ಇದು ಪುಂಡರ ಅಡ್ಡೆಯಾಗುತ್ತಿದೆ' ಎಂದು ದೇವನಹಳ್ಳಿ ನಿವಾಸಿ ದಿವಾಕರ್ ದೂರಿದರು.

'ಬುರುಜು ಕುಸಿದರೂ ದುರಸ್ತಿಪಡಿಸಿಲ್ಲ'



'ನವೆಂಬರ್‌ನಲ್ಲಿ ಸುರಿದ ಭಾರಿ ಮಳೆಗೆ ಕೋಟೆಯಲ್ಲಿರುವ ಒಂದು ಬುರುಜು ದಿಢೀರ್ ಕುಸಿಯಿತು. ಅದನ್ನು ದುರಸ್ತಿ ಮಾಡಿಲ್ಲ. ಸಂರಕ್ಷಣೆಗೆ ಕ್ರಮ ಕೈಗೊಳ್ಳದಿರುವುದರಿಂದ ಕೋಟೆ ಶಿಥಿಲಾವಸ್ಥೆ ತಲುಪಿದೆ. ಪ್ರವಾಸೋದ್ಯಮ ಇಲಾಖೆ ಮತ್ತು ಪುರಾತತ್ವ ಇಲಾಖೆಗಳು ಈ ಬಗ್ಗೆ ಗಮನಹರಿಸಿ, ಕೋಟೆ ಉಳಿಸಲು ಕ್ರಮ ಕೈಗೊಳ್ಳಬೇಕು.

ಚಿರಾಗ್, ದೇವನಹಳ್ಳಿ ನಿವಾಸಿ

'ಟಿಪ್ಪು ಹೆಸರು ಬೆಸೆದಿರುವುದರಿಂದ ಕಡೆಗಣನೆ'



ರಾಜಕೀಯ ಪಕ್ಷಗಳ ನಡುವೆ ಟಿಪ್ಪು ವಿಚಾರದಲ್ಲಿರುವ ಪರ–ವಿರೋಧದ ನಿಲುವುಗಳೇ ಕೋಟೆಯ ಇಂದಿನ ಸ್ಥಿತಿಗೆ ಕಾರಣ. ಟಿಪ್ಪು ಹುಟ್ಟಿದ ಸ್ಥಳ ಹಾಗೂ ಟಿಪ್ಪು ಕಾಲದ ಕೋಟೆ ಎಂಬ ಕಾರಣದಿಂದ ಸಂರಕ್ಷಣೆ ನಡೆಯುತ್ತಿಲ್ಲ. ಕೋಟೆಯನ್ನು ಟಿಪ್ಪುವಿನ ದೃಷ್ಟಿಯಲ್ಲಿ ನೋಡದೆ, ಐತಿಹಾಸಿಕ ದೃಷ್ಟಿಯಲ್ಲಿ ನೋಡಿ ಉಳಿಸುವ ಕೆಲಸ ಮಾಡಬೇಕು. ಈ ವಿಚಾರದಲ್ಲೂ ಸರ್ಕಾರಗಳು ರಾಜಕೀಯ ಮಾಡಬಾರದು. ಸ್ಥಳೀಯ ಜನಪ್ರತಿನಿಧಿಗಳೂ ಈ ವಿಚಾರದಲ್ಲಿ ನಿರ್ಲಕ್ಷ್ಯ ಹೊಂದಿದ್ದಾರೆ.

ಎಸ್.ಗಗನ್, ದೇವನಹಳ್ಳಿ ನಿವಾಸಿ

ಬೆಂಗಳೂರು ನಮ್ಮ ಹೆಮ್ಮೆ...

ಅಂಕಿಅಂಶ

20 ಎಕರೆ
ಕೋಟೆಯ ವಿಸ್ತೀರ್ಣ

35 ಕಿ.ಮೀ
ಬೆಂಗಳೂರಿನಿಂದ ಕೋಟೆ ಇರುವ ದೂರ

ಇತಿಹಾಸ ಹೇಳುವುದೇನು?

'ದೇವನಹಳ್ಳಿಯ ಹಳೆಯ ಹೆಸರು ದೇವನದೊಡ್ಡಿ. ಇದು ಮೊದಲು ಗಂಗ ರಾಜಮನೆತನದ 'ಗಂಗವಾಡಿ' ಎಂಬ ಪ್ರಾಂತ್ಯದ ಭಾಗವಾಗಿತ್ತು. ನಂತರ ರಾಷ್ಟ್ರಕೂಟರು, ನೊಳಂಬ, ಪಲ್ಲವರು, ಚೋಳರು, ಹೊಯ್ಸಳರು ಮತ್ತು ವಿಜಯನಗರದ ಅರಸರ ಆಳ್ವಿಕೆಗೂ ಈ ಪ್ರಾಂತ್ಯ ಒಳಪಟ್ಟಿತ್ತು. ಕಂಚಿಯಿಂದ ವಲಸೆ ಬಂದ ಆವತಿ ರಾಜವಂಶದ ಮಲ್ಲಭೈರೇಗೌಡ ಕ್ರಿ.ಶ.1501ರಲ್ಲಿ ಈ ಕೋಟೆಯನ್ನು ಮೊದಲು ಮಣ್ಣಿನಿಂದ ಕಟ್ಟಿದ್ದ.

ಕ್ರಿ.ಶ.1747ರಲ್ಲಿ ನಂಜರಾಜನ ನೇತೃತ್ವದಲ್ಲಿ ನಡೆದ ಯುದ್ಧದಲ್ಲಿ ಕೋಟೆ ಮೈಸೂರು ಅರಸರ ಕೈಸೇರಿತು. ಕೆಲಕಾಲ ಮರಾಠರ ಆಳ್ವಿಕೆಗೂ ಒಳಪಟ್ಟಿತ್ತು. ಬಳಿಕ ಹೈದರಾಲಿ ಮತ್ತು ಮಗ ಟಿಪ್ಪುವಿನ ನಿಯಂತ್ರಣದಲ್ಲಿತ್ತು. ಆಗ ಕೋಟೆಯ ದುರಸ್ತಿ ನಡೆದು, ಕಲ್ಲಿನ ಕೋಟೆ ನಿರ್ಮಿಸಲಾಯಿತು.

'ಟಿಪ್ಪು ಸುಲ್ತಾನ್ ಈ ಕೋಟೆಗೆ 'ಯುಸಫಾಬಾದ್' ಎಂದೂ ನಾಮಕರಣ ಮಾಡಿದ್ದ. ಆದರೆ, 1791ರಲ್ಲಿ ನಡೆದ ಮೈಸೂರು ಯುದ್ಧದ ಬಳಿಕ ಬ್ರಿಟಿಷ್ ದಂಡನಾಯಕ ಲಾರ್ಡ್ ಕಾರ್ನ್ ವಾಲೀಸ್ ಈ ಕೋಟೆಯನ್ನು ಬ್ರಿಟಿಷ್ ಸರ್ಕಾರದ ಸ್ವಾಧೀನಕ್ಕೆ ಪಡೆದಿದ್ದ' ಎನ್ನುವುದು ಕೋಟೆ ಇತಿಹಾಸ ಕೆದಕಿದಾಗ ಸಿಕ್ಕ ಮಾಹಿತಿ.

ಸುದ್ದಿ 2 ನಿಮಿಷ

16 ಮಹಿಳೆಯರಿಗೆ ಕಿರುಸಾಲ



ಬೆಂಗಳೂರು: ಮಲ್ಲೇಶ್ವರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ 16 ಮಹಿಳೆಯರಿಗೆ ಕರ್ನಾಟಕ ಆದಿಜಾಂಬವ ನಿಗಮದ ವತಿಯಿಂದ ತಲಾ ₹ 50 ಸಾವಿರ ಮೊತ್ತದ ಕಿರುಸಾಲ ಪತ್ರಗಳನ್ನು ಉನ್ನತ ಶಿಕ್ಷಣ ಸಚಿವ ಸಿ.ಎನ್. ಅಶ್ವತ್ಥನಾರಾಯಣ ಅವರು ಶನಿವಾರ ವಿತರಿಸಿದರು.

ಬಳಿಕ ಮಾತನಾಡಿದ ಅವರು, 'ಈ ಸಾಲವು ಶೇ 50ರಷ್ಟು ಸಹಾಯಧನವನ್ನು ಒಳಗೊಂಡಿದೆ. ಆದಿಜಾಂಬವ ಸಮುದಾಯದ ಸದಸ್ಯರು ಇದನ್ನು ಚಿಕ್ಕಪುಟ್ಟ ವ್ಯಾಪಾರ, ವಹಿವಾಟಿಗೆ ಬಳಸಿಕೊಂಡು, ಸ್ವಾವಲಂಬಿಗಳಾಗಬೇಕು' ಎಂದರು.

ಇದೇ ಸಂದರ್ಭದಲ್ಲಿ ಅವರು ನಿಗಮದಿಂದ ₹ 2.50 ಲಕ್ಷ ಸಾಲವನ್ನು ತಮ್ಮ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಮತ್ತೀಕೆರೆ ವಾರ್ಡಿನ ಗೋಕುಲ ಬಡಾವಣೆಯಲ್ಲಿರುವ ಶ್ರೀ ನಂಜುಂಡೇಶ್ವರ ಮಹಿಳಾ ಸ್ವಸಹಾಯ ಸಂಘಕ್ಕೆ ವಿತರಿಸಿದರು. ಈ ಮೊತ್ತದಲ್ಲಿ ₹ 1 ಲಕ್ಷ ಸಹಾಯಧನ ಎಂದೂ ಅವರು ಹೇಳಿದರು.

ಸಮಗ್ರ ಯಕ್ಷಗಾನ ಸಮ್ಮೇಳನ ಅನುದಾನ ಬಿಡುಗಡೆಗೆ ಮನವಿ

ಬೆಂಗಳೂರು: ರಾಜ್ಯ ಮಟ್ಟದ ಸಮಗ್ರ ಯಕ್ಷಗಾನ ಸಮ್ಮೇಳನ ಹಾಗೂ ಸಮಗ್ರ ಯಕ್ಷಗಾನ ವಿಶ್ವಕೋಶಕ್ಕೆ ಈ ಬಾರಿಯ ಬಜೆಟ್‌ನಲ್ಲಿ ಅನುದಾನ ನೀಡುವಂತೆ ಕರ್ನಾಟಕ ಯಕ್ಷಗಾನ ಅಕಾಡೆಮಿ ಅಧ್ಯಕ್ಷ ಜಿ.ಎಲ್. ಹೆಗಡೆ ಮಣಕಿ ಅವರು ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನೀಲ್ ಕುಮಾರ್ ಅವರನ್ನು ಭೇಟಿ ಮಾಡಿದ ಅವರು, ಈ ಬಗ್ಗೆ ಮನವಿ ಸಲ್ಲಿಸಿದ್ದಾರೆ.

'ಯಕ್ಷಗಾನ ಸಮ್ಮೇಳನ ಹಾಗೂ ಸಮಗ್ರ ಯಕ್ಷಗಾನ ವಿಶ್ವಕೋಶಕ್ಕೆ ಅನುದಾನ ನೀಡಲು ಕ್ರಮವಹಿಸಲಾಗುವುದು' ಎಂದು ಸಚಿವರು ಭರವಸೆ ನೀಡಿದರು.

'ಸಾಹಿತ್ಯ ಸಮ್ಮೇಳನದಂತೆ ಯಕ್ಷಗಾನದ ಸಮ್ಮೇಳನವನ್ನೂ ಆಯೋಜಿಸಬೇಕು. ಇದರಿಂದ ಯಕ್ಷಗಾನದ ಪ್ರಸಿದ್ಧಿ ಹಾಗೂ ವಿಸ್ತರಣೆ ಸಾಧ್ಯವಾಗುತ್ತದೆ. ಅಕಾಡೆಮಿಯ ಈ ಪ್ರಸ್ತಾವನೆ ಹಾಗೂ ಯಕ್ಷಗಾನ ವಿಶ್ವಕೋಶಕ್ಕೆ ಬಜೆಟ್‌ನಲ್ಲಿ ಅನುದಾನ ಒದಗಿಸಲು ಮುಖ್ಯಮಂತ್ರಿ ಅವರ ಜೊತೆಗೂ ಮಾತನಾಡುತ್ತೇನೆ' ಎಂದರು.

'ಕೋವಿಡ್ ನಿಯಂತ್ರಣಕ್ಕೆ ಬಂದ ಬಳಿಕ ಅಕಾಡೆಮಿಯ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭ ಏರ್ಪಡಿಸಲಾಗುತ್ತದೆ. ಅಕಾಡೆಮಿ ಮೂಲಕ ಕಲೆಯ ವಿಸ್ತರಣೆ ಆಗಬೇಕು' ಎಂದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಎಸ್. ರಂಗಪ್ಪ, ಜಂಟಿ ನಿರ್ದೇಶಕರಾದ ಬಲವಂತರಾವ್ ಪಾಟೀಲ, ಅಶೋಕ ಎನ್. ಚಲವಾದಿ, ಬನಶಂಕರಿ ವಿ. ಅಂಗಡಿ, ಅಕಾಡೆಮಿ ರಿಜಿಸ್ಟ್ರಾರ್ ಎಸ್. ಎಚ್.ಶಿವರುದ್ರಪ್ಪ ಇದ್ದರು.

'ನನ್ನ ನಗರ, ನನ್ನ ಬಜೆಟ್' ಕುರಿತ ಸಭೆಯಲ್ಲಿ ಮನವಿ ● ₹60 ಲಕ್ಷ ಅನುದಾನ ಬಳಕೆ ಚರ್ಚೆ

'ವಾರ್ಡ್ ಸಮಿತಿಗೆ ಮತ್ತಷ್ಟು ಅನುದಾನ ನೀಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯು 198 ವಾರ್ಡ್ ಸಮಿತಿಗಳಿಗೆ ಮಂಜೂರು ಮಾಡಿರುವ ತಲಾ ₹60 ಲಕ್ಷ ಅನುದಾನ ಏನಾಯಿತು, ವಾರ್ಡ್ ಸಮಿತಿಗಳು ಇವುಗಳನ್ನು ಸಮರ್ಥವಾಗಿ ಬಳಸಿಕೊಂಡಿವೆಯೇ, ಅವುಗಳನ್ನು ಬಳಸಿಕೊಳ್ಳಲು ಇರುವ ಅಡ್ಡಿ ಆತಂಕಗಳೇನು?

ಜನಾಗ್ರಹ ಸಂಸ್ಥೆಯು 'ನನ್ನ ನಗರ, ನನ್ನ ಬಜೆಟ್' ಕುರಿತು ಶನಿವಾರ ಆಯೋಜಿಸಿದ್ದ ಈ ವೆಬಿನಾರ್ ಇಂತಹದ್ದೊಂದು ಚರ್ಚೆಗೆ ವೇದಿಕೆ ಕಲ್ಪಿಸಿತು. ಬಿಬಿಎಂಪಿ ಅಧಿಕಾರಿಗಳು, ನಗರ ಯೋಜನೆ ತಜ್ಞರು, ನಾಗರಿಕರು, ವಿವಿಧ ಸಂಸ್ಥೆಗಳ ಪದಾಧಿಕಾರಿಗಳು ಈ ಚರ್ಚೆಯಲ್ಲಿ ಪಾಲ್ಗೊಂಡರು.

ಬಿಬಿಎಂಪಿ ಹಣಕಾಸು ವಿಭಾಗದ ವಿಶೇಷ ಆಯುಕ್ತರಾದ ತುಳಸಿ ಮದ್ದಿನೇನಿ, 'ವಾರ್ಡ್ ಸಮಿತಿಗಳು ಗ್ರಾಮ ಸಭೆಗಳು ಇದ್ದ ಹಾಗೆ. ಪ್ರಸ್ತುತ, ಎಲ್ಲಾ ವಾರ್ಡ್‌ಗಳಲ್ಲಿ ನಿಯಮಿತವಾಗಿ ಸಭೆ ನಡೆಸಲಾಗುತ್ತಿದೆ. ಪ್ರತಿ ವಾರ್ಡ್‌ಗೆ ₹60 ಲಕ್ಷ ಅನುದಾನ ನೀಡಲಾಗಿದೆ. ₹ 60 ಲಕ್ಷದಲ್ಲಿ ರಸ್ತೆಗಳಲ್ಲಿನ ಗುಂಡಿಗಳ ದುರಸ್ತಿಗೆ ₹20 ಲಕ್ಷ ಮೀಸಲಿಡಲಾಗಿದೆ' ಎಂದು ವಿವರಿಸಿದರು.

'ಜನಾಗ್ರಹ ಸಂಸ್ಥೆಯು ಪಾದಚಾರಿ ಮಾರ್ಗದ ಸ್ಥಿತಿಗತಿಗಳ ಸಮೀಕ್ಷೆ ನಡೆಸಿದೆ. ಈ ಸಮೀಕ್ಷೆ ಆಧಾರದಲ್ಲಿ ಪಾದಚಾರಿ ಮಾರ್ಗಗಳ ಅಭಿವೃದ್ಧಿಗೆ ಪ್ರತಿ ವಾರ್ಡ್‌ಗೆ ತಲಾ ₹ 20 ಲಕ್ಷಗಳನ್ನು ವಾರ್ಡ್ ಸಮಿತಿ ಸದಸ್ಯರ ಸಲಹೆಯ ಮೇರೆಗೆ ಬಳಸಲಾಗುವುದು. ಬಿಬಿಎಂಪಿ ಸುಮಾರು 10 ಸಾವಿರ ಕೊಳವೆಬಾವಿಗಳನ್ನು ನಿರ್ವಹಿಸುತ್ತಿದೆ. ಇದಕ್ಕಾಗಿ ₹20 ಲಕ್ಷ ಮೀಸಲಿಡಲಾಗಿದೆ' ಎಂದರು.

ಜನಾಗ್ರಹ ಸಂಸ್ಥೆಯ ನಾಗರಿಕ ವಿಭಾಗದ ಮುಖ್ಯಸ್ಥ ಶ್ರೀನಿವಾಸ್ ಅಲವಿಲ್ಲಿ, 'ವಾರ್ಡ್ ಸಮಿತಿ ಸಭೆಗಳನ್ನು ನಡೆಸಬೇಕು. ಈ ಸಮಿತಿಗಳಿಗೆಂದೇ ಅನುದಾನವನ್ನು ನೀಡಿ ನಾಗರಿಕ ಸಹಭಾಗಿತ್ವವನ್ನು ಉತ್ತೇಜಿಸಬೇಕು. ಇದೊಂದು ಉತ್ತಮ ಆರಂಭ. ಇದು ಬೆಂಗಳೂರಿನಲ್ಲಿ ಮಾತ್ರವಲ್ಲ. ದೇಶದಾದ್ಯಂತ ನಡೆಯಬೇಕು' ಎಂದು ಸಲಹೆ ನೀಡಿದರು.

ವಾರ್ಡ್ ಸಮಿತಿಗಳಿಗೆ ತಲಾ ₹60 ಲಕ್ಷ ಅನುದಾನವನ್ನು ಆಗಸ್ಟ್ 2021ರಲ್ಲಿ ಮಂಜೂರು ಮಾಡಲಾಗಿತ್ತು. 'ನನ್ನ ನಗರ, ನನ್ನ ಬಜೆಟ್' ಕುರಿತಾದ ಸಮೀಕ್ಷೆಯಲ್ಲಿ ಸುಮಾರು ಒಂಬತ್ತು ಸಾವಿರ ನಾಗರಿಕರು ನೀಡಿದ ಸಲಹೆಗಳ ಆಧಾರದ ಮೇಲೆ ಅನುದಾನ ನೀಡುವ ನಿರ್ಧಾರ ಕೈಗೊಳ್ಳಲಾಗಿತ್ತು.

ಅಹಮದಾಬಾದ್, ಮುಂಬೈ, ಭುವನೇಶ್ವರ, ಹೈದರಾಬಾದ್ ಮತ್ತು ಚೆನ್ನೈ ನಾಗರಿಕರು ಕೂಡ ವೆಬಿನಾರ್‌ನಲ್ಲಿ ಪಾಲ್ಗೊಂಡು, ಬೆಂಗಳೂರಿನಲ್ಲಿ ವಾರ್ಡ್ ಸಮಿತಿಗಳನ್ನು ಬಲಪಡಿಸಲು ಕೈಗೊಂಡ ಕ್ರಮಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಪಾದಚಾರಿ ಮಾರ್ಗಗಳ ಸ್ಥಿತಿಗೆ ಕನ್ನಡಿ ಹಿಡಿದ ಸಮೀಕ್ಷೆ

'ನನ್ನ ನಗರ, ನನ್ನ ಬಜೆಟ್' ಎರಡನೇ ಹಂತದಲ್ಲಿ ಪಾದಚಾರಿ ಮಾರ್ಗಗಳ ಅಭಿವೃದ್ಧಿ ಹೇಗಿರಬೇಕು ಎಂಬ ಬಗ್ಗೆ ಸಲಹೆ ನೀಡುವ ಉದ್ದೇಶದಿಂದ ಜನಾಗ್ರಹ ಸಂಸ್ಥೆಯು ವಾರ್ಡ್ ಸಮಿತಿಗಳೊಂದಿಗೆ ಸೇರಿ, ಆಯ್ದ ಐದು ವಾರ್ಡ್‌ಗಳಲ್ಲಿ ಪಾದಚಾರಿ ಮಾರ್ಗಗಳ ಸಮೀಕ್ಷೆಯನ್ನು ನಡೆಸಿದೆ. 'ಜನಾ ಅರ್ಬನ್ ಸ್ಪೇಸ್ ಫೌಂಡೇಷನ್' ಮತ್ತು 'ಸೆನ್ಸಿಂಗ್ ಲೋಕಲ್' ಸಂಸ್ಥೆ ಮತ್ತು ನಾಗರಿಕರ ಸಹಯೋಗದಲ್ಲಿ ನಡೆಸಲಾದ ಈ ಸಮೀಕ್ಷೆ ಪಾದಚಾರಿ ಮಾರ್ಗಗಳ ವಸ್ತುಸ್ಥಿತಿ ಬಗ್ಗೆಯೂ ಬೆಳಕು ಚೆಲ್ಲಿದೆ.

ನಡಿಗೆಯ ಗುಣಮಟ್ಟವನ್ನು ಗುರುತಿಸಲು ಲಭ್ಯತೆ, ಸಂಪರ್ಕ, ಸುರಕ್ಷತೆ ಮತ್ತು ಸೌಕರ್ಯ ಮುಂತಾದ ಅಂಶಗಳನ್ನು ಗಮನದಲ್ಲಿಟ್ಟು ಸಮೀಕ್ಷೆ ನಡೆಸಲಾಗಿತ್ತು. ಪ್ರತಿವಾರ್ಡ್‌ಗೂ ಗರಿಷ್ಠ 100 ಅಂಕಗಳ ಆಧಾರದಲ್ಲಿ ಅಂಕ ನೀಡಲಾಗಿದೆ.

ಬಾಣಸವಾಡಿ ವಾರ್ಡ್‌ನಲ್ಲಿ 9.5 ಕಿ.ಮೀ ರಸ್ತೆಯ ಸಮೀಕ್ಷೆ ನಡೆಸಲಾಗಿದ್ದು, 26 ಅಂಕಗಳನ್ನು ನೀಡಲಾಗಿದೆ. ಗೊಟ್ಟಿಗೆರೆ ವಾರ್ಡ್‌ನಲ್ಲಿ 8.9 ಕಿ.ಮೀ. ರಸ್ತೆಯ ಸಮೀಕ್ಷೆ ನಡೆಸಲಾಗಿದ್ದು, 17 ಅಂಕಗಳನ್ನು ನೀಡಲಾಗಿದೆ. ಸಂಜಯ ನಗರದ 3.45 ಕಿ.ಮೀ ಮಾರ್ಗದ ಸಮೀಕ್ಷೆ ನಡೆಸಿದ್ದು 2 ಅಂಕ ನೀಡಲಾಗಿದೆ. ರಾಧಾಕೃಷ್ಣ ದೇವಸ್ಥಾನ ವಾರ್ಡ್‌ನಲ್ಲಿ 2.69 ಕಿ.ಮೀ ರಸ್ತೆಯ ಸಮೀಕ್ಷೆ ನಡೆಸಲಾಗಿದ್ದು, 10 ಅಂಕಗಳನ್ನು ನೀಡಲಾಗಿದೆ. ವರ್ತೂರು ವಾರ್ಡ್‌ನಲ್ಲಿ 2.4 ಕಿ.ಮೀ ಉದ್ದದ ರಸ್ತೆಯ ಸಮೀಕ್ಷೆ ಕೈಗೊಳ್ಳಲಾಗಿದ್ದು, ಶೂನ್ಯ ಅಂಕಗಳನ್ನು ನೀಡಲಾಗಿದೆ.

ಈ ಅಂಕಗಳನ್ನು ಕೇವಲ ಸಮೀಕ್ಷೆಗೆ ಒಳಪಡಿಸಿದ ಮಾರ್ಗಕ್ಕೆ ಸೀಮಿತವಾಗಿ ನೀಡಲಾಗಿದೆ. ವಾರ್ಡ್‌ನ ಎಲ್ಲ ಮಾರ್ಗಗಳನ್ನು ಆಧರಿಸಿ ಅಂಕ ನೀಡಿಲ್ಲ. ಆಯ್ದ ಐದು ವಾರ್ಡ್‌ಗಳ ನಾಗರಿಕರು ತಮ್ಮ ಅಭಿಪ್ರಾಯಗಳನ್ನು ಸಮೀಕ್ಷೆ ವೇಳೆ ಹಂಚಿಕೊಂಡಿದ್ದಾರೆ ಎಂದು ಜನಾಗ್ರಹ ಸಂಸ್ಥೆ ತಿಳಿಸಿದೆ.

'ಅನುದಾನ ಹೆಚ್ಚಿಸಲಿ'

'ವರ್ತೂರು ವಾರ್ಡ್ ತುಂಬಾ ದೊಡ್ಡದು. ಇಲ್ಲಿನ ಪಾದಚಾರಿ ಮಾರ್ಗದ ಕಾಮಗಾರಿಗಳ ನಿರ್ವಹಣೆಗೆ ₹60 ಲಕ್ಷ ಸಾಕಾಗುವುದಿಲ್ಲ. ಆದರೆ, ಇದು ಉತ್ತಮ ಆರಂಭ. ಮುಂದಿನ ದಿನಗಳಲ್ಲಿ ಬಿಬಿಎಂಪಿ ಹೆಚ್ಚಿನ ಅನುದಾನ ನಿಗದಿಪಡಿಸುವ ವಿಶ್ವಾಸವಿದೆ' ಎಂದು 'ವರ್ತೂರು ರೈಸಿಂಗ್' ಸಹ ಸಂಸ್ಥಾಪಕರಾದ ಜಗದೀಶ್ ರೆಡ್ಡಿ ಹೇಳಿದರು.

'ಪಾದಚಾರಿ ಮಾರ್ಗಗಳ ಅಭಿವೃದ್ಧಿಗೆ ಎರಡು ಪ್ರಮುಖ ಮಾನದಂಡಗಳನ್ನು ಪರಿಗಣಿಸಲಾಗಿದೆ. ಶಾಲೆಯ ಬಳಿಯಿರುವ ಪಾದಚಾರಿ ಮಾರ್ಗಗಳು ಮತ್ತು ಹೆಚ್ಚು ಬಳಕೆಯಲ್ಲಿರುವ ರಸ್ತೆಗಳ ಪಕ್ಕದ ಪಾದಚಾರಿ ಮಾರ್ಗಗಳನ್ನು ಆದ್ಯತೆ ಮೇರೆಗೆ ಅಭಿವೃದ್ಧಿಪಡಿಸಲು ನಿರ್ಧರಿಸಲಾಗಿದೆ' ಎಂದು ರಾಧಾಕೃಷ್ಣ ದೇವಸ್ಥಾನದ ವಾರ್ಡ್‌ನ ಲಲಿತಾ ಮೋಹನ್ ವಿವರಿಸಿದರು.

ಮುಖ್ಯಾಂಶಗಳು

- ವಾರ್ಡ್ ಸಮಿತಿಗಳು ಗ್ರಾಮ ಸಭೆಗಳು ಇದ್ದ ಹಾಗೆ.
- ಪಾದಚಾರಿ ಮಾರ್ಗಗಳ ಅಭಿವೃದ್ಧಿಗೆ ಪ್ರತಿ ವಾರ್ಡ್‌ಗೆ ತಲಾ ₹ 20 ಲಕ್ಷ ಬಳಕೆ
- ವಾರ್ಡ್ ಸಮಿತಿ ಸಭೆಗಳಲ್ಲಿ ನಾಗರಿಕ ಸಹಭಾಗಿತ್ವಕ್ಕೆ ಉತ್ತೇಜಿಸಲು ಸಲಹೆ


ಬಾಗಲೂರು ಗ್ರಾ.ಪಂ. ಅಧ್ಯಕ್ಷೆ ಹಮೀದಾ

ಪ್ರಜಾವಾಣಿ ವಾರ್ತೆ

ಯಲಹಂಕ: ತಾಲ್ಲೂಕಿನ ಜಾಲ ಹೋಬಳಿಯ ಬಾಗಲೂರು ಗ್ರಾಮ ಪಂಚಾಯಿತಿ ನೂತನ ಅಧ್ಯಕ್ಷರಾಗಿ ಹಮೀದಾ ಹಾಗೂ ಉಪಾಧ್ಯಕ್ಷರಾಗಿ ಬಿ.ಸಿ.ಲೋಕೇಶ್ ಆಯ್ಕೆಯಾಗಿದ್ದಾರೆ.

ಸಾಮಾನ್ಯ (ಮಹಿಳೆ) ವರ್ಗಕ್ಕೆ ಮೀಸಲಾಗಿದ್ದ ಅಧ್ಯಕ್ಷ ಸ್ಥಾನಕ್ಕಾಗಿ ನಡೆದ ಚುನಾವಣೆಯಲ್ಲಿ ಹಮೀದಾ ಮತ್ತು ಹೇಮಲತಾ. ಆರ್ ಸ್ಪರ್ಧಿಸಿದ್ದರು.

ಒಟ್ಟು 26 ಸದಸ್ಯ ಬಲ ಹೊಂದಿರುವ ಪಂಚಾಯಿತಿಯಲ್ಲಿ ಹಮೀದಾ ಅವರು 17 ಹಾಗೂ ಹೇಮಲತಾ ಅವರು 9 ಮತಗಳನ್ನು ಪಡೆದರು.


ಬಾಗಲೂರು ಗ್ರಾ.ಪಂ. ಅಧ್ಯಕ್ಷೆ ಹಮೀದಾ ಮತ್ತು ಉಪಾಧ್ಯಕ್ಷ ಬಿ.ಸಿ. ಲೋಕೇಶ್ ಅವರನ್ನು ಪಂಚಾಯಿತಿ ಸದಸ್ಯರು. ಕಾಂಗ್ರೆಸ್ ಮುಖಂಡರು ಅಭಿನಂದಿಸಿದರು

ಪರಿಶಿಷ್ಟ ಜಾತಿಗೆ ಮೀಸಲಾಗಿದ್ದ ಉಪಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಲೋಕೇಶ್ 20 ಮತಗಳನ್ನು ಪಡೆದರು. ಇವರ ವಿರುದ್ಧ ಸ್ಪರ್ಧಿಸಿದ್ದ ಸಂತೋಷ್ ಕುಮಾರ್. ಬಿ ಅವರು 6 ಮತಗಳನ್ನು ಪಡೆದರು.


ಪೊಲೀಸ್, ಸಿಆರ್‌ಪಿಎಫ್, ಬಿಎಸ್‌ಎಫ್, ನಾಗರಿಕ ಭದ್ರತಾ ಸಿಬ್ಬಂದಿ ಗಣರಾಜ್ಯೋತ್ಸವದ ಅಂಗವಾಗಿ ಕಬ್ಬನ್ ರಸ್ತೆಯಲ್ಲಿರುವ ಫೀಲ್ಡ್ ಮಾರ್ಷಲ್ ಮಾಣೇಕ್ ಶಾ ಕವಾಯತು ಮೈದಾನದಲ್ಲಿ ಶನಿವಾರ ತಾಲೀಮು ನಡೆಸಿದರು –ಪ್ರಜಾವಾಣಿ ಚಿತ್ರ


ಗಣರಾಜ್ಯೋತ್ಸವದ ಕವಾಯತಿನಲ್ಲಿ ಪಾಲ್ಗೊಳ್ಳುವ ಸೇನಾ ಸಿಬ್ಬಂದಿಯ ಕೋವಿಡ್ ಪರೀಕ್ಷೆಗೆ ಆರೋಗ್ಯ ಸಿಬ್ಬಂದಿ ಶನಿವಾರ ಮಾದರಿ ಸಂಗ್ರಹಿಸಿದರು–ಪ್ರಜಾವಾಣಿ ಚಿತ್ರ

ನಗರದಲ್ಲಿ ಇಂದು

ನೇತಾಜಿ ಸುಭಾಷ್‌ಚಂದ್ರ ಬೋಸ್ ಜಯಂತಿ: ಅತಿಥಿ–ಸಚಿವ ವಿ.ಸೋಮಣ್ಣ, ಸ್ಥಳ–ನೇತಾಜಿ ಸುಭಾಷ್ ಚಂದ್ರ ಬೋಸ್ ಉದ್ಯಾನ, ಬಿ.ಜಿ.ಎಸ್.ಮೈದಾನದ ಹತ್ತಿರ, ಎಂ.ಸಿ.ಬಡಾವಣೆ, ಬೆಳಿಗ್ಗೆ 9.30

ಸುಭಾಷ್‌ಚಂದ್ರ ಬೋಸ್ ಜನ್ಮದಿನದ ಅಂಗವಾಗಿ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸ್ಥಳ–ಪಶ್ಚಿಮದ್ವಾರ, ವಿಧಾನಸೌಧ, ಬೆಳಿಗ್ಗೆ 10

ಚಂದ್ರಶೇಖರ ಪಾಟೀಲ ಅವರಿಗೆ ಶ್ರದ್ಧಾಂಜಲಿ: ಪುಷ್ಪನಮನ–ಗೊ.ರು. ಚನ್ನಬಸಪ್ಪ, ನುಡಿನಮನ–ಎಸ್. ಜಿ.ಸಿದ್ಧರಾಮಯ್ಯ, ಕೆ.ವೈ. ನಾರಾಯಣಸ್ವಾಮಿ, ಜಿ.ಎನ್. ಮೋಹನ್, ಸುಕನ್ಯಾ ಮಾರುತಿ, ಕಾವ್ಯನಮನ–ಆರ್.ಜಿ.ಹಳ್ಳಿ ನಾಗರಾಜ್, ಮಮತಾ ಜಿ.ಸಾಗರ್, ಸಿ.ಕೆ.ಗುಂಡಣ್ಣ, ಶಶಿಧರ್ ಭಾರಿಘಾಟ್, ಮಲ್ಲಿಕಾರ್ಜುನ ಮಹಾಮನೆ, ಆಯೋಜನೆ–ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು ಹಾಗೂ ಬಸವ ಅಂತರರಾಷ್ಟ್ರೀಯ ಪ್ರತಿಷ್ಠಾನ, ಬೆಳಿಗ್ಗೆ 11 (ಆನ್‌ಲೈನ್ ಕಾರ್ಯಕ್ರಮ)

ಜಕ್ಕೂರು ನವೀಕೃತ ಸರ್ಕಾರಿ ವೈಮಾನಿಕ ತರಬೇತಿ ಶಾಲೆ ಉದ್ಘಾಟನೆ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಹೆಲಿಪ್ಯಾಡ್ ಕಾಮಗಾರಿಗೆ ಶಂಕುಸ್ಥಾಪನೆ -ಕಂದಾಯ ಸಚಿವ ಆರ್.ಅಶೋಕ, ಮಹಿಳಾ ಸ್ವರಕ್ಷಣಾ ತರಬೇತಿಗೆ ಚಾಲನೆ – ಸಚಿವ ಆರಗ ಜ್ಞಾನೇಂದ್ರ, ಲೋಗೊ ಅನಾವರಣ–ಕ್ರೀಡಾ ಸಚಿವ ನಾರಾಯಣಗೌಡ, ಪೈಲಟ್‌ಗಳ ತರಬೇತಿಗೆ ಚಾಲನೆ–ಸಿ.ಎನ್.ಅಶ್ವತ್ಥ ನಾರಾಯಣ, ಸಿದ್ಧಿ ಕ್ರೀಡಾಪಟುಗಳ ತರಬೇತಿಗೆ ಚಾಲನೆ– ಸಚಿವ ಬಿ.ಸಿ. ನಾಗೇಶ್, ಹೆಲಿ ಟೂರಿಸಂಗೆ ಚಾಲನೆ–ಆನಂದ್ ಸಿಂಗ್, ಅಧ್ಯಕ್ಷತೆ–ಶಾಸಕ ಕೃಷ್ಣ ಬೈರೇಗೌಡ, ಸ್ಥಳ–ವೈಮಾನಿಕ ತರಬೇತಿ ಶಾಲೆ ಆವರಣ, ಜಕ್ಕೂರು, ಸಂಜೆ 4

'ನಿರುದ್ಯೋಗ ಸಮಸ್ಯೆ ಮತ್ತು ಸವಾಲು' ವಿಚಾರಗೋಷ್ಠಿ, ಆಯೋಜನೆ–ಬಂಡಾಯ ಸಾಹಿತ್ಯ ಸಂಘಟನೆ, ಗ್ರಾಮ ಭಾರತ, ಸಂಜೆ 4.30 (ಆನ್‌ಲೈನ್ ಕಾರ್ಯಕ್ರಮ)

ಬ್ಯಾಂಕ್ ಸುಲಿಗೆ: ಎಂಜಿನಿಯರ್ ಬಂಧನ

₹ 35 ಲಕ್ಷ ಸಾಲ ತೀರಿಸಲು ಕೃತ್ಯವೆಸಗಿದ್ದ ಆರೋಪಿ ● ಚಿನ್ನಾಭರಣ ಜಪ್ತಿ

ಪ್ರಜಾವಾಣಿ ವಾರ್ತೆ


ಧೀರಜ್

ಬೆಂಗಳೂರು: ಬಿಟಿಎಂ ಲೇಔಟ್‌ನ ಒಂದನೇ ಹಂತದಲ್ಲಿರುವ ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಶಾಖೆಯಲ್ಲಿ ನಡೆದಿದ್ದ ಸುಲಿಗೆ ಪ್ರಕರಣ ಸಂಬಂಧ ಆರೋಪಿ ಎಸ್. ಧೀರಜ್ (28) ಎಂಬಾತನನ್ನು ಮಡಿವಾಳ ಪೊಲೀಸರು ಬಂಧಿಸಿದ್ದಾರೆ.

'ಕಾಮಾಕ್ಷಿಪಾಳ್ಯದ ಮಣಿ ವಿಲಾಸ್ ಗಾರ್ಡನ್ ರಸ್ತೆಯ ನಿವಾಸಿ ಧೀರಜ್, ಮೆಕ್ಯಾನಿಕಲ್ ಎಂಜಿನಿಯರ್. ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ. ಆತನಿಂದ ₹ 6.50 ಲಕ್ಷ ನಗದು ಹಾಗೂ 1 ಕೆ.ಜಿ 805 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ಆಗ್ನೇಯ ವಿಭಾಗದ ಡಿಸಿಪಿ ಶ್ರೀನಾಥ್ ಜೋಷಿ ಹೇಳಿದರು.

'ಸಂಬಳಕ್ಕಿಂತ ಹೆಚ್ಚು ಹಣ ಖರ್ಚು ಮಾಡುತ್ತಿದ್ದ ಆರೋಪಿ, ಐಷಾರಾಮಿ ಜೀವನ ನಡೆಸುತ್ತಿದ್ದ. ಅದಕ್ಕಾಗಿ ಆನ್‌ಲೈನ್ ಆ್ಯಪ್ ಹಾಗೂ ಇತರರ ಬಳಿ ₹ 35 ಲಕ್ಷ ಸಾಲ ಮಾಡಿಕೊಂಡಿದ್ದ. ಆನ್‌ಲೈನ್ ಕಂಪನಿಯೊಂದರಲ್ಲಿ ಹೂಡಿಕೆ ಮಾಡಿ ಹಣ ಕಳೆದುಕೊಂಡಿದ್ದ. ಅದನ್ನೆಲ್ಲ ತೀರಿಸಲು ಸಾಧ್ಯವಾಗದೇ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದ' ಎಂದೂ ತಿಳಿಸಿದರು.

ಹಬ್ಬದಂದೇ ಬ್ಯಾಂಕ್‌ಗೆ ನುಗ್ಗಿ ಸುಲಿಗೆ: 'ಮಾಡಿದ್ದ ಸಾಲ ತೀರಿಸಲು ಮತ್ತೆ ಬೇರೆಯವರ ಕಡೆ ಆರೋಪಿ ಸಾಲ ಕೇಳಲಾರಂಭಿಸಿದ್ದ. ಯಾರೂ ಕೊಟ್ಟಿರಲಿಲ್ಲ. ಅವಾಗಲೇ, ಬ್ಯಾಂಕ್ ಸುಲಿಗೆ ಮಾಡಲು ಸಂಚು ರೂಪಿಸಿದ್ದ. ಯೂಟ್ಯೂಬ್‌ನಲ್ಲಿ ವಿಡಿಯೊ ನೋಡಿ ತಯಾರಿ ಮಾಡಿಕೊಂಡಿದ್ದ. ಬ್ಯಾಂಕ್ ಬಳಿಯೂ ಸುತ್ತಾಡಿ ಸಮಯಕ್ಕಾಗಿ ಕಾಯುತ್ತಿದ್ದ' ಎಂದು ಪೊಲೀಸರು ಹೇಳಿದರು.

'ಸಂಕ್ರಾಂತಿ ಹಬ್ಬದ ದಿನ ಸಂಜೆ ಬ್ಯಾಂಕ್‌ಗೆ ನುಗ್ಗಿದ್ದ ಆರೋಪಿ, ವ್ಯವಸ್ಥಾಪಕನ ಕೊಠಡಿಗೆ ಹೋಗಿ ಕುಳಿತಿದ್ದ. ಅವರಿಗೆ ಚಾಕು ತೋರಿಸಿ ಬ್ಯಾಂಕ್‌ನಲ್ಲಿದ್ದ ನಗದು ಹಾಗೂ ಚಿನ್ನಾಭರಣ ಸುಲಿಗೆ ಮಾಡಿಕೊಂಡು ಪರಾರಿಯಾಗಿದ್ದ. ಕೃತ್ಯದ ವೇಳೆ ಭದ್ರತಾ ಸಿಬ್ಬಂದಿ ಇರಲಿಲ್ಲ. ಆರೋಪಿ ಕೃತ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು' ಎಂದೂ ತಿಳಿಸಿದರು.

ಹೊರ ಜಿಲ್ಲೆಗಳಲ್ಲಿ ಸುತ್ತಾಡಿದ್ದ: 'ಕೃತ್ಯದ ನಂತರ ಬ್ಯಾಂಕ್‌ನಿಂದ ಹೊರ ಬಂದು, ಮೆಜೆಸ್ಟಿಕ್‌ನತ್ತ 5 ಕಿ.ಮೀ ನಡೆದಿದ್ದ. ನಂತರ, ಆಟೊದಲ್ಲಿ ಮೆಜೆಸ್ಟಿಕ್ ತಲುಪಿದ್ದ. ಅಲ್ಲಿಂದ ಚಿಕ್ಕಮಗಳೂರು, ಶಿವಮೊಗ್ಗ, ಬಳ್ಳಾರಿ ಜಿಲ್ಲೆಗಳಿಗೆ ಹೋಗಿ ತಂಗಿದ್ದ. ಅಲ್ಲಿಂದ ಬೆಂಗಳೂರಿಗೆ ಬಂದಿದ್ದ' ಎಂದು ಪೊಲೀಸರು ಹೇಳಿದರು.

'ಸಾಲಗಾರರಿಗೆ ಹಣ ವಾಪಸು ಕೊಡಲು ಆರೋಪಿ ಓಡಾಡುತ್ತಿದ್ದ. ಸುಳಿವು ಪತ್ತೆ ಹಚ್ಚಿದ್ದ ಪೊಲೀಸರು, ಆತನ ಬೆನ್ನು ಬಿದ್ದಿದ್ದರು. ಸಾಲಗಾರರೊಬ್ಬರಿಗೆ ಹಣ ಕೊಡುವಾಗಲೇ ಆರೋಪಿಯನ್ನು ಬಂಧಿಸಲಾಯಿತು' ಎಂದೂ ತಿಳಿಸಿದರು.

ಅಪರಾಧ ಸುದ್ದಿ

ಸಲುಗೆಗೆ ಅಡ್ಡಿ; ಅಪಹರಿಸಿ ಹಲ್ಲೆ

ಬೆಂಗಳೂರು: ಮಹಿಳೆ ಜೊತೆಗಿನ ಸಲುಗೆಗೆ ಅಡ್ಡಿಯಾದನೆಂಬ ಕಾರಣಕ್ಕೆ, ಅವರ ಸಹೋದರರನ್ನು ಅಪಹರಿಸಿ ಹಲ್ಲೆ ಮಾಡಿದ್ದ ಆರೋಪಿ ಶ್ರೀನಿವಾಸ್ ಅಲಿಯಾಸ್ ಬೊಟ್ಟು ಎಂಬಾತನನ್ನು ಬ್ಯಾಡರಹಳ್ಳಿ ಪೊಲೀಸರು ಬಂಧಿಸಿದ್ದಾರೆ.

'ಠಾಣೆ ವ್ಯಾಪ್ತಿಯ ನಿವಾಸಿಯೊಬ್ಬರ ಅಪಹರಣ ಸಂಬಂಧ ಪ್ರಕರಣ ದಾಖಲಾಗಿತ್ತು. ತನಿಖೆ ಕೈಗೊಂಡು ಶ್ರೀನಿವಾಸ್, ಆಕಾಶ್ ಸೇರಿ ಏಳು ಮಂದಿಯನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ವಿವಾಹಿತ ಶ್ರೀನಿವಾಸ್, ಸ್ಥಳೀಯ ಮಹಿಳೆ ಜೊತೆ ಸ್ನೇಹ ಬೆಳೆಸಿದ್ದ. ಇಬ್ಬರ ನಡುವೆ ಸಲುಗೆಯೂ ಇತ್ತು. ಪ್ರತ್ಯೇಕ ಬಾಡಿಗೆ ಮನೆ ಮಾಡಿದ್ದ ಆರೋಪಿ, ಮಹಿಳೆಯನ್ನು ಆಗಾಗ ಕರೆಸಿಕೊಳ್ಳುತ್ತಿದ್ದ. ಕೆಲದಿನ ಜೊತೆಯಲ್ಲೇ ಇಟ್ಟುಕೊಂಡಿದ್ದ. ಈ ವಿಷಯ ಮಹಿಳೆಯ ಸಹೋದರನಿಗೆ ಗೊತ್ತಾಗಿತ್ತು. ಗಲಾಟೆ ಮಾಡಿದ್ದ ಸಹೋದರ, ತಂಗಿಯನ್ನು ಮನೆಗೆ ಕರೆದೊಯ್ದಿದ್ದರು.'

'ಮಹಿಳೆಯನ್ನು ತನ್ನ ಮನೆಗೆ ಕಳುಹಿಸುವಂತೆ ಆರೋಪಿ ಶ್ರೀನಿವಾಸ್, ಜೀವ ಬೆದರಿಕೆ ಹಾಕಲಾರಂಭಿಸಿದ್ದ. ಅದಕ್ಕೆ ಮಹಿಳೆಯ ಸಹೋದರ ಒಪ್ಪಿರಲಿಲ್ಲ. ಕೋಪಗೊಂಡ ಶ್ರೀನಿವಾಸ್, ಮಹಿಳೆಯ ಸಹೋದರನನ್ನೇ ಅಪಹರಿಸಲು ಸಂಚು ರೂಪಿಸಿದ್ದ. ಸಹಚರರ ಜೊತೆ ಸೇರಿ ಸಹೋದರನನ್ನು ಅಪಹರಿಸಿ, ಹಲ್ಲೆ ಮಾಡಿದ್ದ. ಮಹಿಳೆಗೆ ವಿಡಿಯೊ ಕರೆ ಮಾಡಿಸಿ, ಮನೆಗೆ ಬರುವಂತೆಯೂ ಹೇಳಿಸಿದ್ದ' ಎಂದೂ ಪೊಲೀಸರು ತಿಳಿಸಿದರು.

ಡ್ರಗ್ಸ್: ಪೊಲೀಸರಿಬ್ಬರ ವಿರುದ್ಧ ಮತ್ತೊಂದು ಎಫ್‌ಐಆರ್

ಬೆಂಗಳೂರು: ಡ್ರಗ್ಸ್ ಪ್ರಕರಣದಲ್ಲಿ ಸಿಕ್ಕಿಬಿದ್ದಿದ್ದ ಮುಖ್ಯಮಂತ್ರಿ ಮನೆಯ ಭದ್ರತಾ ಸಿಬ್ಬಂದಿಗಳಿಬ್ಬರ ವಿರುದ್ಧ ಕೋರಮಂಗಲ ಠಾಣೆಯಲ್ಲಿ ಮತ್ತೊಂದು ಎಫ್‌ಐಆರ್ ದಾಖಲಾಗಿದೆ.

ಆರ್.ಟಿ.ನಗರದಲ್ಲಿ ಡ್ರಗ್ಸ್ ಸಾಗಿಸುತ್ತಿದ್ದ ಆಟೊದಲ್ಲಿ ಹೆಡ್‌ಕಾನ್‌ಸ್ಟೆಬಲ್ ಸಂತೋಷ್ ಹಾಗೂ ಕಾನ್‌ಸ್ಟೆಬಲ್ ಶಿವಕುಮಾರ್ ಸೇರಿ ನಾಲ್ವರು ಆರೋಪಿಗಳು ಸಿಕ್ಕಿಬಿದ್ದಿದ್ದರು. ಅವರ ವಿರುದ್ಧ ಆರ್.ಟಿ.ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಅದರ ತನಿಖೆಯನ್ನು ಸದ್ಯ ಸಿಸಿಬಿ ನಡೆಸುತ್ತಿದೆ.

ಇದರ ಬೆನ್ನಲ್ಲೇ, ಸಂತೋಷ್ ಹಾಗೂ ಶಿವಕುಮಾರ್ ವಿರುದ್ಧ ಆಟೊ ಚಾಲಕ ಇಲಿಯಾಸ್ ಎಂಬುವರು ಕೋರಮಂಗಲ ಠಾಣೆಗೆ ದೂರು ನೀಡಿದ್ದಾರೆ. ಅದರನ್ವಯ ಎಫ್‌ಐಆರ್ ದಾಖಲಾಗಿದ್ದು, ಇದರ ತನಿಖೆಯೂ ಸಿಸಿಬಿಗೆ ವರ್ಗವಾಗುವ ಸಾಧ್ಯತೆ ಇದೆ.

'2021ರ ಅಕ್ಟೋಬರ್ 25ರಂದು ಕೋರಮಂಗಲದ ಬಿಡಿಎ ಕಾಂಪ್ಲೆಕ್ಸ್ ಬಳಿ ಇಲಿಯಾಸ್ ಹಾಗೂ ಸ್ನೇಹಿತರು, ಗಾಂಜಾ ಸೇವನೆ ಮಾಡುತ್ತಿದ್ದರು. ಸ್ಥಳಕ್ಕೆ ಹೋಗಿದ್ದ ಶಿವಕುಮಾರ್ ಹಾಗೂ ಸಂತೋಷ್, ಇಲಿಯಾಸ್ ಅವರನ್ನು ಹಿಡಿದುಕೊಂಡಿದ್ದರು. ಗಾಂಜಾ ತುಂಬಿದ್ದ ಮೂರು ಸಿಗರೇಟ್ ಜಪ್ತಿ ಮಾಡಿದ್ದರು. '₹1 ಲಕ್ಷ ಹಣ ಕೊಡು. ಇಲ್ಲದಿದ್ದರೆ, ಡ್ರಗ್ಸ್ ಪ್ರಕರಣ ದಾಖಲಿಸಿ ಜೈಲಿಗೆ ಕಳುಹಿಸುತ್ತೇವೆ' ಎಂದು ಬೆದರಿಸಿದ್ದರು. ಅಂಜಿದ್ದ ಇಲಿಯಾಸ್, ₹ 5 ಸಾವಿರ ಕೊಟ್ಟು ಹೋಗಿದ್ದರು. ಈ ಸಂಗತಿ ದೂರಿನಲ್ಲಿದೆ' ಎಂದೂ ಪೊಲೀಸ್ ಮೂಲಗಳು ಹೇಳಿವೆ.

ಗೋದಾಮು ಹೆಸರಲ್ಲಿ ವಂಚನೆ: ಬಂಧನ

ಬೆಂಗಳೂರು: 'ಅಮೆಜಾನ್' ಗೋದಾಮು ಮಾಡಲು ಜಾಗ ಬೇಕು' ಎಂಬುದಾಗಿ ಹೇಳಿ ನಗರದ ನಿವಾಸಿಯೊಬ್ಬರಿಂದ ಹಣ ಪಡೆದು ವಂಚಿಸಿದ್ದ ಆರೋಪಿ ವಿ. ಪ್ರದೀಪ್ ಎಂಬಾತನನ್ನು ಈಶಾನ್ಯ ವಿಭಾಗದ ಸೈಬರ್ ಕ್ರೈಂ ಠಾಣೆ ಪೊಲೀಸರು ಬಂಧಿಸಿದ್ದಾರೆ.


'ವಂಚನೆ ಬಗ್ಗೆ ಕಳೆದ ಡಿ. 21ರಂದು ಪ್ರಕರಣ ದಾಖಲಾಗಿತ್ತು. ತನಿಖೆ ನಡೆಸಿ, ವಿದ್ಯಾರಣ್ಯಪುರದಲ್ಲಿ ಆರೋಪಿ ಪ್ರದೀಪ್‌ನನ್ನು ಬಂಧಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ದೂರುದಾರರ ಅಂಗಡಿ ಖಾಲಿ ಇದೆ. ಅದೇ ಅಂಗಡಿಯಲ್ಲಿ ಅಮೆಜಾನ್ ವಸ್ತುಗಳನ್ನು ಸಂಗ್ರಹಿಸಲು ಗೋದಾಮು ಮಾಡುವುದಾಗಿ ಆರೋಪಿ ಹೇಳಿದ್ದ. ಅದನ್ನು ನಂಬಿದ್ದ ದೂರುದಾರ, ವಿವಿಧ ಶುಲ್ಕವೆಂದು ₹ 30 ಸಾವಿರ ಕೊಟ್ಟಿದ್ದ. ನಂತರ, ಆರೋಪಿ ನಾಪತ್ತೆಯಾಗಿದ್ದ' ಎಂದೂ ತಿಳಿಸಿವೆ.

ಕುಮಾರಸ್ವಾಮಿಯ ಅಪ್ಪ, ಅಣ್ಣ, ಮಗ ಸೋತಿಲ್ಲವೇ?

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚುನಾವಣೆಯಲ್ಲಿ ಸೋಲು ಗೆಲುವು ನಿರ್ಧರಿಸುವುದು ಮತದಾರ. ಮತದಾರ ಕೊಟ್ಟ ತೀರ್ಪನ್ನು ನಾವು ಸ್ವೀಕರಿಸಬೇಕು. ನಾನು ಸೋತಿದ್ದೇನೆ. ಕುಮಾರಸ್ವಾಮಿ ಅವರ ಅಪ್ಪ ದೇವೇಗೌಡರು, ಅಣ್ಣ ರೇವಣ್ಣ ಸೋತಿಲ್ಲವೇ, ಮಗ ಸೋತಿಲ್ಲವೇ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರಶ್ನಿಸಿದರು.



ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿಯ ಸರಣಿ ಟ್ವೀಟ್‌ಗೆ, 'ಕುಮಾರಸ್ವಾಮಿ ಹೇಳಿಕೆಗೆ ನಾನು ಪ್ರತಿಕ್ರಿಯಿಸುವುದಿಲ್ಲ. ಅವರ ಭಾಷೆ ಅವರ ರಾಜಕೀಯ ಸಂಸ್ಕೃತಿಯನ್ನು ತೋರಿಸುತ್ತದೆ' ಎಂದು ಹೇಳುತ್ತಲೇ ಸಿದ್ದರಾಮಯ್ಯ ತಿರುಗೇಟು ನೀಡಿದರು.

'ಪ್ರಜಾಪ್ರಭುತ್ವದಲ್ಲಿ ಜನರ ತೀರ್ಪು ಅಂತಿಮ. ನಾನು ರಾಜ್ಯ ಘಟಕದ ಅಧ್ಯಕ್ಷ ಆಗಿದ್ದಾಗ ಈ ಕುಮಾರಸ್ವಾಮಿ ಎಲ್ಲಿದ್ದರು ಎಂದೇ ಗೊತ್ತಿಲ್ಲ. ನಾನೇಕೆ ಅವರ ಮುಂದೆ ಹೋಗಿ ಕೈ ಕಟ್ಟಿ ನಿಲ್ಲಲಿ. ರಾಜ್ಯದ ಜನರ ಮುಂದೆ ಕಣ್ಣೀರು ಹಾಕುತ್ತಿರುವುದು ಯಾರೆಂದು ಗೊತ್ತಿದೆ. ನಾನೇಕೆ ಕಣ್ಣೀರು ಹಾಕಲಿ ಎಂದೂ ಪ್ರಶ್ನಿಸಿದರು.

ಕೇಂದ್ರ ಒಪ್ಪಿಗೆ ನೀಡಬಾರದು: 'ತಮಿಳುನಾಡಿನ ಹೊಗೇನಕಲ್ ಯೋಜನೆಯನ್ನು ರಾಜ್ಯ ಸರ್ಕಾರ ತೀವ್ರವಾಗಿ ವಿರೋಧಿಸಬೇಕು. ಈ ಬಗ್ಗೆ ಕಾನೂನು ತಜ್ಞರನ್ನು ಸಂಪರ್ಕಿಸಬೇಕು. ಈ ಯೋಜನೆಗೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡಬಾರದು' ಎಂದರು.

'ಮೇಕೆದಾಟು ವಿಚಾರವಾಗಿ ಇನ್ನೂ ಏಳು ದಿನ ಪಾದಯಾತ್ರೆ ಬಾಕಿ ಇದೆ. ಮೇಕೆದಾಟು ವಿಚಾರವಾಗಿ ಸುಪ್ರೀಂ ಕೋರ್ಟ್‌ನಲ್ಲಿ ಯಾವುದೇ ಅಡ್ಡಿ ಇಲ್ಲ. ಈಗಾಗಲೇ ನ್ಯಾಯಮಂಡಳಿ ತೀರ್ಪು ನೀಡಿದೆ' ಎಂದೂ ಹೇಳಿದರು.

'ತುಮಕೂರು ಜಿಲ್ಲೆ ಕಾಂಗ್ರೆಸ್‌ನ ಪಿತ್ರಾರ್ಜಿತ ಆಸ್ತಿಯಲ್ಲ'

ಪ್ರಜಾವಾಣಿ ವಾರ್ತೆ


ಬೆಂಗಳೂರು: 'ಚಾಮುಂಡೇಶ್ವರಿ ಕ್ಷೇತ್ರದಿಂದ ನಿಮ್ಮನ್ನು ಜನರು ಓಡಿಸಿದ್ದು ಮರೆತುಬಿಟ್ಟಿರಾ? ಈ ಸಲ ಬಾದಾಮಿ ಕ್ಷೇತ್ರದಿಂದಲೂ ಓಡಬೇಕಾಗುತ್ತದೆ. ಕಾಯಿರಿ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರಿಗೆ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಸವಾಲು ಹಾಕಿದ್ದಾರೆ.

'ತುಮಕೂರಿನಿಂದ ಜೆಡಿಎಸ್ ಅನ್ನು ಓಡಿಸಿ' ಎಂದು ಸಿದ್ದರಾಮಯ್ಯ ಶುಕ್ರವಾರ ನೀಡಿದ್ದ ಹೇಳಿಕೆಗೆ ಶನಿವಾರ ಟ್ವಿಟರ್‌ನಲ್ಲಿ ಪ್ರತಿಕ್ರಿಯಿಸಿರುವ ಕುಮಾರಸ್ವಾಮಿ, 'ತುಮಕೂರು ಜಿಲ್ಲೆಯೇನು ನಿಮ್ಮಪ್ಪನ ಜಹಗೀರಾ? ಅಥವಾ ಕಾಂಗ್ರೆಸ್‌ನ ಪಿತ್ರಾರ್ಜಿತ ಆಸ್ತಿಯಾ' ಎಂದು ಪ್ರಶ್ನಿಸಿದ್ದಾರೆ.

'ಒಬ್ಬ ನಾಯಕನನ್ನು ಸೃಷ್ಟಿ ಮಾಡುವ ಯೋಗ್ಯತೆ ಇಲ್ಲ. ಪಕ್ಷ ಕಟ್ಟುವ ಧಮ್ ಇಲ್ಲ. ಗೆದ್ದಲು ಕಟ್ಟುವ ಹುತ್ತದಲ್ಲಿ ವಿಷ ಸರ್ಪದಂತೆ ಸೇರಿಕೊಳ್ಳುವ, ಬೇರೆಯವರ ಕಷ್ಟದ ಫಲವಾಗಿ ಅಧಿಕಾರ ಅನುಭವಿಸುವ ನೀವು ಜೆಡಿಎಸ್ ಬಗ್ಗೆ ಮಾತನಾಡುವುದೆ? ಕಾಂಗ್ರೆಸ್ ಸೇರುವ ಮುನ್ನ ನೀವು ಯಾರ ಬಾಲಂಗೋಚಿ ಆಗಿದ್ದೀರಿ? ಗುರುಸ್ವಾಮಿ ಎದುರು ಸೋತು ಸುಣ್ಣವಾದ ಬಳಿಕ ಅನುಗ್ರಹಕ್ಕೆ ಬಂದು ಯಾರ ಮುಂದೆ ಗಳಗಳನೆ ಅತ್ತು ರಾಜಕೀಯ ಬಿಟ್ಟು ವಕೀಲಿ ಮಾಡುತ್ತೇನೆ ಎಂದಿರಿ ಎನ್ನುವುದು ನೆನಪಿದೆಯಾ? ಆಗ ನಿಮಗೆ ಬಾಲಂಗೋಚಿತನ ನೆನಪಾಗಲಿಲ್ಲವೆ?' ಎಂದು ಕೇಳಿದ್ದಾರೆ.

'ಪ್ರತಿಯೊಂದಕ್ಕೂ ಈ ಸರ್ಕಾರಕ್ಕೆ ಜೆಡಿಎಸ್ ಬೆಂಬಲ ನೀಡುತ್ತಿದೆ ಎನ್ನುವ ನಿಮ್ಮ 'ಸುಳ್ಳು ನಾಲಗೆ', ಅದೇ ಸರ್ಕಾರ ಬರಲು ಮೂಲ ಕಾರಣರಾದ 'ಸಿದ್ಧ ಪುರುಷ' ಯಾರು ಎನ್ನುವುದನ್ನು ಹೇಳಲಿಲ್ಲವೆ? ಪಕ್ಷ ದ್ರೋಹ ತಾಯಿಗೆ ಮಾಡುವ ದ್ರೋಹಕ್ಕೆ ಸಮಾನ. ನಿಮ್ಮ ದ್ರೋಹ ಮುಚ್ಚಿಟ್ಟುಕೊಳ್ಳಲು ಜೆಡಿಎಸ್ ಜಪವೆ?' ಎಂದು ಟೀಕಿಸಿದ್ದಾರೆ.

'ಮತ್ತೆ ಮುಖ್ಯಮಂತ್ರಿ ಆಗಬೇಕೆನ್ನುವ ದುರಾಸೆ, ಅವಕಾಶ ಸಿಗುವುದಿಲ್ಲವೇನೋ ಎಂಬ ಹತಾಶೆ ನಿಮ್ಮನ್ನು ಕಾಡುತ್ತಿದೆ. ಜೆಡಿಎಸ್ ಮುಖಂಡರನ್ನು ಕಾಂಗ್ರೆಸ್‌ಗೆ ಕರೆದೊಯ್ಯುತ್ತಿದ್ದೀರಿ. ನಿಮ್ಮ ಯೋಗ್ಯತೆಗೆ ಜೆಡಿಎಸ್ ಬಿಟ್ಟರೆ ಗತಿ ಇಲ್ಲ.' ಎಂದು ಕುಮಾರಸ್ವಾಮಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಚೆನ್ನಾಗಿ ಓದಿದ್ದರೆ ರಾಜಕಾರಣಿ ಆಗುತ್ತಿರಲಿಲ್ಲ: ಆರಗ ಜ್ಞಾನೇಂದ್ರ

ಪ್ರಜಾವಾಣಿ ವಾರ್ತೆ



ಆರಗ ಜ್ಞಾನೇಂದ್ರ

ಶಿವಮೊಗ್ಗ: 'ಶಾಲೆ, ಕಾಲೇಜು ದಿನಗಳಲ್ಲಿ ಚೆನ್ನಾಗಿ ಓದಿದ್ದರೆ ರಾಜಕಾರಣಿ ಆಗುತ್ತಿರಲಿಲ್ಲ. ಈಗ ಸಾಕಷ್ಟು ಅಧ್ಯಯನ ಮಾಡುತ್ತಿರುವೆ' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದರು.

ಶಿವಮೊಗ್ಗದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಪತ್ರಿಕಾ ಸಂವಾದದಲ್ಲಿ ಅವರು ಮಾತನಾಡಿದರು.

'ಒಂದು ಸೋಲಿಗೆ ನೇಪಥ್ಯಕ್ಕೆ ಸರಿದ ಸಾಕಷ್ಟು ರಾಜಕಾರಣಿಗಳು ಇದ್ದಾರೆ. ನಾನು ಹಲವು ಸೋಲುಗಳನ್ನು ಕಂಡರೂ ಹಿಂಜರಿಯದೇ ಗೆಲುವು ಕಂಡವನು. ತಡವಾಗಿ ಬಂದರೂ ಅಡವಾಗಿ ಸಿಕ್ಕಂತೆ ಗೃಹ ಸಚಿವ ಸ್ಥಾನ ಒಲಿದು ಬಂದಿದೆ. ಸಾಮಾನ್ಯ ಕುಟುಂಬದಿಂದ ಬಂದವನು. ಯಾವ ಗಾಡ್‌ಫಾದರ್‌ಗಳೂ ಇಲ್ಲ. ಪಕ್ಷ, ಸಂಘಟನೆ, ಹೋರಾಟದಿಂದ ಬೆಳೆದವನು' ಎಂದು ಜ್ಞಾನೇಂದ್ರ ಅವರು ತಿಳಿಸಿದರು.

ಯಾವುದೇ ಕಾರಣಕ್ಕೂ ದರ ಏರಿಕೆ ಬೇಡ– ಕಾಂಗ್ರೆಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಯಾವುದೇ ಕಾರಣಕ್ಕೂ ವಿದ್ಯುತ್ ದರ, ಕುಡಿಯುವ ನೀರಿನ ದರ ಏರಿಕೆ ಮಾಡಬಾರದು' ಎಂದು ಕಾಂಗ್ರೆಸ್ ಹೇಳಿದೆ.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, 'ವಿದ್ಯುತ್ ದರ ಏರಿಕೆ ಅನಿವಾರ್ಯ ಎಂದು ಇಂಧನ ಸಚಿವರು ಹೇಳಿದ್ದಾರೆ. ಕೊರೊನಾದಿಂದ ಜನರ ಜೀವನ ನಿರ್ವಹಣೆ ಈಗಾಗಲೇ ಕಷ್ಟಕರವಾಗಿದೆ. ಇಂಥ ಸಂದರ್ಭದಲ್ಲಿ ದರ ಏರಿಕೆ ಸರಿಯಲ್ಲ' ಎಂದರು.

'ಕಾರ್ಪೊರೇಟ್ ಸಂಸ್ಥೆಗಳ ಮೇಲೆ ತೆರಿಗೆ ವಿಧಿಸಿ, ಆದರೆ. ಜನಸಾಮಾನ್ಯರ ಮೇಲೆ ತೆರಿಗೆ ಹಾಕಬೇಡಿ.' ಎಂದೂ ಅವರು ಆಗ್ರಹಿಸಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, 'ಜನಸಾಮಾನ್ಯರ ಆದಾಯ ಖಾತರಿ ಮತ್ತು ಹೆಚ್ಚಳಕ್ಕೆ ಸರ್ಕಾರ ಮೊದಲು ಕ್ರಮ ಕೈಗೊಳ್ಳಲಿ. ಜನರಿಗೆ ಆದಾಯ ಬಂದ ಮೇಲೆ ವಿದ್ಯುತ್ ದರ ಏರಿಸಲಿ' ಎಂದರು.



ಡಿ.ಕೆ. ಶಿವಕುಮಾರ್

'ರೈತನಿಗೆ ತೊಂದರೆ ಆದಾಗ ಅವನ ರಕ್ಷಣೆಗೆ ಸರ್ಕಾರ ಯಾಕೆ ನಿಲ್ಲಲಿಲ್ಲ? ಬೆಳೆ ದರ ಏಕೆ ಹೆಚ್ಚಿಸಲಿಲ್ಲ? ಬೆಂಬಲ ಬೆಲೆ ಯಾಕೆ ನೀಡಲಿಲ್ಲ? ಏರಿಕೆಯಾಗಿರುವ ಕಬ್ಬಿಣ, ಸಿಮೆಂಟ್ ದರ ಕಡಿಮೆ ಮಾಡಲು ಯಾಕೆ ಕ್ರಮ ಕೈಗೊಳ್ಳಲಿಲ್ಲ. ಈಗ ವಿದ್ಯುತ್ ದರ ಬಾಕಿ ಕೊಡಬೇಕು ಎನ್ನುತ್ತಿದ್ದಾರೆ. ವಿದ್ಯುತ್ ಕಂಪನಿಗಳ ಪರಿಸ್ಥಿತಿ ಹೇಗಿದೆ ಎಂದು ನಮಗೂ ಗೊತ್ತಿದೆ. ಸರ್ಕಾರ ಸಾರ್ವಜನಿಕರಿಗೆ ಅನುಕೂಲವಾಗುವ ಕ್ರಮ ಕೈಗೊಳ್ಳಬೇಕು' ಎಂದರು.

ಅಂತರ ರಾಜ್ಯ ಜಲ ವಿವಾದಗಳಲ್ಲಿ ಕಾನೂನು ಹೋರಾಟದ ಚರ್ಚೆ

ಫೆಬ್ರುವರಿಯಲ್ಲಿ ಸರ್ವ ಪಕ್ಷ ಸಭೆ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷ್ಣಾ ಮತ್ತು ಕಾವೇರಿ ಜಲಾನಯನ ಪ್ರದೇಶಗಳು ಹಾಗೂ ಮಹದಾಯಿ ಯೋಜನೆಗೆ ಸಂಬಂಧಿಸಿದ ಅಂತರ ರಾಜ್ಯ ಜಲ ವಿವಾದಗಳಿಗೆ ಸಂಬಂಧಿಸಿದಂತೆ ಚರ್ಚಿಸಲು ಫೆಬ್ರುವರಿ ಮೊದಲ ವಾರ ಸರ್ವ ಪಕ್ಷಗಳ ಸಭೆ ಕರೆಯಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಅಂತರ ರಾಜ್ಯ ಜಲ ವಿವಾದಗಳಲ್ಲಿ ರಾಜ್ಯದ ಪರ ವಾದ ಮಂಡಿಸುತ್ತಿರುವ ವಕೀಲರ ಜತೆ ಶನಿವಾರ ವಿಡಿಯೊ ಸಂವಾದ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಈ ತಿಂಗಳ ಅಂತ್ಯದಲ್ಲಿ ಮತ್ತೊಮ್ಮೆ ಕಾನೂನು ತಜ್ಞರ ಜತೆ ವಿಡಿಯೊ ಸಂವಾದ ನಡೆಸಲಾಗುವುದು. ಬಳಿಕ ವಿಧಾನ ಮಂಡಲದ ಉಭಯ ಸದನಗಳ ಸರ್ವ ಪಕ್ಷಗಳ ನಾಯಕರ ಸಭೆ ಕರೆದು ಈ ಕುರಿತು ಚರ್ಚಿಸಲಾಗುವುದು' ಎಂದರು.


ಕೃಷ್ಣಾ, ಕಾವೇರಿ ಜಲಾನಯನ ಪ್ರದೇಶಗಳು ಹಾಗೂ ಮಹದಾಯಿ ಯೋಜನೆಗೆ ಸಂಬಂಧಿಸಿದಂತೆ ನ್ಯಾಯಾಲಯಗಳಲ್ಲಿ ವಿವಿಧ ಹಂತಗಳಲ್ಲಿರುವ ಅಂತರ ರಾಜ್ಯ ಜಲ ವಿವಾದಗಳ ಕುರಿತು ಚರ್ಚೆ ನಡೆಸಲಾಗಿದೆ. ರಾಜ್ಯದ ಪರ ವಾದ ನಡೆಸುತ್ತಿರುವ ವಕೀಲರು ಸಾಕಷ್ಟು ಮಾಹಿತಿ ಹಂಚಿಕೊಂಡಿದ್ದಾರೆ ಎಂದು ಹೇಳಿದರು.

'ರಾಜ್ಯವು ಕಾನೂನು ಹೋರಾಟ ನಡೆಸುತ್ತಿರುವ ಎಲ್ಲ ಅಂತರ ರಾಜ್ಯ ಜಲ ವಿವಾದಗಳಲ್ಲಿ ಮುಂದೆ ಕೈಗೊಳ್ಳಬೇಕಾದ ಕ್ರಮಗಳ ಕುರಿತು ನಿರ್ಧರಿಸಲು ಮತ್ತೊಮ್ಮೆ ವಿಡಿಯೊ ಸಂವಾದ ನಡೆಸುತ್ತೇನೆ. ಆ ಸಭೆಗೂ ಮೊದಲು ಸಿದ್ಧತೆ ಮಾಡಿಕೊಂಡು, ಕೆಲವು ಸಲಹೆಗಳನ್ನು ನೀಡುವುದಾಗಿ ವಕೀಲರು ತಿಳಿಸಿದ್ದಾರೆ' ಎಂದರು.

ನಿಲುವಿನ ಕುರಿತು ಚರ್ಚೆ: 'ನಾವು ವಿರೋಧ ಪಕ್ಷದಲ್ಲಿದ್ದಾಗ ನೆಲ, ಜಲದ ವಿಷಯ ಬಂದಾಗ ಸಂಪೂರ್ಣ ಸಹಕಾರ ನೀಡಿದ್ದೇವೆ. ಈಗ ಕೆಲವು ಕಾನೂನು ಹೋರಾಟಗಳು ಪ್ರಮುಖ ಘಟ್ಟಕ್ಕೆ ಬಂದಿವೆ. ಈ ಕಾರಣದಿಂದ ಹೇಗೆ ಮುಂದುವರಿಯಬೇಕು ಎಂಬುದನ್ನು ನಿರ್ಧರಿಸಲು ಮತ್ತೊಮ್ಮೆ ವಿರೋಧ ಪಕ್ಷಗಳ ನಾಯಕರು ಮತ್ತು ಕಾನೂನು ಪರಿಣಿತರ ಜತೆ ಚರ್ಚಿಸಲು ಫೆಬ್ರುವರಿ ಮೊದಲ ವಾರ ಸರ್ವ ಪಕ್ಷಗಳ ಸಭೆ ಕರೆಯುತ್ತೇನೆ' ಎಂದು ಬೊಮ್ಮಾಯಿ ತಿಳಿಸಿದರು.

ಸಚಿವರಾದ ಗೋವಿಂದ ಕಾರಜೋಳ, ಜೆ.ಸಿ. ಮಾಧುಸ್ವಾಮಿ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್, ಅಡ್ವೊಕೇಟ್ ಜನರಲ್ ಪ್ರಭುಲಿಂಗ ನಾವದಗಿ, ಹಿರಿಯ ವಕೀಲರಾದ ಶ್ಯಾಮ್ ದಿವಾನ್, ಮೋಹನ ಕಾತರಕಿ ಪಾಲ್ಗೊಂಡಿದ್ದರು.

ಹೊಗೇನಕಲ್ ಯೋಜನೆಗೆ ಒಪ್ಪಿಗೆ ನೀಡದಂತೆ ಮನವಿ




ಬಸವರಾಜ ಬೊಮ್ಮಾಯಿ

'ಸರ್ಕಾರ ಹಿಂದೆಯೂ ಇಂತಹ ಹಲವು ಸವಾಲುಗಳನ್ನು ಎದುರಿಸಿದೆ. ತಮಿಳುನಾಡು ಸರ್ಕಾರದ ಉದ್ದೇಶಿತ ಹೊಗೇನಕಲ್–1 ಮತ್ತು ನದಿ ಜೋಡಣೆ ಯೋಜನೆಗಳನ್ನು ರಾಜ್ಯ ಸರ್ಕಾರ ಈಗಾಗಲೇ ಪ್ರಶ್ನಿಸಿದೆ. ಹೊಗೇನಕಲ್–2 ಯೋಜನೆಯನ್ನೂ ಪ್ರಶ್ನಿಸುತ್ತೇವೆ' ಎಂದು ಮುಖ್ಯಮಂತ್ರಿ ಬೊಮ್ಮಾಯಿ ಹೇಳಿದರು.

ಮೇಕೆದಾಟು ಯೋಜನೆಗೆ ಪ್ರತಿಯಾಗಿ ತಮಿಳುನಾಡು ಸರ್ಕಾರ ಹೊಗೇನಕಲ್–2 ಯೋಜನೆ ಕೈಗೆತ್ತಿಕೊಳ್ಳಲು ಮುಂದಾಗಿರುವ ಕುರಿತು ಮುಖ್ಯಮಂತ್ರಿ ಈ ರೀತಿ ಪ್ರತಿಕ್ರಿಯಿಸಿದರು.

'ಈ ಯೋಜನೆಗಳಿಗೆ ಒಪ್ಪಿಗೆ ನೀಡದಂತೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರುತ್ತೇವೆ. ಕಾನೂನು ಹೋರಾಟವನ್ನೂ ಮಾಡುತ್ತೇವೆ. ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಮತ್ತು ಕೇಂದ್ರ ಜಲ ಆಯೋಗದಲ್ಲೂ ಕಾನೂನು ಹೋರಾಟ ಮಾಡಲಾಗುತ್ತಿದೆ' ಎಂದರು.

ಕುಶಾಲನಗರ: ಎಎಸ್‌ಐ ಸುರೇಶ್ ನಿಗೂಢವಾಗಿ ನಾಪತ್ತೆ



ಸುರೇಶ್

ಕುಶಾಲನಗರ (ಕೊಡಗು ಜಿಲ್ಲೆ): ಇಲ್ಲಿನ ಸಂಚಾರಿ ಪೊಲೀಸ್ ಠಾಣೆಯ ಎಎಸ್‌ಐ ಸುರೇಶ್ ಶನಿವಾರ ಬೆಳಿಗ್ಗೆಯಿಂದ ನಾಪತ್ತೆಯಾಗಿದ್ದಾರೆ.

ಅವರು ಎರಡು ದಿನದಿಂದ ಕರ್ತವ್ಯಕ್ಕೆ ಹಾಜರಾಗಿಲ್ಲ. ಕುಶಾಲ ನಗರದ ಸಿದ್ದಯ್ಯ ಬಡಾವಣೆಯಲ್ಲಿ ಬಾಡಿಗೆ ಮನೆಯಲ್ಲಿ ವಾಸವಿದ್ದರು. ಮನೆಗೆ ಬೀಗ ಹಾಕಿ ತೆರಳಿದ್ದು, ಮೊಬೈಲ್ ಸ್ವಿಚ್‌ಆಫ್ ಆಗಿದೆ. ಶುಕ್ರವಾರ ರಾತ್ರಿ ಬೆಂಗಳೂರಿನಲ್ಲಿರುವ ಪುತ್ರಿಯೊಂದಿಗೆ ವಿಡಿಯೊ ಕಾಲ್ ಮೂಲಕ ಮಾತನಾಡಿದ್ದರು.

ಟವರ್ ಲೊಕೇಶನ್ ಪ್ರಕಾರ ಕುಶಾಲ ನಗರ ಸಮೀಪದ ಗುಮ್ಮನಕೊಲ್ಲಿಯಲ್ಲಿ ಮೊಬೈಲ್ ಸ್ವಿಚ್ ಆಫ್ ಆಗಿರುವುದು ತಿಳಿದು ಬಂದಿದೆ. ಅವರು ಹಾಸನ ಜಿಲ್ಲೆಯ ಕೊಣನೂರಿನ ನಿವಾಸಿ. ಅವರ ಪತ್ನಿ ಶೋಭಾ ಕುಶಾಲನಗರ ಪಟ್ಟಣ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಸ್ವಹಿತಕ್ಕೆ ಸಮಾಜ ಒಡೆಯಬೇಡಿ: ಪಂಚಮಸಾಲಿ ಶ್ರೀ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸ್ವಂತ ಹಿತಕ್ಕೆ ಸಮಾಜ ಒಡೆಯಲು ಮುಂದಾದರೆ ಪ್ರತಿಕೂಲ ಪರಿಣಾಮ ಎದುರಿಸಬೇಕಾಗುತ್ತದೆ' ಎಂದು ಕೈಗಾರಿಕಾ ಸಚಿವ ಮುರುಗೇಶ ನಿರಾಣಿ ಅವರಿಗೆ ಕೂಡಲಸಂಗಮ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಬಹಿರಂಗವಾಗಿ ಎಚ್ಚರಿಕೆ ನೀಡಿದರು.



ಬಸವಜಯ ಮೃತ್ಯುಂಜಯ ಸ್ವಾಮೀಜಿ

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, 'ನೀವು ಶಾಸಕ, ಮಂತ್ರಿ ಅಥವಾ ಮುಖ್ಯಮಂತ್ರಿ ಆಗಬೇಕೆಂಬ ಕಾರಣಕ್ಕಾಗಿ ಜಿಲ್ಲೆ, ತಾಲ್ಲೂಕು, ಗ್ರಾಮ ಪಂಚಾಯಿತಿಗೊಂದು ಪೀಠ ಮಾಡಿಕೊಳ್ಳಿ. ಅದಕ್ಕೆ ನಾವು ಬೇಡ ಎನ್ನುವುದಿಲ್ಲ. ಆದರೆ, ನಿಮ್ಮ ಸ್ವಾರ್ಥಕ್ಕಾಗಿ ಸಮಾಜವನ್ನು ದುರ್ಬಳಕೆ ಮಾಡಿಕೊಂಡರೆ ಸರಿ ಇರುವುದಿಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ರಾಜ್ಯ ರಾಜಕಾರಣದಲ್ಲಿ ಬದಲಾವಣೆಯಾದಾಗ ಮುಖ್ಯಮಂತ್ರಿ ಸ್ಥಾನಕ್ಕೆ ತಮ್ಮ ಹೆಸರನ್ನು ಸೂಚಿಸಬೇಕೆಂದು ಎಂದು ನಿರಾಣಿ ಕೋರಿದ್ದರು. ಸಮುದಾಯದ ಮೂವರಲ್ಲಿ ಯಾರು ಬೇಕಾದರೂ ಮುಖ್ಯಮಂತ್ರಿಯಾಗಿ ಎಂದು ನಾವು ಹೇಳಿದ್ದೆವು. ನಿರಾಣಿಗೆ ಮುಖ್ಯಮಂತ್ರಿ ಸ್ಥಾನ ಯಾವಾಗ ಕೈ ತಪ್ಪಿತೊ ಅಂದಿನಿಂದ ನಮ್ಮ ಮೇಲೆ ಮುನಿಸಿಕೊಂಡು ಮೂರನೇ ಪೀಠ ಸ್ಥಾಪಿಸುವ ಯತ್ನ ನಡೆಸಿದ್ದಾರೆ. ಇದಕ್ಕೆ ನಮ್ಮ ಬೆಂಬಲವೂ ಇದೆ ಎಂದು ಹೇಳಿಕೊಂಡಿದ್ದಾರೆ. ನಿರಾಣಿ ಅವರನ್ನು ಮುಖ್ಯಮಂತ್ರಿ ಮಾಡಲು ಮೂರನೇ ಪೀಠ ಸ್ಥಾಪನೆ ಆಯಿತೇ' ಎಂದೂ ಅವರು ಪ್ರಶ್ನಿಸಿದರು.

'ಪಂಚಮಸಾಲಿ ಸಮುದಾಯವನ್ನು ಒಗ್ಗೂಡಿಸಲು ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ ಹಾಗೂ ವಿಜಯಾನಂದ ಕಾಶಪ್ಪನವರ್ ಹೀಗೆ ಎಲ್ಲರೂ ಸೇರಿಕೊಂಡು ಹೋರಾಟ ಮಾಡಿದ್ದೇವೆ. ಪಂಚಮಶಾಲಿ ಸಮುದಾಯಕ್ಕೆ 2ಎ ಮೀಸಲಾತಿ ಸಿಕ್ಕರೆ ಜಯಮೃತ್ಯುಂಜಯಸ್ವಾಮೀಜಿ, ಯತ್ನಾಳ ಮತ್ತು ಕಾಶಪ್ಪನವರಿಗೆ ಒಳ್ಳೆಯ ಹೆಸರು ಬರುತ್ತದೆ ಎಂಬ ಆತಂಕ ನಿರಾಣಿ ಅವರದ್ದಾಗಿದೆ. ಅದಕ್ಕಾಗಿ ಮೂರನೇ ಪೀಠ ಸ್ಥಾಪಿಸಲು ಮುಂದಾಗಿದ್ದಾರೆ. ನೀವು ಮೂರನೇ ಪೀಠ ಪ್ರಾರಂಭಿಸಿದರೆ ನಾವು ಹೋರಾಟದಿಂದ ಹಿಂದೆ ಸರಿಯುವುದಿಲ್ಲ' ಎಂದು ಹೇಳಿದರು.

'ಸಮುದಾಯದ ಅನೇಕ ಹಿರಿಯರು ತ್ಯಾಗ, ಬಲಿದಾನ ಮಾಡಿ ಪಂಚಮಶಾಲಿ ಪೀಠವನ್ನು ಕಟ್ಟಿದ್ದಾರೆ. ಸಮುದಾಯದ ಒಗ್ಗಟ್ಟಿಗಾಗಿ ಅನೇಕರು ಶ್ರಮಿಸಿದ್ದಾರೆ. ಮೀಸಲಾತಿ ಹೋರಾಟಕ್ಕೆ ಎಲ್ಲ ಶಾಸಕರೂ ಬೆಂಬಲವಾಗಿ ನಿಂತಿದ್ದಾರೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ನಮಗೆ ನ್ಯಾಯ ಕೊಡುವ ಭರವಸೆ ಇದೆ' ಎಂದು ಹೇಳಿದರು.

'ನೀವು ಮುಖ್ಯಮಂತ್ರಿಯಾಗುವುದಕ್ಕೆ ನಮ್ಮ ತಕರಾರು ಇಲ್ಲ. ನಿಮ್ಮ ಹಣೆಬರಹದಲ್ಲಿ ಅದು ಬರೆದಿದ್ದರೆ ಆಗಿಯೇ ಆಗುತ್ತದೆ. ಅದನ್ನು ಯಾರಿಂದಲೂ ತಪ್ಪಿಸಲಾಗದು. ಸ್ವಂತ ಹಿತಾಸಕ್ತಿಯ ನಿಮ್ಮ ಚಟುವಟಿಕೆಗಳನ್ನು ಕೈಬಿಡಿ. ಎಲ್ಲರೂ ಕಷ್ಟಪಟ್ಟು ಒಗ್ಗೂಡಿಸಿರುವ ಸಮುದಾಯವನ್ನು ಒಡೆಯುವ ಕೆಲಸವನ್ನು ನಿಲ್ಲಿಸಿ' ಎಂದು ಸ್ವಾಮೀಜಿ ಅವರು ಮನವಿ ಮಾಡಿದರು.

'ಮೊದಲು ಸಚಿವ ಸ್ಥಾನ ಉಳಿಸಿಕೊಳ್ಳಿ'

'ಮುಖ್ಯಮಂತ್ರಿ ಆಗಲು ಹೊರಟಿರುವ ಮುರುಗೇಶ ನಿರಾಣಿ, ಆ ಉದ್ದೇಶಕ್ಕಾಗಿ ಅದಕ್ಕಾಗಿ ಮೂರನೇ ಪೀಠ ಸ್ಥಾಪಿಸುತ್ತಿದ್ದಾರೆ. ನೀವು ಮುಖ್ಯಮಂತ್ರಿ ಆಗುವುದು ಇರಲಿ, ಮೊದಲು ನಿಮ್ಮ ಸಚಿವ ಸ್ಥಾನ ಉಳಿಸಿಕೊಳ್ಳಿ' ಎಂದು ಅಖಿಲ ಭಾರತ ಪಂಚಮಶಾಲಿ ಮಹಾಸಭಾದ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ್ ಹೇಳಿದರು.

'ಸಂಪುಟದಿಂದ ಕೈ ಬಿಡಬಹುದೆಂಬ ಭಯದಿಂದಾಗಿ ಮೂರನೇ ಪೀಠ ಸ್ಥಾಪಿಸಲು ನಿರಾಣಿ ಹೊರಟಿದ್ದಾರೆ. ಸಚಿವರಾಗುವುದಕ್ಕಾಗಿ ಕೂಡಲಸಂಗಮ ಪೀಠ, ಹರಿಹರ ಪೀಠವನ್ನು ಬಳಸಿಕೊಂಡರು. ಎರಡೂ ಪೀಠಗಳು ಕೈಬಿಟ್ಟಿದ್ದರಿಂದ ಮೂರನೇ ಪೀಠ ರಚನೆಗೆ ಮುಂದಾಗಿದ್ದಾರೆ. ತಮ್ಮ ರಾಜಕೀಯ ಭವಿಷ್ಯಕ್ಕಾಗಿ ಸಮುದಾಯ ಒಡೆಯುವ ಕೆಲಸಕ್ಕೆ ಮುಂದಾಗಿದ್ದಾರೆ' ಎಂದು ಟೀಕಿಸಿದರು.

'ಪಂಚಮಸಾಲಿ ಸಮಾಜದ ಮೂರನೇ ಪೀಠ ಸ್ಥಾಪಿಸಿದರೆ ತಪ್ಪೇನಲ್ಲ'

ಬಾಗಲಕೋಟೆ: ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜದ ಮೂರನೇ ಪೀಠ ಸ್ಥಾಪನೆಯ ವಿಷಯ ನನಗೆ ಗೊತ್ತಿಲ್ಲ. ಹಾಗೊಂದು ವೇಳೆ ಸಮಾಜದ ಮುಖಂಡರು ಈ ಬಗ್ಗೆ ತೀರ್ಮಾನ ಮಾಡಿದ್ದರೆ ಅದು ತಪ್ಪೇನಲ್ಲ ಎಂದು ಬೃಹತ್ ಹಾಗೂ ಮಧ್ಯಮ ಕೈಗಾರಿಕೆ ಸಚಿವ ಮುರುಗೇಶ ನಿರಾಣಿ ಹೇಳಿದ್ದಾರೆ.

ಕೂಡಲಸಂಗಮ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಶ್ರೀಗಳು ಬೆಂಗಳೂರಿನಲ್ಲಿ ತಮ್ಮ ಬಗ್ಗೆ ನೀಡಿರುವ ಹೇಳಿಕೆಗೆ ನಿರಾಣಿ ಅವರು, ನಗರದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಪ್ರತಿಕ್ರಿಯಿಸಿದರು.

ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜ ದೊಡ್ಡ ಸಮಾಜವಾಗಿದ್ದು, ಈಗಿರುವ ಎರಡು ಪೀಠಗಳ ಶ್ರೀಗಳಿಗೆ ಇಡೀ ರಾಜ್ಯದಲ್ಲಿ ಸಮಾಜದ ಜನರಿಗೆ ಸ್ಪಂದಿಸಲು ಆಗುವುದಿಲ್ಲ. ಸಮಾಜದ ಎಲ್ಲರಿಗೂ ಶ್ರೀಗಳ ಲಭ್ಯತೆ ಆಗಬೇಕಾದಲ್ಲಿ ಇನ್ನೊಂದು ಪೀಠದ ಅವಶ್ಯಕತೆಯಿದೆ ಎಂಬುದನ್ನು ಸಮಾಜದ ಮುಖಂಡರು ಅರಿತು ಈ ಬಗ್ಗೆ ತೀರ್ಮಾನಿಸಿರಬಹುದು ಎಂದರು.

ಈ ಬಗ್ಗೆ ಯಾರೂ ಅಸಮಾಧಾನ ಪಡುವುದು ಬೇಡ. ಎಲ್ಲರೂ ಸೇರಿ ಹೊಸ ಪೀಠವನ್ನು ಬೆಳೆಸುವ ಕೆಲಸ ಮಾಡಬೇಕೇ ಹೊರತು ಟೀಕೆ-ಟಿಪ್ಪಣೆ ಮಾಡುವುದು ಬೇಡ ಎಂದು ಹೇಳಿದರು.

ಸಮಾಜದ ಬೆಳವಣಿಗೆಯಲ್ಲಿ ಎಲ್ಲ ಪೀಠಗಳೂ ಕೆಲಸ ಮಾಡಬೇಕು. ಅದು ಬೇರೆ ಇದು ಬೇರೆ ಎನ್ನುವುದು ಸಲ್ಲದು. ಆದರೆ 3ನೇ ಪೀಠದ ವಿಷಯದಲ್ಲಿ ಸುಖಾಸುಮ್ಮನೆ ನನ್ನ ಹೆಸರು ಮುಂದೆ ಮಾಡಿ ಟಾರ್ಗೆಟ್ ಮಾಡಲಾಗುತ್ತಿದೆ ಎಂದ ಅವರು, ನಾನು ಯಾವತ್ತೂ ಸಮಾಜ ಒಡೆಯುವ ಕೆಲಸ ಮಾಡಿಲ್ಲ. ಯಾರು ಸಮಾಜ ಒಡೆಯುವ ಕೆಲಸ ಮಾಡಿದ್ದಾರೆ ಎನ್ನುವುದು ಇಡೀ ರಾಜ್ಯದ ಜನರಿಗೆ ಗೊತ್ತಿದೆ. ನಾನೂ ಬಾಗಲಕೋಟೆ, ವಿಜಯಪುರ ಜಿಲ್ಲೆಯ ನೀರು ಕುಡಿದಿದ್ದು ಎಲ್ಲವೂ ಗೊತ್ತಿದೆ. ಯಾರೋ ಏನೋ ಮಾತಾಡ್ತಾರೆ ಅಂದ್ರೆ ಉತ್ತರ ಕೊಡೋದಕ್ಕೆ ಆಗೋದಿಲ್ಲ ಎಂದು ಹೇಳಿದರು.

ಸಿಎಂ.ಕನಸು ಇಲ್ಲ: ನಾನು ಮುಖ್ಯಮಂತ್ರಿಯಾಗೋದಕ್ಕೆ ಹಾಗೂ ಸಚಿವನಾಗೋದಕ್ಕೆ ಈ ರೀತಿ ಸಮಾಜವನ್ನು ನಡೆಸಿಕೊಳ್ಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಾನು ಸಿಎಂ ಆಗುವ ಕನಸು ಕಂಡವನಲ್ಲ. ಇದಕ್ಕಾಗಿ ಯಾರಿಂದಲೂ ಏನನ್ನೂ ಅಪೇಕ್ಷೆ ಪಟ್ಟಿಲ್ಲ. ಸಮಾಜದ ವಿಷಯದಲ್ಲಿ ನಾನು ತಪ್ಪು ಮಾಡಿದ್ದರೆ ಆ ಬಗ್ಗೆ ಹೇಳಿದರೆ ನಾನು ತಪ್ಪು ತಿದ್ದಿಕೊಂಡು ಕೆಲಸ ಮಾಡುತ್ತೇನೆ ಎಂದರು.

ಸಾರಿಗೆ ಸೇವೆ ಸುಧಾರಣೆ ಸಲಹೆ ಕೋರಿಕೆ

ಬೆಂಗಳೂರು: ಸಾರಿಗೆ ಸಂಸ್ಥೆಗಳ ಸ್ವಾವಲಂಬನೆ ಮತ್ತು ಸಂಪನ್ಮೂಲ ಕ್ರೋಢೀಕರಣಗಳ ಅಧ್ಯಯನಕ್ಕೆ ರಾಜ್ಯ ಸರ್ಕಾರ ನೇಮಿಸಿರುವ ನಿವೃತ್ತ ಐಎಎಸ್ ಅಧಿಕಾರಿ ಎಂ.ಆರ್.ಶ್ರೀನಿವಾಸಮೂರ್ತಿ ಏಕ ಸದಸ್ಯ ಸಮಿತಿಯು ಸಾರ್ವಜನಿಕರು ಮತ್ತು ಪ್ರಯಾಣಿಕರಿಂದ ಅಭಿಪ್ರಾಯ ಕೋರಿದೆ. ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ವಾಯುವ್ಯ ಕರ್ನಾಟಕ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ಸಾರಿಗೆ ಸಂಸ್ಥೆಗಳ ಬಸ್ ಸೇವೆಗಳನ್ನು ಉತ್ತಮಪಡಿಸುವ ಸಂಬಂಧ ಸಲಹೆಗಳನ್ನು ಜ.31ರೊಳಗೆ ಇ-ಮೇಲ್ (cpro@ksrtc.org) ಕಳುಹಿಸಬಹುದು.

ಗುಂಪು ಚದುರಿಸಲು ಲಘು ಲಾಠಿ ಪ್ರಹಾರ

ಒಂದನೇ ಪುಟದಿಂದ

ಪ್ರಕರಣದ ಹಿನ್ನೆಲೆ: ಶಾಲೆಯಲ್ಲಿ ಕಲಿಯುತ್ತಿರುವ ಮುಸ್ಲಿಂ ವಿದ್ಯಾರ್ಥಿಗಳು ಪ್ರತಿ ಶುಕ್ರವಾರ ನಮಾಜ್‌ನ ನೆಪ ಮಾಡಿಕೊಂಡು ತರಗತಿಗಳಿಗೆ ಗೈರಾಗುತ್ತಿದ್ದರು. ನಮಾಜ್ ಮಾಡುವ ಉದ್ದೇಶಕ್ಕೆ ರಜೆ ಪಡೆಯುತ್ತಿದ್ದ ವಿದ್ಯಾರ್ಥಿಗಳಲ್ಲಿ ಬಹುತೇಕರು ಮತ್ತೆ ಶಾಲೆಗೆ ಬರುತ್ತಿರಲಿಲ್ಲ.

ಈ ಕಾರಣಕ್ಕೆ ಮುಖ್ಯಶಿಕ್ಷಕಿ ಉಮಾದೇವಿ ಅವರು ಮುಸ್ಲಿಂ ವಿದ್ಯಾರ್ಥಿಗಳಿಗೆ ಶಾಲೆಯ ಕೊಠಡಿಯೊಂದರಲ್ಲಿ ನಮಾಜ್ ಮಾಡಲು ಅವಕಾಶ ನೀಡಿದ್ದರು. ಶುಕ್ರವಾರ (ಜ.21) ಮುಸ್ಲಿಂ ವಿದ್ಯಾರ್ಥಿಗಳು ಶಾಲೆಯಲ್ಲಿ ನಮಾಜ್ ಮಾಡುತ್ತಿರುವುದನ್ನು ಸ್ಥಳೀಯರು ಮೊಬೈಲ್‌ನಲ್ಲಿ ಚಿತ್ರೀಕರಿಸಿ ಸಾಮಾಜಿಕ ಜಾಲತಾಣಗಳಲ್ಲಿ ವಿಡಿಯೊ ಹರಿಬಿಟ್ಟಿದ್ದರು. ಪ್ರಕರಣದ ಬಗ್ಗೆ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ರೇವಣಸಿದ್ದಪ್ಪ, 'ಶಾಲೆಯಲ್ಲಿ ನಮಾಜ್‌ಗೆ ಅವಕಾಶ ನೀಡಿರುವುದು ತಪ್ಪು. ಸೋಮವಾರ (ಜ.24) ಶಾಲೆಗೆ ಖುದ್ದು ಭೇಟಿ ಕೊಟ್ಟು ಪರಿಶೀಲನೆ ಮಾಡಿ ಜಿಲ್ಲಾಧಿಕಾರಿಗೆ ವರದಿ ಸಲ್ಲಿಸುತ್ತೇನೆ' ಎಂದು ತಿಳಿಸಿದರು.

ನಿಧನ ವಾರ್ತೆ

ಸಾಯಿರಾಂ ಭಟ್



ಕಾಸರಗೋಡು: ಕೊಡುಗೈ ದಾನಿ ಸಾಯಿರಾಂ ಗೋಪಾಲಕೃಷ್ಣ ಭಟ್ (84) ಶನಿವಾರ ನೀರ್ಚಾಲು ಬಳಿಯ ಕಿಳಿಂಗಾರಿನ ಸ್ವಗೃಹದಲ್ಲಿ ನಿಧನರಾದರು.

300ಕ್ಕೂ ಅಧಿಕ ಮಂದಿಗೆ ಜಾಗ-ಮನೆ ಕೊಡುಗೆಯಾಗಿ ನೀಡಿ, ಅವರ ಬದುಕಿಗೆ ಆಶಾಕಿರಣವಾಗಿದ್ದರು. ನಿರುದ್ಯೋಗಿಗಳಿಗೆ ರಿಕ್ಷಾ, ಹೊಲಿಗೆ ಯಂತ್ರ ಇತ್ಯಾದಿಗಳನ್ನು ಒದಗಿಸಿದ್ದರು. ಸತ್ಯಸಾಯಿಬಾಬ ಅವರ ಪರಮ ಭಕ್ತರಾಗಿದ್ದ ಅವರು, ಸೇವಾ ಕೈಂಕರ್ಯದಲ್ಲಿ ಜೀವನವನ್ನು ಸವೆಸಿದ್ದರು, ಹೀಗಾಗಿ ಜನರು ಅವರನ್ನು ಸಾಯಿರಾಂ ಭಟ್ ಎಂದೇ ಕರೆಯುತ್ತಿದ್ದರು.

ವೈದ್ಯಕೀಯ ಶಿಬಿರ, ಜನಸೇವಾ ಚಟುವಟಿಕೆಗಳನ್ನು ನಡೆಸಿದ್ದರು. ಅವರಿಗೆ ಪತ್ನಿ, ಪುತ್ರ ಕೆ.ಎನ್.ಕೃಷ್ಣಭಟ್ (ಬದಿಯಡ್ಕ ಗ್ರಾಮ ಪಂಚಾಯಿತಿ ಸದಸ್ಯರಾಗಿ)ಹಾಗೂ ಇಬ್ಬರು ಪುತ್ರಿಯರಿದ್ದಾರೆ.

ಟಿ.ವಿ. ಮಾರುತಿ



ಬೆಂಗಳೂರು: ನಗರದ ಆಚಾರ್ಯ ಪಾಠಶಾಲಾ ಶಿಕ್ಷಣ ಸಂಸ್ಥೆ ಮತ್ತು ಕೇಂದ್ರ ಸರ್ಕಾರದ ರಾಷ್ಟ್ರೀಯ ರೇಷ್ಮೆ ರಫ್ತು ಉತ್ತೇಜನ ಮಂಡಳಿ ಅಧ್ಯಕ್ಷರಾಗಿದ್ದ ಟಿ.ವಿ. ಮಾರುತಿ (90) ಅವರು ಶನಿವಾರ ನಿಧನರಾದರು.

ಇವರಿಗೆ ಪತ್ನಿ ಮತ್ತು ಇಬ್ಬರು ಪುತ್ರರು ಇದ್ದಾರೆ. ಖ್ಯಾತ ರೇಷ್ಮೆ ಉದ್ದಿಮೆದಾರರಾಗಿದ್ದ ಮಾರುತಿ ಅವರು, ಶಾಂತಲಾ ಸಿಲ್ಕ್ ಹೌಸ್ ಮಾಲೀಕರು. ಕರ್ನಾಟಕ ನೇಕಾರರ ಒಕ್ಕೂಟದ ಅಧ್ಯಕ್ಷರಾಗಿಯೂ ಅವರು ಹಲವು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದರು.

ಬೆಂಗಳೂರಿನ ವಸಂತನಗರದಲ್ಲಿರುವ ಕುಂಚಿಟಿಗರ ಸಾರ್ವಜನಿಕ ವಿದ್ಯಾರ್ಥಿನಿಲಯದ ಅಧ್ಯಕ್ಷರಾಗಿ 25 ವರ್ಷಗಳ ಸೇವೆ ಸಲ್ಲಿಸಿದ್ದರು. ಬೆಂಗಳೂರಿನ ಶೇಷಾದ್ರಿಪುರ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿಯೂ ಹಲವಾರು ವರ್ಷಗಳ ಕಾಲ ಕಾರ್ಯನಿರ್ವಹಿಸಿದ್ದರು.

ಇವರ ಅಂತ್ಯಕ್ರಿಯೆಯು ಭಾನುವಾರ ನೆಲಮಂಗಲ–ಕುಣಿಗಲ್ ರಸ್ತೆಯ ಮಹದೇವಪುರ ಗ್ರಾಮದ ಸಂಭ್ರಮ ಹೋಟೆಲ್ ಎದುರು ಇರುವ ಸ್ವಂತ ತೋಟದಲ್ಲಿ ನಡೆಯಲಿದೆ

ಮನನೊಂದು ಹೊಸದುರ್ಗ ಶಾಸಕರ ಮೊರೆಹೋದ ವ್ಯಕ್ತಿ

ಮತಾಂತರಕ್ಕೆ ಮಾವನಿಂದ ಒತ್ತಡ: ದೂರು

ಪ್ರಜಾವಾಣಿ ವಾರ್ತೆ

ಹೊಸದುರ್ಗ: ಕ್ರೈಸ್ತ ಧರ್ಮಕ್ಕೆ ಮತಾಂತರವಾಗುವಂತೆ ಒತ್ತಡ ಹಾಕಿದ ಮಾವ, ಆತನ ತಂದೆ ಹಾಗೂ ಹಲ್ಲೆ ನಡೆಸಿದ ಸಂಬಂಧಿಕರ ವಿರುದ್ಧ ಹೊಸಪೇಟೆಯ ವ್ಯಕ್ತಿಯೊಬ್ಬರು ಹೊಸದುರ್ಗ ಪೊಲೀಸ್ ಠಾಣೆಯಲ್ಲಿ ಶುಕ್ರವಾರ ದೂರು ದಾಖಲಿಸಿದ್ದಾರೆ.

ವಿಜಯನಗರ ಜಿಲ್ಲೆಯ ಹೊಸಪೇಟೆಯ ಅರವಿಂದ ನಗರ ಪಕ್ಕದ ಬುಡ್ಗ ಜಂಗಮ ಕಾಲೊನಿ ನಿವಾಸಿ ಮಾರಪ್ಪ ಅವರು ಹೊಸದುರ್ಗ ಪಟ್ಟಣದ ನಂಜಯ್ಯನಕೆರೆ ಬಡಾವಣೆಯಲ್ಲಿರುವ ತಮ್ಮ ಮಾವ ವಸಂತಕುಮಾರ್, ಅವರ ತಂದೆ ರಾಮಚಂದ್ರಪ್ಪ ಹಾಗೂ ಸಂಬಂಧಿಕರಾದ ಸುಧಾಕರ್, ಮಂಜುನಾಥ್ ಸಂಕಪ್ಪ ಅವರ ವಿರುದ್ಧ ದೂರು ನೀಡಿದ್ದಾರೆ.

ಬಲವಂತವಾಗಿ ಮತಾಂತರ ಮಾಡುವವರ ವಿರುದ್ಧ ಧ್ವನಿ ಎತ್ತಲು ಸಿದ್ಧ. ಬಲವಂತದ ಮತಾಂತರಕ್ಕೆ ದಲಿತರು, ಎಸ್ಸಿ, ಎಸ್ಟಿ ಜನಾಂಗದವರೇ ಬಲಿಯಾಗುತ್ತಿದ್ದು, ಕ್ರಮಕ್ಕೆ ಪೊಲೀಸರಿಗೆ ಸೂಚಿಸಿದ್ದೇನೆ.
ಗೂಳಿಹಟ್ಟಿ ಶೇಖರ್, ಶಾಸಕ

ಕ್ರೈಸ್ತ ಸಂಪ್ರದಾಯದಂತೆ ಮದುವೆ: 'ದೀಕ್ಷಾ ಸ್ನಾನ' ಹೆಸರಿನಲ್ಲಿ ಬಲವಂತವಾಗಿ ನೀರಿನಲ್ಲಿ ಮುಳುಗಿಸಿ ನೀವು ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡಿದ್ದೀರಿ ಎಂದು ವಸಂತಕುಮಾರ್ ಅವರ ಮಗಳು ಸರಳಾ ಜೊತೆ 2020ರ ಜುಲೈ 6ರಂದು ಕ್ರೈಸ್ತ ಧರ್ಮದ ಪದ್ಧತಿಯಂತೆ ವಿವಾಹ ಮಾಡಿಕೊಲಾಯಿತು. ಹಿಂದೂ ಧರ್ಮದ ದೇವರನ್ನು ಪೂಜಿಸುವಂತಿಲ್ಲ. ಕ್ರೈಸ್ತ ಧರ್ಮ ಪಾಲನೆ ಮಾಡಬೇಕು. ನೀವು ಪೂಜೆ ಮಾಡುವ ಸುಂಕ್ಲಮ್ಮ, ಮಾರಮ್ಮ, ದುರ್ಗಮ್ಮ ಇವೆಲ್ಲವೂ ಸೈತಾನ್‌ಗಳು. ಇವುಗಳನ್ನು ಪೂಜೆ ಮಾಡಿದರೆ ನರಕಕ್ಕೆ ಹೋಗುತ್ತೀಯಾ ಎಂದು ಹಿಂದೂ ಧರ್ಮದ ಫೋಟೋಗಳನ್ನು ವಸಂತಕುಮಾರ್, ರಾಮಚಂದ್ರಪ್ಪ ಅವರು ಹರಿದು ಸುಟ್ಟು ಹಾಕಿದ್ದರು' ಎಂದು ಮಾರಪ್ಪ ದೂರಿನಲ್ಲಿ ತಿಳಿಸಿದ್ದಾರೆ.

ಪತ್ನಿ, ಮಗು ಮುಖ ನೋಡಲು ಅಡ್ಡಿ: '2021ರ ಡಿಸೆಂಬರ್ 2ರಂದು ಪತ್ನಿ ಸರಳಾ ಅವರನ್ನು ಹೆರಿಗೆಗಾಗಿ ಹೊಸದುರ್ಗದಲ್ಲಿರುವ ಮಾವನ ಮನೆಗೆ ಕಳುಹಿಸಿಕೊಟ್ಟಿದ್ದೆ. ಮಗುವಾಗಿರುವ ವಿಷಯವನ್ನೂ ಬೇರೆಯವರಿಂದ ತಿಳಿಯಬೇಕಾಯಿತು. ಅಣ್ಣಂದಿರರಾದ ದೊಡ್ಡ ಹುಸೇನಿ, ಸಣ್ಣಹುಸೇನಿ, ಕಾರ್ತೀಕ, ಚಂದ್ರು ಅವರೆಲ್ಲರೂ ಜನವರಿ 18ರಂದು ಮಗು ನೋಡಲು ಮನೆಗೆ ಬಂದಾಗ ಮಾವ ವಸಂತ್‌ಕುಮಾರ್ ಮತ್ತು ಅವರ ತಂದೆ ರಾಮಚಂದ್ರಪ್ಪ ಅವರು 'ನೀವು ಸೈತಾನ್‌ಗಳು. ಹಿಂದೂ ದೇವರನ್ನು ಪೂಜೆ ಮಾಡುವವರು. ನಿಮಗೆ ಮನೆಯೊಳಗೆ ಪ್ರವೇಶವಿಲ್ಲ ಎಂದು ಅವಾಚ್ಯ ಪದಗಳಿಂದ ನಿಂದಿಸಿದರು. ಕ್ರಿಶ್ಚಿಯನ್ ಧರ್ಮ ಅನುಸರಿಸಿದರೆ ಮಾತ್ರ ಪತ್ನಿ ಹಾಗೂ ಮಗುವಿನ ಮುಖ ನೋಡಬಹುದು ಹಾಗೂ ಅವರನ್ನು ಜೊತೆಗೆ ಕರೆದುಕೊಂಡು ಹೋಗಬಹುದು ಎಂದು ಬೆದರಿಕೆಯೊಡ್ಡಿದರು. ಮಗುವಿನ ಮುಖ ನೋಡಲು ಬಿಡದಿರುವುದನ್ನು ಪ್ರಶ್ನಿಸಿದಾಗ ನನ್ನ ಸಹೋದರರ ಮೇಲೆ ಹಲ್ಲೆ ನಡೆಸಲಾಯಿತು' ಎಂದು ದೂರಿದ್ದಾರೆ.

ಯುಕೆಪಿ ಅನುಷ್ಠಾನಕ್ಕೆ ಪರಿಹಾರ, ಪುನರ್ವಸತಿ ದೊಡ್ಡ ಸವಾಲು

‘ದಂಡೆ’ ಸೇರದ ಕೃಷ್ಣಾ ಮೇಲ್ದಂಡೆ

• ಬಸವರಾಜ್ ಸಂಪಳ್ಳಿ,
ಚಂದ್ರಶೇಖರ ಕೋಳೇಕರ

ವಿಜಯಪುರ: ಕೃಷ್ಣಾ ನ್ಯಾಯಾಧೀಕರಣ ಎರಡನೇ ತೀರ್ಪು ಪ್ರಕಟವಾಗಿ 11 ವರ್ಷವಾಗಿದೆ. ಆಂಧ್ರಪ್ರದೇಶದ ತಕರಾರಿನಿಂದಾಗಿ ಕೇಂದ್ರ ಸರ್ಕಾರ ಇನ್ನೂ ತೀರ್ಪಿನ ಅನುಷ್ಠಾನದ ಅಂತಿಮ ಅಧಿಸೂಚನೆ ಹೊರಡಿಸಿಲ್ಲ. ಕರ್ನಾಟಕದಲ್ಲಿ ಈ ಬೃಹತ್ ನೀರಾವರಿ ಯೋಜನೆ ಅನುಷ್ಠಾನಗೊಳಿಸಲು ಸ್ವಾಧೀನಪಡಿಸಿಕೊಳ್ಳುವ ಜಮೀನಿಗೆ ಪರಿಹಾರ ಕೊಡುವುದೇ ಸರ್ಕಾರದ ಮುಂದೆ ದೊಡ್ಡ ಸವಾಲು. ಈ ಎರಡೂ ಪ್ರಕ್ರಿಯೆಗಳು ಕೃಷ್ಣಾ ಮೇಲ್ದಂಡೆ ಯೋಜನೆಯ (ಯುಕೆಪಿ) ಪೂರ್ಣ ಪ್ರಮಾಣದ ಅನುಷ್ಠಾನಕ್ಕೆ ದೊಡ್ಡ ತೊಡಕಾಗಿವೆ.

ಯುಕೆಪಿ ಹಂತ ಮೂರರ ಅಡಿ ರಾಜ್ಯಕ್ಕೆ ಹಂಚಿಕೆಯಾದ 170 ಟಿಎಂಸಿ ಅಡಿ ನೀರಿನಲ್ಲಿ ಕೃಷ್ಣೆಯ ಪಾಲು ಸುಮಾರು 130 ಟಿಎಂಸಿ ಅಡಿ. ಆ ನೀರನ್ನು ಸಂಗ್ರಹಿಸಲು ಆಲಮಟ್ಟಿ ಜಲಾಶಯವನ್ನು ಈಗಿರುವ 519.60 ಮೀಟರ್ ಎತ್ತರದಿಂದ 524.256 ಮೀಟರ್‌ಗೆ ಎತ್ತರಿಸಬೇಕು. ಹೀಗೆ ಎತ್ತರಿಸಿದಾಗ ಸಂಗ್ರಹವಾಗುವ ಹೆಚ್ಚುವರಿ ನೀರು ಸುಮಾರು 100 ಟಿಎಂಸಿ ಅಡಿ. ಇನ್ನೂ 30 ಟಿಎಂಸಿ ಅಡಿ ನೀರನ್ನು ನದಿ ಹರಿವಿದ್ದಾಗ ಸಂಗ್ರಹಿಸಲು ಉದ್ದೇಶಿಸಲಾಗಿದೆ.

ಯುಕೆಪಿ ಹಂತ 3ರ ಅನುಷ್ಠಾನಕ್ಕೆ ಆಲಮಟ್ಟಿ ಜಲಾಶಯ ಎತ್ತರಿಸುವುದೊಂದೇ ಪರಿಹಾರ. ಜಲಾಶಯವನ್ನು ಎತ್ತರಿಸುವುದರಿಂದ ಉಂಟಾಗುವ ಮುಳುಗಡೆ ಸರ್ಕಾರಕ್ಕೆ ಬಹು ದೊಡ್ಡ ಆರ್ಥಿಕ ಹೊಡೆತ ನೀಡಲಿದೆ. ಇದರಿಂದಾಗಿ ಜಲಾಶಯ ಎತ್ತರಿಸುವ ಯಾವುದೇ ಪ್ರಸ್ತಾವ ಸದ್ಯಕ್ಕೆ ಸರ್ಕಾರದ ಮುಂದಿಲ್ಲ.

ಗ್ರಾಮಗಳ ಸ್ಥಳಾಂತರ, ಜಮೀನು ಮುಳುಗಡೆ, ಭೂಸ್ವಾಧೀನ, ಪುನರ್ವಸತಿ ಕೇಂದ್ರಗಳ ರಚನೆ, ನೀರಾವರಿ ಯೋಜನೆಯ ಕಾಲುವೆಗಳ ಜಾಲ ನಿರ್ಮಾಣ ಸೇರಿ ನಾನಾ ಕೆಲಸಕ್ಕೆ ಬೇಕಾಗುವ ಜಮೀನು ಬರೋಬ್ಬರಿ 1,33,867 ಎಕರೆ! ಇಷ್ಟು ಭಾರಿ ಪ್ರಮಾಣದ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವುದೇ ಸದ್ಯದ ಸರ್ಕಾರದ ಮುಂದಿರುವ ದೊಡ್ಡ ಸವಾಲು.

ಹೊಸ ಭೂಸ್ವಾಧೀನ ಕಾಯ್ದೆಯ ಪ್ರಕಾರ ಗ್ರಾಮೀಣ ಭಾಗದಲ್ಲಿನ ಭೂಮಿಯ ಮೌಲ್ಯದ (ಸಬ್ ರಿಜಿಸ್ಟ್ರಾರ್ ನೋಂದಣಿ) ನಾಲ್ಕು ಪಟ್ಟು ಪರಿಹಾರ ಕೊಡಬೇಕಿದೆ. ಸದ್ಯದ ಸ್ಥಿತಿಯಲ್ಲಿ ಯುಕೆಪಿ ಹಂತ-1 ಮತ್ತು 2ಕ್ಕೆ ನೀಡಿದ ಹಾಗೆ ಏಕರೂಪದ ಪರಿಹಾರ ಕೊಡುವುದು ಸಾಧ್ಯವಿಲ್ಲ. ರೈತರ ಬೇಡಿಕೆಗಳು ಹೆಚ್ಚಾಗಿವೆ. ಭೂಮಿಯ ಮೌಲ್ಯ ಹೆಚ್ಚಾಗಿರುವುದರಿಂದ ಪರಿಹಾರದ ಮೌಲ್ಯವೂ ಹೆಚ್ಚಾಗಿದೆ. ಇದರಿಂದಾಗಿ ಇಡೀ ಯೋಜನೆಯ ವೆಚ್ಚವೇ ನಿಗದಿಗಿಂತ ಐದು ಪಟ್ಟು ಹೆಚ್ಚಾಗಿದೆ.

2012ರಲ್ಲಿ ₹17,207 ಕೋಟಿ ಇದ್ದ ಯೋಜನಾ ಮೊತ್ತ, 2017ರಲ್ಲಿ₹51,148 ಕೋಟಿಗೆ ಏರಿದೆ. ಇನ್ನೂ ಈ ಬೆಲೆ 2022ಕ್ಕೆ ಸುಮಾರು ₹75 ಸಾವಿರ ಕೋಟಿಗೆ ಏರಬಹುದು ಎಂದು ಅಂದಾಜಿಸಲಾಗಿದೆ.

ಗೆಜೆಟ್ ನೋಟಿಫಿಕೇಶನ್: ಕೃಷ್ಣಾ ನ್ಯಾಯಾಧೀಕರಣ ಪ್ರಾಧಿಕಾರ 2ರ ತೀರ್ಪು2010ರ ಡಿ.30ರಂದು ಪ್ರಕಟಗೊಂಡ ನಂತರ ಕೇಂದ್ರ ಸರ್ಕಾರ ಗೆಜೆಟ್ ನೋಟಿಫಿಕೇಶನ್ ಹೊರಡಿಸಲಿಲ್ಲ. ಆಂಧ್ರಪ್ರದೇಶವು ತೆಲಂಗಾಣ ಆಗಿ ವಿಭಜನೆಯಾಯಿತು. ಆಂಧ್ರಕ್ಕೆ ನಿಗದಿಪಡಿಸಿದ 190 ಟಿಎಂಸಿ ಅಡಿ ನೀರಿನಲ್ಲಿ ಆಂಧ್ರ, ತೆಲಂಗಾಣ ಹಂಚಿಕೆ ಮಾಡಿಕೊಳ್ಳಬೇಕಿತ್ತು. ಗೆಜೆಟ್ ಅಧಿಸೂಚನೆ ಆದರೆ, ಆಂಧ್ರಪ್ರದೇಶಕ್ಕೆ ಇಷ್ಟು ದಿನಗಳ ಕಾಲ ಕೃಷ್ಣಾ ಜಲಾನಯನದಲ್ಲಿ ದೊರೆಯುತ್ತಿದ್ದ ಹೆಚ್ಚುವರಿ ನೀರಿನ ಪ್ರಮಾಣ ಗಣನೀಯವಾಗಿ ಕಡಿಮೆಯಾಗಲಿದೆ. ಈ ಹೆಚ್ಚುವರಿ ನೀರು ಕರ್ನಾಟಕ ಹಾಗೂ ಮಹಾರಾಷ್ಟ್ರ ಬಳಕೆ ಮಾಡುವುದರಿಂದ ತಕರಾರು ತೆಗೆದಿರುವ ಆಂಧ್ರವು ಸುಪ್ರಿಂಕೋರ್ಟ್ ಮೆಟ್ಟಿಲೇರಿ ಅಧಿಸೂಚನೆ ಹೊರಡಿಸದಂತೆ ಅಡ್ಡಗಾಲು ಹಾಕಿದೆ.

ವಿಚಾರಣೆ ಅಂತಿಮ ಹಂತದಲ್ಲಿದ್ದಾಗ ಈಚೆಗೆ ಸುಪ್ರಿಂಕೋರ್ಟ್ ನ್ಯಾಯಮೂರ್ತಿಗಳು ಹಿಂದಕ್ಕೆ ಸರಿದಿದ್ದರಿಂದ ಹೊಸ ನ್ಯಾಯಮೂರ್ತಿಗಳ ಬೆಂಚ್ ನಿಗದಿಯಾಗಬೇಕಿದೆ. ಮತ್ತೊಮ್ಮೆ ವಿಚಾರಣೆ ನಡೆದು ತೀರ್ಪು ಹೊರಬಂದ ನಂತರವಷ್ಟೇ ಗೆಜೆಟ್ ನೋಟಿಫಿಕಶೇನ್. ಇದು ಇನ್ನೂ ಮೂರ್ನಾಲ್ಕು ವರ್ಷ ಮುಂದುವರೆಯಲಿದೆ. ಸದ್ಯ ಮಹಾರಾಷ್ಟ್ರ ಹಾಗೂ ಕರ್ನಾಟಕ ಸೇರಿ ಸುಪ್ರಿಂಕೋರ್ಟ್‌ನಲ್ಲಿ ಕಾನೂನು ಹೋರಾಟ ಮಾಡುತ್ತಿವೆ. ಅಷ್ಟರೊಳಗೆ ಭೂಸ್ವಾಧೀನ, ಗ್ರಾಮಗಳ ಸ್ಥಳಾಂತರ ಸೇರಿ ನಾನಾ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕಿದೆ.


ಆಲಮಟ್ಟಿ ಜಲಾಶಯ (ಪ್ರಜಾವಾಣಿ ಸಂಗ್ರಹ ಚಿತ್ರ)

ಯುಕೆಪಿ ಅಡಿಯ 9 ಯೋಜನೆಗಳು

ಲಭ್ಯವಾಗಿರುವ 130 ಟಿಎಂಸಿ ಅಡಿ ನೀರನ್ನು ಬಳಸಿಕೊಂಡು ಯುಕೆಪಿಯಡಿ 9 ಯೋಜನೆಗಳನ್ನು ರೂಪಿಸಲಾಗಿದೆ.

ಮುಳವಾಡ ಏತ ನೀರಾವರಿ ಯೋಜನೆ ಹಂತ 3 (2,27,966 ಹೆಕ್ಟೇರ್ ನೀರಾವರಿ), ಚಿಮ್ಮಲಗಿ ಏತ ನೀರಾವರಿ (87,067), ಇಂಡಿ ಏತ ನೀರಾವರಿ ಯೋಜನೆ ವಿಸ್ತರಣೆ (20,6690 ಹೆಕ್ಟೇರ್), ನಾರಾಯಣಪುರ ಬಲದಂಡೆ ಕಾಲುವೆ ವಿಸ್ತರಣೆ (61,741 ಹೆಕ್ಟೇರ್), ರಾಂಪೂರ ಏತ ನೀರಾವರಿ ಯೋಜನೆ ವಿಸ್ತರಣೆ (13923 ಹೆಕ್ಟೇರ್), ಮಲ್ಲಾಬಾದ ಏತ ನೀರಾವರಿ ಯೋಜನೆ (33730 ಹೆಕ್ಟೇರ್), ಕೊಪ್ಪಳ ಏತ ನೀರಾವರಿ ಯೋಜನೆ (48,436 ಹೆಕ್ಟೇರ್), ಹೆರಕಲ್ ಏತ ನೀರಾವರಿ ಯೋಜನೆ (15,344 ಹೆಕ್ಟೇರ್), ಭೀಮಾ ಫ್ಲಾಂಕ್ (21,572 ಹೆಕ್ಟೇರ್) ಪ್ರದೇಶ ಸೇರಿ ಒಟ್ಟಾರೇ ವಿಜಯಪುರ, ಬಾಗಲಕೋಟೆ, ಯಾದಗಿರಿ, ಕಲಬುರಗಿ, ಕೊಪ್ಪಳ, ರಾಯಚೂರು, ಗದಗ ಜಿಲ್ಲೆಗಳು ಸೇರಿದಂತೆ ಒಟ್ಟು 5,30,475 ಹೆಕ್ಟೇರ್ ಜಮೀನಿಗೆ ನೀರಾವರಿ ಕಲ್ಪಿಸಲು ಯೋಜನೆ ರೂಪಿಸಲಾಗಿದೆ.

ವಿಜಯಪುರ ಜಿಲ್ಲೆಯಲ್ಲಿ ಚಿಮ್ಮಲಗಿ ಹಾಗೂ ಮುಳವಾಡ ಹಂತ-3 ರ ಯೋಜನೆಗಳ ಮುಖ್ಯ ಕಾಲುವೆಗಳ ನಿರ್ಮಾಣ ಕಾರ್ಯ ಬಹುತೇಕ ಪೂರ್ಣಗೊಂಡಿದೆ. ಹೊಸ ಕಾಲುವೆಗಳ ಮೂಲಕ ಜಿಲ್ಲೆಯ ಸುಮಾರು 120ಕ್ಕೂ ಹೆಚ್ಚು ಕೆರೆಗಳ ಭರ್ತಿಗೆ ಕ್ರಮ ಕೈಗೊಳ್ಳಲಾಗಿದೆ.



ನ್ಯಾಯಾಧೀಕರಣ ಹಂಚಿಕೆ ಮಾಡಿದ ನೀರನ್ನು ಬಳಸಿಕೊಳ್ಳುವಂತಾಗಬೇಕಾದರೆ ಪ್ರಧಾನಿ ಮಧ್ಯಪ್ರವೇಶಿಸಿ ಸೌಹಾರ್ದವಾಗಿ ಸಮಸ್ಯೆ ಬಗೆಹರಿಸಲು ನೆರವಾಗಬೇಕು, ಕೋರ್ಟ್, ಗೆಜೆಟ್ ಎಂದು ಸುತ್ತುತ್ತಾ ತಿರುಗಿದರೆ ನಮ್ಮ ತಲೆಮಾರಿನಲ್ಲಂತೂ ಯೋಜನೆ ಪೂರ್ಣಗೊಳ್ಳಲ್ಲ

ಬಸವರಾಜ ಕುಂಬಾರ, ಅಧ್ಯಕ್ಷ, ಕೃಷ್ಣಾ ಕಣಿವೆ ರೈತ ಹಿತರಕ್ಷಣಾ ಸಮಿತಿ, ನಿಡಗುಂದಿ



ಆಲಮಟ್ಟಿ ಜಲಾಶಯವನ್ನು519 ರಿಂದ 524 ಮೀಟರ್‌ಗೆ ಎತ್ತರಿಸಿದಾಗ 22 ಹಳ್ಳಿಗಳು ಬಾಧಿತವಾಗುತ್ತವೆ. ಈ ಹಳ್ಳಿಗಳಿಗೆ ಹೊಸ ಭೂಸ್ವಾಧೀನ ಕಾಯ್ದೆಯನುಸಾರ ಪುನರ್ವಸತಿ ಕೇಂದ್ರಗಳ ನಿರ್ಮಾಣ ಕಾರ್ಯತ್ವರಿತವಾಗಿ ಕೈಗೆತ್ತಿಕೊಳ್ಳಬೇಕು,ಎಲ್ಲ ಸೌಲಭ್ಯಗಳನ್ನು ನೀಡಬೇಕು

ಜಿ.ಸಿ. ಮುತ್ತಲದಿನ್ನಿ, ಸಂತ್ರಸ್ತ ಮತ್ತು ಸಂಚಾಲಕ,ಕೃಷ್ಣಾ ತೀರ ಮುಳುಗಡೆ ಕ್ಷೇಮಾಭಿವೃದ್ಧಿ ಸಂಸ್ಥೆ –ಬೇನಾಳ ಆರ್‌ಎಸ್, ವಿಜಯಪುರ

ಕೃಷ್ಣಾ ಮೇಲ್ದಂಡೆ ಹಂತ-1	
ಮೂಲ ಅಂದಾಜು	₹1,214.97 ಕೋಟಿ (1986–87)
ಪರಿಷ್ಕೃತ ಅಂದಾಜು	₹6,891.59 ಕೋಟಿ
ಕೃಷ್ಣಾ ಮೇಲ್ದಂಡೆ ಹಂತ-2	
ಮೂಲ ಅಂದಾಜು	₹2,358.86 ಕೋಟಿ (1998–99)
ಪರಿಷ್ಕೃತ ಅಂದಾಜು	₹3,959.80 ಕೋಟಿ (2000)
ಇವೆರಡರಿಂದಲೂ 2021 ರವರೆಗೆ ಒಟ್ಟು ₹11,102.50 ಕೋಟಿ ವೆಚ್ಚ ಆಗಿದೆ. 6.22 ಲಕ್ಷ ಹೆಕ್ಟೇರ್ ನೀರಾವರಿ ಸಾಮರ್ಥ್ಯದ ಪೈಕಿ 6.20 ಲಕ್ಷ ಹೆಕ್ಟೇರ್ ನೀರಾವರಿ ಒದಗಿಸಲಾಗಿದೆ.	
ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3	
ಮೂಲ ಅಂದಾಜು	₹17,207 ಕೋಟಿ (2011–12)
ಪರಿಷ್ಕೃತ ಅಂದಾಜು	₹51,148.94 ಕೋಟಿ
ಈ ಯೋಜನೆಗೆ ಆರಂಭದಿಂದ 2021 ರ ಜನವರಿವರೆಗೆ ₹12,431.66 ಕೋಟಿ ವೆಚ್ಚ ಮಾಡಲಾಗಿದೆ. 130 ಟಿಎಂಸಿ ಅಡಿ ನೀರು ಬಳಸಿ 5.94 ಲಕ್ಷ ಹೆಕ್ಟೇರ್‌ಗೆ ನೀರಾವರಿ ಕಲ್ಪಿಸಲಾಗುವುದು.	

ತೆವಳುತ್ತ ಸಾಗುತ್ತಿದೆ ‘ಭದ್ರಾ ಮೇಲ್ದಂಡೆ’

• ಜಿ.ಬಿ. ನಾಗರಾಜ್

ಚಿತ್ರದುರ್ಗ: ಮಧ್ಯ ಕರ್ನಾಟಕದ ಬಯಲುಸೀಮೆ ಭಾಗಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವ ಉದ್ದೇಶದಿಂದ ರೂಪುಗೊಂಡ ಭದ್ರಾ ಮೇಲ್ದಂಡೆ ಯೋಜನೆಯ ಕಾಮಗಾರಿ ತೆವಳುತ್ತ ಸಾಗುತ್ತಿದೆ. ಒಂದೂವರೆ ದಶಕದಲ್ಲಿ ಅರ್ಧದಷ್ಟು ಕಾಮಗಾರಿ ಕೂಡ ಪೂರ್ಣಗೊಂಡಿಲ್ಲ.

ಚಿತ್ರದುರ್ಗ, ದಾವಣಗೆರೆ, ಚಿಕ್ಕಮಗಳೂರು ಹಾಗೂ ತುಮಕೂರು ಜಿಲ್ಲೆಯ ಆಯ್ದ ತಾಲ್ಲೂಕುಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸಲು 29.9 ಟಿಎಂಸಿ ಅಡಿ ನೀರನ್ನು ಮೀಸಲಿಡಲಾಗಿದೆ. ತುಂಗಾ ನದಿಯ 17.4 ಟಿಎಂಸಿ ಅಡಿ ನೀರು ಹಾಗೂ ಭದ್ರಾ ಜಲಾಶಯದ 12.5 ಟಿಎಂಸಿ ಅಡಿ ನೀರನ್ನು ಇದಕ್ಕೆ ಹಂಚಿಕೆ ಮಾಡಲಾಗಿದೆ. ಜಲಾಶಯ ನಿರ್ಮಿಸದೇ ಇಷ್ಟೊಂದು ಪ್ರಮಾಣದ ನೀರನ್ನು ಬಳಕೆ ಮಾಡಲು ರೂಪಿಸಿದ ಬಹುದೊಡ್ಡ ಯೋಜನೆ ಇದಾಗಿದೆ.

ನಾಲ್ಕು ಜಿಲ್ಲೆಗಳ 5.57 ಲಕ್ಷ ಎಕರೆಗೆ ಹನಿ ನೀರಾವರಿ ಸೌಲಭ್ಯ ಕಲ್ಪಿಸಲು ಉದ್ದೇಶಿಸಲಾಗಿದೆ. 367 ಕೆರೆಗಳಿಗೆ ಶೇ 50ರಷ್ಟು ನೀರು ತುಂಬಿಸಲಾಗುತ್ತದೆ. ತುಂಗಾ ಜಲಾಶಯದಿಂದ ಭದ್ರಾ ಜಲಾಶಯಕ್ಕೆ ನೀರು ಹರಿಸಲು ನಾಲೆ ನಿರ್ಮಾಣ ಕಾಮಗಾರಿ ಪೂರ್ಣಗೊಳ್ಳಲು ಇನ್ನೂ ಒಂದು ವರ್ಷ ಬೇಕಾಗುತ್ತದೆ. ಭದ್ರಾ ಜಲಾಶಯದಿಂದ ಅಜ್ಜಂಪುರದವರೆಗಿನ 40 ಕಿ.ಮೀ. ಉದ್ದದ ನಾಲೆ ನಿರ್ಮಾಣ ಪೂರ್ಣಗೊಂಡಿದೆ. ಚಿತ್ರದುರ್ಗ ಮತ್ತು ತುಮಕೂರು ಶಾಖಾ ಕಾಲುವೆ ನಿರ್ಮಾಣಕ್ಕೆ ಭೂಸ್ವಾಧೀನ ಪ್ರಕ್ರಿಯೆ ನಡೆಯುತ್ತಿದೆ. 2003ರಲ್ಲಿ ಈ ಯೋಜನೆಗೆ ₹ 2 ಸಾವಿರ ಕೋಟಿ ಮೀಸಲಿಡಲಾಗಿತ್ತು. 2008ರಲ್ಲಿ ಭದ್ರಾ ಮೇಲ್ದಂಡೆ ಯೋಜನೆಗೆ ಅಧಿಕೃತವಾಗಿ ಚಾಲನೆ ಸಿಕ್ಕಿತು. 2015ರಲ್ಲಿ ಯೋಜನೆ ಪರಿಷ್ಕರಣೆ ಮಾಡಲಾಗಿದ್ದು, ₹12,340 ಕೋಟಿ ಅಂದಾಜು ವೆಚ್ಚ ತಯಾರಿಸಲಾಯಿತು. 2021ರಲ್ಲಿ ಯೋಜನಾ ವೆಚ್ಚವನ್ನು ₹ 21 ಸಾವಿರ ಕೋಟಿಗೆ ಏರಿಕೆ ಮಾಡಲಾಗಿದೆ. ಈವರೆಗೆ ₹ 4,866 ಕೋಟಿ ವೆಚ್ಚವಾಗಿದೆ.

ಭದ್ರಾ ಮೇಲ್ದಂಡೆ

₹12,340 ಕೋಟಿ
(2012–13) ಮೂಲ ಅಂದಾಜು

₹21,473.67 ಕೋಟಿ
(2018–19) ಪರಿಷ್ಕೃತ ಅಂದಾಜು

ಇದನ್ನು ರಾಷ್ಟ್ರೀಯ ಯೋಜನೆ ಎಂದು ಘೋಷಿಸಲು ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ. 29.90 ಟಿಎಂಸಿ ಅಡಿ ನೀರಿನ ಬಳಕೆಯ ಉದ್ದೇಶವಿದೆ. 5.57 ಲಕ್ಷ ಎಕರೆಗೆ ನೀರಾವರಿ ಮತ್ತು 376 ಕೆರೆಗಳನ್ನು ತುಂಬಿಸುವ ಯೋಜನೆ

ಮೇಕೆದಾಟು ಯೋಜನೆ

₹5,800 ಕೋಟಿ
ಮೂಲ ಅಂದಾಜು

₹9,000 ಕೋಟಿ
ಪರಿಷ್ಕೃತ ಅಂದಾಜು

(ಈ ಯೋಜನೆಗೆ ಅನುಮತಿ ಸಿಗಬೇಕು)
ಬೆಂಗಳೂರು ನಗರಕ್ಕೆ ಕುಡಿಯುವ ನೀರು ಪೂರೈಕೆ ಮಾಡಲು ಈ ಯೋಜನೆ ಜಾರಿಗೊಳಿಸಲು ಉದ್ದೇಶಿಸಲಾಗಿದೆ. ಮೇಕೆದಾಟು ಬಳಿ ಜಲಾಶಯ ನಿರ್ಮಿಸಿ 65 ಟಿಎಂಸಿ ನೀರು ಸಂಗ್ರಹಿಸುವ ಉದ್ದೇಶವಿದೆ. ವಿದ್ಯುತ್ ಉತ್ಪಾದನೆಯ ಉದ್ದೇಶವೂ

ಮಹದಾಯಿ ಯೋಜನೆ

₹94 ಕೋಟಿ
(2000–01) ಮೂಲ ಅಂದಾಜು

₹1,677 ಕೋಟಿ,
ಪರಿಷ್ಕೃತ ಅಂದಾಜು

ಕಳಸಾ ನಾಲೆ ಮತ್ತು ಹಲತಾರಾ ನಾಲೆಗಳಿಗೆ ಅಣೆಕಟ್ಟೆ ನಿರ್ಮಿಸಿ ಕೂಡು ಕಾಲುವೆಗಳ ಮೂಲಕ 1.72 ಟಿಎಂಸಿ ನೀರು ಮಲಪ್ರಭಾ ನದಿಗೆ ಹರಿಸುವುದು. ಕಳಸಾ ನಾಲೆ ತಿರುವು ಯೋಜನೆಗೆ ₹885.80 ಕೋಟಿ. ಬಂಡೂರಿ ನಾಲೆ ತಿರುವು ಯೋಜನೆಯಡಿ ಗೋವಾಕ್ಕೆ ಹರಿಯುವ ಬಂಡೂರ ಹಳ್ಳಕ್ಕೆ ಅಣೆಕಟ್ಟು ನಿರ್ಮಿಸಿ ಬಂಡೂರ ಜಲಾಶಯದಿಂದ ಕೂಡು ಕಾಲುವೆ ನಿರ್ಮಿಸಿ 2.18 ಟಿಎಂಸಿ ನೀರನ್ನು ಮಲಪ್ರಭಾಗೆ ತಿರುಗಿಸುವುದು. ಇದರ ಪರಿಷ್ಕೃತ ಅಂದಾಜು ₹791.50 ಕೋಟಿ

ಎತ್ತಿನ ಹೊಳೆ ಯೋಜನೆಗೆ ಭೂಸ್ವಾಧೀನ ಕಂಟಕ!

• ರಾಜೇಶ್ ರೈ ಚಟ್ಲ

ಎತ್ತಿನಹೊಳೆ ಯೋಜನೆಯ ನೀರಿನ ಹಂಚಿಕೆ (ಟಿಎಂಸಿ ಅಡಿಗಳಲ್ಲಿ)	
7 ಜಿಲ್ಲೆಗಳಿಗೆ ಕುಡಿಯಲು	15.04
527 ಕೆರೆ ತುಂಬಿಸಲು	8.97
ಒಟ್ಟು	24.01

ಭೂಸ್ವಾಧೀನದ ಅಡೆತಡೆಗಳನ್ನು ನಿವಾರಿಸಿ, ಎತ್ತಿನಹೊಳೆ ಯೋಜನೆಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಅಗತ್ಯವಾದ ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಗೋವಿಂದ ಕಾರಜೋಳ, ಜಲಸಂಪನ್ಮೂಲ ಸಚಿವ

ಬೆಂಗಳೂರು: ಅನುಮಾನಗಳು, ವಿರೋಧಗಳ ನಡುವೆ ಏಳು ಜಿಲ್ಲೆಗಳ 29 ತಾಲ್ಲೂಕುಗಳ 38 ಪಟ್ಟಣ ಪ್ರದೇಶಗಳು ಮತ್ತು 6,657 ಗ್ರಾಮಗಳ ಸುಮಾರು 75.59 ಲಕ್ಷ ಜನರಿಗೆ ಕುಡಿಯುವ ನೀರು ಒದಗಿಸುವ ಉದ್ದೇಶದಿಂದ ಆರಂಭಗೊಂಡ ಎತ್ತಿನಹೊಳೆ ಯೋಜನೆಗೆ ‘ಭೂಸ್ವಾಧೀನ’ ಪ್ರಕ್ರಿಯೆ ದೊಡ್ಡ ಕಂಟಕವಾಗಿದೆ. ಹೀಗಾಗಿ, ಯೋಜನೆ ಅನುಷ್ಠಾನ ತೆವಳುತ್ತಾ ಸಾಗಿದೆ.

ಪಶ್ಚಿಮಘಟ್ಟದ ಮೇಲ್ಭಾಗದಲ್ಲಿ ಹರಿಯುವ ಎತ್ತಿನಹೊಳೆ, ಹೊಂಗದಹಳ್ಳ, ಕಾಡುಮನೆ ಹೊಳೆ, ಕೇರಿಹೊಳೆ ಹಳ್ಳಗಳಿಂದ ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ಜತೆಗೆ, ಮಾರ್ಗದಲ್ಲಿ ಬರುವ ಚಿಕ್ಕಮಗಳೂರು, ಹಾಸನ, ತುಮಕೂರು ಜಿಲ್ಲೆಗಳಿಗೆ ಕುಡಿಯುವ ನೀರು ಒದಗಿಸುವ ಈ ಮಹತ್ವದ ಯೋಜನೆಯನ್ನು 2023ರ ಅಂತ್ಯದ ಒಳಗೆ ಪೂರ್ಣಗೊಳಿಸಲು ರಾಜ್ಯ ಸರ್ಕಾರ ಉದ್ದೇಶಿಸಿದೆ.

ಯೋಜನೆಗೆ ಅಗತ್ಯವಾದ ಭೂಮಿಯನ್ನು ‘ಭೂಸ್ವಾಧೀನ ಕಾಯ್ದೆ– 2013‘ರಂತೆ ಸ್ವಾಧೀನಪಡಿಸಿಕೊಳ್ಳಲು ಕನಿಷ್ಠ 3 ವರ್ಷ ಬೇಕಾಗಿದೆ. ಹೀಗಾಗಿ, ನೇರ ಖರೀದಿ ಮೂಲಕ ಭೂಮಿ ಸ್ವಾಧೀನಪಡಿಸಿಕೊಳ್ಳಲು ಸರ್ಕಾರ ಮುಂದಾಗಿತ್ತು. ಕೆಲವು ಭೂ ಮಾಲೀಕರು ನೇರ ಖರೀದಿ ಮೂಲಕ ಭೂಮಿ ನೀಡಲು ಒಪ್ಪದ ಕಾರಣ ಈ ಕಾಯ್ದೆಯ ಪ್ರಕಾರ ಸ್ವಾಧೀನಪಡಿಸಿಕೊಳ್ಳಬೇಕಾಗಿದೆ. ಈ ಪ್ರಕ್ರಿಯೆ ವಿಳಂಬವಾಗಿದೆ. ವಿದ್ಯುತ್ ಕಂಬಗಳ ಸ್ಥಳಾಂತರವೂ ವಿಳಂಬವಾಗಿದೆ. ಅರಣ್ಯ ಪ್ರದೇಶದ ಭೂಸ್ವಾಧೀನಕ್ಕೆ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯಲ್ಲಿ (ಎನ್‌ಜಿಟಿ) ಕೆಲವರು ಸಲ್ಲಿಸಿದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಲೇವಾರಿ ಮತ್ತು ಈ ಪ್ರದೇಶವನ್ನು ಅರಣ್ಯ ಇಲಾಖೆಯಿಂದ ಯೋಜನೆ ಅನುಷ್ಠಾನಗೊಳಿಸುತ್ತಿರುವ ವಿಶ್ವೇಶ್ವರಯ್ಯ ಜಲ ನಿಗಮಕ್ಕೆ ಹಸ್ತಾಂತರ ತಡ ಆಗಿದೆ. ಅಲ್ಲದೆ, ರೈಲ್ವೆ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ಅನುಮತಿ ಪಡೆಯುವುದು, 2018ರ ಅತಿವೃಷ್ಟಿ, ಕೋವಿಡ್ ಕೂಡ ಯೋಜನೆಯ ಕಾಮಗಾರಿಗೆ ಅಡ್ಡಿಯಾಗಿದೆ.

ಎರಡು ಹಂತಗಳಲ್ಲಿ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುತ್ತಿದೆ. ಮೊದಲ ಹಂತದಲ್ಲಿ ಏತ ಕಾಮಗಾರಿಗಳು ಹಾಗೂ ವಿದ್ಯುತ್ ಪೂರೈಕೆ ಕಾಮಗಾರಿಗಳು. ಎರಡನೇ ಹಂತದಲ್ಲಿ 251 ಕಿ.ಮೀ ಉದ್ದದ ಗುರುತ್ವ ಕಾಲುವೆ ನಿರ್ಮಾಣ, ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕಿನ ಭೈರಗೊಂಡ್ಲು ಜಲಾಶಯ ನಿರ್ಮಾಣ, ಫೀಡರ್ ಕಾಲುವೆಗಳ ನಿರ್ಮಾಣ. ಮೊದಲನೇ ಹಂತದ ಕಾಮಗಾರಿಗಳು ಹಾಸನ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುತ್ತಿದ್ದು, ಈ ಕೆಲಸ ಬಹುತೇಕ ಪೂರ್ಣಗೊಳ್ಳುವ ಹಂತದಲ್ಲಿದೆ. ಇದೇ ಮಾರ್ಚ್ ಒಳಗೆ ಈ ಕಾಮಗಾರಿಗಳನ್ನು ಪೂರ್ಣಗೊಳಿಸಿ ವೇದಾವತಿ ಕೊಳಕ್ಕೆ ನೀರು ಹರಿಸಲು ಉದ್ದೇಶಿಸಲಾಗಿದೆ.

ಯೋಜನೆಗೆ ಎತ್ತಿನಹೊಳೆ ಯೋಜನಾ ಪ್ರದೇಶದಲ್ಲಿ 574.37 ಎಕರೆ, ಭೈರಗೊಂಡ್ಲು ಜಲಾಶಯಕ್ಕೆ 5478.68 ಎಕರೆ, ಮುಖ್ಯ ನಾಲೆಗೆ 5,575 ಎಕರೆ, ರಾಮನಗರ ಫೀಡರ್‌ಗೆ 127.24, ಮಧುಗಿರಿ ಫೀಡರ್‌ಗೆ 234.24, ಗೌರಿಬಿದನೂರು ಫೀಡರ್‌ಗೆ 155, ಶ್ರೀನಿವಾಸಪುರ ಫೀಡರ್‌ಗೆ 306, ಕೋಲಾರ ಫೀಡರ್‌ಗೆ 252 ಎಕರೆ ಭೂಮಿ ಸೇರಿದಂತೆ ಒಟ್ಟು 12,702.46 ಎಕರೆ ಭೂಮಿ ಅಗತ್ಯವಿದೆ. ಬಹುತೇಕ ಕಡೆ ಭೂಸ್ವಾಧೀನ ಪ್ರಕ್ರಿಯೆ ಬಾಕಿಯಿದೆ.

2013ರ ವಿಧಾನಸಭೆ ಚುನಾವಣೆಗೆ ಮೊದಲೇ ಎತ್ತಿನಹೊಳೆ ಯೋಜನೆಯನ್ನು ಘೋಷಿಸಬೇಕೆಂದು ಆಗ ಅಧಿಕಾರದಲ್ಲಿದ್ದ ಬಿಜೆಪಿ ಸರ್ಕಾರ, 2012ರಲ್ಲಿ ₹ 8,323.50 ಕೋಟಿಯ ವಿಸ್ಕೃತ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಿತ್ತು. 2014ರ ಫೆ. 17ರಂದು ಕಾಂಗ್ರೆಸ್ ಸರ್ಕಾರ ₹ 12,912.36 ಕೋಟಿಯ ಪರಿಷ್ಕೃತ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ನೀಡಿತ್ತು ಮೂರು ವರ್ಷಗಳ ಕಾಲಮಿತಿಯಲ್ಲಿ ಯೋಜನೆಯನ್ನು ಪೂರ್ಣಗೊಳಿಸಲು ನಿರ್ಧರಿಸಲಾಗಿತ್ತು. ಸರ್ಕಾರ ಈಗಾಗಲೇ ₹ 9,010 ಕೋಟಿ ಖರ್ಚು ಮಾಡಿದೆ. ಸದ್ಯದ ಅಂದಾಜು ಮೊತ್ತ ಇಮ್ಮಡಿಗಿಂತಲೂ ಹೆಚ್ಚು.

ಯೋಜನೆಯಂತೆ, ಆರಂಭದಲ್ಲಿ ಎಂಟು ಸ್ಥಳಗಳಲ್ಲಿ ಬ್ಯಾರೇಜ್‌ಗಳನ್ನು ನಿರ್ಮಿಸಿ ನೀರು ಹರಿಸಲಾಗುತ್ತದೆ. ಈ ಬ್ಯಾರೇಜ್‌ಗಳಿಂದ ಕಾಲುವೆಗಳ ಮೂಲಕ ಹಾಸನ ಜಿಲ್ಲೆಯ ಹರವನಹಳ್ಳಿ ಬಳಿಯ ವಿತರಣಾ ತೊಟ್ಟಿಗೆ, ಅಲ್ಲಿಂದ ಮುಂದಕ್ಕೆ ಗುರುತ್ವ ಕಾಲುವೆ ಮೂಲಕ ಭೈರಗೊಂಡ್ಲು ಜಲಾಶಯಕ್ಕೆ ನೀರನ್ನು ತಂದು, ಅಲ್ಲಿಂದ ತುಮಕೂರು, ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ ಮತ್ತು ಬೆಂಗಳೂರು ಗ್ರಾಮಾಂತರಕ್ಕೆ ನೀರು ಹರಿಸಲು ಉದ್ದೇಶಿಸಲಾಗಿದೆ. ಭೈರಗೊಂಡ್ಲು ಜಲಾಶಯ ನಿರ್ಮಾಣದಿಂದ ದೊಡ್ಡಬಳ್ಳಾಪುರ ತಾಲ್ಲೂಕಿನ ಲಕ್ಕೇನಹಳ್ಳಿ, ಗರುಡಗಲ್ಲು, ಕೊರಟಗೆರೆಯ ವೀರಸಾಗರ, ಲಕ್ಕಮುತ್ತನಹಳ್ಳಿ, ಬೆಲ್ಲದಹಳ್ಳಿ, ಸುಂಕದಹಳ್ಳಿ ಸೇರಿದಂತೆ ಒಟ್ಟು ಏಳು ಗ್ರಾಮಗಳು ಮುಳುಗಡೆ ಆಗಲಿವೆ. ಈ ಭಾಗದ ಜನರಿಗೆ ಪರಿಹಾರದ ಜತೆಗೆ ಪರ್ಯಾಯ ವ್ಯವಸ್ಥೆ ಕೂಡ ಮಾಡಿಕೊಡಬೇಕಿದೆ. ಯೋಜನೆ ಸಾಗುತ್ತಿರುವುದನ್ನು ಗಮನಿಸಿದರೆ ಪೂರ್ಣಗೊಳ್ಳಲು ಕೆಲವು ವರ್ಷಗಳೇ ಬೇಕಾಗಬಹುದು!

2 ದಶಕ ಕಳೆದರೂ ತಲುಪದ ನೀರು!

ತುಂಗಾ ಮೇಲ್ದಂಡೆ

• ಚಂದ್ರಹಾಸ ಹಿರೇಮಳಲಿ

ಜಲಾಶಯದ ಸಾಮರ್ಥ್ಯಕ್ಕಿಂತ ಅಧಿಕ ಪ್ರದೇಶಕ್ಕೆ ನೀರು ಹರಿಸುವ ಯೋಜನೆ ರೂಪಿಸಿದ ಪರಿಣಾಮ ಯಾವ ಭಾಗದ ರೈತರಿಗೂ ನ್ಯಾಯ ಒದಗಿಸಲು ಸಾಧ್ಯವಾಗಿಲ್ಲ. ಮಳೆಗಾಲದಲ್ಲಿ ಮಾತ್ರ ನೀರು ಹರಿಸುವುದು ಅವೈಜ್ಞಾನಿಕ.
ಜಿ.ಮಲ್ಲಿಕಾರ್ಜುನ್, ಅಚ್ಚುಕಟ್ಟು ರೈತ

ಶಿವಮೊಗ್ಗ: ಮಧ್ಯ ಕರ್ನಾಟಕದ ಬರಪೀಡಿತ ತಾಲ್ಲೂಕುಗಳಿಗೆ ನೀರು ಹರಿಸಲು ರೂಪಿಸಿದ ತುಂಗಾ ಮೇಲ್ದಂಡೆ ಯೋಜನೆ ಎರಡು ದಶಕಗಳು ಕಳೆದರೂ ನಿಗದಿತ ಅಚ್ಚುಕಟ್ಟು ಪ್ರದೇಶ ತಲುಪಲು ಸಾಧ್ಯವಾಗಿಲ್ಲ.


ಶಿವಮೊಗ್ಗ, ಹೊನ್ನಾಳಿ, ಹಿರೇಕೆರೂರು, ರಟ್ಟೀಹಳ್ಳಿ, ಹಾವೇರಿ, ರಾಣೆಬೆನ್ನೂರು ತಾಲ್ಲೂಕುಗಳಿಗೆ ತುಂಗಾ ನೀರು ಹರಿಸಲು 2000–2001ರಲ್ಲಿ ಮೇಲ್ದಂಡೆ ಯೋಜನೆ ರೂಪಿಸಲಾಗಿತ್ತು. ತುಂಗಾ ನದಿಗೆ ಹಿಂದೆ ಇದ್ದ ಚೆಕ್ ಡ್ಯಾಂ ಸ್ಥಳದಲ್ಲೇ ಅಣೆಕಟ್ಟೆ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಲಾಗಿತ್ತು. ಅಣೆಕಟ್ಟೆ ನಿರ್ಮಾಣ ನಿಗದಿಯಂತೆ 2005–06ನೇ ಸಾಲಿನಲ್ಲಿ ಪೂರ್ಣಗೊಂಡಿತ್ತು. ಆದರೆ, ಅಚ್ಚುಕಟ್ಟು ಪ್ರದೇಶಗಳಿಗೆ ನೀರು ಹರಿಸಲು ಅಗತ್ಯವಿದ್ದ ಕಾಲುವೆಗಳ ನಿರ್ಮಾಣ ಕಾರ್ಯ ಕುಂಟುತ್ತಾ ಸಾಗಿತ್ತು. ಮೊದಲ ಹಂತದಲ್ಲಿ 102 ಕಿ.ಮೀ, ಎರಡನೇ ಹಂತದಲ್ಲಿ 210 ಕಿ.ಮೀ. ಉದ್ದದ ಕಾಲುವೆ ನಿರ್ಮಾಣ ಮಾಡಲು ಹಲವು ವರ್ಷಗಳು ಬೇಕಾಯಿತು. ಮೊದಲ ಬಾರಿ 2011ರಲ್ಲಿ ಕಾಲುವೆಗಳಿಗೆ ನೀರು ಹರಿಸಲಾಯಿತಾದರೂ ಕೊನೆಯ ಭಾಗಕ್ಕೆ ನೀರು ತಲುಪಿಸಲು ಇಂದಿಗೂ ಸಾಧ್ಯವಾಗಿಲ್ಲ.

‘ರೈಲ್ವೆ ಕ್ರಾಸಿಂಗ್, ಹೆದ್ದಾರಿಗಳನ್ನು ದಾಟಿಸುವ ಸವಾಲು, ಸಂಬಂಧಿಸಿದ ಇಲಾಖೆಗಳಿಂದ ಅನುಮತಿ ಸಿಗುವುದು ವಿಳಂಬವಾದ ಕಾರಣ ಯೋಜನೆಯೂ ವಿಳಂಬವಾಯಿತು’ ಎನ್ನುತ್ತಾರೆ ತುಂಗಾ ಮೇಲ್ದಂಡೆ ಎಂಜಿನಿಯರ್ ವೀರೇಶ್.

ನಾಲ್ಕು ತಿಂಗಳಷ್ಟೇ ನೀರು: ಯೋಜನೆಯಲ್ಲಿ 80,494 ಹೆಕ್ಟೇರ್‌ಗೆ ನೀರು ಹರಿಸಲು ನಿರ್ಧರಿಸಲಾಗಿತ್ತು. ಸದ್ಯಕ್ಕೆ 60,800 ಹೆಕ್ಟೇರ್ ಪ್ರದೇಶಕ್ಕೆ ನೀರು ಹರಿಸಲಾಗುತ್ತಿದೆ. ಇನ್ನೂ ಸುಮಾರು 20 ಸಾವಿರ ಹೆಕ್ಟೇರ್‌ಗೆ ನೀರು ಹರಿಸಲು ಸಾಧ್ಯವಾಗಿಲ್ಲ. ಅಚ್ಚುಕಟ್ಟು ಪ್ರದೇಶಗಳಿಗೆ ನೀರು ಹರಿಸುವುದು ಜುಲೈನಿಂದ ಅಕ್ಟೋಬರ್‌ವರೆಗೆ ನಾಲ್ಕು ತಿಂಗಳು ಮಾತ್ರ. ಜಲಾಶಯದ ಸಂಗ್ರಹಣ ಸಾಮರ್ಥ್ಯ ಇರುವುದು 3.24 ಟಿಎಂಸಿ ಅಡಿ. ಯೋಜನೆ ರೂಪಿಸಿರುವುದು 12.24 ಟಿಎಂಸಿ ಅಡಿ. ಹಾಗಾಗಿ ಯೋಜನೆಗೆ ಅಗತ್ಯವಾದ ನೀರು ಲಭ್ಯವಾಗುವುದು ಮಳೆಗಾಲದಲ್ಲಷ್ಟೆ. ನೀರು ಸಂಗ್ರಹಣಾ ಸಾಮರ್ಥ್ಯಕ್ಕಿಂತ ನಾಲ್ಕುಪಟ್ಟು ಅಧಿಕ ಬಳಕೆಯ ಅವೈಜ್ಞಾನಿಕ ಯೋಜನೆ ಪರಿಣಾಮ ಕೊನೆಯ ಭಾಗಕ್ಕೆ ನೀರಾವರಿ ಇಂದಿಗೂ ಮರೀಚಿಕೆಯಾಗಿದೆ.

ಮೇಕೆದಾಟು ಯೋಜನೆಗೆ ಆರಂಭದಲ್ಲೇ ಅಡ್ಡಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: ರಾಮನಗರ ಜಿಲ್ಲೆಯ ಮೇಕೆದಾಟು ಬಳಿ ಕಾವೇರಿ ನದಿಗೆ ಅಡ್ಡಲಾಗಿ ಸಮಾನಾಂತರ ಜಲಾಶಯವೊಂದನ್ನು ನಿರ್ಮಿಸಿ 67.14 ಟಿಎಂಸಿ ಅಡಿ ನೀರು ಸಂಗ್ರಹಿಸುವ ಮತ್ತು 400 ಮೆಗಾವಾಟ್ ವಿದ್ಯುತ್ ಉತ್ಪಾದಿಸುವ ಯೋಜನೆಗೆ ಆರಂಭದಿಂದಲೂ ವಿಘ್ನಗಳು ಕಾಡುತ್ತಿವೆ.

1996–97ರಲ್ಲಿ ಕರ್ನಾಟಕ ವಿದ್ಯುತ್ ನಿಗಮದ ಮೂಲಕ ಶಿವನಸಮುದ್ರ ಬಳಿ ಈ ಯೋಜನೆ ಕೈಗೆತ್ತಿಕೊಳ್ಳಲು ನಿರ್ಧರಿಸಲಾಗಿತ್ತು. 2007ರಲ್ಲಿ ಕಾವೇರಿ ಜಲ ನ್ಯಾಯಾಧಿಕರಣದ ಐತೀರ್ಪು ಪ್ರಕಟವಾಯಿತು. 2013ರ ಫೆಬ್ರುವರಿಯಲ್ಲಿ ಐತೀರ್ಪನ್ನು ಅಧಿಸೂಚನೆಯಲ್ಲಿ ಪ್ರಕಟಿಸಲಾಯಿತು. ಆ ಬಳಿಕ ಜಲ ಸಂಪನ್ಮೂಲ ಇಲಾಖೆಯ ಮೂಲಕ ಮೇಕೆದಾಟು ಸಮಾನಾಂತರ ಜಲಾಶಯ ನಿರ್ಮಾಣದ ಯೋಜನೆ ಕೈಗೆತ್ತಿಕೊಳ್ಳಲು ಪ್ರಕ್ರಿಯೆ ಆರಂಭಿಸಲಾಯಿತು.

ಬೆಂಗಳೂರು ಸೇರಿದಂತೆ ಸುತ್ತಲಿನ ಜಿಲ್ಲೆಗಳಿಗೆ ಕುಡಿಯುವ ನೀರು ಪೂರೈಸುವ, ಸಂಕಷ್ಟದ ದಿನಗಳಲ್ಲಿ ತಮಿಳುನಾಡಿಗೆ ಹರಿಸಲು ಬೇಕಾದ ನೀರನ್ನು ಸಂಗ್ರಹಿಸುವ ಉದ್ದೇಶ ಈ ಯೋಜನೆಯ ಹಿಂದಿದೆ. ಆರಂಭದಲ್ಲಿ ₹ 5,912 ಕೋಟಿ ವೆಚ್ಚದಲ್ಲಿ ಯೋಜನೆ ರೂಪಿಸಲಾಗಿತ್ತು. ಈಗ ಪರಿಷ್ಕೃತ ಯೋಜನಾ ವೆಚ್ಚ ₹ 9,000 ಕೋಟಿ ತಲುಪಿದೆ.

ಈ ಯೋಜನೆಗೆ ಹೆಚ್ಚು ಕಂದಾಯ ಜಮೀನು ಮುಳುಗಡೆ ಆಗುವುದಿಲ್ಲ. ಹೀಗಾಗಿ ಭೂಸ್ವಾಧೀನ, ಪರಿಹಾರ ಮತ್ತು ಪುನರ್ವಸತಿ ವೆಚ್ಚ ಕಡಿಮೆ ಇರಲಿದೆ. ಆದರೆ, ದೊಡ್ಡ ಪ್ರಮಾಣದ ಅರಣ್ಯ ಜಮೀನು ಬಳಕೆಯಾಗುವುದರಿಂದ ಪರಿಸರ ಇಲಾಖೆಯ ಒಪ್ಪಿಗೆ ಪಡೆಯುವುದು ಸವಾಲಿನ ಕೆಲಸವಾಗಿದೆ.

ರಾಜ್ಯದ ಈ ಯೋಜನೆಯನ್ನು ನೆರೆಯ ತಮಿಳುನಾಡು ಸರ್ಕಾರ ವಿರೋಧಿಸುತ್ತಿದೆ. 2017ರಲ್ಲೇ ಕೇಂದ್ರ ಜಲ ಆಯೋಗಕ್ಕೆ ವಿಸ್ತೃತ ಯೋಜನಾ ವರದಿ(ಡಿಪಿಆರ್) ಸಲ್ಲಿಸಲಾಗಿತ್ತು. 2019ರಲ್ಲಿ ಪರಿಷ್ಕೃತ ಡಿಪಿಆರ್ ಸಲ್ಲಿಸಲಾಗಿದೆ. ಡಿಪಿಆರ್ ಈಗ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಮುಂದಿದೆ. 2019ರ ಏಪ್ರಿಲ್ 25ರಿಂದ ಐದು ಬಾರಿ ಪ್ರಾಧಿಕಾರದ ಸಭೆಯ ಮುಂದೆ ಬಂದಿದ್ದರೂ ಚರ್ಚೆಯಾಗದೇ ಮುಂದೂಡಲಾಗಿದೆ. ಇದರಿಂದಾಗಿ ರಾಜ್ಯದ ಈ ಯೋಜನೆಗೆ ಅಡಿಗಡಿಗೂ ಅಡ್ಡಿಗಳು ಕಾಡುತ್ತಿವೆ.

ಸಮಾನಾಂತರ ಜಲಾಶಯ ಎಂಬ ಕನ್ನಡಿಯೊಳಗಿನ ಗಂಟು

ಕೊಪ್ಪಳ: ಕೊಪ್ಪಳ, ರಾಯಚೂರು, ಅವಿಭಜಿತ ಬಳ್ಳಾರಿ ಜಿಲ್ಲೆಗಳ ಜೀವನಾಡಿಯಾಗಿರುವ ತುಂಗಭದ್ರಾ ಜಲಾಶಯ ನಿರ್ಮಾಣಗೊಂಡು ಏಳು ದಶಕ ಸಮೀಪಿಸುತ್ತಿದೆ. ಹೂಳು ತುಂಬಿಕೊಂಡಿರುವುದರಿಂದ ಕರ್ನಾಟಕದ ಪಾಲಿನ ಪೂರ್ತಿ ನೀರು ಲಭ್ಯವಾಗುತ್ತಿಲ್ಲ.

ಕನಕಗಿರಿ ತಾಲ್ಲೂಕಿನ ನವಲಿ ಬಳಿ ಸಮಾನಾಂತರ ಜಲಾಶಯ ನಿರ್ಮಾಣಕ್ಕೆ ಸರ್ಕಾರ ಅನುಮೋದನೆ ನೀಡಿ ಹಲವು ವರ್ಷವಾದರೂ ಇನ್ನೂ ಯೋಜನಾ ವರದಿಯೇ ಸಿದ್ಧಗೊಂಡಿಲ್ಲ.

135 ಟಿಎಂಸಿ ಅಡಿ ಸಾಮರ್ಥ್ಯದ ತುಂಗಭದ್ರಾ ಜಲಾಶಯದಲ್ಲಿ 35 ಟಿಎಂಸಿ ಅಡಿಗೂ ಹೆಚ್ಚು ಪ್ರಮಾಣದ ಹೂಳು ತುಂಬಿದೆ. ಇದನ್ನು ತೆಗೆಯುವುದು ಬಹುವೆಚ್ಚದಾಯಕ ಎಂಬ ಕಾರಣಕ್ಕೆ 35 ಟಿಎಂಸಿ ಅಡಿ ಸಾಮರ್ಥ್ಯದ ಸಮಾನಾಂತರ ಜಲಾಶಯ ನಿರ್ಮಿಸಲು ನಿರ್ಧರಿಸಲಾಗಿದೆ.

ಜಲಾಶಯ ನಿರ್ಮಾಣಕ್ಕೆ ವಿಸ್ತೃತ ಯೋಜನಾ ವರದಿ (ಡಿಪಿಆರ್) ತಯಾರಿಸಲು ಕಳೆದ ಬಜೆಟ್‌ನಲ್ಲಿ ₹14.30 ಕೋಟಿ ಮೀಸಲಿರಿಸಿದ್ದು, ₹13.30 ಕೋಟಿ ಬಿಡುಗಡೆ ಮಾಡಲಾಗಿದೆ. ಸಿದ್ದರಾಮಯ್ಯ ಸರ್ಕಾರ ಇದ್ದಾಗ ಈ ಜಲಾಶಯದ ಯೋಜನಾ ವೆಚ್ಚ ₹5,800 ಕೋಟಿ ಎಂದು ಅಂದಾಜಿಸಲಾಗಿತ್ತು. ಈಗ ಯೋಜನಾ ವೆಚ್ಚ ₹12 ಸಾವಿರ ಕೋಟಿಗೆ ತಲುಪುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ಹೇಳುತ್ತಾರೆ.

ಮಾತಷ್ಟೇ ಜೋರು: ಹರಿಯದ ನೀರು

ಒಂದನೇ ಪುಟದಿಂದ

ಆರಂಭಿಕ ಹಂತದಲ್ಲೇ ಎಚ್ಚರಿಕೆ ವಹಿಸದೇ ಭಾರಿ ಮೊತ್ತದ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡಿದ್ದರಿಂದಾಗಿ ಇವು ಬೊಕ್ಕಸಕ್ಕೆ ಹೊರೆಯಾಗಿವೆ. ದಶಕಗಳ ವಿಳಂಬವಾಗಿದ್ದರಿಂದಾಗಿ, ಚಾಲ್ತಿಯಲ್ಲಿರುವ, ಅನುಮತಿ ಸಿಕ್ಕಿರುವ ಹಾಗೂ ಸಿಗಬೇಕಾಗಿರುವ ಹೊಸ ಯೋಜನೆಗಳು ಸೇರಿ ಎಲ್ಲಾ ನೀರಾವರಿ ಮತ್ತು ಕುಡಿಯುವ ನೀರಿನ ಯೋಜನೆಗಳನ್ನು ಪೂರ್ಣಗೊಳಿಸಲು ಸುಮಾರು ₹2.50 ಲಕ್ಷ ಕೋಟಿಯ ಅಗತ್ಯವಿದೆ ಎಂದು ಅಂದಾಜು ಮಾಡಲಾಗಿದೆ. ಆದರೆ ಕಳೆದ 10 ವರ್ಷಗಳಲ್ಲಿ ರಾಜ್ಯ ಸರ್ಕಾರ ವಿವಿಧ ನೀರಾವರಿ ಯೋಜನೆಗಳ ಮೇಲೆ ಮಾಡಿರುವ ವೆಚ್ಚ ₹87 ಸಾವಿರ ಕೋಟಿ. ಇದರಿಂದ 4.47 ಲಕ್ಷ ಹೆಕ್ಟೇರ್ ಪ್ರದೇಶವನ್ನು ನೀರಾವರಿಗೆ ಒಳಪಡಿಸಲಾಗಿದೆ.

ಅಲ್ಲದೇ, ಚಾಲ್ತಿಯಲ್ಲಿರುವ 245 ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಲು ₹1.12 ಲಕ್ಷ ಕೋಟಿ ಬೇಕಾಗಬಹುದು. ಆಲಮಟ್ಟಿ ಅಣೆಕಟ್ಟೆ ಎತ್ತರವನ್ನು 519 ಅಡಿಗಳಿಂದ 524 ಅಡಿಗಳಿಗೆ ಎತ್ತರಿಸುವುದರಿಂದ 20 ಗ್ರಾಮಗಳ ಮುಳುಗಡೆ ಆಗುತ್ತವೆ. ಅಷ್ಟೂ ಗ್ರಾಮಗಳ ಸ್ಥಳಾಂತರ, ಪುನರ್‌ವಸತಿಗೆ ₹50 ಸಾವಿರ ಕೋಟಿ ಬೇಕಾಗುತ್ತದೆ. ಈ ವ್ಯಾಪ್ತಿಗೆ ಬರುವ ಏತ ನೀರಾವರಿ, ಕೆರೆ ತುಂಬಿಸುವ ಯೋಜನೆಗಳಿಗಾಗಿ ₹15 ಸಾವಿರ ಕೋಟಿ ಬೇಕಾಗುತ್ತದೆ ಎನ್ನುತ್ತಾರೆ ಜಲ ಸಂಪನ್ಮೂಲ ಇಲಾಖೆ ಅಧಿಕಾರಿಗಳು.

ನಿರ್ಮಾಣ ಸಾಮಗ್ರಿಗಳ ದರ ವಾರ್ಷಿಕ ಸರಾಸರಿ ಶೇ 8 ರಿಂದ ಶೇ 10 ರಷ್ಟು ಏರಿಕೆ ಆಗುತ್ತದೆ. ಭೂಸ್ವಾಧೀನವೂ ಅಷ್ಟು ಸುಲಭದ ಕೆಲಸವಲ್ಲ. ಪರಿಹಾರಕ್ಕೂ ಭಾರಿ ಪ್ರಮಾಣದ ಮೊತ್ತ ಬೇಕಾಗುತ್ತದೆ. ನೀರಾವರಿ ಯೋಜನೆಗಳನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಐದು ವರ್ಷಗಳವರೆಗೆ ಪ್ರತಿವರ್ಷಕ್ಕೆ ₹25,000 ಕೋಟಿಯಂತೆ ಅನುದಾನ ನೀಡಬೇಕಾಗುತ್ತದೆ ಎನ್ನುತ್ತಾರೆ ಅವರು.

ನೀರಾವರಿ ಯೋಜನೆಗಳ ಅಂದಾಜು ವೆಚ್ಚ ಪರಿಷ್ಕರಣೆ ಮಾಡುವುದು ಹೊಸತೇನಲ್ಲ. ಅತ್ಯಂತ ಹಳೆಯ ನೀರಾವರಿ ಯೋಜನೆಗಳಲ್ಲಿ ಒಂದಾಗ ಹೇಮಾವತಿಯನ್ನು 1967 ರಲ್ಲಿ ಆರಂಭಿಸಲಾಯಿತು. ಆಗ ಅದರ ಮೂಲ ಅಂದಾಜು ₹16.30 ಕೋಟಿ ಇತ್ತು. ಯೋಜನೆ ಪೂರ್ಣಗೊಂಡಾಗ ₹3,877 ಕೋಟಿಗೆ ಏರಿತ್ತು. ಆದರೆ, ಗುಣಮಟ್ಟದ ಕಾಮಗಾರಿ, ಕಾಲಮಿತಿಯಲ್ಲಿ ಯೋಜನೆ ಪೂರ್ಣಗೊಳಿಸುವುದೂ ಸವಾಲಿನದಾಗಿದೆ. ರಾಜ್ಯದಲ್ಲಿ ಉದ್ದೇಶಿತ 40.66 ಲಕ್ಷ ಹೆಕ್ಟೇರ್ ಪ್ರದೇಶದ ಪೈಕಿ 29.19 ಲಕ್ಷ ಹೆಕ್ಟೇರ್ ಪ್ರದೇಶವನ್ನು ನೀರಾವರಿಗೆ ಒಳಪಡಿಸಲಾಗಿದೆ. ಕೃಷ್ಣಾ ಜಲ ವಿವಾದಕ್ಕೆ ಸಂಬಂಧಿಸಿದಂತೆ ನ್ಯಾಯಮೂರ್ತಿ ಬ್ರಿಜೇಶ್ ಕುಮಾರ್ ನೇತೃತ್ವದ ಎರಡನೇ ನ್ಯಾಯಮಂಡಳಿ ನೀಡಿದ ನೀರಿನ ಅಂತಿಮ ಹಂಚಿಕೆ ಕುರಿತ ಆದೇಶದ ಅಧಿಸೂಚನೆಯನ್ನು ಕೇಂದ್ರ ಸರ್ಕಾರ ತಕ್ಷಣವೇ ಹೊರಡಿಸಿದರೆ, ಕೃಷ್ಣಾ ಮೇಲ್ದಂಡೆ ಯೋಜನೆಯ ಮೂರನೇ ಹಂತವನ್ನು ಅನುಷ್ಠಾನಗೊಳಿಸಲು ಸಾಧ್ಯ. ಇದರಿಂದ 130 ಟಿಎಂಸಿ ಅಡಿ ನೀರಿನ ಬಳಕೆ ಮಾಡಿ 5.3 ಲಕ್ಷ ಹೆಕ್ಟೇರ್ ಭೂಮಿಯನ್ನು ನೀರಾವರಿಗೆ ಒಳಪಡಿಸಬಹುದು. ಈ ಯೋಜನೆಗಾಗಿ ಈವರೆಗೆ ರಾಜ್ಯ ಸರ್ಕಾರ ₹12,431.66 ಕೋಟಿ ವೆಚ್ಚ ಮಾಡಿದೆ.

ಇಷ್ಟೆಲ್ಲಾ ಖರ್ಚು ಮಾಡಿದ ಮೇಲೂ ಉಪನಾಲೆಗಳ ಕೊನೆಯಲ್ಲಿರುವ ರೈತನ ಜಮೀನಿಗೆ ನೀರು ಸಿಗುವ ಖಾತರಿ ಇಲ್ಲ. ಅನೇಕ ಯೋಜನೆಗಳು ಮುಗಿದು ಎರಡು ದಶಕಗಳು ಕಳೆದರೂ ಉಪನಾಲೆಯ ಅಂತ್ಯದವರೆಗೂ ನೀರೇ ತಲುಪಿಲ್ಲ. ನಾಲೆಗಳ ಆರಂಭಿಕ ಹಂತದ ರೈತರಿಗೆ ನೀರಿನ ಸಿಂಹಪಾಲು ಸಿಕ್ಕಿರುವುದು ನೀರಾವರಿ ಯೋಜನೆಗಳನ್ನು ಪರಾಮರ್ಶಿಸಿದರೆ ಸ್ಪಷ್ಟವಾಗುತ್ತದೆ. ನೀರಾವರಿ ಶ್ರೀಮಂತ ಜಿಲ್ಲೆಗಳಲ್ಲಿ ನೆರೆಯ ರಾಜ್ಯಗಳ ಕೆಲವು ವ್ಯಕ್ತಿಗಳು ಭೂಮಿ ಗುತ್ತಿಗೆ ಪಡೆದು ಬೆಳೆಯನ್ನು ಬೆಳೆದು, ನೀರಾವರಿಯ ಲಾಭ ಪಡೆಯುತ್ತಿರುವುದೂ ಗುಟ್ಟಾಗಿ ಉಳಿದಿಲ್ಲ.

ವಾರಾಹಿಗೆ 41 ವರ್ಷ: ಬಲದಂಡೆ ಇನ್ನೂ ಬರಡು

• ವಿ.ಎಸ್.ಸುಬ್ರಹ್ಮಣ್ಯ

ಬೆಂಗಳೂರು: ಉಡುಪಿ ಜಿಲ್ಲೆಯ ಕುಂದಾಪುರ ಮತ್ತು ಬೈಂದೂರು ತಾಲ್ಲೂಕುಗಳ 15,702 ಹೆಕ್ಟೇರ್ ವಿಸ್ತೀರ್ಣದ ಕೃಷಿ ಜಮೀನುಗಳಿಗೆ ನೀರು ಪೂರೈಸುವ ಉದ್ದೇಶದಿಂದ 1980ರಲ್ಲಿ ಆರಂಭವಾಗಿದ್ದ ವಾರಾಹಿ ನೀರಾವರಿ ಯೋಜನೆ 41 ವರ್ಷಗಳಿಂದ ಕುಂಟುತ್ತಲೇ ಸಾಗಿದೆ.

₹ 9.43 ಕೋಟಿ ವೆಚ್ಚದ ಯೋಜನೆಯ ಕಾಮಗಾರಿಗೆ 1980ರಲ್ಲಿ ಭೂಮಿಪೂಜೆ ನೆರವೇರಿಸಲಾಗಿತ್ತು. ಈವರೆಗೆ ₹ 1,200 ಕೋಟಿಗೂ ಹೆಚ್ಚು ವೆಚ್ಚ ಮಾಡಿದ್ದು, ಎಡದಂಡೆ ಕಾಲುವೆ ನಿರ್ಮಾಣ ಶೇಕಡ 85ರಷ್ಟು ಪೂರ್ಣಗೊಂಡಿದೆ. ಬಲದಂಡೆ ಕಾಲುವೆಯ ನಿರ್ಮಾಣ ಕಾಮಗಾರಿಯಲ್ಲಿ ಶೇ 85ರಷ್ಟು ಬಾಕಿ ಉಳಿದಿದೆ. 2004ರವರೆಗೂ ಈ ಕಾಮಗಾರಿಗೆ ₹ 37 ಕೋಟಿ ವೆಚ್ಚವಾಗಿತ್ತು. ನಂತರ ಉಡುಪಿ ಜಿಲ್ಲೆಯ ಶಾಸಕರ ಒತ್ತಡಕ್ಕೆ ಮಣಿದ ಸರ್ಕಾರ ಯೋಜನೆಯನ್ನು ಕರ್ನಾಟಕ ನೀರಾವರಿ ನಿಗಮಕ್ಕೆ ವಹಿಸಿತ್ತು. 2019ರವರೆಗೆ ₹ 650 ಕೋಟಿ ವೆಚ್ಚ ಮಾಡಿದ್ದರೆ, 2021ರ ಅಂತ್ಯಕ್ಕೆ ₹ 1,200 ಕೋಟಿ ವೆಚ್ಚವಾಗಿದೆ.

ಈಗ ಕೃಷಿ ಜಮೀನಿಗೆ ನೀರು ಒದಗಿಸುವುದರ ಜತೆಯಲ್ಲೇ ಉಡುಪಿ ನಗರಸಭೆಯೂ ಸೇರಿದಂತೆ ಕೆಲವು ನಗರ ಪ್ರದೇಶಗಳಿಗೆ ಕುಡಿಯುವ ನೀರು ಪೂರೈಸುವ ಕಾಮಗಾರಿಗಳೂ ಯೋಜನೆಯಲ್ಲಿ ಸೇರಿಕೊಂಡಿವೆ. 2016ರಲ್ಲಿ ವಿಧಾನ ಪರಿಷತ್ ಸದಸ್ಯರಾಗಿದ್ದ ಕೆ. ಪ್ರತಾಪಚಂದ್ರ ಶೆಟ್ಟಿ ನೇತೃತ್ವದಲ್ಲಿ ಧರಣಿ ಆರಂಭಿಸಿದ್ದ ಉಡುಪಿ ಜಿಲ್ಲಾ ರೈತ ಸಂಘದ ಮುಖಂಡರು, ವಾರಾಹಿ ಎಡದಂಡೆ ಕಾಲುವೆಯಲ್ಲಿ ನೀರು ಹರಿಸುವಂತೆ ಪಟ್ಟು ಹಿಡಿದಿದ್ದರು. ಆಗಿನ ಜಲ ಸಂಪನ್ಮೂಲ ಸಚಿವ ಎಂ.ಬಿ. ಪಾಟೀಲ ಸ್ಥಳಕ್ಕೆ ಭೇಟಿನೀಡಿ ಮನವೊಲಿಕೆಗೆ ನಡೆಸಿದ್ದ ಪ್ರಯತ್ನ ವಿಫಲವಾಗಿತ್ತು. ಬಳಿಕ ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಸ್ಥಳಕ್ಕೆ ಭೇಟಿ ನೀಡಿ, ಎರಡು ತಿಂಗಳೊಳಗೆ ವಾರಾಹಿ ಎಡದಂಡೆ ಕಾಲುವೆಯಲ್ಲಿ ನೀರು ಹರಿಸುವ ಭರವಸೆ ನೀಡಿದ್ದರು. ಅದನ್ನು ಒಪ್ಪಿದ ರೈತರು ಧರಣಿ ಅಂತ್ಯಗೊಳಿಸಿದ್ದರು.

ಸಿದ್ದರಾಮಯ್ಯ ಅವರ ಭರವಸೆಯಂತೆ ಕೆಲವು ತಿಂಗಳ ಬಳಿಕ ವಾರಾಹಿ ಎಡದಂಡೆ ಕಾಲುವೆಯಲ್ಲಿ ನೀರು ಹರಿಸಲಾಯಿತು. ಆದರೆ, ಬಲದಂಡೆ ಕಾಲುವೆಯ ಕಾಮಗಾರಿ ಮಾತ್ರ ಇನ್ನೂ ಚುರುಕು ಪಡೆದಿಲ್ಲ. ಇದರಿಂದಾಗಿ ವಾರಾಹಿ ಯೋಜನೆಯ ಬಲದಂಡೆ ಭಾಗದ ರೈತರು ನೀರಿಗಾಗಿ ಕಾಯುವುದು ನಾಲ್ಕು ದಶಕಗಳಾದರೂ ಮುಂದುವರಿದಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಶೇ 60ರಷ್ಟು ಶಾಸಕರ ವಲಸೆ ಜನಾದೇಶದ ಬಗೆಗಿನ ಅಗೌರವದ ಪ್ರತಿಫಲನ: ಎಡಿಆರ್ ವರದಿ

ಗೋವಾ ಶಾಸಕರ ದಾಖಲೆ ಪಕ್ಷಾಂತರ

ಪಣಜಿ (ಪಿಟಿಐ): ಕಳೆದ ಐದು ವರ್ಷಗಳಲ್ಲಿ ಗೋವಾ ವಿಧಾನಸಭೆಯ 24 ಶಾಸಕರು ಪಕ್ಷ ಬದಲಾಯಿಸಿದ್ದಾರೆ. 40 ಶಾಸಕರಿರುವ ಗೋವಾ ವಿಧಾನಸಭೆಯಲ್ಲಿ ಪಕ್ಷ ಬದಲಾಯಿಸಿದವರ ಪ್ರಮಾಣ ಶೇ 60ರಷ್ಟಾಗುತ್ತದೆ ಎಂದು ಅಸೋಸಿಯೇಷನ್ ಆಫ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ವರದಿಯು ಹೇಳಿದೆ.

ಈ ಮಟ್ಟದ ಪಕ್ಷಾಂತರವು ಭಾರತದ ಪ್ರಜಾಪ್ರಭುತ್ವದಲ್ಲಿಯೇ ದಾಖಲೆ ಎಂದು ಎಡಿಆರ್ ವರದಿ ತಿಳಿಸಿದೆ.

'ಜನಾದೇಶದ ಬಗ್ಗೆ ಇರುವ ಪೂರ್ಣ ಅಗೌರವದ ಪ್ರತಿಫಲನ ಇದು. ನೈತಿಕತೆ ಮತ್ತು ಶಿಸ್ತಿನ ಬಗ್ಗೆ ಇರುವ ಅಸಡ್ಡೆ ಇದು. ಜತೆಗೆ, ಅನಿಯಂತ್ರಿತ ದುರಾಸೆಯ ಅತ್ಯಂತ ಕೆಟ್ಟ ರೂಪ ಇದು' ಎಂದು ವರದಿಯು ಈ ಪಕ್ಷಾಂತರವನ್ನು ಬಣ್ಣಿಸಿದೆ. 2017ರಲ್ಲಿ ನಡೆದ ವಿಧಾನಸಭೆ ಚುನಾವಣೆಗೆ ಮೊದಲೇ ಕಾಂಗ್ರೆಸ್‌ಗೆ ರಾಜೀನಾಮೆ ಕೊಟ್ಟು ಬಿಜೆಪಿ ಸೇರಿದ್ದ ಶಾಸಕರಾದ ವಿಶ್ವಜಿತ್ ರಾಣೆ, ಸುಭಾಷ್ ಶಿರೋಡ್ಕರ್ ಮತ್ತು ದಯಾನಂದ ಸೋಪ್ತೆ ಅವರನ್ನು 24 ಶಾಸಕರ ಪಟ್ಟಿಗೆ ಸೇರಿಸಿಲ್ಲ ಎಂದು ವರದಿಯಲ್ಲಿ ಹೇಳಲಾಗಿದೆ.

ಕಾಂಗ್ರೆಸ್ ಶಾಸಕರು 2019ರಲ್ಲಿ ಬಿಜೆಪಿಯತ್ತ ವಲಸೆ ಹೋಗಿದ್ದರು. ಹೀಗೆ ಹೋದವರಲ್ಲಿ ಆಗ ವಿರೋಧ ಪಕ್ಷದ ನಾಯಕರಾಗಿದ್ದ ಚಂದ್ರಕಾಂತ್ ಕವಲೇಕರ್ ಅವರೂ ಇದ್ದರು. ಮಹಾರಾಷ್ಟ್ರವಾದಿ ಗೋಮಾಂತಕ ಪಕ್ಷದ ಶಾಸಕರಾಗಿದ್ದ ದೀಪಕ್ ಪೌಸ್ಕರ್ ಮತ್ತು ಮನೋಹರ್ ಅಜಗಾಂವ್ಕರ್ ಅವರೂ ಅದೇ ಅವಧಿಯಲ್ಲಿ ಬಿಜೆಪಿ ಸೇರಿದ್ದರು. ಗೋವಾ ಫಾರ್ವರ್ಡ್ ಪಾರ್ಟಿಯ (ಜಿಎಫ್‌ಪಿ) ಜಯೇಸ್ ಸಲಗಾಂವ್ಕರ್ ಅವರೂ ಬಿಜೆಪಿಗೆ ಸೇರ್ಪಡೆಯಾಗಿದ್ದರು.

ಮಾಜಿ ಮುಖ್ಯಮಂತ್ರಿ ಮತ್ತು ಕಾಂಗ್ರೆಸ್ ಶಾಸಕರಾಗಿದ್ದ ರವಿ ನಾಯಕ್ ಅವರು ಇತ್ತೀಚೆಗೆ ಬಿಜೆಪಿ ಸೇರಿದ್ದಾರೆ. ಇನ್ನೊಬ್ಬ ಮಾಜಿ ಮುಖ್ಯಮಂತ್ರಿ ಮತ್ತು ಕಾಂಗ್ರೆಸ್ ಮುಖಂಡ ಲುಯಿಝಿನೊ ಫಲೇರೊ ಅವರು ತೃಣಮೂಲ ಕಾಂಗ್ರೆಸ್ (ಟಿಎಂಸಿ) ಸೇರಿದ್ದಾರೆ. ಈ ಬಾರಿಯ ಚುನಾವಣೆಯಲ್ಲಿ ಟಿಎಂಸಿ ಕೂಡ ಅದೃಷ್ಟ ಪರೀಕ್ಷೆಗೆ ಇಳಿದಿದೆ.

ಮಾಜಿ ಮುಖ್ಯಮಂತ್ರಿ ಮತ್ತು ಎನ್‌ಸಿಪಿಯಿಂದ ಗೆದ್ದಿದ್ದ ಚರ್ಚಿಲ್ ಅಲೆಮಾವೊ ಮತ್ತು ಕಾಂಗ್ರೆಸ್ ಶಾಸಕರಾಗಿದ್ದ ಅಲೆಕ್ಸೊ ರೆಜಿನಾಲ್ಡೊ ಲೌರೆಂಕೊ ಅವರು ಅವರು ಟಿಎಂಸಿಗೆ ಇತ್ತೀಚೆಗೆ ಸೇರ್ಪಡೆಯಾಗಿದ್ದಾರೆ. ಆದರೆ, ಲೌರೆಂಕೊ ಅವರು ಕೆಲ ದಿನಗಳಲ್ಲಿಯೇ ಟಿಎಂಸಿ ಬಿಟ್ಟು, ಕಾಂಗ್ರೆಸ್‌ಗೆ ಮರಳಿ ಸೇರ್ಪಡೆ ಆಗಲು ಬಯಸಿದ್ದಾರೆ. ಆದರೆ, ಅವರನ್ನು ಕಾಂಗ್ರೆಸ್‌ಗೆ ಸೇರಿಸಿಕೊಂಡಿಲ್ಲ. ಈ ಬಾರಿಯ ಚುನಾವಣೆಯಲ್ಲಿ ಪಕ್ಷೇತರರಾಗಿ ಸ್ಪರ್ಧಿಸಲು ಅವರು ನಿರ್ಧರಿಸಿದ್ದಾರೆ. ಕಾಂಗ್ರೆಸ್ ಬಿಟ್ಟು 2019ರಲ್ಲಿ ಬಿಜೆಪಿ ಸೇರಿದ್ದ ವಿಲ್ಫ್ರೆಡ್ ಡೇಸಾ ಅವರು ಬಿಜೆಪಿಗೆ ಈಗ ರಾಜೀನಾಮೆ ಕೊಟ್ಟಿದ್ದಾರೆ. ಅವರು ಕೂಡ ಪಕ್ಷೇತರರಾಗಿ ಸ್ಪರ್ಧಿಸಲಿದ್ದಾರೆ. ದೀಪಕ್ ಪೌಸ್ಕರ್ ಅವರೂ ಬಿಜೆಪಿ ತೊರೆದಿದ್ದಾರೆ.

ಪಕ್ಷೇತರರಾಗಿ ಗೆದ್ದಿದ್ದ ರೋಹನ್ ಖೌಂಟೆ ಮತ್ತು ಗೋವಿಂದ ಗೌಡೆ ಅವರು ಬಿಜೆಪಿ ಸೇರಿದ್ದಾರೆ. ಇನ್ನೊಬ್ಬ ಪಕ್ಷೇತರ ಶಾಸಕ ಪ್ರಸಾದ್ ಗಾಂವ್ಕರ್ ಅವರು ಕಾಂಗ್ರೆಸ್ ಪಕ್ಷಕ್ಕೆ ಹೋಗಿದ್ದಾರೆ. ಬಿಜೆಪಿ ಶಾಸಕರಾಗಿದ್ದ ಪ್ರವೀಣ್ ಝುಂತ್ಯೆ ಅವರು ಈಗ ಎಂಜಿಪಿ ಸೇರಿದ್ದರೆ, ಮೈಕೆಲ್ ಲೋಬೊ ಮತ್ತು ಜೋಸ್ ಲೂಯಿಸ್ ಕಾರ್ಲೊಸ್ ಅಲ್ಮೇಡಾ ಅವರು ಕಾಂಗ್ರೆಸ್ ಪಕ್ಷವನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಅಲೀನಾ ಸಲ್ಡಾನಾ ಅವರು ಎಎಪಿಗೆ ಸೇರಿದ್ದಾರೆ.

ಶಾಸಕರ ಪಕ್ಷಾಂತರ ಮತ್ತು ರಾಜೀನಾಮೆಯ ಬಳಿಕ ಗೋವಾ ವಿಧಾನಸಭೆಯಲ್ಲಿ ಕಾಂಗ್ರೆಸ್ ಬಲವು ಈಗ ಎರಡಕ್ಕೆ ಕುಗ್ಗಿದೆ. ಬಿಜೆಪಿ 27 ಶಾಸಕರನ್ನು ಹೊಂದಿದೆ. ಮಮತಾ ಬ್ಯಾನರ್ಜಿ ನೇತೃತ್ವದ ಟಿಎಂಸಿ ಮತ್ತು ಅರವಿಂದ ಕೇಜ್ರಿವಾಲ್ ನೇತೃತ್ವದ ಎಎಪಿ ಗೋವಾ ವಿಧಾನಸಭೆ ಚುನಾವಣೆಯಲ್ಲಿ ಬಿರುಸಿನ ಪ್ರಚಾರ ನಡೆಸುತ್ತಿದೆ. ಹಾಗಾಗಿ, ಗೋವಾದಲ್ಲಿ ಈ ಬಾರಿ ಬಹುಕೋನ ಸ್ಪರ್ಧೆ ಏರ್ಪಡುವ ಸಾಧ್ಯತೆ ಇದೆ. ಎಂಜಿಪಿ ಮತ್ತು ಟಿಎಂಸಿ ಹಾಗೂ ಕಾಂಗ್ರೆಸ್ ಮತ್ತು ಜಿಎಫ್‌ಪಿ ನಡುವೆ ಚುನಾವಣಾಪೂರ್ವ ಮೈತ್ರಿ ಏರ್ಪಟ್ಟಿದೆ.

2017ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು 17 ಕ್ಷೇತ್ರಗಳಲ್ಲಿ ಗೆದ್ದು ಅತಿ ದೊಡ್ಡ ಪಕ್ಷವಾಗಿ ಮೂಡಿ ಬಂದಿತ್ತು. ಸರ್ಕಾರ ರಚಿಸಲು ನಾಲ್ವರು ಶಾಸಕರ ಕೊರತೆ ಎದುರಾಗಿತ್ತು. 13 ಕ್ಷೇತ್ರಗಳಲ್ಲಿ ಗೆದ್ದಿದ್ದ ಬಿಜೆಪಿ ಎರಡನೇ ಸ್ಥಾನದಲ್ಲಿತ್ತು. ಆದರೆ, ಕೆಲವು ಪ್ರಾದೇಶಿಕ ಪಕ್ಷಗಳು ಮತ್ತು ಪಕ್ಷೇತರರ ಬೆಂಬಲದೊಂದಿಗೆ ಬಿಜೆಪಿ ಸರ್ಕಾರ ರಚಿಸಿತ್ತು.

ಬಿಜೆಪಿ ಪ್ರಣಾಳಿಕೆ ಸಮಿತಿ ಮುಖ್ಯಸ್ಥ ಪರ್ಸೇಕರ್ ರಾಜೀನಾಮೆ?

ಗೋವಾದ ಮಾಜಿ ಮುಖ್ಯಮಂತ್ರಿ ಮತ್ತು ಬಿಜೆಪಿಯ ಹಿರಿಯ ಮುಖಂಡ ಲಕ್ಷ್ಮಿಕಾಂತ್ ಪರ್ಸೇಕರ್ ಅವರು ಪಕ್ಷಕ್ಕೆ ರಾಜೀನಾಮೆ ನೀಡುವುದಾಗಿ ಶನಿವಾರ ಹೇಳಿದ್ದಾರೆ. ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಲು ಟಿಕೆಟ್ ನಿರಾಕರಿಸಿದ್ದರಿಂದಾಗಿ ಅವರು ಈ ನಿರ್ಧಾರಕ್ಕೆ ಬಂದಿದ್ದಾರೆ ಎನ್ನಲಾಗಿದೆ.

ಪರ್ಸೇಕರ್ ಅವರು ಬಿಜೆಪಿಯ ಪ್ರಣಾಳಿಕೆ ಸಮಿತಿಯ ಮುಖ್ಯಸ್ಥರಾಗಿದ್ದಾರೆ. ಪಕ್ಷದ ಪ್ರಮುಖರ ಸಮಿತಿಯಲ್ಲಿಯೂ ಅವರು ಸದಸ್ಯರು. 2002ರಿಂದ 2017ರ ಅವಧಿಯಲ್ಲಿ ಪರ್ಸೇಕರ್ ಅವರು ಪ್ರತಿನಿಧಿಸಿದ್ದ ಮಾಂಡರೆಮ್ ಕ್ಷೇತ್ರದಲ್ಲಿ ಈ ಬಾರಿ ಅವರಿಗೆ ಟಿಕೆಟ್ ನೀಡಿಲ್ಲ. 2017ರ ಚುನಾವಣೆಯಲ್ಲಿ ಅವರು ಕಾಂಗ್ರೆಸ್‌ನ ದಯಾನಂದ ಸೋಪ್ತೆ ವಿರುದ್ಧ ಸೋತಿದ್ದರು.

ಸೋಪ್ತೆ ಅವರು ಈಗ ಬಿಜೆಪಿಯಲ್ಲಿದ್ದಾರೆ. ಮಾಂಡರೆಮ್ ಕ್ಷೇತ್ರದಿಂದ ಸೋಪ್ತೆ ಅವರಿಗೆ ಬಿಜೆಪಿ ಟಿಕೆಟ್ ನೀಡಿದೆ.



ಮನೆ ಮನೆ ಪ್ರಚಾರ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಯ ಮನೆ ಮನೆ ಪ್ರಚಾರದಲ್ಲಿ ಭಾಗಿಯಾಗಿ ಬಿಜೆಪಿ ಅಭ್ಯರ್ಥಿಗಳ ಪರವಾಗಿ ಕೈರಾನಾದಲ್ಲಿ ಶನಿವಾರ ಪ್ರಚಾರ ನಡೆಸಿದರು. ಈ ವೇಳೆ ಹೆಚ್ಚಿನವರು ಮಾಸ್ಕ್ ಧರಿಸಿರಲಿಲ್ಲ ಮತ್ತು ಕೋವಿಡ್ ತಡೆ ನಿಯಮಗಳನ್ನು ಪಾಲಿಸಿರಲಿಲ್ಲ ಎಂಬ ಆರೋಪ ಕೇಳಿ ಬಂದಿದೆ – ಪಿಟಿಐ ಚಿತ್ರ

ಕರ್ಹಲ್‌ನಿಂದ ಅಖಿಲೇಶ್ ಸ್ಪರ್ಧೆ

ಲಖನೌ (ಪಿಟಿಐ): ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಅವರು ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಯಲ್ಲಿ ಮೈನ್‌ಪುರಿ ಜಿಲ್ಲೆಯಲ್ಲಿರುವ ಕರ್ಹಲ್ ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ. ಮೈನ್‌ಪುರಿ ಜಿಲ್ಲೆಯು ಅಖಿಲೇಶ್ ಕುಟುಂಬದ ಭದ್ರಕೋಟೆ. ಅಖಿಲೇಶ್ ಅವರ ತವರು ಗ್ರಾಮ ಸೈಫೈನಿಂದ ಕೆಲವೇ ಕಿಲೋಮೀಟರ್ ದೂರದಲ್ಲಿ ಕರ್ಹಲ್ ಇದೆ. ಅಖಿಲೇಶ್ ಅವರು ಇದೇ ಮೊದಲ ಬಾರಿಗೆ ವಿಧಾನಸಭೆಗೆ ಸ್ಪರ್ಧಿಸುತ್ತಿದ್ದಾರೆ.

ಕರ್ಹಲ್‌ನಿಂದ ಅಖಿಲೇಶ್ ಅವರ ಸ್ಪರ್ಧೆಯನ್ನು ಎಸ್‌ಪಿ ರಾಜ್ಯಸಭಾ ಸದಸ್ಯ ರಾಮ್‌ಗೋಪಾಲ್ ಯಾದವ್ ಅವರು ದೃಢಪಡಿಸಿದ್ದಾರೆ.

2002ರ ಚುನಾವಣೆ ಹೊರತುಪಡಿಸಿ 1993ರಿಂದ ನಂತರದ ಎಲ್ಲ ಚುನಾವಣೆಯಲ್ಲಿಯೂ ಕರ್ಹಲ್‌ನಲ್ಲಿ ಎಸ್‌ಪಿ ಗೆದ್ದಿದೆ. 2002ರಲ್ಲಿ ಇಲ್ಲಿ ಬಿಜೆಪಿ ಗೆದ್ದಿತ್ತು. ಆದರೆ, 2007ರಲ್ಲಿ ಈ ಕ್ಷೇತ್ರವನ್ನು ಎಸ್‌ಪಿ ಗೆದ್ದುಕೊಂಡಿತು. ಎಸ್‌ಪಿ ಸಂಸ್ಥಾಪಕ ಮುಲಾಯಂ ಸಿಂಗ್ ಯಾದವ್ ಅವರು ಐದು ಬಾರಿ ಲೋಕಸಭೆಯಲ್ಲಿ ಪ್ರತಿನಿಧಿಸಿದ್ದ ಮೈನ್‌ಪುರಿ ಕ್ಷೇತ್ರದ ವ್ಯಾಪ್ತಿಯಲ್ಲಿ ಕರ್ಹಲ್ ಇದೆ.

ಐ.ಟಿ ಕ್ಷೇತ್ರಕ್ಕೆ ಒತ್ತು: ಉತ್ತರ ಪ್ರದೇಶದಲ್ಲಿ ತಮ್ಮ ಪಕ್ಷವು ಅಧಿಕಾರಕ್ಕೆ ಬಂದರೆ ಮಾಹಿತಿ ತಂತ್ರಜ್ಞಾನ (ಐ.ಟಿ) ಕ್ಷೇತ್ರದಲ್ಲಿ 22 ಲಕ್ಷ ಯುವ ಜನರಿಗೆ ಉದ್ಯೋಗ ದೊರೆಯುವಂತೆ ಮಾಡಲಾಗುವುದು ಎಂದು ಅಖಿಲೇಶ್ ಶನಿವಾರ ಭರವಸೆ ಕೊಟ್ಟಿದ್ದಾರೆ.

'ಈ ಹಿಂದೆ ಅಧಿಕಾರದಲ್ಲಿ ಇದ್ದ ಎಸ್‌ಪಿ ಸರ್ಕಾರವು ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ರಾಜ್ಯವು ಮುಂದೆ ಬರಲು ಬೇಕಾದ ಪ್ರಯತ್ನಗಳನ್ನು ಮಾಡಿತ್ತು. ಎಸ್‌ಪಿ ಸರ್ಕಾರ ಆರಂಭಿಸಿದ್ದ ಕೆಲಸಗಳನ್ನು ಪೂರ್ಣಗೊಳಿಸಿದ್ದರೆ ಲಖನೌ ಈಗ ಮಾಹಿತಿ ತಂತ್ರಜ್ಞಾನ ಕೇಂದ್ರ ಎಂದು ಗುರುತಿಸಿಕೊಳ್ಳುತ್ತಿತ್ತು' ಎಂದು ಅವರು ಹೇಳಿದ್ದಾರೆ. 2012–2017ರ ಅವಧಿಯಲ್ಲಿ ಅಖಿಲೇಶ್ ನೇತೃತ್ವದ ಸರ್ಕಾರ ಇತ್ತು.

ಕಾಂಗ್ರೆಸ್ ಅಭ್ಯರ್ಥಿಗೆ ಎಸ್‌ಪಿ ಟಿಕೆಟ್

ಕಾಂಗ್ರೆಸ್‌ನ ಮಾಜಿ ಸಂಸದ ಪ್ರವೀಣ್ ಸಿಂಗ್ ಆರೋನ್ ಮತ್ತು ಅವರ ಹೆಂಡತಿ ಸುಪ್ರಿಯಾ ಅವರು ಅಖಿಲೇಶ್ ಸಮ್ಮುಖದಲ್ಲಿ ಎಸ್‌ಪಿ ಸೇರ್ಪಡೆ ಆಗಿದ್ದಾರೆ.

ಬರೇಲಿ ಕಂಟೋನ್ಮೆಂಟ್ ಕ್ಷೇತ್ರದಿಂದ ಸುಪ್ರಿಯಾ ಅವರನ್ನು ಕಣಕ್ಕೆ ಇಳಿಸುವುದಾಗಿ ಕಾಂಗ್ರೆಸ್ ಪ್ರಕಟಿಸಿತ್ತು. ಆದರೆ, ಈಗ ಅವರು ಎಸ್‌ಪಿ ಅಭ್ಯರ್ಥಿಯಾಗಿ ಅದೇ ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ.

ಈ ಕ್ಷೇತ್ರದಿಂದ ರಾಜೇಶ್ ಅಗರ್‌ವಾಲ್ ಅವರನ್ನು ಕಣಕ್ಕೆ ಇಳಿಸುವುದಾಗಿ ಎಸ್‌ಪಿ ಘೋಷಿಸಿತ್ತು. ಅವರ ಬದಲಿಗೆ ಸುಪ್ರಿಯಾ ಅವರಿಗೆ ಟಿಕೆಟ್ ನೀಡಲು ನಿರ್ಧರಿಸಲಾಗಿದೆ.

ಕಾಂಗ್ರೆಸ್ ಘೋಷಿಸಿದ್ದ 125 ಅಭ್ಯರ್ಥಿಗಳ ಮೊದಲ ಪಟ್ಟಿಯಲ್ಲಿ ಸುಪ್ರಿಯಾ ಹೆಸರು ಇತ್ತು. ಮಹಿಳೆಯರಿಗೆ ಶೇ 40ರಷ್ಟು ಟಿಕೆಟ್ ನೀಡುವ ಭರವಸೆಯ ಭಾಗವಾಗಿ ಮೊದಲ ಪಟ್ಟಿಯಲ್ಲಿ 50 ಮಹಿಳೆಯರನ್ನು ಹೆಸರಿಸಲಾಗಿತ್ತು. ಬರೇಲಿಯ ಮಾಜಿ ಮೇಯರ್ ಆಗಿರುವ ಸುಪ್ರಿಯಾ ಅವರು 2012ರಲ್ಲಿ ಕಾಂಗ್ರೆಸ್ ಟಿಕೆಟ್‌ನಲ್ಲಿ ಸ್ಪರ್ಧಿಸಿ ಸೋತಿದ್ದರು.

'ನಾನು ಹುಡುಗಿ, ಹೋರಾಡಬಲ್ಲೆ' ಎಂಬ ಘೋಷಣೆಯ ಅಡಿಯಲ್ಲಿ, ಬರೇಲಿಯಲ್ಲಿ ಹೆಣ್ಣು ಮಕ್ಕಳಿಗಾಗಿ ಸುಪ್ರಿಯಾ ಅವರು ಆಯೋಜಿಸಿದ್ದ ಮ್ಯಾರಥಾನ್‌ನಲ್ಲಿ ಕಾಲ್ತುಳಿತದಂತಹ ಪರಿಸ್ಥಿತಿ ನಿರ್ಮಾಣ ಆಗಿತ್ತು. ಅಲ್ಲಿನ ಘಟನೆಯನ್ನು ವೈಷ್ಣೋದೇವಿಯಲ್ಲಿ ನಡೆದ ಕಾಲ್ತುಳಿತಕ್ಕೆ ಹೋಲಿಸಿ ಅವರು ನೀಡಿದ್ದ ಹೇಳಿಕೆಗೆ ವ್ಯಾಪಕ ಟೀಕೆ ವ್ಯಕ್ತವಾಗಿತ್ತು.



ಲಖನೌದಲ್ಲಿ ನಡೆದ ಮಾಧ್ಯಮಗೋಷ್ಠಿಯಲ್ಲಿ ಅಖಿಲೇಶ್ ಯಾದವ್ ಅವರು ಮಾತನಾಡಿದರು ಪಿಟಿಐ ಚಿತ್ರ

ಚನ್ನಿ ಸಿ.ಎಂ ಅಭ್ಯರ್ಥಿ: ಕಾಂಗ್ರೆಸ್‌ನಲ್ಲಿ ಒತ್ತಡ

ಚಂಡೀಗಡ (ಪಿಟಿಐ): ಪಂಜಾಬ್ ವಿಧಾನಸಭೆಗೆ ಮುಂದಿನ ತಿಂಗಳು ನಡೆಯಲಿರುವ ಚುನಾವಣೆಗೆ ಮುಖ್ಯಮಂತ್ರಿ ಅಭ್ಯರ್ಥಿಯನ್ನು ಘೋಷಿಸಬೇಕು ಎಂಬ ಬೇಡಿಕೆ ಕಾಂಗ್ರೆಸ್ ಪಕ್ಷದಲ್ಲಿ ಹೆಚ್ಚುತ್ತಿದೆ. ರಾಜ್ಯದ ಮುಖ್ಯಮಂತ್ರಿ ಹುದ್ದೆಗೇರಿದ ಪರಿಶಿಷ್ಟ ಜಾತಿಯ ಮೊದಲ ವ್ಯಕ್ತಿ ಚರಣ್‌ಜಿತ್ ಸಿಂಗ್ ಚನ್ನಿ ಅವರನ್ನೇ ಮುಖ್ಯಮಂತ್ರಿ ಅಭ್ಯರ್ಥಿಯಾಗಿ ಘೋಷಿಸಬೇಕು ಎಂದು ಹಲವು ಹಿರಿಯ ಮುಖಂಡರು ಒತ್ತಾಯಿಸಿದ್ದಾರೆ.

ಈ ಬಾರಿ ಚುನಾವಣೆಯನ್ನು ಸಾಮೂಹಿಕ ನಾಯಕತ್ವದಲ್ಲಿ ಎದುರಿಸಲಾಗುವುದು ಎಂಬುದು ಕಾಂಗ್ರೆಸ್ ಹೈಕಮಾಂಡ್‌ನ ಈವರೆಗಿನ ತೀರ್ಮಾನವಾಗಿದೆ. 2012 ಮತ್ತು 2017ರ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಮುಖ್ಯಮಂತ್ರಿ ಅಭ್ಯರ್ಥಿಯನ್ನು ಹೆಸರಿಸಿತ್ತು.

ತಾವು ಮುಖ್ಯಮಂತ್ರಿ ಹುದ್ದೆಗೆ ಸೂಕ್ತ ವ್ಯಕ್ತಿ ಎಂಬುದನ್ನು ಕೇವಲ ಮೂರು ತಿಂಗಳ ಅವಧಿಯಲ್ಲಿ ಚನ್ನಿ ಅವರು ಸಾಬೀತು ಮಾಡಿದ್ದಾರೆ. ಮುಖ್ಯಮಂತ್ರಿ ಅಭ್ಯರ್ಥಿಗೆ ಸಂಬಂಧಿಸಿ ಪಕ್ಷದಲ್ಲಿ ಗೊಂದಲ ಇರಬಾರದು. ಎಲ್ಲರ ನಿರೀಕ್ಷೆಯನ್ನೂ ಮೀರಿ ಚನ್ನಿ ಅವರು ಕೆಲಸ ಮಾಡಿದ್ದಾರೆ ಎಂದು ಹಿರಿಯ ಮುಖಂಡ ಮತ್ತು ಸಚಿವ ಬ್ರಹ್ಮ ಮೊಹೀಂದ್ರ ಹೇಳಿದ್ದಾರೆ.

ಅಮರಿಂದರ್ ಸಿಂಗ್ ಅವರಿಂದ ಕಾಂಗ್ರೆಸ್ ಪಕ್ಷವು ರಾಜೀನಾಮೆ ಪಡೆದ ಬಳಿಕ, ಚನ್ನಿ ಅವರನ್ನು ಕಳೆದ ವರ್ಷ ಮುಖ್ಯಮಂತ್ರಿ ಮಾಡಲಾಗಿತ್ತು.

ಪಂಜಾಬ್ ವಿಧಾನಸಭೆ ಚುನಾವಣೆಯಲ್ಲಿ ಆಮ್ ಆದ್ಮಿ ಪಕ್ಷವು (ಎಎಪಿ) ಪ್ರಮುಖ ಪ್ರತಿಸ್ಪರ್ಧಿಯಾಗಿ ಮೂಡಿ ಬಂದಿದೆ. ಆ ಪಕ್ಷವು ಸಂಸದ ಮತ್ತು ರಾಜ್ಯ ಘಟಕದ ಅಧ್ಯಕ್ಷ ಭಗವಂತ ಮಾನ್ ಅವರನ್ನು ಮುಖ್ಯಮಂತ್ರಿ ಅಭ್ಯರ್ಥಿಯಾಗಿ ಘೋಷಿಸಿದೆ. ಆ ಬಳಿಕ, ಮುಖ್ಯಮಂತ್ರಿ ಅಭ್ಯರ್ಥಿಯನ್ನು ಘೋಷಿಸಬೇಕು ಎಂಬ ಕೂಗು ಕಾಂಗ್ರೆಸ್‌ನಲ್ಲಿಯೂ ಬಲವಾಗಿದೆ.

ಪಂಜಾಬ್‌ನ ಇನ್ನೊಂದು ಪ್ರಮುಖ ಪಕ್ಷವಾದ ಶಿರೋಮಣಿ ಅಕಾಲಿ ದಳವು (ಎಸ್‌ಎಡಿ) ಮುಖ್ಯಮಂತ್ರಿ ಅಭ್ಯರ್ಥಿಯನ್ನು ಘೋಷಿಸಿಲ್ಲ. ಆದರೆ, ಪಕ್ಷದ ಅಧ್ಯಕ್ಷ ಸುಖಬೀರ್ ಸಿಂಗ್ ಬಾದಲ್ ಅವರೇ ಮುಖ್ಯಮಂತ್ರಿ ಅಭ್ಯರ್ಥಿಯಾಗುವ ಸಾಧ್ಯತೆ ಹೆಚ್ಚು.

ಪಕ್ಷವು ಮತ್ತೆ ಅಧಿಕಾರಕ್ಕೆ ಬಂದ ಮೇಲೆ ಚನ್ನಿ ಅವರನ್ನು ಮುಖ್ಯಮಂತ್ರಿಯಾಗಿ ಮುಂದುವರಿಸುವುದಿಲ್ಲ ಎಂಬ ಭಾವನೆಯು ಪಕ್ಷಕ್ಕೆ ದುಬಾರಿಯಾಗಬಹುದು ಎಂದು ಸಚಿವ ರಾಣಾ ಗುರ್ಜೀತ್ ಸಿಂಗ್ ಅವರು ಹೇಳಿದ್ದಾರೆ. ಮೂರು ತಿಂಗಳ ಅವಧಿಯಲ್ಲಿ ಚನ್ನಿ ಅವರು ಅತ್ಯುತ್ತಮವಾಗಿ ಕೆಲಸ ಮಾಡಿದ್ದಾರೆ ಎಂದೂ ಅವರು ಹೇಳಿದ್ದಾರೆ.

ಸಚಿವ ತೃಪ್ತ್ ರಾಜಿಂದರ್ ಬಾಜ್ವಾ ಮತ್ತು ಶಾಸಕ ಹರದೇವ್ ಸಿಂಗ್ ಲಡ್ಡಿ ಶೇರೊವಾಲಿಯಾ ಅವರು ಕೂಡ ಚನ್ನಿ ಬೆಂಬಲಕ್ಕೆ ನಿಂತಿದ್ದಾರೆ.

ನವಜೋತ್ ಸಿಂಗ್ ಸಿಧು ಅವರು ಪಂಜಾಬ್ ಕಾಂಗ್ರೆಸ್‌ನ ಮುಖ್ಯಸ್ಥ. ಚನ್ನಿ ಅವರು ಸರ್ಕಾರದ ಮುಖ್ಯಸ್ಥ. ಸಾಮೂಹಿಕ ನಾಯಕತ್ವದಲ್ಲಿಯೇ ಪಕ್ಷವು ಚುನಾವಣೆ ಎದುರಿಸಲಿದೆ ಎಂದು ಕಳೆದ ವಾರ ಚಂಡೀಗಡಕ್ಕೆ ಬಂದಿದ್ದ ಕಾಂಗ್ರೆಸ್‌ನ ಮುಖ್ಯ ವಕ್ತಾರ ರಣದೀಪ್ ಸುರ್ಜೇವಾಲಾ ಹೇಳಿದ್ದರು.

ಮುಖ್ಯಮಂತ್ರಿ ಅಭ್ಯರ್ಥಿಯನ್ನು ಘೋಷಿಸಬೇಕು ಎಂದು ಚನ್ನಿ ಅವರೂ ಇತ್ತೀಚೆಗೆ ಹೇಳಿದ್ದರು.



ಎಎಪಿಯ ಮುಖ್ಯಮಂತ್ರಿ ಅಭ್ಯರ್ಥಿ ಭಗವಂತ ಮಾನ್ ಅವರು ಸ್ವರ್ಣಮಂದಿರಕ್ಕೆ ಶನಿವಾರ ಭೇಟಿ ನೀಡಿದರು –ಪಿಟಿಐ ಚಿತ್ರ

ಸಮೀಕ್ಷೆಯಲ್ಲಿ ಚನ್ನಿ ಮುಂದೆ



ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಆಪ್ತ ನಿಖಿಲ್ ಆಳ್ವಾ ಅವರು ಮುಖ್ಯಮಂತ್ರಿ ಅಭ್ಯರ್ಥಿ ಯಾರಾಗಬೇಕು ಎಂಬ ಬಗ್ಗೆ ಟ್ವಿಟರ್‌ನಲ್ಲಿ ಸಮೀಕ್ಷೆ ನಡೆಸಿದ್ದಾರೆ. ಈ ಸಮೀಕ್ಷೆ ಪ್ರಕಾರ, ಚನ್ನಿ ಅವರಿಗೆ ಶೇ 68.7ರಷ್ಟು ಮತಗಳು ಸಿಕ್ಕಿವೆ. 1,283 ಮಂದಿ ಚನ್ನಿ ಅವರಿಗೆ ಮತ ಹಾಕಿದ್ದರು.

ಸಿಧು ಅವರಿಗೆ ಸಿಕ್ಕಿದ್ದು ಶೇ 11.5ರಷ್ಟು ಮತಗಳು ಮಾತ್ರ. ನಂತರದ ಸ್ಥಾನದಲ್ಲಿ ಸುನಿಲ್ ಜಾಖಡ್ ಅವರು (ಶೇ 9.3) ಇದ್ದಾರೆ. ಮುಖ್ಯಮಂತ್ರಿ ಅಭ್ಯರ್ಥಿಯ ಅಗತ್ಯ ಇಲ್ಲ ಎಂದವರು ಶೇ 10.4ರಷ್ಟು ಮಂದಿ.

ಚುನಾವಣಾ ಕಣದಲ್ಲಿ

'ಧ್ವನಿ ಎತ್ತಿ' ಅಭಿಯಾನ: ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್ ಪಕ್ಷವು 'ಧ್ವನಿ ಎತ್ತಿ' ಎಂಬ ಅಭಿಯಾನವನ್ನು ಆರಂಭಿಸಲಿದೆ. ಈಗಿನ ಮತ್ತು ಈ ಹಿಂದಿನ ಸರ್ಕಾರಗಳು ಮಾಡಿದ ವಂಚನೆಯ ಅನುಭವಗಳನ್ನು ಹಂಚಿಕೊಳ್ಳುವಂತೆ ಪಕ್ಷವು ಯುವಜನರಿಗೆ ಕರೆ ನೀಡಿದೆ. ಸುಭಾಷ್ ಚಂದ್ರ ಬೋಸ್ ಅವರ ಜನ್ಮದಿನದಂದು (ಜನವರಿ 23) ಈ ಅಭಿಯಾನಕ್ಕೆ ಚಾಲನೆ ನೀಡಲಾಗುವುದು. ಯುವ ಜನರಿಗಾಗಿ 'ಭರ್ತಿ ವಿಧಾನ್' ಎಂಬ ಪ್ರಣಾಳಿಕೆಯನ್ನು ಕಾಂಗ್ರೆಸ್ ಇತ್ತೀಚೆಗೆ ಬಿಡುಗಡೆ ಮಾಡಿತ್ತು.

ಜೆಡಿಯು ಏಕಾಂಗಿ: ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಯಲ್ಲಿ ಜೆಡಿಯು ಏಕಾಂಗಿಯಾಗಿ ಸ್ಪರ್ಧಿಸಲಿದೆ. ಮೈತ್ರಿಗಾಗಿ ಸಲ್ಲಿಸಿದ್ದ ಪ್ರಸ್ತಾವದ ಬಗ್ಗೆ ಮಿತ್ರ ಪಕ್ಷ ಬಿಜೆಪಿ ಏನನ್ನೂ ಹೇಳದಿರುವುದು ಜೆಡಿಯುನ ಈ ನಿರ್ಧಾರಕ್ಕೆ ಕಾರಣ. ಕನಿಷ್ಠ 51 ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಲು ಜೆಡಿಯು ನಿರ್ಧರಿಸಿದೆ. 26 ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಜೆಡಿಯು ಶನಿವಾರ ಪ್ರಕಟಿಸಿದೆ.

ಮಣಿಪುರ: ಕುಕಿ ಸಮುದಾಯದಿಂದ ಹೊಸ ಪಕ್ಷ

ಗುವಾಹಟಿ: ಅಸ್ಸಾಂನ ಕುಕಿ ಬುಡಕಟ್ಟು ಸಮುದಾಯದವನ್ನು ಪ್ರತಿನಿಧಿಸುವ ನಾಯಕರ ಗುಂಪೊಂದು 'ಕುಕಿ ಪೀಪಲ್ಸ್ ಅಲಯನ್ಸ್' ಎಂಬ ಹೆಸರಿನ ಹೊಸ ರಾಜಕೀಯ ಪಕ್ಷವನ್ನು ಸ್ಥಾಪಿಸಿದೆ. ಚುನಾವಣಾ ಆಯೋಗವು ಜ.12 ರಂದೇ ಈ ಪಕ್ಷದ ನೋಂದಣಿ ಮಾಡಿದೆ.

ಅಸ್ಸಾಂ ವಿಧಾನಸಭೆ ಚುನಾವಣೆಯಲ್ಲಿ ಕನಿಷ್ಠ 10 ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸುವ ಯೋಜನೆ ಪಕ್ಷಕ್ಕಿದೆ.

ಸುಮಾರು 10 ಕ್ಷೇತ್ರಗಳಲ್ಲಿ ಕುಕಿ ಸಮುದಾಯ ಪ್ರಾಬಲ್ಯ ಹೊಂದಿದೆ. ಆದರೆ ತಮ್ಮ ಜನಾಂಗದ ಅನನ್ಯತೆ ಉಳಿಸಿಕೊಳ್ಳಲು ಮತ್ತು ಹಿತಾಸಕ್ತಿ ಕಾಪಾಡಲು ಸೂಕ್ತವಾದ ರಾಜಕೀಯ ಪ್ರಾತಿನಿಧ್ಯ ಈ ವರೆಗೂ ಈ ಸಮುದಾಯಕ್ಕೆ ಸಿಕ್ಕಿಲ್ಲ ಎಂದು ಕುಕಿ ನಾಯಕರು ಹೇಳಿದ್ದಾರೆ.

ಮಣಿಪುರದ ಒಟ್ಟು ಜನಸಂಖ್ಯೆಯಲ್ಲಿ ಶೇ 30ರಷ್ಟು ಕುಕಿ ಸಮುದಾಯದವರು ಇದ್ದಾರೆ. ಕುಕಿ ಸಮುದಾಯದ ಪಕ್ಷದ ಸ್ಪರ್ಧೆಯಿಂದ ಕಾಂಗ್ರೆಸ್‌ಗೆ ಕಷ್ಟವಾಗಬಹುದು ಎಂದು ರಾಜಕೀಯ ವಿಶ್ಲೇಷಕರು ಅಂದಾಜಿಸಿದ್ದಾರೆ.

ಮಣಿಪುರದಲ್ಲಿ 60 ಸ್ಥಾನಗಳ ಪೈಕಿ 40 ಸ್ಥಾನಗಳು ಇರುವುದು ಕಣಿವೆ ಪ್ರದೇಶದಲ್ಲಿ. ಈ ಪ್ರದೇಶದಲ್ಲಿ ಮೀಟೀ, ನಾಗ, ಕುಕಿ ಮತದಾರರು ಪ್ರಮುಖ ಪಾತ್ರ ವಹಿಸುತ್ತಾರೆ.

ಉತ್ತರ ಪ್ರದೇಶದಲ್ಲಿ ತೃತೀಯ ರಂಗ

ಲಖನೌ(ಪಿಟಿಐ): ಅಸಾದುದ್ದೀನ್ ಒವೈಸಿ ಅವರ ಆಲ್ ಇಂಡಿಯಾ ಮಜ್ಲಿಸ್ ಎ ಇತ್ತೆಹಾದ್ ಉಲ್ ಮುಸ್ಲಿಮೀನ್ (ಎಐಎಂಐಎಂ), ಜನ ಅಧಿಕಾರ ಪಾರ್ಟಿ ಮತ್ತು ಭಾರತ ಮುಕ್ತಿ ಮೋರ್ಚಾ ಸೇರಿಕೊಂಡು ಉತ್ತರ ಪ್ರದೇಶದಲ್ಲಿ 'ತೃತೀಯ ರಂಗ' ರೂಪುಗೊಂಡಿದೆ ಎಂದು ಶನಿವಾರ ಪ್ರಕಟಿಸಲಾಗಿದೆ.

ಈ 'ತೃತೀಯ ರಂಗ'ಕ್ಕೆ 'ಭಾಗೀದಾರಿ ಪರಿವರ್ತನ್ ಮೋರ್ಚಾ' ಎಂದ ಹೆಸರು ಇರಿಸಲಾಗಿದೆ. ಉತ್ತರ ಪ್ರದೇಶದಲ್ಲಿ ಈ ರಂಗವು ಅಧಿಕಾರಕ್ಕೆ ಬಂದರೆ ಇಬ್ಬರಿಗೆ ಮುಖ್ಯಮಂತ್ರಿಯಾಗುವ ಅವಕಾಶ ಕೊಡಲಾಗುವುದು. ಮೂವರನ್ನು ಉಪ ಮುಖ್ಯಮಂತ್ರಿ ಮಾಡಲಾಗುವುದು ಎಂದು ಒವೈಸಿ ಹೇಳಿದ್ದಾರೆ.

ದಲಿತ ಸಮುದಾಯದ ಒಬ್ಬರು ಮತ್ತು ಒಬಿಸಿಯ ಒಬ್ಬರು ಮುಖ್ಯಮಂತ್ರಿ ಆಗಲಿದ್ಧಾರೆ. ಮುಸ್ಲಿಂ ಸಮುದಾಯದ ಮೂವರನ್ನು ಉಪ ಮುಖ್ಯಮಂತ್ರಿ ಮಾಡಲಾಗುವುದು ಎಂದು ಘೋಷಿಸಿದ್ದಾರೆ.

ಒಬಿಸಿ ನಾಯಕ ಮತ್ತು ಮಾಜಿ ಸಚಿವ ಬಾಬು ಸಿಂಗ್ ಕುಶ್ವಾಹ ಅವರು ಜನ ಅಧಿಕಾರ ಪಾರ್ಟಿಯ ಮುಖ್ಯಸ್ಥ. ವಾಮನ ಮೇಶ್ರಾಂ ಅವರು ಭಾರತ್ ಮುಕ್ತಿ ಮೋರ್ಚಾದ ಅಧ್ಯಕ್ಷ.

‘ಕೊರೊನಾ ಲಕ್ಷಣ ಇದ್ದರಷ್ಟೇ ತಪಾಸಣೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಕೊರೊನಾ ಲಕ್ಷಣ ಇರುವವರಿಗೆ ಮಾತ್ರ ಐಸಿಎಂಆರ್ ಮಾರ್ಗಸೂಚಿಯಂತೆ ತಪಾಸಣೆ ನಡೆಸಲಾಗುವುದು’ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಸಚಿವರು, ‘ಕೊರೊನಾ ಸೋಂಕಿತರು ಆಸ್ಪತ್ರೆಗಳಿಗೆ ದಾಖಲಾಗುವುದು ಗಣನೀಯವಾಗಿ ಹೆಚ್ಚಿದರೆ ಬೇರೆ ದಾರಿ ಇಲ್ಲದೆ ಕಟ್ಟುನಿಟ್ಟಿನ ಕ್ರಮಗಳನ್ನು ಮತ್ತೆ ಜಾರಿ ಮಾಡಲಾಗುವುದು’ ಎಂದರು.

‘ಕೊರೊನಾ ಸೋಂಕಿತರ ಸಂಖ್ಯೆ ಹೆಚ್ಚುತ್ತಿದ್ದರೂ ಆಸ್ಪತ್ರೆಗೆ ದಾಖಲಾಗುವವರ ಸಂಖ್ಯೆ ಕಡಿಮೆ ಇದೆ. ವೈಜ್ಞಾನಿಕವಾಗಿ ಪರಾಮರ್ಶಿಸಿ, ತಜ್ಞರ ಅಭಿಪ್ರಾಯ ಪಡೆದು ವಾರಾಂತ್ಯ ಕರ್ಫ್ಯೂ ರದ್ದು ಮಾಡಲಾಗಿದೆ. ಇನ್ನು ಎರಡರಿಂದ ಮೂರು ವಾರಗಳಲ್ಲಿ ಕೋವಿಡ್ ಮೂರನೇ ಅಲೆ ತೀವ್ರತೆ ಕಳೆದುಕೊಳ್ಳಲಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ’ ಎಂದರು.

‘ಜನರ ಜೀವ ಹಾಗೂ ಜೀವನ ಎರಡೂ ಮುಖ್ಯ. ನಮ್ಮ ಆರೋಗ್ಯ ನಮ್ಮ ಕೈಯಲ್ಲಿದೆ. ಜನರು ಜವಾಬ್ದಾರಿ ಹಾಗೂ ಕರ್ತವ್ಯಗಳನ್ನು ಅರಿತು ನಡೆಯಬೇಕು. ಕೊರೊನಾ ಮಾರ್ಗಸೂಚಿಗಳನ್ನು ಪಾಲಿಸಿ, ಮಾಸ್ಕ್ ಧರಿಸಬೇಕು, ಅಂತರ ಕಾಪಾಡಿಕೊಳ್ಳಬೇಕು. ಅನಗತ್ಯವಾಗಿ ಗುಂಪು ಸೇರುವುದನ್ನು ಕಡಿಮೆ ಮಾಡಬೇಕು. ಒಳಾಂಗಣ ಹಾಗೂ ಹೊರಾಂಗಣ ಕಾರ್ಯಕ್ರಮಗಳನ್ನು ಮುಂದೂಡುವುದು ಉತ್ತಮ’ ಎಂದು ಸಲಹೆ ನೀಡಿದರು.

ರಾಜ್ಯ ಕೋವಿಡ್ ಅಂಕಿ–ಅಂಶ

34,67,472 ▲ ಒಟ್ಟು ಸೋಂಕಿತರು (34,25,002 ನಿನ್ನೆಯ ವಿವರ)

3,30,447 ▲ ಸಕ್ರಿಯ ಪ್ರಕರಣಗಳು

30,98,432 ▲ ಗುಣಮುಖರಾದವರು

38,563 ▲ ಒಟ್ಟು ಸಾವು


ಪ್ರಜಾವಾಣಿ ಗ್ರಾಫಿಕ್ಸ್

ದಿನದ ಏರಿಕೆ

ಹೊಸ ಪ್ರಕರಣ	42,470	▼
ಗುಣಮುಖ	35,140	▲
ಸಾವು	26	▲

ಆಧಾರ: ರಾಜ್ಯ ಆರೋಗ್ಯ ಇಲಾಖೆ

ದೇವೇಗೌಡರಿಗೆ ಕೋವಿಡ್ ದೃಢ


ಎಚ್‌.ಡಿ. ದೇವೇಗೌಡ

ಬೆಂಗಳೂರು: ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ, ರಾಜ್ಯಸಭಾ ಸದಸ್ಯ ಎಚ್‌.ಡಿ. ದೇವೇಗೌಡರಿಗೆ ಕೋವಿಡ್ ತಗುಲಿರುವುದು ದೃಢಪಟ್ಟಿದ್ದು, ಮಣಿಪಾಲ ಆಸ್ಪತ್ರೆಗೆ ದಾಖಲಾಗಿದ್ದಾರೆ.

ಎರಡು ದಿನದಿಂದ ಕೆಮ್ಮು ಇತ್ತು. ಅವರ ಗಂಟಲು ಮತ್ತು ಮೂಗಿನ ದ್ರವದ ಮಾದರಿಗಳನ್ನು ಶುಕ್ರವಾರ ಪರೀಕ್ಷೆಗೆ ಕಳುಹಿಸಲಾಗಿತ್ತು. ಅವರಿಗೆ ಕೋವಿಡ್ ತಗುಲಿರುವುದು ವರದಿಯಲ್ಲಿ ದೃಢಪಟ್ಟಿದ್ದು, ಶುಕ್ರವಾರ ರಾತ್ರಿಯೇ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

2021ರ ಮಾರ್ಚ್‌ನಲ್ಲೂ ಎಚ್‌.ಡಿ. ದೇವೇಗೌಡ ಮತ್ತು ಅವರ ಪತ್ನಿ ಚೆನ್ನಮ್ಮ ಅವರಿಗೆ ಕೋವಿಡ್ ತಗುಲಿತ್ತು. ಆಗಲೂ ದೇವೇಗೌಡರು ಮಣಿಪಾಲ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದರು.

‘3ನೇ ಅಲೆ: ಶೇ 60ರಷ್ಟು ಮೃತರು ಪೂರ್ಣ ಲಸಿಕೆ ಪಡೆಯದವರು’

ನವದೆಹಲಿ (ಪಿಟಿಐ): ಕೋವಿಡ್ ಮೂರನೇ ಅಲೆಯಲ್ಲಿ ಸೋಂಕಿನಿಂದ ಮೃತಪಟ್ಟಿರುವ ಶೇ 60ರಷ್ಟು ರೋಗಿಗಳು ಪೂರ್ಣವಾಗಿ ಲಸಿಕೆ ಪಡೆದಿರಲಿಲ್ಲ ಅಥವಾ ಭಾಗಶಃ ಪಡೆದಿದ್ದವರು ಎಂದು ಅಧ್ಯಯನವೊಂದು ತಿಳಿಸಿದೆ.

ಮ್ಯಾಕ್ಸ್ ಹೆಲ್ತ್‌ಕೇರ್ ಖಾಸಗಿ ಆಸ್ಪತ್ರೆ ಈ ಅಧ್ಯಯನ ನಡೆಸಿದೆ. ಆ ಪ್ರಕಾರ 70 ವರ್ಷ ಮೀರಿದವರು ಅಥವಾ ಕ್ಯಾನ್ಸರ್, ಮೂತ್ರಪಿಂಡ ವೈಫಲ್ಯ, ಮಧುಮೇಹ, ಹೃದಯಸಂಬಂಧಿ ಸಮಸ್ಯೆಗಳಿಂದ ಬಳಲುತ್ತಿದ್ದವರು ಮೃತಪಟ್ಟಿದ್ದಾರೆ.

‘ನಮ್ಮ ಸಮೂಹದ ಆಸ್ಪತ್ರೆಗಳಲ್ಲಿ ಸುಮಾರು 82 ಜನ ಅಸುನೀಗಿದ್ದಾರೆ. ಇವರಲ್ಲಿ ಶೇ 60ರಷ್ಟು ಮಂದಿ ಪೂರ್ಣ ಲಸಿಕೆಯನ್ನು ಪಡೆದಿರಲಿಲ್ಲ ಅಥವಾ ಭಾಗಶಃ ಮಾತ್ರ ಪಡೆದಿದ್ದರು’ ಎಂದು ಆಸ್ಪತ್ರೆಯ ಹೇಳಿಕೆಯು ತಿಳಿಸಿದೆ.

ದೆಹಲಿಯ ಆರೋಗ್ಯ ಸಚಿವ ಸತ್ಯೇಂದ್ರ ಜೈನ್, ಇತರೆ ರೋಗಗಳಿಂದ ಬಳಲುತ್ತಿರುವವರು ಮತ್ತು ರೋಗ ನಿರೋಧಕ ಶಕ್ತಿ ಕಡಿಮೆ ಉಳ್ಳವರು ಮೃತಪಡುತ್ತಿದ್ದಾರೆ ಎಂದಿದ್ದರು.

ಕೋವಿಡ್ ಮೂರು ಅಲೆ ಕುರಿತ ಅಂಕಿ ಅಂಶದ ಪ್ರಕಾರ, ಮೂರನೇ ಅಲೆಯಲ್ಲಿ ಶೇ 23.4ರಷ್ಟು ರೋಗಿಗಳಿಗೆ ಆಮ್ಲಜನಕದ ಬೆಂಬಲ ಬೇಕಿದೆ. ಈ ಪ್ರಮಾಣ ಎರಡನೇ ಅಲೆಯಲ್ಲಿ ಶೆ 74, ಮೊದಲ ಅಲೆಯಲ್ಲಿ ಶೇ 63ರಷ್ಟಿತ್ತು,

ತಮ್ಮ ಸಮೂಹದ ಆಸ್ಪತ್ರೆಗಳಲ್ಲಿ ಈವರೆಗೆ ಕೋವಿಡ್‌ನಿಂದ 41 ಮಂದಿ ಮಕ್ಕಳು ದಾಖಲಾಗಿದ್ದಾರೆ. ಈ ವಯೋಮಾನದವರಲ್ಲಿ ಸಾವು ಸಂಭವಿಸಿಲ್ಲ. ಏಳು ಮಂದಿ ಐಸಿಯುನಲ್ಲಿ, ಇಬ್ಬರು ವೆಂಟಿಲೇಟರ್‌ನಲ್ಲಿ ಇದ್ದಾರೆ ಎಂದೂ ಹೇಳಿಕೆಯು ತಿಳಿಸಿದೆ.

ಮ್ಯಾಕ್ಸ್ ಆಸ್ಪತ್ರೆಗಳ ಅಂಕಿ ಅಂಶಗಳನ್ನು ಅಧ್ಯಯನ ಆಧರಿಸಿದೆ. ಸಾವಿನ ಪ್ರಕರಣ ಮೊದಲ ಅಲೆಯಲ್ಲಿ ಶೇ 7.2, ಎರಡನೇ ಅಲೆಯಲ್ಲಿ ಶೇ 10.5 ಇತ್ತು. ಈಗಿನ ಅಲೆಯಲ್ಲಿ ಶೇ 6ರಷ್ಟಿದೆ ಎಂದು ಹೇಳಿದೆ.

ಗರಿಷ್ಠ ಪರೀಕ್ಷೆ ನಡೆಸಿದ ರಾಜ್ಯಗಳ ಸಾಲಿನಲ್ಲಿ ಕರ್ನಾಟಕಕ್ಕೆ ಮೂರನೇ ಸ್ಥಾನ

6 ಕೋಟಿ ದಾಟಿದ ಕೊರೊನಾ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಈವರೆಗೆ ನಡೆಸಲಾದ ಒಟ್ಟು ಕೊರೊನಾ ಪತ್ತೆ ಪರೀಕ್ಷೆಗಳ ಸಂಖ್ಯೆ 6 ಕೋಟಿಯ ಗಡಿ ದಾಟಿದೆ. ದೇಶದಲ್ಲಿ ಗರಿಷ್ಠ ಪರೀಕ್ಷೆಗಳನ್ನು ನಡೆಸಿದ ರಾಜ್ಯಗಳ ಸಾಲಿನಲ್ಲಿ ಕರ್ನಾಟಕ ಮೂರನೇ ಸ್ಥಾನದಲ್ಲಿದೆ.

ರಾಜ್ಯದಲ್ಲಿ 2020ರ ಮಾರ್ಚ್ ತಿಂಗಳಲ್ಲಿ ಕೋವಿಡ್ ಪ್ರಕರಣಗಳು ಪತ್ತೆಯಾಗಿದ್ದವು. ಆಗ ರಾಜ್ಯದಲ್ಲಿ ಪರೀಕ್ಷೆಗೆ ಪ್ರಯೋಗಾಲಯಗಳು ಇಲ್ಲದಿದ್ದರಿಂದ ಸೋಂಕು ಶಂಕಿತರ ಮಾದರಿಗಳನ್ನು ಪುಣೆಗೆ ಕಳುಹಿಸಲಾಗುತ್ತಿತ್ತು. ಈಗ ರಾಜ್ಯದಲ್ಲಿ 268 ಪ್ರಯೋಗಾಲಯಗಳು ಕಾರ್ಯನಿರ್ವಹಿಸುತ್ತಿದ್ದು, ದೈನಂದಿನ ಪರೀಕ್ಷೆ 2.50 ಲಕ್ಷಕ್ಕೆ ಏರಿಕೆಯಾಗಿದೆ.

2020ರಲ್ಲಿ 1.41 ಕೋಟಿ ಪರೀಕ್ಷೆಗಳು, 2021ರಲ್ಲಿ 4.23 ಕೋಟಿ ಪರೀಕ್ಷೆಗಳನ್ನು ಈವರೆಗೆ ನಡೆಸಲಾಗಿದೆ. ಈ ವರ್ಷ ಈಗಾಗಲೇ 35.27 ಲಕ್ಷ ಮಾದರಿಗಳನ್ನು ಪರೀಕ್ಷಿಸಲಾಗಿದೆ. ಮೂರನೇ ಅಲೆಯಲ್ಲಿ ಪ್ರಕರಣಗಳ ಸಂಖ್ಯೆ ಹೆಚ್ಚಳವಾಗುತ್ತಿರುವುದರಿಂದ ವಾರದಿಂದ ದೈನಂದಿನ ಪರೀಕ್ಷೆಗಳ ಸಂಖ್ಯೆ 2 ಲಕ್ಷದ ಆಸುಪಾಸಿನಲ್ಲಿದೆ.

ರಾಜ್ಯದಲ್ಲಿ ನಡೆಸಲಾದ ಒಟ್ಟು ಕೋವಿಡ್ ಪರೀಕ್ಷೆಗಳಲ್ಲಿ ಶೇ 70 ರಷ್ಟು ಪರೀಕ್ಷೆಗಳನ್ನು ಆರ್‌ಟಿ–ಪಿಸಿಆರ್ ವಿಧಾನದಲ್ಲಿ, ಶೇ 30 ರಷ್ಟು ಪರೀಕ್ಷೆಗಳನ್ನು ರ್‍ಯಾಪಿಡ್ ಆ್ಯಂಟಿಜೆನ್ ವಿಧಾನದಲ್ಲಿ ಮಾಡಲಾಗಿದೆ.

ಮಕ್ಕಳ ಪರೀಕ್ಷೆಗೆ ಆದ್ಯತೆ: ಕೋವಿಡ್ ಮೂರನೇ ಅಲೆಯಲ್ಲಿ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಸೋಂಕಿತರಾಗುವ ಬಗ್ಗೆ ತಜ್ಞರ ಸಮಿತಿ ಕಳವಳ ವ್ಯಕ್ತಪಡಿಸಿತ್ತು ನಿತ್ಯ ನಡೆಸಲಾಗುವ ಒಟ್ಟು ಪರೀಕ್ಷೆಗಳಲ್ಲಿ ಶೇ 10 ರಷ್ಟು ಪರೀಕ್ಷೆಗಳನ್ನು 18 ವರ್ಷದೊಳಗಿನ ಮಕ್ಕಳಿಗೆ ನಡೆಸುವಂತೆ ಸಮಿತಿ ಸದಸ್ಯರು ಶಿಫಾರಸು ಮಾಡಿದ್ದರು. 2021ರ ಡಿ.1ರಿಂದ 2022ರ ಜ.20ರ ಅವಧಿಯಲ್ಲಿ ನಡೆಸಲಾದ ಒಟ್ಟು ಪರೀಕ್ಷೆಯಲ್ಲಿ ಶೇ 29 ರಷ್ಟು ಪರೀಕ್ಷೆಗಳನ್ನು ಮಕ್ಕಳಿಗೆ ಮಾಡಲಾಗಿದೆ. ಶಾಲಾ–ಕಾಲೇಜು, ಮಾರುಕಟ್ಟೆ, ಬಸ್ ನಿಲ್ದಾಣ ಸೇರಿದಂತೆ ವಿವಿಧೆಡೆ ಸಾಮೂಹಿಕವಾಗಿ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

‘ನಮ್ಮ ಆರೋಗ್ಯ ಕಾರ್ಯಕರ್ತರ ಕಾರ್ಯ ಶ್ಲಾಘನೀಯ. ಮೂರು ವರ್ಷಗಳಿಂದ ಕೋವಿಡ್ ನಿಯಂತ್ರಣಕ್ಕೆ ಅವರು ನಿರಂತರ ಶ್ರಮಿಸುತ್ತಿದ್ದಾರೆ’ ಎಂದು ಇಲಾಖೆಯ ಆಯುಕ್ತ ಡಿ. ರಂದೀಪ್ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.



ಕೋವಿಡ್ ಅನ್ನು ಯಶಸ್ವಿಯಾಗಿ ನಿರ್ವಹಿಸುವಲ್ಲಿ ಉತ್ತಮ ಪರೀಕ್ಷಾ ವ್ಯವಸ್ಥೆ ಕೂಡ ಕಾರಣ. ಆರಂಭದಿಂದಲೂ ಕರ್ನಾಟಕವು ಪರೀಕ್ಷಾ ವ್ಯವಸ್ಥೆಯಲ್ಲಿ ಮುಂದಿದೆ

ಡಾ.ಕೆ. ಸುಧಾಕರ್, ಆರೋಗ್ಯ ಸಚಿವ

ಅಂಕಿ–ಅಂಶಗಳು

99 ರಾಜ್ಯದಲ್ಲಿರುವ ಸರ್ಕಾರಿ ಪ್ರಯೋಗಾಲಯಗಳು

169 ರಾಜ್ಯದಲ್ಲಿರುವ ಖಾಸಗಿ ಪ್ರಯೋಗಾಲಯಗಳು

ಕೋವಿಡ್: 3.37 ಲಕ್ಷ ಪ್ರಕರಣ ದೃಢ

ನವದೆಹಲಿ (ಪಿಟಿಐ): ದೇಶದಾದ್ಯಂತ ಶನಿವಾರ ಬೆಳಿಗ್ಗೆ 8 ಗಂಟೆಗೆ ಕೊನೆಗೊಂಡ 24 ಗಂಟೆಗಳ ಅವಧಿಯಲ್ಲಿ ಹೊಸದಾಗಿ 3,37,704 ಕೋವಿಡ್–19 ಪ್ರಕರಣಗಳು ದೃಢಪಟ್ಟಿವೆ. ಈ ಅವಧಿಯಲ್ಲಿ 488 ಮಂದಿ ಸೋಂಕಿತರು ಮೃತಪಟ್ಟಿದ್ದಾರೆ ಎಂದು ಆರೋಗ್ಯ ಸಚಿವಾಲಯದ ಪ್ರಕಟಣೆ ತಿಳಿಸಿದೆ.

ದೇಶದಲ್ಲಿ ಒಟ್ಟಾರೆ ಸಕ್ರಿಯ ಪ್ರಕರಣಗಳ ಸಂಖ್ಯೆ 21,13,365ಕ್ಕೆ ಏರಿಕೆಯಾಗಿದೆ. ದೈನಂದಿನ ಪಾಸಿಟಿವಿಟಿ ದರ ಸದ್ಯ ಶೇ 17.22ರಷ್ಟಿದೆ. ಈವರೆಗೆ 10,050 ಓಮೈಕ್ರಾನ್ ಪ್ರಕರಣಗಳು ಪತ್ತೆಯಾಗಿವೆ. ಗುರುವಾರಕ್ಕೆ ಹೋಲಿಸಿದರೆ ಓಮೈಕ್ರಾನ್ ಪ್ರಕರಣಗಳ ಸಂಖ್ಯೆಯಲ್ಲಿ ಶುಕ್ರವಾರ ಶೇ 3.69ರ ಹೆಚ್ಚಳವಾಗಿದೆ.

‘ವಿದೇಶದಿಂದ ಬರುವವರಿಗೆ ಪ್ರತ್ಯೇಕ ಐಸೋಲೇಷನ್ ಬೇಡ’

ನವದೆಹಲಿ (ಪಿಟಿಐ): ವಿದೇಶಗಳಿಂದ ಭಾರತಕ್ಕೆ ಬರುವ ಪ್ರಯಾಣಿಕರಿಗೆ ಕೇಂದ್ರ ಸರ್ಕಾರವು ಪರಿಷ್ಕೃತ ಮಾರ್ಗಸೂಚಿಯನ್ನು ಪ್ರಕಟಿಸಿದ್ದು, ಅದು ಶನಿವಾರದಿಂದಲೇ ಜಾರಿಗೆ ಬಂದಿದೆ.

ಇದುವರೆಗೆ ವಿದೇಶಗಳಿಂದ ಬರುವವರಲ್ಲಿ ಕೋವಿಡ್ ದೃಢಪಟ್ಟರೆ ಕಡ್ಡಾಯವಾಗಿ ಪ್ರತ್ಯೇಕ ಐಸೋಲೇಷನ್ ಕೇಂದ್ರದಲ್ಲಿ ಕ್ವಾರಂಟೈನ್‌ಗೆ ಒಳಪಡಬೇಕು ಎಂಬ ನಿಬಂಧನೆಯಿತ್ತು. ಆದರೆ ಈಗ ಕೋವಿಡ್ ನಿಯಮಗಳನ್ನು ಪಾಲಿಸಿಕೊಂಡು ಮನೆಯಲ್ಲೇ ಕ್ವಾರಂಟೈನ್‌ನಲ್ಲಿ ಇರಬಹುದಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಿದೇಶದಿಂದ ಬರುವ ಪ್ರಯಾಣಿಕರಿಗೆ ಗುರುವಾರ ಬಿಡುಗಡೆ ಮಾಡಿರುವ ಪರಿಷ್ಕೃತ ಮಾರ್ಗಸೂಚಿಯಲ್ಲಿ ಏಳು ದಿನಗಳ ಕಾಲ ಕ್ವಾರಂಟೈನ್‌ಗೆ ಒಳಪಡಬೇಕಾಗುತ್ತದೆ. ಬಳಿಕ ಎಂಟನೇ ದಿನದಂದು ಆರ್‌ಟಿ–ಪಿಸಿಆರ್ ಪರೀಕ್ಷೆ ಮಾಡಿಸಿಕೊಳ್ಳಬೇಕು ಎಂದು ತಿಳಿಸಿದೆ.

ಸ್ಕ್ರೀನಿಂಗ್ ಸಮಯದಲ್ಲಿ ರೋಗಲಕ್ಷಣಗಳು ಕಂಡುಬಂದರೆ ಪ್ರಯಾಣಿಕರನ್ನು ತಕ್ಷಣವೇ ಪ್ರತ್ಯೇಕಿಸಿ ವೈದ್ಯಕೀಯ ಕೇಂದ್ರಕ್ಕೆ ಕರೆದೊಯ್ಯಲಾಗುವುದು. ಕೋವಿಡ್ ದೃಢಪಟ್ಟರೆ ಸಂಪರ್ಕ ಹೊಂದಿರುವವರನ್ನು ಪತ್ತೆ ಹಚ್ಚಿ ಕೋವಿಡ್ ನಿಯಮಗಳಿಗೆ ಅನುಸಾರವಾಗಿ ನಿರ್ವಹಿಸಲಾಗುವುದು ಎಂದು ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ.

ಲೋಕಾಯುಕ್ತ ಕಚೇರಿ 32 ಮಂದಿಗೆ ಕೋವಿಡ್

ಬೆಂಗಳೂರು: ಲೋಕಾಯುಕ್ತ ಕಚೇರಿಯಲ್ಲಿ ನಾಲ್ಕು ದಿನದಲ್ಲಿ 365 ಅಧಿಕಾರಿಗಳು, ಸಿಬ್ಬಂದಿಗೆಯ ಗಂಟಲು, ಮೂಗಿನ ದ್ರವದ ಮಾದರಿಗಳ ಪರೀಕ್ಷೆ ನಡೆಸಿದ್ದು, 32 ಜನರಿಗೆ ಕೋವಿಡ್ ತಗುಲಿರುವುದು ದೃಢಪಟ್ಟಿದೆ ಎಂದು ಲೋಕಾಯುಕ್ತ ರಿಜಿಸ್ಟ್ರಾರ್ ತಿಳಿಸಿದ್ದಾರೆ.

25 ವರ್ಷಗಳ ಹಿಂದೆ

ಗುರುವಾರ, 23-1-1997

● **ರಾಜಸ್ಥಾನ: ಸದನದಲ್ಲಿ ಮಾರಾಮಾರಿ, ಸಮಾಜ ಕಲ್ಯಾಣ ಸಚಿವ ಮದನ್ ದಿಲ್ವಾರಗೆ ಕಪಾಳ ಮೋಕ್ಷ**

ಜೈಪುರ, ಜ. 22 (ಪಿಟಿಐ)– ಅಮಾನತುಗೊಂಡಿದ್ದ ಭಾರತೀಯ ಜನತಾ ಪಕ್ಷದ ಭಿನ್ನಮತೀಯ ಶಾಸಕ ಗೋಪಿಚಂದ್ ಗುರ್ಜಾರ್ ಅವರು, ಸಮಾಜ ಕಲ್ಯಾಣ ಸಚಿವ ಮದನ್ ದಿಲ್ವಾರ ಅವರಿಗೆ ಕಪಾಳ ಮೋಕ್ಷ ಮಾಡಿದ ಘಟನೆ ರಾಜಸ್ಥಾನ ವಿಧಾನಸಭೆಯಲ್ಲಿ ಇಂದು ನಡೆಯಿತು.

ಸದನದಲ್ಲಿ ನಡೆದ ಕೋಲಾಹಲ, ಮಾರಾಮಾರಿ ಘಟನೆಗಳ ಹಿನ್ನೆಲೆಯಲ್ಲಿ ಇಂದು ಮೂರು ಬಾರಿ ಮುಂದೂಡಲಾಗಿದ್ದ ವಿಧಾನಸಭೆಯನ್ನು ಅಂತಿಮವಾಗಿ ಮಾರ್ಚ್ 6ರವರೆಗೆ ಮುಂದೂಡಲಾಯಿತು.

50 ವರ್ಷಗಳ ಹಿಂದೆ

ಭಾನುವಾರ, 23-1-1972

● **ಮಾರ್ಚ್ 23ರಂದು ಪಾಕ್ ಪ್ರಾಂತೀಯ ಶಾಸನ ಸಭೆಗಳ ಸಮಾವೇಶ**

ನವದೆಹಲಿ, ಜ 22– ಪಾಕಿಸ್ತಾನದ ಪ್ರಾಂತೀಯ ಶಾಸನ ಸಭೆಗಳು ಮಾರ್ಚ್ 23ರಂದು ಸಮಾವೇಶಗೊಳ್ಳುವು ದೆಂದು ಅಧ್ಯಕ್ಷ ಭುಟ್ಟೋ ಪ್ರಕಟಿಸಿದ್ದಾರೆ.

ತಮ್ಮದೇ ಆದ ಪ್ರಜಾಪ್ರಭುತ್ವ ವಿಧಾನವನ್ನು ತರಲು ಅವರು ಉದ್ದೇಶಿಸಿದ್ದಾರೆ. ‘ಭವಿಷ್ಯ ಯಾವುದೇ ಸರ್ವಾಧಿಕಾರಿ ನಾಶಗೊಳಿಸಲಾರದಂತಹ ಪ್ರಜಾಪ್ರಭುತ್ವ’ ಎಂದು ಅವರು ತಮ್ಮ ಯೋಜನೆಯನ್ನು ಕರೆದಿದ್ದಾರೆ. ಶಾಸನ ಸಭೆಗಳು ಸಮಾವೇಶಗೊಂಡ ನಂತರ ಪ್ರಾಂತ್ಯಗಳಲ್ಲಿ ಸಚಿವ ಸಂಪುಟಗಳನ್ನು ರಚಿಸಲು ಬಹುಮತ ಪಡೆದ ಪಕ್ಷಗಳಿಗೆ ಕರೆ ಕೊಡಲಾಗುವುದು ಎಂದು ಅವರು ತಿಳಿಸಿದ್ದಾರೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಭಾನುವಾರ ಜನವರಿ 23, 2022

ಶ್ರೀಪ್ಲವನಾಮ ಸಂವತ್ಸರ ಉತ್ತರಾಯಣ–ಹೇಮಂತ ಋತು ಮಕರ ಮಾಸದ 09ನೇ ದಿನ, ತಿಥಿ: (ಪೌಷ ಕೃಷ್ಣ) ಪಂಚಮಿ ಗಂ. 09-13 **ನಕ್ಷತ್ರ:** ಉತ್ತರ ಫಲ್ಗುನಿ ಗಂ. 11-09 **ಯೋಗ:** ಅತಿಗಂಡ ಗಂ. 12-49, **ಕರಣ:** ತೈತಿಲ ಗಂ. 09-13. **ರಾಹುಕಾಲ:** ಸಾಯಂಕಾಲ 04:30–06:00, **ಸೂರ್ಯೋದಯ:** 07-01 **ಸೂರ್ಯಾಸ್ತ:** 06-23, **ಮುಸ್ಲಿಂ ದಿನಾಂಕ:** 19 ಜುಮಾದುಸ್ಸಾನಿ, **ದಿನ ವಿಶೇಷ:** ನೇತಾಜಿಯವರ ಜನ್ಮದಿನ, **ಅದೃಷ್ಟ ಸಂಖ್ಯೆ:** 7, 11.

ಮೇಷ: ಈ ದಿನ ಹೊಸದನ್ನು ಕಲಿಯುವುದಕ್ಕೆ ಬಹಳ ಉತ್ಸುಕರಾಗಿರುತ್ತೀರಿ. ದೀರ್ಘಕಾಲೀನ ಯೋಜನೆಗಳು ಫಲದಾಯಕವೆನಿಸಲಿದೆ. ನೀವು ಆಶಾವಾದಿಗಳಾಗಿರುವಿರಿ. ನಿಮ್ಮ ಸ್ಪರ್ಧಾ ಮನೋಭಾವದಿಂದ ಉನ್ನತ ಸ್ಥಾನಕ್ಕೆ ಏರಬಹುದು.

ವೃಷಭ: ತೋಟದ ಬೆಳೆಗಳಿಂದ ಉತ್ತಮ ಆದಾಯದೊಂದಿಗೆ ಮುಂದಿನ ಬೆಳೆಯ ವಿಸ್ತರಣೆಯ ಬಗ್ಗೆ ಯೋಚನೆ. ಭಾವನಾತ್ಮಕ ಆಲೋಚನೆ ಬದಿಗೆ ಸರಿಸಿ ಭಾವನೆಗಳ ಬದಲು ವಾಸ್ತವದತ್ತ ಗಮನ ಹರಿಸಲು ಇದು ಸೂಕ್ತವಾದ ಸಮಯ.

ಮಿಥುನ: ನಿಮ್ಮನ್ನು ಅತಿಯಾಗಿ ಪ್ರೀತಿಸುವ ಹಾಗೂ ಆದರಿಸುವ ಜನರೊಂದಿಗೆ ಕಾಲ ಕಳೆಯುವಿರಿ. ವ್ಯವಹಾರದಲ್ಲಿ ಎಲ್ಲಾ ಸನ್ನಿವೇಶಗಳು ನಿಮ್ಮ ಪರವಾಗಿರುವಂತೆ ತೋರಿದರೂ, ಮೋಸ ಹೋಗುವ ಸಂಭವವಿದೆ.

ಕರ್ಕಾಟಕ: ನಿಮ್ಮ ಸುತ್ತಲಿನ ವಿದ್ಯಮಾನಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಸಂಗ್ರಹಿಸಿ. ಜೀವನದ ಯಾವುದೇ ರಂಗದಲ್ಲಾದರೂ ನಿಮ್ಮ ಬಯಕೆಗೆ ತಕ್ಕಂತೆ ದೂರ ಕ್ರಮಿಸುವ ಸಾಮರ್ಥ್ಯ ನಿಮಗಿದೆ. ಅವಕಾಶಗಳನ್ನು ಬಳಸಿಕೊಳ್ಳಿರಿ.

ಸಿಂಹ: ಕೆಲಸದಲ್ಲಿ ಸಾಧಿಸಲು ಹೊಸ ಮಾರ್ಗ ಆರಿಸಿಕೊಳ್ಳಬೇಕಾಗುವುದು. ಹಣಕಾಸು ಸಂಸ್ಥೆಗೆ ಪಾಲುದಾರರಾಗಿ ಸೇರಿಕೊಳ್ಳುವ ಯೋಚನೆಯಲ್ಲಿರುವವರಿಗೆ ವ್ಯವಹಾರದ ಉದ್ದಗಲವು ತಿಳಿಯುವುದು. ಶ್ರೀ ಸುಬ್ರಹ್ಮಣ್ಯನನ್ನು ಪೂಜಿಸಿ.

ಕನ್ಯಾ: ವಸ್ತ್ರ ವಿನ್ಯಾಸದಲ್ಲಿ ವಿಶೇಷ ಪರಿಣತಿಯನ್ನು ಪಡೆದುಕೊಳ್ಳಬಹುದು. ಮನೋಬಲದ ಜೊತೆಯಲ್ಲಿ ಆರ್ಥಿಕ ಬಲದೃಢವಾಗಿಸಿಕೊಂಡರೆ ಕಾರ್ಯ ಸಫಲ. ದ್ವಿಚಕ್ರ ವಾಹನ ಮಾರಾಟಗಾರರಿಗೆ ಲಾಭ.

ತುಲಾ: ಷೇರುಗಳ ಮೇಲೆ ಹೆಚ್ಚಿನ ಹೂಡಿಕೆ ವಿಚಾರದಲ್ಲಿ ಆಳವಾಗಿ ಯೋಚಿಸಿ ತೀರ್ಮಾನ ಕೈಗೊಳ್ಳುವಂತೆ ಮಿತ್ರರಿಂದ ಸಲಹೆ ಬರುವುದು. ಅವರ ತೀರ್ಮಾನ ಬಹುಮಟ್ಟಿಗೆ ಸರಿಯಾಗಿರುವುದು. ರಕ್ತ ಶುದ್ಧತೆಯ ಬಗ್ಗೆ ಗಮನಹರಿಸಿ.

ವೃಶ್ಚಿಕ: ಮೇಲಧಿಕಾರಿಗಳ ವಿರುದ್ಧ ವಾದ ಮಾಡಿ ಸಮಯ ಹಾಳು ಮಾಡುವ ಬದಲು ಸಮಾಧಾನದಿಂದ ಕೆಲಸ ಮಾಡಿ. ಈಗಿನ ವಾಸ್ತವ ಪರಿಸ್ಥಿತಿ ನಿಮ್ಮ ರಕ್ಷಾ ಕವಚದಂತಿದೆ.

ಧನು: ಪೂರ್ವ ನಿಯಮಕವಾಗಿ ಕೆಲಸ ಮಾಡುವುದು ಬಹಳ ಮುಖ್ಯ. ಅಸಾಧ್ಯ ಕಾರ್ಯಗಳನ್ನೂ ಸಹ ಸಾಧಿಸಿ ತೋರಿಸುವಷ್ಟು ಮನೋಬಲ, ಛಲವನ್ನು ವೃದ್ಧಿಸಿಕೊಳ್ಳಿ.

ಮಕರ: ಪ್ರತಿಭೆಗೆ ತಕ್ಕ ಪ್ರತಿಫಲ ಸಿಗುವುದು. ಹೊಸ ಮನೆ ಕೊಳ್ಳುವ ಪ್ರಯತ್ನಕ್ಕೆ ಎಲ್ಲಾ ರೀತಿಯಲ್ಲಿಯೂ ಚಾಲನೆ ಸಿಗುವುದು. ಯಾವುದೇ ಜವಾಬ್ದಾರಿಯನ್ನೂ ಯೋಚಿಸದೇ, ಅವಸರದಲ್ಲಿ ಒಪ್ಪಿಕೊಳ್ಳಬೇಡಿ.

ಕುಂಭ: ಆಸ್ಪತ್ರೆ ಸಿಬ್ಬಂದಿ ವರ್ಗಕ್ಕೆ ಸರ್ಕಾರದಿಂದ ಸೌಲಭ್ಯ ಸಿಗಲಿದೆ. ಕುಟುಂಬದಲ್ಲಿ ನಿಮ್ಮ ಮೇಲಿನ ತಪ್ಪು ಕಲ್ಪನೆ ಹೋಗಲಾಡಿಸಿಕೊಳ್ಳುವಿರಿ. ದಿನಸಿ ವ್ಯಾಪಾರಿಗಳು ವ್ಯಾಪಾರದಲ್ಲಿ ಗುಣಮಟ್ಟ ಕಾಪಾಡುವ ಬಗ್ಗೆ ಗಮನಹರಿಸಿ.

ಮೀನ: ಸಂಗೀತ ಮತ್ತು ಕಲೆಯಲ್ಲಿ ಅಭಿರುಚಿ ಹೆಚ್ಚಲಿದೆ. ತುರ್ತು ಕಾರ್ಯಗಳು ವಿಳಂಬವಾಗದೆ ಲಾಭದಾಯಕವಾಗಿ ನಡೆಯುವುದು. ಕಾತುರದಿಂದ ಕಾಯುತಿದ್ದ ಸುದ್ದಿ ಕೇಳಿ ಮನಸ್ಸಿಗೆ ಹರ್ಷ ಉಂಟಾಗುವುದು.


ಪದಬಂಧ 4847 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಮಂಗಳಗ್ರಹವನ್ನು ಹೀಗೂ ಕರೆವರು (4)
3. ಪರಿವರ್ತನೆಯ ಕಾಲ (4)
5 ನಲ್ಲನಿಲ್ಲಿ ಉಲ್ಟಾ ನಿಂತಿಹನಲ್ಲಾ! (3)
7.ಮಂದಿರದಲ್ಲಿರುವ ಜನ! (2)
8.ಅಂಗವಿಕಲಿನಿರುವ ಗುಹೆ (2)
11.ತಿರುವು ಮುರುವಾದ ಬುದ್ಧಿ! (2)
13.ತಿರುಗಿದಾಗ ಕಾಣಿಸಿದ ಕೊಳೆ (2)
14.ಕನಸಿಲ್ಲಿ ನಿಜವೇ ಆಗಿದೆಯಲ್ಲಾ? (3)
16.ದೇವಾಲಯದ ಸಭಾಮಂಟಪ (4)
17.ವೃಕ್ಷದ ಹತ್ತಿರ ಕಾಣುತ್ತಿರುವ ಪಚ್ಚೆ (4)
14.ನನಗದು ಬೇಕೆಂದು ಬಯಸಿದ ಆಭರಣ (2)
15.ಹೂ ಇಲ್ಲಿದೆ (2)

ಮೇಲಿಂದ ಕೆಳಕ್ಕೆ

1.ಬಹಿರಂಗದ ವಿರುದ್ಧ ಪದ (4)
2.ಧಾನ್ಯ ಒಕ್ಕುವ ಸ್ಥಳ (2)
3.ಮಧುರ ಫಲ ನೀಡುವ ವೃಕ್ಷ (2)
4.ಪಾವತಿ ಪತ್ರವಿದು (3)
6.ಶ್ರೇಷ್ಠನಾದವನನ್ನು ಹೀಗೆಂದು ಕರೆಯಿರಿ (3)
7.ಸಮ್ಮತಿ ಕೊಡುವುದು (4)
9.ಭೇದಿಯಾಗಲು ಕೊಡುವ ಔಷಧ (4)
10.ಇದು ಮುಖ್ಯವಾದುದು (3)
12.ಈತ ಸಂಪ್ರದಾಯವನ್ನು ಅನುಸರಿಸುವವನು (4)
13.ಮಾನವಂತನಿಗೆ ಸಂದ ಮನ್ನಣೆ! (3)



4846ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 4.ತಿಟ್ಟು 5.ಭ್ರಮಣ 6.ಭವ 7.ಕಡಿಮೆ 9.ಗರತಿ 10.ದುರುಪಯೋಗ 11.ಆಕಳು 12.ನವಾಬ 15.ವ್ಯಥೆ 16.ಬೊಕ್ಕಸ 17.ಕುಳಿ 14.ಅಕ್ಕರೆ

ಮೇಲಿಂದ ಕೆಳಕ್ಕೆ: 1.ಅತಿರೇಕ 2.ಭ್ರಮರಿ 3.ಅವನತಿ 8.ಮೆದುಳು 9.ಗಗನ 11.ಆಯವ್ಯಯ 13.ಬತ್ತಳಿಕೆ

ಸುಡೊಕು 5233

4			9		1		3	
								4
8		3	4		5	9		
7								8
	8		1	6	2		9	
		9	7			2		
		8		1			4	
9	6	4	8		7	1		5
	1			9			8	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5232 ಸುಡೊಕು

6	2	4	9	1	7	3	5	8
5	1	3	8	4	6	9	2	7
9	7	8	2	5	3	4	1	6
7	4	9	5	3	8	1	6	2
1	8	6	4	2	9	7	3	5
2	3	5	6	7	1	8	4	9
4	9	2	3	8	5	6	7	1
3	6	1	7	9	2	5	8	4
8	5	7	1	6	4	2	9	3



ಪ್ರಶಸ್ತಿ ಗೆದ್ದ ಆಳ್ವಾಸ್ ಶಿಕ್ಷಣ ಸಂಸ್ಥೆಯ ತಂಡ. (ಎಡದಿಂದ): ನಂದಕುಮಾರ್, ಸಂಜಯ್, ಚೇತನ್, ಮಹದೇವಸ್ವಾಮಿ, ಶ್ರೀನಿವಾಸ್, ಮುತ್ತಮಿಳರಸ್

ಬಾಲ್ ಬ್ಯಾಡ್ಮಿಂಟನ್: ಆಳ್ವಾಸ್ ಚಾಂಪಿಯನ್

ಬೆಂಗಳೂರು: ಮೂಡುಬಿದಿರೆಯ ಆಳ್ವಾಸ್ ಶಿಕ್ಷಣ ಸಂಸ್ಥೆಯ ತಂಡ ಬಾಗಲಕೋಟೆಯ ಬೀಳಗಿಯಲ್ಲಿ ಈಚೆಗೆ ನಡೆದ ಪುರುಷರ ರಾಜ್ಯಮಟ್ಟದ ಬಾಲ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಪ್ರಶಸ್ತಿ ಮುಡಿಗೇರಿಸಿಕೊಂಡಿತು.

ಫೈನಲ್ ಪಂದ್ಯದಲ್ಲಿ ಆಳ್ವಾಸ್ ತಂಡ ಬೆಂಗಳೂರಿನ ಸಹ್ಯಾದ್ರಿ ಯೂತ್ ಕ್ಲಬ್ ವಿರುದ್ಧ 35-19 ಪಾಯಿಂಟ್‌ಗಳಿಂದ ಗೆಲುವು ಸಾಧಿಸಿತು.

ಸೆಮಿಫೈನಲ್ ಪಂದ್ಯಗಳಲ್ಲಿ ಆಳ್ವಾಸ್, ಕಾಮಧೇನು ಯೂತ್ ಕ್ಲಬ್ ತಂಡವನ್ನು ಹಾಗೂ ಸಹ್ಯಾದ್ರಿ, ಹಾಸನಂಬ ಬಿಬಿಸಿ ತಂಡವನ್ನು ನೇರ ಸೆಟ್‌ಗಳಿಂದ ಮಣಿಸಿತು. ಹಾಸನಂಬ ಬಿಬಿಸಿ ಮೂರನೇ ಸ್ಥಾನ ಹಾಗೂ ಬೆಂಗಳೂರಿನ ಕಾಮಧೇನು ತಂಡ ನಾಲ್ಕನೇ ಸ್ಥಾನ ಗಳಿಸಿತು.

ಎಫ್‌ಐಎಂ ಉಪಾಧ್ಯಕ್ಷರಾಗಿ ಸುಜಿತ್ ಪುನರಾಯ್ಕೆ

ಬೆಂಗಳೂರು: ಭಾರತದ ದ್ವಿಚಕ್ರ ವಾಹನ ರೇಸಿಂಗ್ ಕಮಿಷನ್ ಚೇರ್‌ಮನ್ ಸುಜಿತ್ ಕುಮಾರ್ ಬಿ.ಎಸ್ ಅವರು ಎಫ್‌ಐಎಂ ಏಷ್ಯಾದ ಉಪಾಧ್ಯಕ್ಷರಾಗಿ ಪುನರಾಯ್ಕೆಯಾಗಿದ್ದಾರೆ. ಎಫ್‌ಐಎಂ ಏಷ್ಯಾ ಮಂಡಳಿಗೆ ಪುನರಾಯ್ಕೆಯಾಗುತ್ತಿರುವ ಭಾರತದ ಮೊದಲ ವ್ಯಕ್ತಿಯಾಗಿದ್ದಾರೆ ಅವರು.



ಸುಜಿತ್ ಕುಮಾರ್

ಶುಕ್ರವಾರ ನಡೆದ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ನಾಲ್ಕು ವರ್ಷಗಳ ಅವಧಿಗೆ ಅವರ ಆಯ್ಕೆ ನಡೆಯಿತು.

ಫಿಲಿಪ್ಪೀನ್ಸ್‌ನ ಸ್ಟೀಫನ್ ಮೆಕೆ ಕರಾಪಿಯಟ್ ಅವರು ಅಧ್ಯಕ್ಷರಾಗಿ ಪುನರಾಯ್ಕೆಯಾದರು. ಗುವಾಮ್‌ನ ಸ್ವ್ಯಾನ್ ಯೊಸುಹಿರೊ, ಬಹರೇನ್‌ನ ಇಸಾ ಅಲ್ ಅವಾಧಿ ಮತ್ತು ಚೀನಾದ ಗಾಂಗ್ ಹುಂಗೊ ಇತರ ಉಪಾಧ್ಯಕ್ಷರು.

29 ರಾಷ್ಟ್ರಗಳ ಪ್ರತಿನಿಧಿಗಳು ಪಾಲ್ಗೊಂಡಿದ್ದ ಸಭೆಯಲ್ಲಿ ಬೆಂಗಳೂರಿನ ಸುಜಿತ್ ಅವರಿಗೆ ಗರಿಷ್ಠ ಮತಗಳು ಲಭಿಸಿವೆ.

ಸೈಯದ್ ಮೋದಿ ಬ್ಯಾಡ್ಮಿಂಟನ್ ಟೂರ್ನಿ: ಭಾರತದ ಆಟಗಾರ್ತಿಯರ ಮುಖಾಮುಖಿ

ಪ್ರಶಸ್ತಿಗೆ ಸಿಂಧು–ಮಾಳವಿಕಾ ಪೈಪೋಟಿ

ಲಖನೌ (ಪಿಟಿಐ): ಒಲಿಂಪಿಕ್ಸ್‌ನಲ್ಲಿ ಎರಡು ಬಾರಿ ಪದಕ ಗಳಿಸಿರುವ ಭಾರತದ ಪಿ.ವಿ.ಸಿಂಧು ಅವರು ಸೈಯದ್ ಮೋದಿ ಅಂತರರಾಷ್ಟ್ರೀಯ ಬ್ಯಾಡ್ಮಿಂಟನ್ ಟೂರ್ನಿಯ ಪ್ರಶಸ್ತಿ ಸುತ್ತು ಪ್ರವೇಶಿಸಿದ್ದಾರೆ. ಐದನೇ ಶ್ರೇಯಾಂಕಿತೆ, ರಷ್ಯಾದ ಎವ್ಜೀನಿಯಾ ಕೊಟೆಸ್ಕಾಯ ಎದುರು ಸಿಂಧು ಮೇಲುಗೈ ಸಾಧಿಸಿದ್ದರು. ಆದರೆ ಪಂದ್ಯದ ಅರ್ಧದಲ್ಲಿ ಎದುರಾಳಿ ನಿವೃತ್ತರಾಗಿ ಮರಳಿದರು.

ಮಹಿಳೆಯರ ವಿಭಾಗದ ಎರಡನೇ ಸೆಮಿಫೈನಲ್‌ನ ಮೊದಲ ಗೇಮ್‌ನಲ್ಲಿ ಸಿಂಧು 21-11ರಲ್ಲಿ ಮುನ್ನಡೆ ಸಾಧಿಸಿದ್ದರು. ಈ ಸಂದರ್ಭದಲ್ಲಿ ಎದುರಾಳಿ ನಿರ್ಗಮಿಸಿದರು. ಮಾಜಿ ವಿಶ್ವ ಚಾಂಪಿಯನ್ ಸಿಂಧು ಭಾನುವಾರ ನಡೆಯಲಿರುವ ಫೈನಲ್‌ನಲ್ಲಿ ಭಾರತದವರೇ ಆದ ಮಾಳವಿಕಾ ಬಾನ್ಸೋಡ್ ಅವರನ್ನು ಎದುರಿಸುವರು.

ಭಾರತದ ಅನುಪಮಾ ಉಪಾಧ್ಯಾಯ ಅವರನ್ನು 19-21, 21-19, 21-7ರಲ್ಲಿ ಸೋಲಿಸಿ ಮಾಳವಿಕಾ ಮೊದಲ ಸೆಮಿಫೈನಲ್‌ನಲ್ಲಿ ಸೋಲಿಸಿದರು. ಸಿಂಧು ಮತ್ತು ಎವ್ಜೀನಿಯಾ ನಡುವಿನ ಹಣಾಹಣಿಯಲ್ಲಿ ಸಿಂಧು ಮೇಲುಗೈ ನಿರೀಕ್ಷಿಸಲಾಗಿತ್ತು. ಬಿಡಬ್ಲ್ಯುಎಫ್ ರ‍್ಯಾಂಕಿಂಗ್‌ನಲ್ಲಿ ಏಳನೇ ಸ್ಥಾನದಲ್ಲಿರುವ ಸಿಂಧು 28ನೇ ಸ್ಥಾನದಲ್ಲಿರುವ ಎವ್ಜೀನಿಯಾ ಅವರನ್ನು ಈ ಹಿಂದೆ ಎರಡು ಬಾರಿ ಸೋಲಿಸಿದ್ದರು.



ಪಿ.ವಿ.ಸಿಂಧು –ಪಿಟಿಐ ಚಿತ್ರ



ಮಾಳವಿಕಾ ಬಾನ್ಸೋಡ್ –ಪಿಟಿಐ ಚಿತ್ರ

ದಕ್ಷಿಣ ಆಫ್ರಿಕಾ ಎದುರಿನ ಏಕದಿನ ಸರಣಿಯ ಪಂದ್ಯ

ಸಮಾಧಾನಕರ ಜಯದತ್ತ ಭಾರತದ ಚಿತ್ತ

ಕೇಪ್‌ಟೌನ್ (ಪಿಟಿಐ): ದಕ್ಷಿಣ ಆಫ್ರಿಕಾ ಎದುರಿನ ಏಕದಿನ ಕ್ರಿಕೆಟ್ ಸರಣಿಯಲ್ಲಿ ಕ್ಲೀನ್‌ಸ್ವೀಪ್ ತಪ್ಪಿಸಿಕೊಳ್ಳುವ ಒತ್ತಡದಲ್ಲಿ ಕೆ.ಎಲ್. ರಾಹುಲ್ ನಾಯಕತ್ವದ ಭಾರತ ತಂಡ ಇದೆ.

ಟೆಸ್ಟ್ ಸರಣಿ ಸೋಲು. ಏಕದಿನ ಸರಣಿಯ ಮೊದಲೆರಡೂ ಪಂದ್ಯಗಳಲ್ಲಿ ನಿರಾಶೆ ಅನುಭವಿಸಿರುವ ಪ್ರವಾಸಿ ಬಳಗವು ಮೂರನೇ ಮತ್ತು ಕೊನೆಯ ಕೆಲವು ಆಟಗಾರರ ಬದಲಾವಣೆಯೊಂದಿಗೆ ಕಣಕ್ಕಿಳಿಯುವ ಸಾಧ್ಯತೆ ಇದೆ.

ಜಸ್‌ಪ್ರೀತ್ ಬೂಮ್ರಾ ಮತ್ತು ಶಾರ್ದೂಲ್ ಠಾಕೂರ್ ಉತ್ತಮ ಲಯದಲ್ಲಿದ್ದಾರೆ. ಠಾಕೂರ್ ಎರಡೂ ಪಂದ್ಯಗಳಲ್ಲಿ ಬ್ಯಾಟಿಂಗ್‌ನಲ್ಲಿಯೂ ಉಪಯುಕ್ತ ಕಾಣಿಕೆ ನೀಡಿದ್ದಾರೆ. ರಾಹುಲ್, ಶಿಖರ್ ಉತ್ತಮ ಆರಂಭ ನೀಡಿದರೆ ತಂಡದ ದೊಡ್ಡ ಮೊತ್ತ ಗಳಿಸಲು ಸಾಧ್ಯವಾಗಬಹುದು. ವಿರಾಟ್ ಲಯಕ್ಕೆ ಮರಳಿದರೆ ತಂಡದ ಬಲ ಹೆಚ್ಚಬಹುದು. ಮಧ್ಯಮ ಕ್ರಮಾಂಕದಲ್ಲಿ ರಿಷಭ್ ಪಂತ್ ವಿಶ್ವಾಸಾರ್ಹ ಬ್ಯಾಟರ್ ಆಗಿದ್ದಾರೆ.ಈ ಪಂದ್ಯದಲ್ಲಿ ಭುವಿ ಬದಲು ನವದೀಪ್ ಸೈನಿ ಸ್ಥಾನ ಪಡೆಯಬಹುದು. ಶಿಖರ್‌ಗೆ ವಿಶ್ರಾಂತಿ ಕೊಟ್ಟರೆ ಋತುರಾಜ್ ಗಾಯಕವಾಡ್ ನಾಯಕನೊಂದಿಗೆ ಇನಿಂಗ್ಸ್ ಆರಂಭಿಸಬಹುದು. ಈ ಪ್ರವಾಸದಲ್ಲಿ ಮೊದಲ ಟೆಸ್ಟ್‌ನಲ್ಲಿ ಮಾತ್ರ ಜಯಿಸಿರುವ ಭಾರತ ಅನುಭವಿಸಿರುವ ನಿರಾಶೆಯ ಸರ ಪಳಿ ಕಳಚಲು ಇದು ಕೊನೆಯ ಅವಕಾಶ ವಾಗಿದೆ.

ಪಂದ್ಯ ಆರಂಭ: ಮಧ್ಯಾಹ್ನ 2
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಮುಂಬೈ ರೇಸ್

ಲಗಾರ್ಡೆ ಗೆಲ್ಲುವ ನಿರೀಕ್ಷೆ

ವಿಲ್ಲೂ ಪೂನಾವಾಲ ಇಂಡಿಯನ್ ಸೇಂಟ್ ಲೆಜೆರ್ ಭಾನುವಾರದ ಮುಂಬೈ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು ಈ ರೇಸ್‌ನಲ್ಲಿ ಲಗಾರ್ಡೆ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 12.45ಕ್ಕೆ ಪ್ರಾರಂಭವಾಗಲಿರುವ ದಿನದ ಒಂಬತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ರಾಡ್ರಿಗೊ 1, ಫಾರ್ಚೂನ್ ಕುಕಿ 5, ಅಸೆಂಬರ್ 8
2ನೇ ರೇಸ್: ಇರ್ರೆಪ್ರೆಸ್ಸಿಬಲ್ 4, ಬ್ರಾಜೋಸ್ 8, ಸ್ಕಾಟ್‌ಲ್ಯಾಂಡ್ 12
3ನೇ ರೇಸ್: ಏಗಾನ್ 3, ಜೋಕ್ವಿನ್ 2
4ನೇ ರೇಸ್: ಡ್ರೀಮ್ಸ್ 1, ಇವಾಂಜೆಲೈನ್ 2, ಗಿಲ್ಟ್ ಎಡ್ಜ್ 5
5ನೇ ರೇಸ್: ಬಾಲೆನ್ಸಿಯಾಗ 2, ಡಿವೈನ್ ಥಾಟ್ಸ್ 5, ಪೆಗಾಸೊ 1
6ನೇ ರೇಸ್: ದಿ ಬಾವಾಜಿ 1, ಫ್ಲೆಮಿಂಗ್ ಲಂಬಾರ್ಗಿನಿ 2, ಸರ್ಕಲ್ ಆಫ್ ಲವ್ 6
7ನೇ ರೇಸ್: ಲಗಾರ್ಡೆ 1, ಥಿಯಾನ್ 3
8ನೇ ರೇಸ್: ರ‍್ಯಾಂಬ್ಲರ್ 1, ಚಾನ್ಸಲರ್ 4, ಸ್ಯಾಂಡ್‌ಮ್ಯಾನ್ 5
9ನೇ ರೇಸ್: ಎಕ್ಸ್‌ಕ್ಲೂಸಿವ್ 10, ಮೈಸೆಲ್ಲಾ 3, ರೆಮಿ ರೆಡ್ 9

ಉತ್ತಮ ಬೆಟ್: ರ‍್ಯಾಂಬ್ಲರ್

1ನೇ ಜಾಕ್‌ಪಾಟ್	2ನೇ ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
2,3,4,5,6	5,6,7,8,9	3,4,5	6,7,8	7,8,9

ಗೆಲುವಿನ ಓಟ ಮುಂದುವರಿಸುವ ಛಲದಲ್ಲಿ ಭಾರತ

ಮಸ್ಕತ್ (ಪಿಟಿಐ): ಸವಿತಾ ಪೂನಿಯಾ ನಾಯಕತ್ವದ ಭಾರತ ತಂಡವು ಏಷ್ಯಾ ಕಪ್ ಮಹಿಳೆಯರ ಹಾಕಿ ಟೂರ್ನಿಯಲ್ಲಿ ಭಾನುವಾರ ಜಪಾನ್ ವಿರುದ್ಧ ಆಡಲಿದೆ.

ಟೂರ್ನಿಯ ಮೊದಲ ಪಂದ್ಯದಲ್ಲಿ ಮಲೇಷ್ಯಾ ವಿರುದ್ಧ ಭರ್ಜರಿ ಜಯ ಗಳಿಸಿದ್ದ ತಂಡವು ಆತ್ಮವಿಶ್ವಾಸದ ಉತ್ತುಂಗದಲ್ಲಿದೆ.

ಅನುಭವಿ ಸ್ಟ್ರೈಕರ್ ವಂದನಾ ಕಟಾರಿಯಾ, ನವನೀತ್ ಕೌರ್ ಮತ್ತು ಶರ್ಮಿಲಾ ದೇವಿ ಮಲೇಷ್ಯಾ ವಿರುದ್ಧ ಮಿಂಚಿದ್ದರು. ಲಾಲ್‌ರೆಮಿಸಿಯಾಮಿ, ಮೋನಿಕಾ ಮತ್ತು ದೀಪ್ ಗ್ರೇಸ್ ಎಕ್ಕಾ ಅವರು ಪೆನಾಲ್ಟಿ ಕಾರ್ನರ್‌ಗಳನ್ನು ಗೋಲುಗಳಲ್ಲಿ ಪರಿವರ್ತಿಸಿದರು.

ಮಲೇಷ್ಯಾ ವಿರುದ್ಧದ ಪಂದ್ಯದಲ್ಲಿ ಭಾರತದ ಫಾರ್ವರ್ಡ್ ಆಟಗಾರ್ತಿಯರು ಉತ್ತಮವಾಗಿ ಆಡಿದ್ದರು. ಜಪಾನ್ ವಿಶ್ವ ರ‍್ಯಾಂಕಿಂಗ್‌ನಲ್ಲಿ 14ನೇ ಸ್ಥಾನದಲ್ಲಿದೆ.

ಆಸ್ಟ್ರೇಲಿಯನ್ ಓಪನ್ ಟೆನಿಸ್ ಟೂರ್ನಿ: ಸಬಲೆಂಕಾ, ಸಿಮೋನಾಗೆ ಗೆಲುವು

ಮೆಡ್ವೆಡೆವ್, ಸಿಟ್ಸಿಪಾಸ್ ಜಯಭೇರಿ

ಮೆಲ್ಬರ್ನ್ (ಎಪಿ/ರಾಯಿಟರ್ಸ್): ಆಸ್ಟ್ರೇಲಿಯನ್ ಓಪನ್ ಟೆನಿಸ್ ಟೂರ್ನಿಯ ಪ್ರಶಸ್ತಿ ಗೆಲ್ಲುವ ನೆಚ್ಚಿನ ಆಟಗಾರರಲ್ಲಿ ಒಬ್ಬರೆಂದು ಬಿಂಬಿತವಾಗಿದ್ದಾರೆ, ರಷ್ಯಾದ ಡ್ಯಾನಿಲ್ ಮೆಡ್ವೆಡೆವ್ ಶನಿವಾರವೂ ಭರ್ಜರಿ ಪ್ರದರ್ಶನ ನೀಡಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದಾರೆ.

ನೆದರ್ಲೆಂಡ್ಸ್‌ನ ಬಾಟಿಕ್ ವ್ಯಾನ್ ಡಿ ಜ್ಯಾಂಡ್‌ಶುಲ್ಪ್ ಎದುರು ಮಾರ್ಗರೆಟ್ ಕೋರ್ಟ್ ಅರೆನಾದಲ್ಲಿ ನಡೆದ ಮೂರನೇ ಸುತ್ತಿನ ಪಂದ್ಯದಲ್ಲಿ ಮೆಡ್ವೆಡೆವ್ 6-4, 6-4, 6-2ರಲ್ಲಿ ಜಯ ಗಳಿಸಿದರು. ಎರಡು ದಿನಗಳ ಹಿಂದೆ ರಾಡ್ ಲಾವೆರ್ ಅಂಗಣದಲ್ಲಿ ನಡೆದ ಪಂದ್ಯದಲ್ಲಿ ಸ್ಥಳೀಯ ಆಟಗಾರ ನಿಕ್ ಕಿರ್ಗಿಯೋಸ್ ವಿರುದ್ಧ ಭರ್ಜರಿ ಆಟವಾಡಿ ಪ್ರೇಕ್ಷಕರ ಮನಗೆದ್ದಿರುವ ಮೆಡ್ವೆಡೆವ್ ಶನಿವಾರ ಮತ್ತೊಮ್ಮೆ ಮಿಂಚಿನ ಸಂಚಾರ ಮೂಡಿಸಿದರು.

ವೈಲ್ಡ್ ಕಾರ್ಡ್ ಮೂಲಕ ಪ್ರವೇಶಿಸಿದ್ದ ಆಸ್ಟ್ರೇಲಿಯಾದ ಕ್ರಿಸ್ ಒಕಾನೆಲ್ ಅಮೆರಿಕದ ಮ್ಯಾಕ್ಸಿಮ್ ಕ್ರಿಸಿಗೆ ಮಣಿದು ಹೊರಬಿದ್ದರು. ಮೂರನೇ ಅಂಗಣದಲ್ಲಿ ನಡೆದ ಹಣಾಹಣಿಯಲ್ಲಿ ಮ್ಯಾಕ್ಸಿಮ್ 6-2, 6-7 (6), 6-3, 6-2ರಲ್ಲಿ ಗೆಲುವು ದಾಖಲಿಸಿದರು. ಈ ಮೂಲಕ ಆಸ್ಟ್ರೇಲಿಯನ್ ಓಪನ್ ಟೂರ್ನಿಯಲ್ಲಿ ಇದೇ ಮೊದಲ ಬಾರಿ ನಾಲ್ವರು ಅಮೆರಿಕದ ಆಟಗಾರರು ನಾಲ್ಕನೇ ಸುತ್ತು ಪ್ರವೇಶಿಸಿದಂತಾಯಿತು. ವಿಶ್ವ ಕ್ರಮಾಂಕದಲ್ಲಿ 70ನೇ ಸ್ಥಾನದಲ್ಲಿರುವ ಕ್ರಿಸಿಗೆ ಇದು ನಾಲ್ಕನೇ ಗ್ರ್ಯಾನ್‌ಸ್ಲಾಂ ಟೂರ್ನಿ.

20ನೇ ಕ್ರಮಾಂಕದ ಅಮೆರಿಕ ಆಟಗಾರ ಟೇಲರ್ ಫ್ರಿಟ್ಜ್ 6-0, 3-6, 3-6, 6-4, 6-3ರಲ್ಲಿ ಗೆದ್ದು ಸ್ಪೇನ್‌ನ ರಾಬರ್ಟೊ ಬೌಟಿಸ್ಟ್ ಅಗೂಟ್ ಅವರನ್ನು ಹೊರದಬ್ಬಿದರು. ಮುಂದಿನ ಸುತ್ತಿನಲ್ಲಿ ಅವರು ಗ್ರೀಸ್‌ನ ಸ್ಟೆಫನೋಸ್ ಸಿಟ್ಸಿಪಾಸ್ ಅವರನ್ನು ಎದುರಿಸುವರು. ಸಿಟ್ಸಿಪಾಸ್ 6-3, 7-5, 6-7 (2), 6-4ರಲ್ಲಿ ಫ್ರಾನ್ಸ್‌ನ ಬೆನಾಯ್ಟ್ ಪೇರ್ ವಿರುದ್ಧ ಗೆದ್ದರು. ಕೆನಡಾದ ಫೆಲಿಕ್ಸ್ ಆಗರ್ ಅಲಿಯಾಸಿಮ್ 6-4, 6-1, 6-1ರಲ್ಲಿ ಅಮೆರಿಕದ ಡ್ಯಾನ್ ಇವಾನ್ಸ್ ಅವರನ್ನು ಮಣಿಸಿದರು.



ಸಿಮೋನಾ ಹಲೆಪ್ –ಎಎಫ್‌ಪಿ ಚಿತ್ರ

ಸಿಮೋನಾ, ಸಬಲೆಂಕಾ ಜಯಭೇರಿ: ಮಹಿಳೆಯರ ವಿಭಾಗದಲ್ಲಿ ಎರಡು ಬಾರಿಯ ಗ್ರ್ಯಾಂ ಸ್ಲಾಂ ವಿಜೇತೆ ರೊಮೇನಿಯಾದ ಸಿಮೋನಾ ಹಲೆಪ್ ಮತ್ತು ಎರಡನೇ ಶ್ರೇಯಾಂಕಿತೆ ಬೆಲಾರಸ್‌ನ ಅರಿನಾ ಸಬಲೆಂಕಾ ನಾಲ್ಕನೇ ಸುತ್ತು ಪ್ರವೇಶಿಸಿದರು. 6-2, 6-1ರಲ್ಲಿ ಮಾಂಟೆನೆಗ್ರೊದ ಡಂಕಾ ಕೊವಿನಿಚ್ ಅವರನ್ನು ಮಣಿಸಿ ಸಿಮೋನಾ ಸತತ ಐದನೇ ಬಾರಿ ಆಸ್ಟ್ರೇಲಿಯನ್ ಓಪನ್‌ನ ಎರಡನೇ ವಾರದ ಹಣಾಹಣಿಗೆ ಸಜ್ಜಾದರು. ಸಬಲೆಂಕಾ 4-6, 6-3, 6-1ರಲ್ಲಿ ಜೆಕಿಯಾದ ಮರ್ಕೆಟಾ ವಂಡ್ರೋಸ್ವಾ ಎದುರು ಗೆದ್ದರು. 2020ರ ಫ್ರೆಂಚ್ ಓಪನ್ ಚಾಂಪಿಯನ್ ಇಗಾ ಸ್ವಾಟೆಕ್ 6-2, 6-3ರಲ್ಲಿ ದಾರಿಯಾ ಕಸಾತ್ಕಿನಾ ಎದುರು ಜಯ ಗಳಿಸಿದರು.




ರಷ್ಯಾದ ಡ್ಯಾನಿಲ್ ಮೆಡ್ವೆಡೆವ್ ಸರ್ವ್ ಮಾಡಿದ ಬಗೆ –ಎಎಫ್‌ಪಿ ಚಿತ್ರ

ಜನ್ಮದಿನದ ಸಂಭ್ರಮ ಹೆಚ್ಚಿಸಿದ ಜಯ

ಮಾರ್ಗರೆಟ್ ಕೋರ್ಟ್ ಅರೆನಾದ ಮಧ್ಯದಲ್ಲಿ ನಿಂತು ಗೆಲುವಿನ ಸಂಭ್ರಮವನ್ನು ಅನುಭವಿಸಿದ ಫ್ರಾನ್ಸ್‌ನ ಅಲಿಜ್ ಕಾರ್ನೆಟ್ ಪ್ರೇಕ್ಷಕರತ್ತ ಕೈ ಬೀಸಿ ಜನ್ಮದಿನದ ಶುಭಕಾಮನೆಗಳಿಗೆ ಕೃತಜ್ಞತೆ ಸಲ್ಲಿಸಿದರು.

32ನೇ ಜನ್ಮದಿನವಾದ ಶನಿವಾರ ನಡೆದ ಮೂರನೇ ಸುತ್ತಿನ ಪಂದ್ಯದಲ್ಲಿ ಅಲಿಜ್ 4-6, 6-4, 6-2ರಲ್ಲಿ 29ನೇ ಶ್ರೇಯಾಂಕಿತೆ ತಮಾರ ಜಿಡಾನ್ಸೆಕ್ ಅವರನ್ನು ಮಣಿಸಿದರು. ಸ್ಲೊವೇನಿಯಾ ಆಟಗಾರ್ತಿ ಎರಡು ತಾಸು 43 ನಿಮಿಷಗಳ ಹೋರಾಟದ ನಂತರ ಮಣಿದರು. 13 ವರ್ಷಗಳ ನಂತರ ಆಸ್ಟ್ರೇಲಿಯನ್ ಓಪನ್ ಟೂರ್ನಿಯಲ್ಲಿ ಅಲಿಜ್ ನಾಲ್ಕನೇ ಸುತ್ತು ಪ್ರವೇಶಿಸಿದ್ದಾರೆ. 2009ರಲ್ಲಿ ರಷ್ಯಾದ ದಿನಾರ ಸಫಿನಾ ಎದುರು ಅವರು ಸೋತಿದ್ದರು. ವಿಶ್ವ ಕ್ರಮಾಂಕದಲ್ಲಿ 61ನೇ ಸ್ಥಾನದಲ್ಲಿರುವ ಅಲಿಜ್‌ಗೆ ಮುಂದಿನ ಸುತ್ತಿನಲ್ಲಿ ಸಿಮೋನಾ ಹಲೆಪ್ ಎದುರಾಳಿ.



ಅಲಿಜ್ ಕಾರ್ನೆಟ್ – ಎಎಫ್‌ಪಿ ಸಂಗ್ರಹ ಚಿತ್ರ

ಫುಟ್‌ಬಾಲ್ ದಿಗ್ಗಜ ಭೌಮಿಕ್ ಇನ್ನಿಲ್ಲ

ಕೋಲ್ಕತ್ತ (ಪಿಟಿಐ): ಏಷ್ಯನ್ ಗೇಮ್ಸ್ ಕಂಚಿನ ಪದಕ ವಿಜೇತ ಭಾರತ ಫುಟ್‌ಬಾಲ್ ತಂಡದ ಆಟಗಾರ ಸುಭಾಸ್ ಭೌಮಿಕ್ (72) ಶನಿವಾರ ಬೆಳಿಗ್ಗೆ ನಿಧನರಾದರು.



ಸುಭಾಸ್

ಅವರು ಕೆಲವು ತಿಂಗಳುಗಳಿಂದ ಮೂತ್ರಪಿಂಡದ ಸಮಸ್ಯೆಯಿಂದ ಬಳಲುತ್ತಿದ್ದರು. ಅವರಿಗೆ ಪತ್ನಿ, ಮಗ ಮತ್ತು ಮಗಳು ಇದ್ದಾರೆ.

‘ಕಳೆದ ಮೂರುವರೆ ತಿಂಗಳುಗಳಿಂದ ಅವರಿಗೆ ಡಯಾಲಿಸಿಸ್ ಚಿಕಿತ್ಸೆ ನೀಡಲಾಗುತ್ತಿತ್ತು. 23 ವರ್ಷಗಳ ಹಿಂದೆ ಅವರು ಹೃದಯದ ಬೈಪಾಸ್ ಶಸ್ತ್ರಚಿಕಿತ್ಸೆಗೂ ಒಳಗಾಗಿದ್ದರು. ಈಚೆಗೆ ಎದೆಯ ಸೋಂಕಿನಿಂದ ಬಳಲಿದ್ದ ಅವರನ್ನು ಇಕ್ಬಾಲ್‌ಪುರದ ಆಸ್ಪತ್ರೆಯಲ್ಲಿ ದಾಖಲಿಸಲಾಗಿತ್ತು’ ಎಂದು ಅವರ ಕುಟುಂಬದ ಸದಸ್ಯರೊಬ್ಬರು ತಿಳಿಸಿದ್ದಾರೆ.

1970ರ ಏಷ್ಯನ್ ಗೇಮ್ಸ್‌ನಲ್ಲಿ ಆಡಿದ್ದ ಭಾರತ ತಂಡದಲ್ಲಿ ಅವರಿದ್ದರು. ‘ಬುಲ್ಡೋಜರ್’ ಎಂದೇ ಖ್ಯಾತರಾಗಿದ್ದ ಸುಭಾಷ್ ಮತ್ತು ಅವರೊಂದಿಗೆ ಸುಧೀರ್ ಕರ್ಮಾಕರ್ ಅವರು ರೈಟ್ ಬ್ಯಾಕ್‌ನಲ್ಲಿ ಅಮೋಘವಾಗಿ ಆಡಿದ್ದರು.

60 ಮತ್ತು 70ರ ದಶಕದಲ್ಲಿ ಖ್ಯಾತ ನಾಮ ಅಂತರರಾಷ್ಟ್ರೀಯ ಫುಟ್‌ಬಾಲ್ ಆಟಗಾರರಾಗಿದ್ದ ಪ್ರದೀಪ್ ಬ್ಯಾನರ್ಜಿ, ಚುನಿ ಗೋಸ್ವಾಮಿ, ತುಳಸಿದಾಸ್ ಬಲರಾಮ್, ಜರ್ನೈಲ್ ಸಿಂಗ್, ಅರುಣ್ ಘೋಷ್, ಪೀಟರ್ ತಂಗರಾಜ್ ಅವರೊಂದಿಗೆ ಭೌಮಿಕ್ ಅವರದ್ದು ಗಣನೀಯ ಸಾಧನೆಯಾಗಿದೆ. ಭಾರತ ತಂಡದಲ್ಲಿ ಅವರು 24 ಪಂದ್ಯಗಳನ್ನು ಆಡಿದ್ದಾರೆ. 9 ಗೋಲು ಹೊಡೆದಿದ್ದಾರೆ. ಮೆರ್ಡೆಕಾ ಕಪ್ ಟೂರ್ನಿಯಲ್ಲಿ ಅವರು ಹ್ಯಾಟ್ರಿಕ್ ಸಾಧನೆ ಮಾಡಿದ್ದರು.

ರಿಲಯನ್ಸ್ ಡಿಜಿಟಲ್‌ನಲ್ಲಿ ಎಲೆಕ್ಟ್ರಾನಿಕ್ಸ್ ಸೇಲ್

ಪ್ರಜಾವಾಣಿ ವಾರ್ತೆ


ಬೆಂಗಳೂರು: ಗಣರಾಜ್ಯೋತ್ಸವದ ಪ್ರಯುಕ್ತ ರಿಲಯನ್ಸ್ ಡಿಜಿಟಲ್‌ನಲ್ಲಿ ಎಲೆಕ್ಟ್ರಾನಿಕ್ ಸಾಧನಗಳ ಮಾರಾಟ ಆರಂಭವಾಗಿದೆ. ರಿಲಯನ್ಸ್ ಡಿಜಿಟಲ್ ಸ್ಟೋರ್, ಮೈ ಜಿಯೋ ಸ್ಟೋರ್ ಮತ್ತು www.reliancedigital.in ನಲ್ಲಿ ರಿಯಾಯಿತಿ ದರದಲ್ಲಿ ಖರೀದಿಸಬಹುದಾಗಿದೆ.

ಟಿವಿ, ಸ್ಮಾರ್ಟ್‌ಫೋನ್, ಲ್ಯಾಪ್‌ಟಾಪ್, ರೆಫ್ರಿಜರೇಟರ್, ವಾಷಿಂಗ್ ಮೆಷಿನ್, ಸ್ಮಾರ್ಟ್ ಸಾಧನ ಮತ್ತು ಗೃಹೋಪಯೋಗಿ ಎಲೆಕ್ಟ್ರಾನಿಕ್ ಉಪಕರಣಗಳ ಮೇಲೆ ವಿಶೇಷ ಕೊಡುಗೆಗಳಿವೆ. ಈ ಕೊಡುಗೆಗಳು ಇದೇ ತಿಂಗಳ 26ರವರೆಗೆ ಜಾರಿಯಲ್ಲಿ ಇರಲಿವೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ. ಕ್ರೆಡಿಟ್ ಕಾರ್ಡ್‌ಗಳ ಮೇಲೆಯೂ ರಿಯಾಯಿತಿ ಸಿಗಲಿದೆ ಎಂದು ತಿಳಿಸಿದೆ.

ಸಾರ್ವಜನಿಕ ವೈಫೈ ಹಾಟ್‌ಸ್ಪಾಟ್: 3 ಕೋಟಿ ಉದ್ಯೋಗ ಸೃಷ್ಟಿ ಸಾಧ್ಯತೆ

ನವದೆಹಲಿ (ಪಿಟಿಐ): ಈ ವರ್ಷದೊಳಗೆ ದೇಶದಾದ್ಯಂತ ಒಂದು ಕೋಟಿ ಸಾರ್ವಜನಿಕ ವೈಫೈ ಹಾಟ್‌ಸ್ಪಾಟ್‌ಗಳನ್ನು ಸ್ಥಾಪಿಸುವುದರಿಂದ 2 ರಿಂದ 3 ಕೋಟಿ ಉದ್ಯೋಗಾವಕಾಶಗಳು ಸೃಷ್ಟಿಯಾಗಲಿವೆ ಎಂದು ದೂರಸಂಪರ್ಕ ಸಚಿವ ಕೆ. ರಾಜಾರಾಮನ್ ಹೇಳಿದ್ದಾರೆ.

ಬ್ರಾಡ್‌ಬ್ಯಾಂಡ್ ಇಂಡಿಯಾ ಫೋರಂ (ಬಿಐಎಫ್) ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರತಿ ಒಂದು ಹಾಟ್‌ಸ್ಪಾಟ್‌ನಿಂದ ನೇರ ಮತ್ತು ಪರೋಕ್ಷವಾಗಿ 2 ರಿಂದ 3 ಉದ್ಯೋಗಾವಕಾಶಗಳು ಸೃಷ್ಟಿಯಾಗುವ ಅಂದಾಜು ಮಾಡಲಾಗಿದೆ. ರಾಷ್ಟ್ರೀಯ ಡಿಜಿಟಲ್ ಸಂವಹನ ನೀತಿಯ (ಎನ್‌ಡಿಸಿಪಿ) 2022ರೊಳಗೆ 1 ಕೋಟಿ ಹಾಟ್‌ಸ್ಪಾಟ್ ಅಳವಡಿಸುವ ಗುರಿ ಇಟ್ಟುಕೊಂಡಿದೆ. ಈ ಹಾಟ್‌ಸ್ಪಾಟ್‌ಗಳು ಸಣ್ಣ ಮತ್ತು ಮಧ್ಯಮ ಗಾತ್ರದ ವಲಯಗಳಲ್ಲಿ 2 ರಿಂದ 3 ಕೋಟಿ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಸಾಮರ್ಥ್ಯವನ್ನು ಹೊಂದಿವೆ ಎಂದು ತಿಳಿಸಿದ್ದಾರೆ.



ದೇಶದಾದ್ಯಂತ ವೈಫೈ ಹಾಟ್‌ಸ್ಪಾಟ್‌ಗಳನ್ನು ಸ್ಥಾಪಿಸುವ ಗುರಿಯನ್ನು ಹೊಂದಿರುವ ಪ್ರಧಾನ ಮಂತ್ರಿಗಳ ವೈ-ಫೈ ಅಕ್ಸೆಸ್ ನೆಟ್‌ವರ್ಕ್ ಇಂಟರ್‌ಫೇಸ್ (ಪಿಎಂ-ವಾಣಿ) ಯೋಜನೆಯ ವಿಸ್ತರಣೆಗಾಗಿ ತಮ್ಮ ಉತ್ಪನ್ನಗಳ ಬೆಲೆಯನ್ನು ಕಡಿಮೆ ಮಾಡುವಂತೆ ವೈ-ಫೈ ಉಪಕರಣ ತಯಾರಕರಿಗೆ ಕಾರ್ಯಕ್ರಮದಲ್ಲಿ ಕರೆ ನೀಡಲಾಯಿತು.

ಪಿಎಂ ವಾಣಿ ಯೋಜನೆಗಾಗಿ ಲಕ್ಷಾಂತರ ಉತ್ಪನ್ನಗಳ ತಯಾರಿಕೆ ಅಗತ್ಯವಿದ್ದು, ಇದರಿಂದಾಗಿ ಹೆಚ್ಚಿನ ಉದ್ಯೋಗ ಸೃಷ್ಟಿಯಾಗಲಿದೆ ಎಂದು ರಾಜಾರಾಮನ್ ಹೇಳಿದ್ದಾರೆ. ಯೋಜನೆಯಡಿ ಈವರೆಗೆ ದೇಶದಾದ್ಯಂತ 56 ಸಾವಿರಕ್ಕೂ ಅಧಿಕ ವೈಫೈ ಹಾಟ್‌ಸ್ಪಾಟ್ ಸ್ಥಾಪಿಸಲಾಗಿದೆ.

ವಾನ್ ಎಲೆಕ್ಟ್ರಿಕ್‌ನಿಂದ ಇ–ಬೈಕ್ ಬಿಡುಗಡೆ

ಕೊಚ್ಚಿ (ಪಿಟಿಐ): ವಾನ್ (ವಿಎಎಎನ್) ಎಲೆಕ್ಟ್ರಿಕ್ ಮೋಟೊ ಪ್ರೈವೇಟ್ ಲಿಮಿಟೆಡ್ ಕಂಪನಿಯು ದೇಶದ ಮಾರುಕಟ್ಟೆಗೆ ಅರ್ಬನ್ ಸ್ಪೋರ್ಟ್ ಎನ್ನುವ ಇ-ಬೈಕ್ ಬಿಡುಗಡೆ ಮಾಡಿದೆ.

ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್ ಅವರು ವರ್ಚುವಲ್ ವೇದಿಕೆಯ ಮೂಲಕ ಶುಕ್ರವಾರ ಇ-ಬೈಕ್ ಬಿಡುಗಡೆ ಮಾಡಿದ್ದಾರೆ.

ಅರ್ಬನ್ ಸ್ಪೋರ್ಟ್ ಮತ್ತು ಅರ್ಬನ್ ಸ್ಪೋರ್ಟ್ ಪ್ರೊ ಎಂಬ ಎರಡು ಮಾದರಿಗಳಲ್ಲಿ ಲಭ್ಯವಿದೆ. ಬೆಲೆ ಕ್ರಮವಾಗಿ ₹ 59,999 ಮತ್ತು ₹ 69,999 ಇದೆ. ಮೊದಲಿಗೆ ಕೊಚ್ಚಿಯಲ್ಲಿ ಮಾರಾಟ ಆರಂಭ ಆಗಲಿದ್ದು, ಆ ಬಳಿಕ ಬೆಂಗಳೂರು, ಗೋವಾ, ಮುಂಬೈ, ಹೈದರಾಬಾದ್ ಮತ್ತು ದೆಹಲಿಯಲ್ಲಿ ಮಾರಾಟ ಆರಂಭಿಸಲಾಗುವುದು ಎಂದು ಕಂಪನಿ ತಿಳಿಸಿದೆ.

ಕಂಪನಿಯ ಪ್ರಕಾರ, ಎಲೆಕ್ಟ್ರಿಕ್ ವ್ಯವಸ್ಥೆಯಲ್ಲಿ ಪ್ರತಿ ಗಂಟೆಗೆ 25 ಕಿಲೋ ಮೀಟರ್ ಹಾಗೂ ಪೆಡಲ್ ಬಳಸಿದರೆ ಪ್ರತಿ ಗಂಟೆಗೆ 60 ಕಿಲೋ ಮೀಟರ್ ಚಲಿಸಬಹುದು.

ಬ್ಯಾಟರಿ ಪೂರ್ತಿ ಚಾರ್ಜ್ ಆಗಲು ನಾಲ್ಕು ಗಂಟೆ ಬೇಕಾಗಲಿದ್ದು, ಅರ್ಧ ಯುನಿಟ್ ವಿದ್ಯುತ್ ಸಾಕಾಗುತ್ತದೆ. ಇದಕ್ಕೆ ₹ 4 ರಿಂದ ₹ 5 ರವರೆಗೆ ವೆಚ್ಚವಾಗುತ್ತದೆ. ಒಮ್ಮೆ ಬ್ಯಾಟರಿ ಪೂರ್ತಿ ಚಾರ್ಜ್ ಮಾಡಿದರೆ 50-60 ಕಿಲೋ ಮೀಟರ್ ದೂರ ಕ್ರಮಿಸಬಹುದು ಎಂದು ಕಂಪನಿ ತಿಳಿಸಿದೆ.

ಬೆಂಗಳೂರು ಬುಲ್ಸ್‌ಗೆ ಮತ್ತೆ ಕಾಡಿದ ನಿರಾಸೆ

ಬೆಂಗಳೂರು: ಪವನ್ ಶೆರಾವತ್ ನಾಯಕತ್ವದ ಬೆಂಗಳೂರು ಬುಲ್ಸ್ ತಂಡವು ಪ್ರೊ ಕಬಡ್ಡಿ ಟೂರ್ನಿಯಲ್ಲಿ ಮತ್ತೊಂದು ಸೋಲಿನ ಕಹಿ ಅನುಭವಿಸಿತು.

ವೈಟ್‌ಫೀಲ್ಡ್‌ನಲ್ಲಿರುವ ಶೆರಟನ್ ಗ್ರ್ಯಾಂಡ್ ಹೋಟೆಲ್‌ನಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಬೆಂಗಳೂರು ತಂಡವು 35–37ರಿಂದ ಪುಣೇರಿ ಪಲ್ಟನ್ ವಿರುದ್ಧ ಸೋತಿತು. ತಂಡಕ್ಕೆ ಇದು ಟೂರ್ನಿಯಲ್ಲಿ ಐದನೇ ಸೋಲಾಗಿದೆ.

ಒಟ್ಟು 13 ಪಂದ್ಯಗಳಲ್ಲಿ ಏಳರಲ್ಲಿ ಗೆದ್ದಿದ್ದು, ಒಂದರಲ್ಲಿ ಟೈ ಮಾಡಿಕೊಂಡಿದೆ. ಅಂಕಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದೆ.

ಈ ಪಂದ್ಯವು ಬುಲ್ಸ್‌ನ ಪವನ್ ಮತ್ತು ಪುಣೇರಿಯ ಮೋಹಿತ್ ಗೋಯತ್ ಅವರ ನಡುವಿನ ಜಿದ್ದಾಜಿದ್ದಿಯ ಕಣವಾಗಿ ಮಾರ್ಪಟ್ಟಿತ್ತು. ಪ್ರತಿಯೊಂದು ಹಂತವೂ ರೋಚಕ ರಸದೌತಣ ನೀಡಿತು. ಪವನ್ ಒಟ್ಟು ಹತ್ತು ಅಂಕ ಕಲೆಹಾಕಿದರು. ಅದೇ ಮೋಹಿತ್ 13 ಅಂಕಗಳನ್ನು ಸೂರೆ ಮಾಡಿದರು.


ಆರಂಭದಿಂದಲೂ ತುರುಸಿನ ಪೈಪೋಟಿ ಇದ್ದ ಕಾರಣ ಪ್ರಥಮಾರ್ಧದ ವಿರಾಮದ ವೇಳೆಗೆ ಪುಣೇರಿ 16–15ರಿಂದ ಮುನ್ನಡೆಯಲಿತ್ತು.

ಕೊನೆಯವರೆಗೂ ಒಂದು ಅಥವಾ ಎರಡು ಅಂಕಗಳ ವ್ಯತ್ಯಾಸದ ಹೋರಾಟವೇ ಕಂಡುಬಂದಿತು.

ಮುಂಬಾ ಜಯಭೇರಿ: ರೇಡರ್ ಅಭಿಷೇಕ್ ಸಿಂಗ್ ಅವರ ಆಟದ ಬಲದಿಂದ ಯು ಮುಂಬಾ ತಂಡವು 42–35ರಿಂದ ತೆಲುಗು ಟೈಟನ್ಸ್ ವಿರುದ್ಧ ಜಯಭೇರಿ ಬಾರಿಸಿತು.

ಅಭಿಷೇಕ್ ಸಿಂಗ್ 15 ಅಂಕಗಳನ್ನು ಗಳಿಸಿದ ತಂಡದ ಜಯದ ರೂವಾರಿಯಾದರು. ರಕ್ಷಣಾ ವಿಭಾಗದಲ್ಲಿ ಫಜಲ್ ಅತ್ರಾಚಲಿ ಕೂಡ ಮಿಂಚಿದರು. ಆರು ಅಂಕಗಳನ್ನು ಗಳಿಸಿದರು. ಟೈಟನ್ಸ್ ತಂಡದ ಆದರ್ಶ 12 ಅಂಕಗಳನ್ನು ಗಳಿಸಿದರು.

ಜೈಪುರ ಪಿಂಕ್ ಪ್ಯಾಂಥರ್ಸ್ ಮತ್ತು ತಮಿಳ್ ತಲೈವಾಸ್ ನಡುವಿನ ಪಂದ್ಯ 34–34ರಲ್ಲಿ ಟೈ ಆಯಿತು.



ಪುಣೇರಿ ಪಲ್ಟನ್‌ನ ಮೋಹಿತ್ ಗೋಯತ್ ಬೆಂಗಳೂರು ಬುಲ್ಸ್ ಆವರಣದಿಂದ ತಪ್ಪಿಸಿಕೊಂಡ ಕ್ಷಣ

ಇಂದಿನ ಪಂದ್ಯ (ರಾತ್ರಿ)

ಯು.ಪಿ.ಯೋಧಾ Vs ಹರಿಯಾಣ ಸ್ಟೀಲರ್ಸ್ – 7.30
ಬೆಂಗಳೂರು ಬುಲ್ಸ್ Vs ತೆಲುಗು ಟೈಟನ್ಸ್ – 8.30
ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್ಸ್
ದಬಂಗ್ ಡೆಲ್ಲಿ	12	7	3	2	43
ಬೆಂಗಳೂರು ಬುಲ್ಸ್	13	7	5	1	41
ಪಟ್ನಾ ಪೈರೇಟ್ಸ್	11	7	3	1	40
ಯುಪಿ ಯೋಧಾ	12	5	4	3	38
ಯು ಮುಂಬಾ	12	4	3	5	36
ಬೆಂಗಾಲ್ ವಾರಿಯರ್ಸ್	13	6	6	1	36
ಜೈಪುರ್ ಪಿಂಕ್ ಪ್ಯಾಂಥರ್ಸ್	12	5	5	2	35
ತಮಿಳ್ ತಲೈವಾಸ್	12	3	3	6	34
ಹರಿಯಾಣ ಸ್ಟೀಲರ್ಸ್	12	5	5	2	34
ಗುಜರಾತ್ ಜೈಂಟ್ಸ್	11	3	5	3	28
ಪುಣೇರಿ ಪಲ್ಟನ್	12	5	7	-	27
ತೆಲುಗು ಟೈಟನ್ಸ್	12	1	9	2	18

(ಶನಿವಾರದ ಪಂದ್ಯಗಳ ಅಂತ್ಯಕ್ಕೆ)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹440
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹435

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1310 (1310)
ಸೋಯಾ (ರಿಫೈನ್ಡ್)	₹1230 (1230)
ಸೂರ್ಯಕಾಂತಿ (ರಿಫೈನ್ಡ್)	₹1260 (1255)
ಪಾಮೋಲಿನ್	₹1188 (1175)

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹15800
ಎಸಿ	₹7310
ಆರ್‌ಪಿ	₹7000
ಆರ್‌ಸಿ	₹4050

ರಾಮನಗರ ರೇಷ್ಮೆ

ಮಿಶ್ರತಳಿ	₹400-660
ದ್ವಿತಳಿ	₹195-813

ಸಂಕ್ಷಿಪ್ತ ಸುದ್ದಿ

ಯೆಸ್ ಬ್ಯಾಂಕ್ ನಿವ್ವಳ ಲಾಭ ಶೇ77ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಖಾಸಗಿ ವಲಯದ ಯೆಸ್ ಬ್ಯಾಂಕ್‌ನ ನಿವ್ವಳ ಲಾಭವು ಪ್ರಸಕ್ತ ಹಣಕಾಸು ವರ್ಷದ ಮೂರನೇ ತ್ರೈಮಾಸಿಕದಲ್ಲಿ ₹ 266.43 ಕೋಟಿಗಳಷ್ಟಾಗಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹ 150.77 ಕೋಟಿ ನಿವ್ವಳ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಲಾಭವು ಶೇ 77ರಷ್ಟು ಹೆಚ್ಚಾಗಿದೆ ಎಂದು ಷೇರುಪೇಟೆಗೆ ಮಾಹಿತಿ ನೀಡಿದೆ.

ಬ್ಯಾಂಕ್‌ನ ಒಟ್ಟಾರೆ ವರಮಾನವು ₹ 2,560 ಕೋಟಿಗಳಿಂದ ₹ 1,764 ಕೋಟಿಗಳಿಗೆ ಶೇ 31ರಷ್ಟು ಇಳಿಕೆ ಕಂಡಿದೆ.

ಐಸಿಐಸಿಐ ಬ್ಯಾಂಕ್ ಲಾಭ ಹೆಚ್ಚಳ

ನವದೆಹಲಿ (ಪಿಟಿಐ): ಐಸಿಐಸಿಐ ಬ್ಯಾಂಕ್‌ನ ನಿವ್ವಳ ಲಾಭವು ಪ್ರಸಕ್ತ ಹಣಕಾಸು ವರ್ಷದ ಮೂರನೇ ತ್ರೈಮಾಸಿಕದಲ್ಲಿ ₹ 6,536 ಕೋಟಿಗಳಷ್ಟಾಗಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹ 5,498 ಕೋಟಿ ನಿವ್ವಳ ಲಾಭ ಆಗಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಲಾಭದಲ್ಲಿ ಶೇ 18.8ರಷ್ಟು ಏರಿಕೆ ಆಗಿದೆ ಎಂದು ಷೇರುಪೇಟೆಗೆ ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ 22-1-2022

ಜಾವಾ 70/80(ಹೊಸ)	11150-11200
ಜಾವಾ 80/90(ಹೊಸ)	10850-10900
ದಪ್ಪ ಮಧ್ಯಪ್ರದೇಶ(ಹೊಸ)	9700-9800
ದಪ್ಪ ಗುಜರಾತ್(ಹೊಸ)	8500-8600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1320 (1320)
ಒಂದು ವಾರದ ಡೆಲಿವರಿ	1315 (1315)
ಸೋಯಾ ಕಚ್ಚಾ	1180 (1177)
ಪಾಮ್ ವಾರದ ಡೆಲಿವರಿ	1186 (1173)
ಸೂರ್ಯಕಾಂತಿ ಎಣ್ಣೆ ಕಚ್ಚಾ	1210 (1200)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	48,400 (48,500)
ಬೆಳ್ಳಿ ಕೆ.ಜಿ	64,700 (65,000)

ಆವರಣದಲ್ಲಿ ಹಿಂದಿನ ದಿನದ ಧಾರಣೆ



ರಾಮಾಯಣ 'ದರ್ಶನ'ಕ್ಕೆ ದಾರಿದೀಪ 12



ನೃತ್ಯಲೋಕದ ಮಹಾರಾಜ! 13

ಹೃದಯದಲಿ ಇದೇನಿದು?

ಎಂ.ವಿ. ಕೇಶವಮೂರ್ತಿ


ಇದೇ ಜನವರಿ ಏಳನೆಯ ತಾರೀಖು ಅಮೆರಿಕದ ಮೇರಿಲ್ಯಾಂಡ್ ವಿಶ್ವವಿದ್ಯಾಲಯದ ಮೆಡಿಸಿನ್ ವಿಭಾಗದ ಅಂಗಾಂಗ ಕಸಿತಜ್ಞರು ಹೃದಯ ಸಂಬಂಧಿ ಸಮಸ್ಯೆಯಿಂದ ಬಳಲುತ್ತಿದ್ದ ವ್ಯಕ್ತಿಯೊಬ್ಬರಿಗೆ ಹಂದಿಯ ಹೃದಯ ಕಸಿಮಾಡಿದ ಅಭೂತಪೂರ್ವ ಸುದ್ದಿಯೊಂದನ್ನು ಪ್ರಕಟಿಸಿದರು. ಜಗತ್ತಿನ ಎಲ್ಲ ಕಡೆ ಈ ವಿದ್ಯಮಾನ ತೀವ್ರ ಕುತೂಹಲ ಕೆರಳಿಸಿತು. ಅಂಗಾಂಗ ವೈಫಲ್ಯಗೊಂಡು ದಾನಿಗಳಿಗಾಗಿ ಕಾಯುತ್ತಿರುವ ಲಕ್ಷಾಂತರ ಜನರ ಬದುಕಿನಲ್ಲಿ ಆಶಾಭಾವದ ದೀಪವೊಂದು ದಿಗ್ಗನೆ ಹೊತ್ತಿಕೊಂಡಿತು. ಆದರೆ ಒಂದು ಜೀವಿಯಿಂದ ಇನ್ನೊಂದು ಜೀವಿಗೆ ಅಂಗಾಂಗವನ್ನು ಕಸಿ ಮಾಡುವುದು ಅಂಗಡಿಯಿಂದ ದುಡ್ಡು ಕೊಟ್ಟು ಸಾಮಾನು ತಂದಷ್ಟು ಸುಲಭವೇ?

ಒಂದು ಜೀವಿಯಿಂದ ಇನ್ನೊಂದು ಜೀವಿಗೆ ಹೋಗಲಿ, ಒಬ್ಬ ಮನುಷ್ಯನಿಂದ ಇನ್ನೊಬ್ಬ ಮನುಷ್ಯನಿಗೆ ಕೂಡ ಅಷ್ಟು ಸುಲಭದಲ್ಲಿ ಅಂಗಾಂಗವನ್ನು ಕಸಿ ಮಾಡಲು ಸಾಧ್ಯವಿಲ್ಲ. ಪ್ರತಿಯೊಬ್ಬ ವ್ಯಕ್ತಿಯ ದೇಹದಲ್ಲೂ ಎಂಎಚ್‌ಸಿ (ಮೇಜರ್ ಹಿಸ್ಟೋಕಾಂಪ್ಯಾಬಿಲಿಟಿ ಕಾಂಪ್ಲೆಕ್ಸ್) ಎಂಬ ರಾಸಾಯನಿಕಗಳಿರುತ್ತವೆ. ಆ ರಾಸಾಯನಿಕಗಳು ಪ್ರತಿಯೊಬ್ಬ ವ್ಯಕ್ತಿಯಲ್ಲೂ ಬೇರೆ

> ಮಾನವನ ದೇಹದಲ್ಲಿ ಹಂದಿಯ ಹೃದಯವೇ? ಜಗತ್ತಿನಾದ್ಯಂತ ಈ ಪ್ರಶ್ನೆ ಹಾಕುತ್ತಾ ಮೂಗಿನ ಮೇಲೆ ಬೆರಳಿಟ್ಟವರಿಗೆ ಲೆಕ್ಕವೇ ಇಲ್ಲ. ವೈದ್ಯಕೀಯ ಜಗತ್ತಿನಲ್ಲಿ ಚಾರಿತ್ರಿಕ ಮೈಲುಗಲ್ಲು ಎನಿಸುವಂತಹ ಅಪರೂಪದ ಶಸ್ತ್ರ ಚಿಕಿತ್ಸೆಯೊಂದು ಅಮೆರಿಕದಲ್ಲಿ ಈಚೆಗೆ ನಡೆದಿದೆ. ಹೃದಯ ಕಸಿಯಲ್ಲಿ ಹೊಸ ಸಾಧ್ಯತೆಗಳ ಬಾಗಿಲನ್ನೂ ಈ ವಿದ್ಯಮಾನ ತೆರೆದಿಟ್ಟಿದೆ.



ವಂಶವಾಹಿ ಮಾರ್ಪಾಡಿಗೆ ಒಳಗಾದ ಹಂದಿಯ ಹೃದಯವನ್ನು ಡೇವಿಡ್ ಬೆನ್ನೆಟ್ ಎಂಬ ರೋಗಿಗೆ ಡಾ. ಬಾರ್ಟಲಿ ಗ್ರಿಫಿತ್ ಅವರ ತಂಡ ಕಸಿ ಮಾಡಿದ ಐತಿಹಾಸಿಕ ಕ್ಷಣ. ವೈದ್ಯಕೀಯ ರಂಗದಲ್ಲಿ ಇದೊಂದು ಅಭೂತಪೂರ್ವ ವಿದ್ಯಮಾನ ಎಂದು ಹೆಸರು ಮಾಡಿದೆ



ಹಂದಿಯಿಂದ ತೆಗೆದ ಹೃದಯವನ್ನು ಸಂರಕ್ಷಣಾ ವ್ಯವಸ್ಥೆಯಲ್ಲಿ ಇರಿಸಿದ ಡಾ. ಮೊಹಮ್ಮದ್ ಮೊಯಿದ್ದೀನ್. ದೇಹದಿಂದ ತೆಗೆದ ಹೃದಯವನ್ನು ಹೆಚ್ಚುಕಾಲ ಯಥಾಸ್ಥಿತಿಯಲ್ಲಿ ಕಾಪಾಡಿಕೊಳ್ಳುವ ತಂತ್ರಜ್ಞಾನವನ್ನು ಡಾ. ಮೊಹಮ್ಮದ್ ಅಭಿವೃದ್ಧಿಪಡಿಸಿದ್ದಾರೆ

ಬೇರೆಯಾಗಿರುತ್ತವೆ (ಆಧಾರ್ ಸಂಖ್ಯೆಯಂತೆ). ಅವುಗಳನ್ನು ನಮ್ಮ ಶರೀರದೊಳಗಿನ ಸಂಕೀರ್ಣವಾದ ರೋಗನಿರೋಧಕ ಶಕ್ತಿಯು ಬಹಳ ಸುಲಭವಾಗಿ ಗುರುತಿಸಬಲ್ಲದು. ಅಂದರೆ ರೋಗನಿರೋಧಕ ಶಕ್ತಿಗೆ ನಮ್ಮ ದೇಹದ ಅಂಗಾಂಗಗಳು ಯಾವುವು ಹಾಗೂ ಹೊರಗಿನಿಂದ ಬಂದುವು ಯಾವುವು ಎಂಬುದನ್ನು ಗುರುತಿಸಲು ಈ ರಾಸಾಯನಿಕಗಳು ಸಹಕಾರಿಯಾಗಿವೆ.

ಹೊರಗಿನಿಂದ ಬರುವ ಯಾವುದೇ ಅಂಗ ಅಥವಾ ಅಂಗಾಂಶದಲ್ಲಿ ಬೇರೆಯದೇ ರಾಸಾಯನಿಕಗಳು ಇರುವುದರಿಂದ ಅವುಗಳನ್ನು ಯಾವುದೋ ರೋಗಾಣು ಎಂದು ಭಾವಿಸುವ ರೋಗನಿರೋಧಕ ಶಕ್ತಿಯು ಪ್ರತಿಕಾಯಗಳನ್ನು ಸೃಷ್ಟಿಮಾಡಿ ಆ ಅಂಗಾಂಶವನ್ನು ಸಾಯಿಸಿಬಿಡುತ್ತದೆ (ರಾಸಾಯನಿಕಗಳನ್ನು ಸಮವಸ್ತ್ರ ಧರಿಸಿದ ಶಾಲಾಮಕ್ಕಳಿಗೆ ಹೋಲಿಸಬಹುದು. ಅದೇ ಶಾಲೆಯ ಮಕ್ಕಳಾದರೆ ಒಂದೇ ಸಮವಸ್ತ್ರದ ಮೂಲಕ ಹೇಗೆ ಕಂಡು ಹಿಡಿಯುತ್ತೇವೆಯೋ ಹಾಗೆ ಈ ರಾಸಾಯನಿಕಗಳ ಮೂಲಕ ಅಂಗಾಂಶ ನಮ್ಮ ದೇಹದ್ದೇ ಹೌದೋ ಅಲ್ಲವೋ ಎಂಬುದನ್ನು ರೋಗ ನಿರೋಧಕ ಶಕ್ತಿಯು ಗುರುತಿಸುತ್ತದೆ). ಅತ್ಯಂತ ಹತ್ತಿರದ ರಕ್ತ ಸಂಬಂಧಿಗಳ ಎಂಎಚ್‌ಸಿ ರಾಸಾಯನಿಕಗಳಲ್ಲಿ ಸ್ವಲ್ಪಮಟ್ಟಿನ ಸಾಮ್ಯತೆಯಿರುತ್ತದೆ. ಅಂಗಾಂಗ ಕಸಿ ಮಾಡುವಾಗ ಈ ಅಂಶವನ್ನು ಬಹಳ ಗಂಭೀರವಾಗಿ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಅರ್ಬುದದಂತಹ ರೋಗಗಳಿಗೆ ಅಸ್ಥಿಮಜ್ಜೆ ಕಸಿಯಾಗಬೇಕಾದಾಗ ವೈದ್ಯರು ಅತ್ಯಂತ ಸಮೀಪದ ರಕ್ತ ಸಂಬಂಧಿಗಳ ಅಸ್ಥಿಮಜ್ಜೆಯೇ ಬೇಕೆನ್ನುವುದು ಈ ಕಾರಣಕ್ಕಾಗಿ.

ಹಂದಿಯ ಹೃದಯದ ಮಾರ್ಪಾಡು ಹೇಗೆ?

ಮೇಲಿನ ಅಂಶಗಳನ್ನು ಗಮನದಲ್ಲಿ ಇಟ್ಟುಕೊಂಡರೆ ನಮಗೆ ಒಂದು ವಿಚಾರ ಸ್ಪಷ್ಟವಾಗಿ ಅರ್ಥವಾಗುತ್ತದೆ. ಕೆಲವೊಂದು ಮಾರ್ಪಾಡುಗಳನ್ನು ಮಾಡದೆ ನೇರವಾಗಿ ಹಂದಿಯಿಂದ ಹೃದಯವನ್ನು ತೆಗೆದು ಮಾನವನಿಗೆ ಕಸಿ ಮಾಡಲು ಸಾಧ್ಯವಿಲ್ಲ. ಇದಕ್ಕಾಗಿ ಹಂದಿಯ ವಂಶವಾಹಿಯಲ್ಲಿ ಸಾಕಷ್ಟು ಬದಲಾವಣೆಗಳನ್ನು ಮಾಡಬೇಕಾಗುತ್ತದೆ. ಅದರಂತೆ ಪ್ರಸ್ತುತ ಕಸಿ ಮಾಡಲಾಗಿರುವ ಹೃದಯದಲ್ಲಿ ಒಟ್ಟಾರೆಯಾಗಿ ಹತ್ತು ಬದಲಾವಣೆಗಳನ್ನು ಮಾಡಲಾಗಿದೆ. ಹೀಗೆ ಬದಲಾವಣೆ ಮಾಡಲಾದ ಹಂದಿಯನ್ನು ಕುಲಾಂತರಿ ಹಂದಿ ಎಂದು ಕರೆಯಲಾಗುತ್ತದೆ(ಕುಲಾಂತರಿ ಬದನೆಯಂತೆ). ಒಟ್ಟು ನಾಲ್ಕು ವಂಶವಾಹಿಗಳನ್ನು ಕೆಲಸ ಮಾಡದಂತೆ ಕಟ್ಟಿಹಾಕಿ, ಆರು ಮಾನವ ಸಂಬಂಧಿ ವಂಶವಾಹಿಗಳನ್ನು ಸೇರಿಸಿ ಬೆಳೆಸಿದ ಹಂದಿಯ ದೇಹದಿಂದ ತೆಗೆದ ಕುಲಾಂತರಿ ಹೃದಯವನ್ನು ಸತತ ಆರು ಗಂಟೆಗಳ ಶಸ್ತ್ರ ಚಿಕಿತ್ಸೆಯ ನಂತರ ಯಶಸ್ವಿಯಾಗಿ ಡೇವಿಡ್ ಬೆನ್ನೆಟ್ ಎಂಬ ರೋಗಿಗೆ ಕಸಿ ಮಾಡಲಾಗಿದೆ. ಈ ಹೃದಯ ಕಸಿ ಮಾಡಿದವರು ಡಾ. ಬಾರ್ಟಲಿ ಗ್ರಿಫಿತ್ ಎಂಬ ವೈದ್ಯರು. ಗಂಭೀರವಾದ ಹೃದಯ ಸಂಬಂಧಿ ಕಾಯಿಲೆಯಿಂದ ಬಳಲುತಿದ್ದ ಬೆನ್ನೆಟ್ ಸದ್ಯ ಚೇತರಿಸಿಕೊಳ್ಳುತ್ತಿದ್ದು, ಸಂಪೂರ್ಣ ಗುಣಮುಖರಾಗುವವರೆಗೆ ತೀವ್ರ ನಿಗಾ ಘಟಕದಲ್ಲಿಯೇ ಇರಲಿದ್ದಾರೆ. ಕಟ್ಟಿಹಾಕಲಾದ ನಾಲ್ಕೂ ವಂಶವಾಹಿಗಳು ಕಸಿಯಾದ ಹೃದಯದ ವಿರುದ್ಧ ದೇಹವು ಪ್ರತಿಕಾಯಗಳನ್ನು ಉತ್ಪತ್ತಿ ಮಾಡದಂತೆ ತಡೆಯುತ್ತವೆ. ಹೊಸದಾಗಿ ಸೇರಿಸಿರುವ ಆರು ವಂಶವಾಹಿಗಳು ಮಾನವನದ್ದೇ ವಂಶವಾಹಿಗಳು, ಇವು ಹೃದಯ ಸರಿಯಾಗಿ ಕೆಲಸ ಮಾಡಲು ಸಹಕರಿಸುತ್ತವೆ.

ಹೀಗೆ ಒಂದು ಜೀವಿಯ ಹೃದಯವನ್ನು ಇನ್ನೊಂದು ಜೀವಿಗೆ ಕಸಿ ಮಾಡುವ ವಿದ್ಯೆ ಅಚಾನಕ್ಕಾಗಿ ಹೊಳೆದದ್ದಲ್ಲ. ಈ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನಡೆಸಿದ ಡಾ. ಬಾರ್ಟಲಿ ಗ್ರಿಫಿತ್ ಅವರಿಗೆ ಡಾ. ಮೊಹಮ್ಮದ್ ಮೊಯಿದ್ದೀನ್ ಅವರಿಂದ ನೆರವು ಸಿಕ್ಕಿದೆ. ಮೇರಿಲ್ಯಾಂಡ್ ವಿಶ್ವವಿದ್ಯಾಲಯದ ಅಂಗಾಂಗ ಕಸಿ ವಿಭಾಗವನ್ನು ಆರಂಭಿಸಿದವರು ಅವರು. ಹಂದಿಯ ಹೃದಯವನ್ನು ಬಬೂನ್ ಎಂಬ ಒಂದು ಜಾತಿಯ ಮಂಗಕ್ಕೆ ಕಸಿ ಮಾಡುವಲ್ಲಿ ಅವರು ಈ ಹಿಂದೆ ಯಶಸ್ವಿಯಾಗಿದ್ದರೂ ಆ ಮಂಗ ಹೆಚ್ಚು ದಿನ ಬದುಕಿರಲಿಲ್ಲ. ಇಂತಹ ಕಾರಣಗಳಿಂದ ಅಂಗಾಂಗ ಕಸಿ ಚಿಕಿತ್ಸೆ ಹೆಚ್ಚು ಪರಿಣಾಮಕಾರಿಯಾದ ಚಿಕಿತ್ಸೆ ಆಗಿರಲಿಲ್ಲ. ಈ ಸಂದರ್ಭದಲ್ಲಿ ಕಂಡು ಹಿಡಿಯಲಾದ ವಿಶಿಷ್ಟವಾದ ತಂತ್ರಜ್ಞಾನ ವೈದ್ಯಕೀಯ ಇತಿಹಾಸದಲ್ಲಿ ದೊಡ್ಡ ಮೈಲುಗಲ್ಲನ್ನು ಸ್ಥಾಪಿಸಿದೆ. ಹಂದಿಯಿಂದ ಹೃದಯವನ್ನು ತೆಗೆದು ಅದನ್ನು ಕಸಿ ಮಾಡುವವರೆಗೆ ಕಾಪಾಡಲು ಹೊಸ ತಂತ್ರಜ್ಞಾನವನ್ನು ಕಂಡುಹಿಡಿದವರೂ ಡಾ. ಮೊಹಮ್ಮದ್ ಅವರೇ.

ಅಂಗಾಂಗ ಕಸಿ ತಂತ್ರಜ್ಞಾನ ಹೊಸತೇ?

ಇದ್ದಕ್ಕಿದ್ದಂತೆ ವಿಶ್ವವಿಖ್ಯಾತಿ ಹೊಂದಿದ ಈ ತಂತ್ರಜ್ಞಾನವು ಇತ್ತೀಚೆಗೆ ಸಂಶೋಧನೆಯಾದದ್ದೇನೂ ಅಲ್ಲ. ಈ ಹಿಂದೆಯೂ ಇಂತಹ ಹಲವಾರು ಪ್ರಯತ್ನಗಳು ನಡೆದಿದ್ದವು. ಬೇರೆ ಜೀವಿಗಳಿಂದ ಅಂಗಾಂಗಗಳನ್ನು ಮಾನವನಿಗೆ ಕಸಿ ಮಾಡುವ ಸಾಧ್ಯತೆಗಳ ಬಗ್ಗೆ ಬಹುಹಿಂದಿನ ಕಾಲದಿಂದಲೂ ಒಂದಲ್ಲಾ ಒಂದು ರೀತಿಯಲ್ಲಿ ಚರ್ಚೆಗಳು ನಡೆದಿವೆ, ಪ್ರಯತ್ನಗಳೂ ನಡೆದಿವೆ. 1960ರಷ್ಟು ಹಿಂದೆಯೇ ಈ ತರಹದ ಒಂದು ಪ್ರಯತ್ನ ನಡೆದು ಚಿಂಪಾಂಜಿಯ ಮೂತ್ರಪಿಂಡವನ್ನು ಹಲವಾರು ಜನರಿಗೆ ಕಸಿ ಮಾಡಲಾಗಿತ್ತು. ಆದಾಗ್ಯೂ ಯಾವ ರೋಗಿಗಳೂ ಒಂಬತ್ತು ತಿಂಗಳಿಗಿಂತ ಹೆಚ್ಚು ಕಾಲ ಬದುಕಿರಲಿಲ್ಲ. 1983ರಲ್ಲಿ ಬಬೂನ್ ಕೋತಿಯ ಹೃದಯವನ್ನು ಪುಟ್ಟ ಹುಡುಗಿಯೊಬ್ಬಳಿಗೆ ಕಸಿ ಮಾಡಲಾಗಿತ್ತು ಆಕೆಯೂ ಹೆಚ್ಚುದಿನ ಬದುಕಲಿಲ್ಲ. ಹಂದಿಯ ಹೃದಯಕವಾಟಗಳನ್ನು ಕಸಿ ಮಾಡಬಲ್ಲ ತಂತ್ರಜ್ಞಾನವೇನೋ ಈಗಾಗಲೇ ಚಾಲ್ತಿಯಲ್ಲಿದೆ. ಇಂತಹ ಹಲವಾರು ಪ್ರಯೋಗಗಳು ನಡೆದಿದ್ದರೂ ರೋಗನಿರೋಧಕ ಶಕ್ತಿಯ ಕಾರಣದಿಂದಾಗಿ ಅಂತಹ ಅಂಗಗಳು ತಮ್ಮ ಕೆಲಸವನ್ನು ಸರಿಯಾಗಿ ಮಾಡಲಾಗುತ್ತಿರಲಿಲ್ಲ.

ವರದಾನವಾದ ಜೀನ್ ಎಡಿಟಿಂಗ್

ಜೀನ್ ಎಡಿಟಿಂಗ್ ಹಾಗೂ ಕ್ಲೋನಿಂಗ್ ತಂತ್ರಜ್ಞಾನಗಳು ಇತ್ತೀಚೆಗೆ ಜೈವಿಕ ತಂತ್ರಜ್ಞಾನ ವಿಭಾಗದಲ್ಲಿ ಬಹಳ ಕ್ರಾಂತಿಕಾರಕ ಬದಲಾವಣೆಗಳನ್ನು ತರುತ್ತಿವೆ. ಈ ತಂತ್ರಜ್ಞಾನವನ್ನು ಬಳಸಿಕೊಂಡು ನಮ್ಮ ವಂಶವಾಹಿಗಳನ್ನು ನಮಗೆ ಬೇಕಾದ ಹಾಗೆ ಕಸ್ಟಮೈಸ್ ಮಾಡಬಹುದು. ಅಂದರೆ ಯಾವುದಾದರೊಂದು ವಂಶವಾಹಿಯನ್ನು ನಮ್ಮ ಬಯಕೆಯಂತೆ ಬದಲಾಯಿಸಿ ಅದು ನಮಗೆ ಬೇಕಾದಂತೆ ಕೆಲಸ ಮಾಡುವಂತೆ ಮಾಡಬಹುದು. ಈ ಎರಡು ತಂತ್ರಜ್ಞಾನಗಳ ಸಹಾಯದಿಂದ ಹಂದಿಯ ಹೃದಯವನ್ನು ಮಾನವನ ದೇಹಕ್ಕೆ ಸರಿಹೊಂದುವ ರೀತಿಯಲ್ಲಿ ಮಾರ್ಪಾಡು ಮಾಡಿ ಆನಂತರ ಕಸಿ ಮಾಡಲಾಗುತ್ತದೆ.

ಹಂದಿಯ ಹೃದಯವೇ ಏಕೆ?

ವಿಕಾಸವಾದದ ಪ್ರಕಾರ ಮಾನವನಿಗೆ ಅತ್ಯಂತ ಹತ್ತಿರವಿರುವ ಹಲವಾರು ಜೀವಿಗಳಿದ್ದರೂ (ಉದಾಹರಣೆಗೆ ಚಿಂಪಾಂಜಿ, ಮಂಗಗಳು) ಹಂದಿಯ ಹೃದಯವನ್ನೇ ಏಕೆ ವಿಜ್ಞಾನಿಗಳು ಆಯ್ಕೆ ಮಾಡಿದರು ಎಂದು ಸೋಜಿಗವೆನಿಸಬಹುದು. ಇದಕ್ಕೆ ಹಲವಾರು ಪೂರಕ ಕಾರಣಗಳಿವೆ. ಹಂದಿಯನ್ನು ಸಾಕುವುದು ಸುಲಭ ಹಾಗೂ ಈಗಾಗಲೇ ಆಹಾರಕ್ಕಾಗಿ ಅವುಗಳನ್ನು ಸಾಕಲಾಗುತ್ತದೆ. ಹಂದಿಯ ಹೃದಯ ಹೆಚ್ಚೂ ಕಡಿಮೆ ಮಾನವನ ಹೃದಯದಷ್ಟೇ ದೊಡ್ಡದಾಗಿರುತ್ತದೆ. ಎಲ್ಲಕಿಂತ ಮುಖ್ಯವಾಗಿ ಸುಮಾರು ಆರು ತಿಂಗಳ ಒಳಗಾಗಿ ಹಂದಿಯ ಹೃದಯ ಸಂಪೂರ್ಣ ಬೆಳೆದುಬಿಡುತ್ತದೆ. ಸದ್ಯ ಕಸಿ ಮಾಡಲಾಗಿರುವ ಕುಲಾಂತರಿ ಹಂದಿಯನ್ನು ರೆವಿವಿಕೊರ್ ಎಂಬ ಕಂಪನಿಯು ಬೆಳೆಸಿದೆ.

13ನೇ ಪುಟಕ್ಕೆ...

ಮೋನು ಸ್ಮೃತಿ ಕಾಲ್ಪನಿಕ ಬರಹವಲ್ಲ

70 ದಾಟಿರುವ ಬೊಳುವಾರು ಮಹಮದ್ ಕುಂಞ್, ಬದುಕಿನಲ್ಲಿ ಕಂಡುಂಡ ನೋವು, ನಲಿವು, ಬೇವು, ಬೆಲ್ಲಗಳ ಕಡೆಗೊಂದು ಚಿಕಿತ್ಸಕ ಹಿನ್ನೋಟ ಹರಿಸಿ ಬರೆದಿರುವ ಆತ್ಮಕತೆ- ಮೋನು ಸ್ಮೃತಿ. ಮುಂದಿನ ವಾರ ಓದುಗರ ಕೈಗೆ ಸಿಗಲಿರುವ ಈ ಕೃತಿಯ ನೆಪದಲ್ಲಿ ಹೀಗೊಂದು ಮಾತುಕತೆ...

ಸಂದರ್ಶನ: ಬಿ.ಎಂ. ಹನೀಫ್

- **ನಿಮ್ಮ ಮೋನು ಸ್ಮೃತಿ ಎಂಬ ಹೆಸರಿನ 'ಆತ್ಮಕಥನ' ನೂರು ಶೇಕಡಾ ನಿಜವೇ? ಹಾಗಾದರೆ, ನೀವು ಆತ್ಮವನ್ನು ನಂಬುತ್ತೀರಾ? ಇಲ್ಲವಾದಲ್ಲಿ ಇದು ಆತ್ಮಕಥನ ಹೇಗಾಗುತ್ತದೆ? ಮೋನು ಸ್ಮೃತಿ ಎಂಬ ಹೆಸರಿಡಲು, ಏನಾದರೂ ವಿಶೇಷವಾದ ಕಾರಣಗಳಿವೆಯೇ?**

ಕೃತಿಯ ಹೆಸರಿನ ಬಗ್ಗೆ ನಿಮಗಿರುವ ಈ ಅನುಮಾನ ನನಗೂ ಇತ್ತು. 'ನನ್ನ ಬದುಕಿನ ಕತೆ' ಎಂಬ ಪದವನ್ನು ಬಳಸಿದರೆ ಹೇಗೆ ಅಂತ ಆರಂಭದಲ್ಲಿ ಯೋಚಿಸಿದ್ದೂ ಉಂಟು. ಆದರೆ, 'ಕತೆ' ಕಟ್ಟಿ ಹೇಳುವುದೆಂದರೆ 'ಸುಳ್ಳು' ಹೇಳುವುದು ಎಂದೇ ಪ್ರತಿಪಾದಿಸುತ್ತಿದ್ದವನು ನಾನೆಂಬುದು, ನಿಮ್ಮ ಪತ್ರಿಕೆಯಲ್ಲೇ ಹಲವು ಬಾರಿ ಪ್ರಿಂಟಾಗಿದೆ. ಈ ಸಲ ನಿಜವನ್ನೇ ಹೇಳಹೊರಟಿದ್ದರಿಂದ, 'ಆತ್ಮಕತೆ' ಎಂಬ ಬಹುಜನ ಬಳಕೆಯ ಪದವನ್ನೇ ಉಳಿಸಿಕೊಂಡೆ.

ಆಂಗ್ಲ ಭಾಷೆಯಲ್ಲಿ 1977ರಲ್ಲಿ ಮೊತ್ತಮೊದಲ ಬಾರಿಗೆ ವಿಲಿಯಮ್ ಟೇಲರ್ ಎಂಬಾತ ಬಳಸಿದ್ದ ಎನ್ನಲಾಗುತ್ತಿರುವ ಗ್ರೀಕ್ ಮೂಲದ, 'ಅಟೋಬಯಾಗ್ರಫಿ' ಎಂಬ, 'ತನ್ನ ಜೀವನದ ಬಗ್ಗೆ ತಾನೇ ವಿವರಿಸುವ' ಪದಜೋಡಿಯನ್ನು, ಕನ್ನಡದಲ್ಲಿ ಆತ್ಮಕತೆ ಎಂಬುದಾಗಿ ಸಾಕಷ್ಟು ಮಂದಿ ಬಳಸಿದ್ದಾರೆ. ಕಾರು, ಬಸ್ಸು, ರೈಲು, ಲೈಟು, ಫ್ಯಾನು ಇತ್ಯಾದಿ ಪರದೇಶೀ ಪದಗಳು ಹೇಗೆ ನಮ್ಮ ಕನ್ನಡದ್ದಾಗಿವೆಯೋ ಹಾಗೆಯೇ 'ಆತ್ಮಕಥನ' ಎಂಬ ಸಂಸ್ಕೃತ ಪದವೂ ಈಗ ನಮ್ಮದೇ. ಒಟ್ಟಿನಲ್ಲಿ ತಾವು ಓದುತ್ತಿರುವ ಕೃತಿಯು, ಕತೆಯೋ ಕಾದಂಬರಿಯೋ ಕವನವೋ ಪ್ರಬಂಧವೋ ಎಂಬುದನ್ನು ಓದುಗರಿಗೆ ಪೂರ್ವಭಾವಿಯಾಗಿ ತಿಳಿಸುವ ಏಕೈಕ ಬಯಕೆಯಿಂದ ಸುಲಭವಾಗಿ ಸಂವಹನವಾಗಬಲ್ಲ, ಆ ಜನಪ್ರಿಯ ಪದವನ್ನೇ ಬಳಸಿರುವೆ.


ಪೌರಾಣಿಕ ಕೃತಿಗಳಲ್ಲಿ ನಾವು ಓದಿರುವ 'ಆತ್ಮ' ಎಂಬ ಅಧ್ಯಾತ್ಮ ಪದಕಲ್ಪನೆಯನ್ನು, ನಾನು ನಂಬುವುದಿಲ್ಲ ಎಂಬುದೆಷ್ಟು ನಿಜವೋ, ನನ್ನ 'ಆತ್ಮಕಥನ'ದಲ್ಲಿ ದಾಖಲಾಗಿರುವ ಪ್ರತಿಯೊಂದು ಪದವೂ ಅಷ್ಟೇ ನಿಜ.

'ಮೋನು ಸ್ಮೃತಿ ಕಾಲ್ಪನಿಕ ಬರಹವಲ್ಲ. ಬಳಸಲಾಗಿರುವ ಹೆಸರು, ಊರು, ಘಟನೆ ಅಥವಾ ಲಿಖಿತ ದಾಖಲೆಗಳಲ್ಲಿ ಯಾವುದೂ ಬರಹಗಾರನ ಕಲ್ಪನೆಯಲ್ಲ. ಯಾವುದೇ ಜೀವಂತ ಅಥವಾ ತೀರಿಹೋಗಿರುವ ವ್ಯಕ್ತಿಯ ಹೆಸರು, ಊರು, ಘಟನೆಗಳು ಅಕಸ್ಮಾತ್ ಹೋಲಿಕೆಯಾಗಿರದಿದ್ದರೆ, ಅದು ಉದ್ದೇಶಪೂರ್ವಕವಲ್ಲ' ಎಂಬುದಾಗಿ, ಕೃತಿಯ ಆರಂಭದ ಪುಟದಲ್ಲೇ ದಪ್ಪಕ್ಷರಗಳಲ್ಲಿ ಪ್ರಿಂಟು ಮಾಡಿಸಿರುವೆ.

ನನ್ನ ಆತ್ಮಕತೆಗೆ 'ಮೋನು ಸ್ಮೃತಿ' ಎಂಬ ಹೆಸರಿಡಲು ವಿಶೇಷ ಕಾರಣವೇನೂ ಇಲ್ಲ. ನನ್ನನ್ನು ಬಾಲ್ಯದಲ್ಲಿ ಎಲ್ಲರೂ ಗುರುತಿಸುತ್ತಿದ್ದದ್ದು 'ಮೋನು' ಎಂದೇ. ಮೋನುವಿನ ನೆನಪುಗಳಿಗೆ ಅದಕ್ಕಿಂತ ಸೂಕ್ತವಾದ ಹೆಸರು ಬೇರೆ ಹೊಳೆದಿರಲಿಲ್ಲ.

- **ಅಷ್ಟು ವರ್ಷಗಳ ಹಿಂದೆ ಕಂಡು ಹಿಡಿದ ನಿಮ್ಮ ಮುತ್ತುಪ್ಪಾಡಿ ಈಗಲೂ ಹಾಗೆಯೇ ಇದೆಯಾ?**


ಖಂಡಿತವಾಗಿಯೂ ಹಾಗೆಯೇ ಇಲ್ಲ. ನಲುವತ್ತೈದು ವರ್ಷಗಳಷ್ಟು ಕಾಲದ ನನ್ನೆಲ್ಲಾ ಬರಹಗಳಲ್ಲಿ 'ಮುತ್ತುಪ್ಪಾಡಿ' ಎಂಬ 'ಕೋಮುಸೌಹಾರ್ದ'ಕ್ಕೆ ಮಾದರಿಯಾದ, 'ಸ್ತ್ರೀ ಪಕ್ಷಪಾತಿ' ಅಕ್ಷರಸ್ಥರ ಕಾಲ್ಪನಿಕ ನಾಡೊಂದನ್ನು ಕಟ್ಟಿಕೊಳ್ಳಲು ಯತ್ನಿಸಿದ್ದು ಖಂಡಿತವಾಗಿಯೂ ವ್ಯರ್ಥವಾಗಲಿಲ್ಲ. 'ಮುತ್ತುಪ್ಪಾಡಿಯಲ್ಲಿರುವ ಎಲ್ಲರೂ ಒಳ್ಳೆಯವರು' ಎಂಬುದಾಗಿ ಸುಳ್ಳು ಸುಳ್ಳೇ ಬರೆದದ್ದರಲ್ಲಿ ಬಹಳಷ್ಟು ಇಂದು ನಿಜವಾಗಿದೆ.



'ಸಾಹಿತ್ಯವು ಬದುಕಿನ ಪ್ರತಿಬಿಂಬ' ಎಂಬ ನಮ್ಮ ಹಿರಿಯರ ವಾದಗಳನ್ನು ವಿನಯದಿಂದಲೇ ನಿರಾಕರಿಸಿ, ಸಾಹಿತ್ಯವು ಬದುಕಿನ ಪ್ರತಿಬಿಂಬವಲ್ಲ, ಅದು ಮುಂದಿನ ಜನಬದುಕಿಗೆ 'ಗತಿಬಿಂಬ'ವಾಗಬೇಕು; ಮುತ್ತುಪ್ಪಾಡಿಯ ಜನಬದುಕು, ಒಂದಲ್ಲ ಒಂದು ದಿನ ಹಾಗೆಯೇ ಬದಲಾಗಲೇಬೇಕು ಎಂದೆಲ್ಲ ಕನಸು ಕಾಣುತ್ತಿದ್ದದ್ದು ಸಂಪೂರ್ಣ ವ್ಯರ್ಥವೇನೂ ಆಗಲಿಲ್ಲ.

'ಒಡೆದು ಆಳುವುದೊಂದೇ ನಮ್ಮ ಸಂವಿಧಾನ' ಎಂಬುದಾಗಿ ಪ್ರತಿಪಾದಿಸುತ್ತಿರುವ ನಮ್ಮ ರಾಜಕೀಯ ಪಕ್ಷಗಳ ಓಲೈಕೆಯ ರಾಜಕಾರಣಗಳನ್ನು 'ಮುತ್ತುಪ್ಪಾಡಿ'ಯ ಸಮುದಾಯವು ಇಂದು ತಿರಸ್ಕರಿಸಿದೆ. ಮುಸ್ಲಿಮ್ ಸಮುದಾಯದ ಆರ್ಥಿಕ ಮತ್ತು ಸಾಮಾಜಿಕ ಹಿಂದುಳಿದಿರುವಿಕೆಗೆ, ಹೆಣ್ಣು ಮಕ್ಕಳನ್ನು ಆಧುನಿಕ ಓದಿನಿಂದ ದೂರ ಉಳಿಸಿದ್ದೇ ಕಾರಣವೆಂಬ 'ಅಂತಿಮಸತ್ಯ' ಅವರಿಗೆ ಅರಿವಾಗಿದೆ. ಮಕ್ಕಳಿಗೆ ಶಾಲೆಗೆ ಸೇರುವ ವಯಸ್ಸಾಗುತ್ತಿದ್ದಂತೆಯೇ, ಗಂಡು ಹೆಣ್ಣೆಂಬ ಭೇದವಿಲ್ಲದೆ ಕನ್ನಡ/ಇಂಗ್ಲಿಷ್ ಕಲಿಸುವ ಶಾಲೆಗಳಿಗೆ ಅವರು ಸೇರಿಸತೊಡಗಿದ್ದಾರೆ.

12ನೇ ಪುಟಕ್ಕೆ....



ಬೊಳುವಾರು ಮಹಮದ್ ಕುಂಞ್

- **ಕನ್ನಡ ಶಾಲೆಗಳು ಕೊನೆಯುಸಿರು ಎಳೆಯುತ್ತಿವೆ. ಕನ್ನಡ ಸಾಹಿತ್ಯ ಕೃತಿಗಳು ಹೆಚ್ಚು ಪ್ರಕಟವಾಗುತ್ತಿವೆ ಮತ್ತು ಮಾರಾಟವಾಗುತ್ತಿವೆ. ಇದನ್ನು ಹೇಗೆ ಅರ್ಥೈಸುತ್ತೀರಿ?**

ಕನ್ನಡ ಶಾಲೆಗಳು ಕೊನೆಯುಸಿರೆಳೆಯುತ್ತಿರುವುದು ಹಾಗೂ ಕನ್ನಡ ಕೃತಿಗಳು ಹೆಚ್ಚು ಹೆಚ್ಚು ಪ್ರಕಟವಾಗಿ, ಮಾರಾಟವಾಗುತ್ತಿರುವುದು ಎರಡೂ ನಿಜವೇ. ಇದರಲ್ಲೇನೂ ಅಚ್ಚರಿಯಿಲ್ಲ.

ಇಂದು ಕನ್ನಡ ಪುಸ್ತಕಗಳನ್ನು 'ಕೊಂಡು ಓದುವವರಲ್ಲಿ' ಬಹುಸಂಖ್ಯಾತರ ಮನೆಮಾತು 'ಕನ್ನಡ'. ಅವರಲ್ಲಿ ಹೆಚ್ಚಿನವರು ಇಂದು ಮೂವತ್ತು ನಲುವತ್ತರ ವಯೋಮಾನ ದಾಟಿರುವ, ಜೇಬುಗಳಲ್ಲಿ ನಾಲ್ಕು ಕಾಸು ಓಡಾಡಿಸಿಕೊಂಡಿರುವ ಶ್ರಮ ಹಾಗೂ ಸುಖಜೀವಿಗಳು. ಬಾಲ್ಯದಲ್ಲಿ, ಅವರೆಲ್ಲರ ಹುಟ್ಟೂರುಗಳಲ್ಲಿ ಇಂಗ್ಲಿಷ್ ಶಾಲೆಗಳ ಅಬ್ಬರವೂ ಅಷ್ಟಿದ್ದಿರಲಿಲ್ಲ. ತಮ್ಮ ಮಕ್ಕಳನ್ನಿಂದು ಇಂಗ್ಲಿಷ್ ಸ್ಕೂಲುಗಳಿಗೆ ಸೇರಿಸುತ್ತಾರಾದರೂ ಅವರು ಕೊಂಡು ಓದುವುದು ಕನ್ನಡ ಪುಸ್ತಕಗಳನ್ನೇ.

ಆದರೆ, ಅವರ ಮಕ್ಕಳ ಕಾಲದಲ್ಲಿ, ಕನ್ನಡ ಪುಸ್ತಕಗಳ ಪ್ರಕಟಣೆ ಮತ್ತು ಮಾರಾಟಗಳಿಗೆ, ನೀವು ಅನುಮಾನಿಸಿದ್ದ ವಿಘ್ನಗಳು ಎದುರಾಗಬಹುದೇನೊ?



ಚಿತ್ರ: ಆದರ್ಶ ಹೆಗಡೆ

ಹಿಮನಡಿಗೆ & ಶ್ರಮಪಾಠ

ವಿಭಾ ಡೋಂಗ್ರೆ

ಕುದಿವ ನೀರು ಗಂಟಲೊಳಗಿಳಿದರೂ ಬಿಸಿ ಪಾತ್ರೆ ಸೋಕಿದರೂ ದೇಹ ಏನನ್ನೂ ಗ್ರಹಿಸುತ್ತಿಲ್ಲ. ಕೆಂಪು ಕೈಗಳು ನೀಲಿಗಟ್ಟಿವೆ, ದೇಹ ನಡುಗುವುದ ನಿಲ್ಲಿಸಿದೆ. ಬಿದಿರು ಬೊಂಬೆಗಳಂತೆ ನಮ್ಮ ಓಡಾಟ ನಡೆದಿದೆ. ಇಲ್ಲಿಂದ ನಾವು ಸ್ವಲ್ಪ ಸಹಜತೆಗೆ ಮರಳಲು ತುಸು ತಾಸುಗಳೇ ಹಿಡಿದವು. ನನ್ನ ಜೊತೆಗಿದ್ದ ಹನ್ನೊಂದು ಜನರದ್ದೂ ಇದೇ ಕತೆ. ನಮ್ಮಲ್ಲಿನ ಸಾಹಸ ಮನೋವೃತ್ತಿಗೊಂದಷ್ಟು ಸವಾಲು ಒಡ್ಡಿಕೊಳ್ಳಲು ಹೊರಟಿದ್ದ ನಮ್ಮನ್ನು, ಪ್ರಕೃತಿ ಅಕ್ಷರಶಃ ಭ್ರಮನಿರಸನಗೊಳಿಸಿತ್ತು. ಆ ಟ್ರೆಕ್ಕಿಂಗ್ ಅನುಭವವನ್ನು ಹೇಗೆ ಆರಂಭಿಸಲಿ?

'ಹಿಮಾಲಯ' ಬಾಲ್ಯದಿಂದಲೂ ನನ್ನನ್ನು ಅನೂಹ್ಯ ಸೋಜಿಗದಂತೆ ಕಾಡುತ್ತಿದ್ದ ವಿಷಯ. ಭೂಗೋಳ ತರಗತಿಗಳಲ್ಲಿ ಎವರೆಸ್ಟ್-ಕಾಂಚನಗಂಗಾ-ಅಲ್ಲಿನ ಶೀತಲತೆಯನ್ನು ಟೀಚರ್ ವರ್ಣಿಸುವಾಗ ಪುಳಕಗೊಳ್ಳದವರುಂಟೇ? ನನಗೂ ಈ ಬಗ್ಗೆ ಬಗೆಹರಿಯಲಾಗದ ಕೌತುಕಗಳಿದ್ದವು. ಮುಂದುವರಿದು, ನಾನು ಬೆಳೆದದ್ದು ಪಶ್ಚಿಮಘಟ್ಟದ ನೆರಳಿನಲ್ಲಾದ್ದರಿಂದ ಬೆಟ್ಟ ಹತ್ತುವುದು, ಟ್ರೆಕ್ಕಿಂಗ್ ಅತ್ಯುತ್ಸಾಹದಿಂದ ಮುಗಿಸುವುದು ನನಗೆ ಬಹಳ ಸುಲಭವೇನೋ ಎನ್ನುವ ಭ್ರಾಂತಿ ನನ್ನೊಳಗಿತ್ತು. ಇತ್ತೀಚೆಗೆ ನಾನು ಭಾಗವಹಿಸಿದ ಪೂರ್ವ ಹಿಮಾಲಯ ಪರ್ವತ ಶ್ರೇಣಿಯ ಕಾಲ್ನಡಿಗೆಯ ಸಾಹಸಯಾತ್ರೆಯೊಂದು, ನನ್ನ ಜೀವನದ ಅತಿ ಉತ್ಕಟ ತಲ್ಲಣಗಳನ್ನು ನನಗೆ ಪರಿಚಯಿಸಿಬಿಟ್ಟಿತು.

ಪರ್ವತ-ನಗರಿಗಳ ರಾಣಿ ಎಂದು ಕರೆಸಿಕೊಳ್ಳುವ ಡಾರ್ಜಿಲಿಂಗ್ ನಗರದಿಂದ ನೇಪಾಳದ ಸಂಡಕ್‌ಫು, ಗುರ್ದಮ್ ಮತ್ತು ಫಲೌಟ್ ಎನ್ನುವ ಪೂರ್ವ ಹಿಮಾಲಯ ಪರ್ವತ ಪ್ರಾಂತ್ಯಗಳಿಗೆ ಉತ್ಸಾಹಿಗಳು ಟ್ರೆಕ್ಕಿಂಗ್ ಹೋಗುವುದು ಸಾಮಾನ್ಯ. ಇವು ಸರ್ವಕಾಲಿಕ ಚಳಿಆವೃತ ಪ್ರದೇಶಗಳು. ವರ್ಷದ ಕೊನೆ, ಅದೂ ಚಳಿಗಾಲ ಎಂದರೆ ಚಳಿ ಇರುವಲ್ಲಿಗೇ ಪ್ರವಾಸ ಹೋಗಬೇಕೆಂಬ ನಮ್ಮ ವಯೋಸಹಜ ಹುಚ್ಚಿನ ಯೋಚನೆಗೆ ಹೊಳೆದದ್ದೂ ಇದೇ ಸಂಡಕ್‌ಫು-ಗುರ್ದಮ್.

ಒಂದಷ್ಟು ಹೈಸ್ಕೂಲ್ ಸ್ನೇಹಿತರು ಒಟ್ಟಾಗಿ ಈ ದಂಡಯಾತ್ರೆಗೆ ಆನ್‌ಲೈನ್‌ನಲ್ಲೇ ನೋಂದಾಯಿಸಿ ಹೊರಟಿದ್ದಾಯ್ತು.

11ನೇ ಪುಟಕ್ಕೆ....

ಹಿಮನಡಿಗೆ & ಶ್ರಮಪಾಠ



ಕನಸಿನೂರಿನಂತೆ ಗೋಚರಿಸಿದ ಟಂಬ್ಲಿಂಗ್ ಪ್ರದೇಶ

10ನೇ ಪುಟದಿಂದ...

ಶಾಲಾ ಸ್ನೇಹಿತರು ಹನ್ನೊಂದು ವರ್ಷಗಳಾದ ಮೇಲೆ ಹೀಗೊಂದು ಟ್ರೆಕ್ಕಿಂಗ್ ವಿಷಯವಾಗಿ ಸೇರುತ್ತಿರುವ ಬಗ್ಗೆ ನಮಗೊಂದು ಹೆಮ್ಮೆ, ಖುಷಿ. ಮತ್ತು ನಾವೆಲ್ಲರೂ ಯಂತ್ರಗಳಂತೆ ಜೀವಿಸುತ್ತಿದ್ದ ಕಾರಣ ಇದೊಂದು ಆರಾಮದ ವಿರಾಮ ಎನ್ನುವ ಮೋಜಿನ ಭಾವನೆಯ ಹೊರತಾಗಿ ನಾವು ಹೊರಟಿರುವುದು ನಮ್ಮ ಗಡಿಯ ಅತಿ ದುರ್ಗಮ, ನಾವು ಊಹಿಸಿಯೂ ಇರಲಾರದಂಥ ಪರಿಸರಕ್ಕೆ ಎನ್ನುವ ಬಗ್ಗೆ ನಮಗೆ ಯಾರಿಗೂ ಅಷ್ಟಾಗಿ ಗಾಂಭೀರ್ಯ ಇರಲಿಲ್ಲ.

ನಮ್ಮ ಪರ್ವತಾರೋಹಣ ಶಿಬಿರ ಡಾರ್ಜಿಲಿಂಗ್‌ನಿಂದ ಶುರುವಾಯ್ತು. ಸಾಮಾನ್ಯವಾಗಿ ಇಂಥಾ ಶಿಬಿರಗಳಲ್ಲಿ ಬೇಸ್‌ಕ್ಯಾಂಪ್‌ನಿಂದ ಬೇಸ್‌ಕ್ಯಾಂಪ್‌ಗೆ ನಮ್ಮ ಸಮಸ್ತ ಲಗೇಜ್ ಅನ್ನು ಬೆನ್ನಮೇಲೆ ಹೊತ್ತುಕೊಂಡೇ ಹತ್ತಬೇಕು. ಬಹುಶಃ ಆ ಕಾಲಕ್ಕೆ ನಮಗಿದ್ದ ಬಲುದೊಡ್ಡ ತಲೆಬಿಸಿ ಎಂದರೆ, ಈ ಲಗೇಜ್ ಹೊರುವ ಪ್ರಕ್ರಿಯೆಯೊಂದೇ. ಇನ್ನುಳಿದಂತೆ ಸುಲಭವಾಗಿ ಹತ್ತಿಬಿಡುತ್ತೇವೆ ಎನ್ನುವುದು ನಮ್ಮ ಊಹೆಯಾಗಿತ್ತು. ಪ್ರತೀ ಬೇಸ್‌ಕ್ಯಾಂಪ್‌ನಲ್ಲಿ ಬೇಕೇ ಬೇಕು ಎಂದು ಕೊಂಡೊಯ್ದಿದ್ದ ವಸ್ತುಗಳನ್ನು ನಿರ್ದಾಕ್ಷಿಣ್ಯವಾಗಿ ಬೇಡ ಎಂದು ವಿಂಗಡಿಸಿ, ಬೆನ್ನು ಏರಿದ ಚೀಲದಲ್ಲಿ ಒಂದಷ್ಟು ಗ್ರಾಂಗಳ ಇಳಿಕೆ ಕಂಡು ನಿಡುಸುಯ್ದು ಮುಂದಿನ ನಡಿಗೆ ಪ್ರಾರಂಭಿಸುತ್ತಿದ್ದೆವು.

ಅಂದು ನಮ್ಮ ಶಿಬಿರದ ಎರಡನೇ ದಿನ. 8 ಕಿ.ಮೀ.ಗಳ ಕಡಿದಾದ ಗಿರಿ ಹತ್ತಿ ಅಪರಾಹ್ನ 2ರ ಸುಮಾರಿಗೆ ಟಂಗ್ಲೂ ಎನ್ನುವ, ಗಾಳಿ ಬಿಟ್ಟು ಇನ್ನಾವ ಶಬ್ದವೂ ಕೇಳದ ನೇಪಾಳದ ಸಶಸ್ತ್ರ ಸೀಮಾ ಬಲದ ಪಹರೆ ಇರುವ ಪ್ರದೇಶಕ್ಕೆ ಬಂದು ನಿಂತೆವು. ಸುತ್ತಲೂ ಕಣ್ಣಿಗೆ ಸುಸ್ತಾಗುವಷ್ಟು ಹಿಮಾಲಯದ ದೃಶ್ಯಾವಳಿಗಳು. ನಮ್ಮ ದಣಿವೆಲ್ಲಾ ಅಡರಿಹೋಯ್ತು. ಸುಮ್ಮನೆ ಈ ಪರಿಸರವನ್ನು ಗಮನಿಸಿದೆ, ಇಲ್ಲಿಂದ ನಮ್ಮ ಮುಂದಿನ ಬೇಸ್ ಅಂದರೆ ಟಂಬ್ಲಿಂಗ್ ಎನ್ನುವ ಪ್ರದೇಶ ಚಿಕ್ಕ ಕನಸಿನೂರಿನಂತೆ ದೂರದಲ್ಲಿ ಗೋಚರಿಸುತ್ತಿತ್ತು .

ನಾವು ನಿಂತ ಜಾಗ, ಅಂದರೆ ಬೆಟ್ಟದ ತುದಿ ಒಂದು ಮೂರು ಎಕರೆ ವಿಸ್ತಾರದ ಪ್ರದೇಶ ಇರಬಹುದು. ಅಲ್ಲಿ ಎರಡೂ ದೇಶದ ಭೂಸೇನೆಯ ಒಂದೊಂದು ಘಟಕಗಳಿವೆ. ಸುತ್ತಲೂ ಪ್ರಪಾತ, ಸೇನೆಗೆ ಸಂಬಂಧಪಟ್ಟ ಬಲಿಷ್ಠ ಬೋರ್ಡುಗಳೂ ಸುರುಳಿಗಳಂತೆ ಸುತ್ತಿವೆ, ಬಾಗಿವೆ. ಇದೆಲ್ಲಾ ಗಾಳಿಯ ಪ್ರಲಾಪ ಎಂದು ಅಲ್ಲಿದ್ದ ಅಧಿಕಾರಿಯೊಬ್ಬರು ನಗುತ್ತಾರೆ. ನಮ್ಮ ಕಾಲ್ನಡಿಗೆಗೆ ಅದು ಒಂದು ತಂಗುದಾಣವಷ್ಟೆ. ಆದರೆ, ಅಲ್ಲಿದ್ದ ಸೈನಿಕರಿಗೆ ಅದು ಹಲವು ತಿಂಗಳುಗಳ ಕಾರ್ಯಕ್ಷೇತ್ರ. ನಿವಾಸಿಗಳಿಗೆ ಶಾಶ್ವತ ನೆಲೆ. ಒಂದೊಂದು ನೀರಿನ ಹನಿಯನ್ನು, ಸೇವಿಸುವ ಆಹಾರದ ಪ್ರತೀ ಕಣವನ್ನೂ ಇಲ್ಲಿನ ವಾಸಿಗಳು ತಲೆಮೇಲೆ ಹೊತ್ತು ತರುತ್ತಾರೆ. ಇದನ್ನು ಪ್ರತ್ಯಕ್ಷ ಕಂಡ ನಮಗೆ ಅರಿವೇ ಇಲ್ಲದಂತೆ ಬೆನ್ನ ಚೀಲಗಳ ಭಾರ ಹೊರಲಾಗದೆಂದು ದೂಷಿಸಿದ್ದರ ಬಗ್ಗೆ ಅಪರಾಧಿ ಭಾವ ಕಾಡತೊಡಗಿತು. ಮೋಜಿನ ಯಾತ್ರೆಯೊಂದು ನಿಧಾನವಾಗಿ ಬದುಕಿನ ಪಾಠಗಳನ್ನು ಕಲಿಸುತ್ತಾ ನಮ್ಮನ್ನು ವಿಚಾರಶೀಲರನ್ನಾಗಿಸುತ್ತಾ ಹೋಯ್ತು.

ಈ ಯೋಚನೆಗಳೊಂದಿಗೆ ಬೆಟ್ಟವಿಳಿದು ಟಂಬ್ಲಿಂಗ್‌ನ ನಮ್ಮ ವಸತಿನಿಲಯ ತಲುಪಿದೆವು. ಅಲ್ಲಿ ಸಂಜೆ 5ರ ಸುಮಾರಿಗೆ ಕತ್ತಲಾಗಿಬಿಡುತ್ತದೆ. ಹೀಗಾಗಿ ವಸತಿನಿಲಯ ತಲುಪಿ ಬೆಚ್ಚಗೆ ಒಳಮುದುರಿ ಕುಳಿತುಬಿಟ್ಟೆವು. ನಮ್ಮ ಕ್ಯಾಂಪ್‌ಫೈರ್, ಕುಣಿತ, ಕೇಕೆಗಳ ನಡುವೆ ವಸತಿನಿಲಯದ ಹೊರಗೆ ನಡೆಯುತ್ತಿರುವ ಪ್ರಾಕೃತಿಕ ಬದಲಾವಣೆಗಳು ನಮ್ಮ ಗಮನಕ್ಕೆ ಬರಲಿಲ್ಲ. ಟಂಬ್ಲಿಂಗ್‌ನ ಸೂರ್ಯೋದಯ ದೃಶ್ಯಗಳು ವಿಶ್ವಪ್ರಸಿದ್ಧ. ಇಲ್ಲಿ ಬೆಳಗಿನ 6ಕ್ಕೆ ಸೂರ್ಯೋದಯ ಹಿಮಾಲಯದ ಒಂದೊಂದು ಪರ್ವತದ ಮೇಲೆ ಒಂದೊಂದು ಬಣ್ಣಗಳನ್ನು ಮೂಡಿಸುತ್ತದೆ. ಹೀಗಾಗಿ ಮಾರನೆಯ ದಿನ ಹಲವು ಕಿ.ಮೀ. ಕ್ರಮಿಸಬೇಕಿರುವುದೆಂದೂ ಸೂರ್ಯೋದಯ ನೋಡಿ ಮುಂದಿನ ಬೇಸ್‌ಗೆ ಹೊರಡುವುದೆಂದೂ ಶಿಬಿರದ ನಾಯಕರ ಆಜ್ಞೆಯ ನಿಮಿತ್ತ, ಸೂರ್ಯೋದಯದ ಕನಸು ಕಾಣುತ್ತಾ ಬೆಚ್ಚಗೆ ಮಲಗಿಬಿಟ್ಟೆವು. ಬಹಳ ದಣಿವಿದ್ದ ಕಾರಣ ಕ್ಷಣಮಾತ್ರದಲ್ಲಿ ನಿದ್ದೆಗೆ ಜಾರಿದ್ದೆವು.



ಟಂಬ್ಲಿಂಗ್ ಹಾಗೂ ಟೊಂಗ್ಲು ನಡುವೆ ಭಾರತ-ನೇಪಾಳ ಗಡಿಯಲ್ಲಿ ಹಿಮಹಾಸಿನ ಮೇಲೆ ಹೆಜ್ಜೆ ಇಡುತ್ತಾ...

ಚಿತ್ರಗಳು: ಆದರ್ಶ ಹೆಗಡೆ

ಬೆಳಗ್ಗೆ ಏಳುವ ಸಮಯ. ಏಳುವಾಗಲೆ ವಸತಿನಿಲಯ ಗಲಾಟೆಯ ಗೂಡಾಗಿತ್ತು. ಹೊರಬಂದು ನೋಡಿದರೆ ನಾವು ಹಿಮದ್ವೀಪದಲ್ಲಿರುವಂತೆ ಕಂಡಿತು. ನನ್ನ ಕಣ್ಣನ್ನೇ ನಾನು ನಂಬಲಾಗುತ್ತಿಲ್ಲ. ಕನಸಿರಬಹುದೇ ಎಂದು ಕಣ್ಣುಜ್ಜಿ ನೋಡಿದರೂ ಅದೇ ದೃಶ್ಯ. ಯಾವುದೇ ಸೂಚನೆಗೊಡದೆ ಹಿಂದಿನ ರಾತ್ರಿ ಅಲ್ಲಿ ಹಿಮಪಾತವಾಗಿತ್ತು. ನಾವಿದ್ದ ಪ್ರದೇಶ ಡಿಸೆಂಬರ್‌ನಲ್ಲಿ ಹಿಮಪಾತ ನಿರೀಕ್ಷಿಸುವ ಜಾಗವೇನಲ್ಲ, ಇಲ್ಲಿ ಹಿಮಪಾತವಾದರೂ ಅದು ಫೆಬ್ರುವರಿ ಮಧ್ಯಭಾಗದಲ್ಲಿ. ಅದೂ ಅಪರೂಪ. ನಾವಂತೂ ಹಿಮಪಾತವನ್ನು ಊಹಿಸಿಯೂ ಇರಲಿಲ್ಲ. ಆರಂಭಕ್ಕೆ ಎಲ್ಲರಿಗೂ ಏನೋ ಖುಷಿ. ಹಿಮದಲ್ಲಿ ಆಟ, ಫೋಟೊ ಮತ್ತು ಇಂದಿನ ನಡಿಗೆ ರದ್ದು ನಾಳೆ ಮುಂದಿನ ಬೇಸ್ ಎಂದು ನಾಯಕ ಹೇಳಿದ್ದರಿಂದ ಇಡೀ ದಿನ ಮನಸೋ ಇಚ್ಛೆ ಹಿಮದಲ್ಲಿ ಆಡಬಹುದು ಎಂಬ ಹುಡುಗುಬುದ್ಧಿ.



ಮೂರ್ನಾಲ್ಕು ಗಂಟೆ ಕಳೆಯಿತು, ಹಿಮವು ಸಾಕೆನಿಸಿ ಒಳ ಹೊರಟಿದ್ದೆವು. ಅಷ್ಟರಲ್ಲಿ, ದೂರದಿಂದ ಸೇನೆಯ ಅಧಿಕಾರಿಗಳ ದಂಡು ನಮ್ಮೆಡೆಗೆ ಬರುವುದು ಕಂಡಿತು. ಇಲ್ಲಿಂದ ನಮ್ಮ ಮೋಜುಮಸ್ತಿಗಳು ಪದಶಃ ನಿಂತವು.

ಸೇನೆಯ ಅಧಿಕಾರಿಗಳು, 'ಹಿಮಪಾತ ಹೆಚ್ಚುತ್ತಿದೆ. ನೀವು ಈ ಕೂಡಲೇ ಇಲ್ಲಿಂದ ಸುರಕ್ಷಿತ ಬೇಸ್‌ಗಳಿಗೆ ಮರಳಬೇಕು' ಎಂದು ಏರುಧ್ವನಿಯಲ್ಲಿ ವಿನಂತಿಸಲು ಮೊದಲಾದರು. ಕಿವಿಗೆ ರೆಸ್ಕ್ಯೂ ಪದ ಬೀಳುತ್ತಿದ್ದಂತೆ ನಮ್ಮೆಲ್ಲರಿಗೂ ದುಗುಡ. ನಾವು ತಡಮಾಡಿದರೆ ನಮ್ಮ ವಸತಿ ನಿಲಯವೂ ಹಿಮಸಮಾಧಿಯಾಗುವ ಅಪಾಯ ಹೆಚ್ಚಿತ್ತು. ನಮಗೆ ಸೇನೆಯವರ ಮಾತು ಕೇಳದೆ ಬೇರೆ ದಾರಿಯಿರಲಿಲ್ಲ. ಪರಿಸ್ಥಿತಿಯ ತೀವ್ರತೆ ನಮಗೆ ಸೇನಾಧಿಕಾರಿಗಳ ನಡಿಗೆ, ಧ್ವನಿಗಳಲ್ಲಿ ಅರ್ಥವಾಗತೊಡಗಿತು. ನಾವು 11 ಮಂದಿ ಟ್ರೆಕ್ಕರ್‌ಗಳು ಮತ್ತು ನಮ್ಮ ಜೊತೆ ಇನ್ನೂ 45 ಜನ ಪ್ರವಾಸಿಗರು ಮುಂದಿನ ಹಿಮನಡಿಗೆಗೆ ಸಿದ್ಧರಾದೆವು.

ನಾನು ಮೊದಲೇ ಹೇಳಿದಂತೆ ನಾವು ನಡಿಗೆಗೆ ಸಿದ್ಧವಿದ್ದರೂ ಹಿಮವನ್ನು ಊಹಿಸಿರಲಿಲ್ಲ. ನಾವು ಕ್ರಮಿಸಬೇಕಿರುವ ದೂರ ನಮಗಿನ್ನೂ ಗೊತ್ತಿರಲಿಲ್ಲ. ಬೇಕಂತಲೇ ಸೇನಾಧಿಕಾರಿಗಳು ನಮಗೆ ನಡಿಯಬೇಕಿರುವ ದೂರ ತಿಳಿಸಿರಲಿಕ್ಕಿಲ್ಲ ಎಂದು ಈಗ ಅನಿಸುತ್ತದೆ. ಮಧ್ಯಾಹ್ನ ಒಂದು ಗಂಟೆಯ ಹೊತ್ತಿಗೆ ನಮ್ಮ ನಡಿಗೆ ಶುರುವಾಯ್ತು. ಹಿಮದಲ್ಲಿ ಬೆನ್ನುಚೀಲಗಳ ಭಾರ ಹೊತ್ತು ನಡೆಯುವುದು ಸುಲಭದ ಮಾತಲ್ಲ. 500 ಮೀಟರ್ ಕ್ರಮಿಸುವಾಗ ಅದಾಗಲೇ ಎರಡು-ಅಡಿಗೂ ಮೀರಿ ಹಿಮವಿದ್ದಿದ್ದರಿಂದ ನಮ್ಮ ಬೂಟುಗಳೊಳಗೆ ಹಿಮ ಹೊಕ್ಕು ಪಾದದಿಂದ ಹಿಡಿದು ಮೈಕೊರೆಯಲು ಶುರುವಾಗಿತ್ತು. ಹಿಮಪಾತವಾಗುವಾಗ ಆಮ್ಲಜನಕದ ಸುಳಿದಾಟವೂ ಕಡಿಮೆಯಿರುವ ಕಾರಣ ಉಸಿರು ಎಳೆದುಕೊಳ್ಳುವುದೇ ಮೊದಲ ಸವಾಲಾಯ್ತು. ಹಿಮಬೆಟ್ಟ ಹತ್ತುತ್ತ ಹೆಚ್ಚು ಉಸಿರಿಗಾಗಿ ಮೂಗು-ಬಾಯಿ ಎರಡೂ ಕೆಲಸಮಾಡಿ ಗಂಟಲು ಧ್ವನಿ ಕಳೆದುಕೊಳ್ಳಲು ಶುರುಮಾಡಿತ್ತು. ಗಂಟಲು ಒಣಗುತ್ತಿದೆ ಎಂದು ನೀರು ಕುಡಿಯಲು ಬಿಸಿನೀರಿನ ಫ್ಲಾಸ್ಕ್ ತೆಗೆದರೆ, ಕುದಿಸಿ ತುಂಬಿಸಿದ್ದ ನೀರು ತಣ್ಣಗೆ ಕೊರೆದು; ಅದನ್ನು ಕುಡಿದ ಗಂಟಲು ಇನ್ನಷ್ಟು ಹದಗೆಡುತ್ತಿತ್ತು.

ನಾವು ನಡೆಯುತ್ತಿದ್ದದ್ದು ಗುಡ್ಡ ಕೊರೆದು ಮಾಡಿದ್ದ ರಸ್ತೆಯಲ್ಲಿ. ಇಲ್ಲಿ ಎಲ್ಲಿ ಪ್ರಪಾತವಿದೆ, ಎಲ್ಲಿ ರಸ್ತೆಯಿದೆ ಎಂದು ತಿಳಿಯದಷ್ಟು ಮಟ್ಟಿಗೆ ಹಿಮ ಸುರಿದಿತ್ತು. ಸೈನಿಕರೊಬ್ಬರು ನಮಗೆ ದಾರಿ ತೋರಿಸುತ್ತಾ ಮುನ್ನಡೆದಿದ್ದರು, ಅವರ ಹೆಜ್ಜೆಗೆ ನಮ್ಮ ಹೆಜ್ಜೆ ಸೇರಿಸಿ ನಡೆವುದೂ ಒಂದು ಸಾಹಸವೇ. ನಮ್ಮ ಚೀಲಗಳು 5 ನಿಮಿಷಕ್ಕೊಮ್ಮೆ ಒಂದಷ್ಟು ಹಿಮ ಸಂಗ್ರಹಿಸಿಕೊಂಡು ತೂಕವಾಗಿ, ಅವುಗಳನ್ನು ನಿಂತು ನಿಂತು ಕೊಡವಿಕೊಂಡು ಮುನ್ನಡೆಯಬೇಕಾಯ್ತು. ಈ ನಡಿಗೆ ಮಧ್ಯಾಹ್ನ 2ರ ಹೊತ್ತಿಗೆ ಹಿಂದಿನ ದಿನ ನಾವು ದಣಿವಾರಿಸಿಕೊಂಡಿದ್ದ ಟಂಗ್ಲೂಗೆ ತಲುಪಿತು. ಪ್ರಕೃತಿಯ ವೈಚಿತ್ರ್ಯ ಎನ್ನುವುದು ಇದಕ್ಕೇ. ಕೇವಲ 24 ಗಂಟೆ ಮುಂಚೆ ಸ್ವಚ್ಛಂದ-ಸ್ವತಂತ್ರ ಪರಿಸರದಂತೆ ಕಂಡಿದ್ದ ಜಾಗ ಈಗ ಸಂಪೂರ್ಣ ಹಿಮಾವೃತಗೊಂಡು ಆ ಸೇನಾ ಟೆಂಟುಗಳು ಹಿಮದಲ್ಲಿ ಮುಳುಗಿಹೋಗಿದ್ದವು. ಈ ದೃಶ್ಯ ನಮ್ಮ ಭಯವನ್ನು, ಅಸಹಾಯಕತೆಯನ್ನು ಇಮ್ಮಡಿಯಾಗಿಸಿತು.

3.30ರ ಸುಮಾರಿಗೆ ಕತ್ತಲಾಗಲು ಶುರುವಾಯ್ತು. ಹಿಮ ನೋಡಿದ ಹಲವರಿಗೆ ಹಿಮಗುರುಡು ಶುರುವಾಗುತ್ತದೆ ಎಂದು ಎಲ್ಲೋ ಓದಿದ್ದೆ, ಈಗ ಅನುಭವಿಸಿದೆ, ಏನು ನೋಡಿದರೂ ಬಿಳಿ, ಯಾರನ್ನು ನೋಡಿದರೂ ಬೆಳ್ಳಗೆ ಭೂತ ಕಂಡಂತೆ ಗೋಚರವಾಯ್ತು. ಆಯ್ಯೋ... ಇಲ್ಲಿ ಬಂದು ಕಣ್ಣು ಕಳೆದುಕೊಂಡೆನೇ ಎಂದುಕೊಂಡೆ. ಅಳುವುದಕ್ಕೂ ಮರುಗುವುದಕ್ಕೂ ಆಗದಷ್ಟು ಸೋತಿದ್ದೆ. ಮುಂದಿನ ಅಷ್ಟೂ ದಾರಿ ಸ್ನೇಹಿತರ ಕೈಹಿಡಿದು 'ಅಂಧೆ'ಯಾಗಿಯೇ ನಡೆದೆ. ಸಂಜೆ 5ರ ಸುಮಾರಿಗೆ ಅದು ಭೀಕರ ಕತ್ತಲು. ನಮ್ಮ ಹದಗೆಟ್ಟ, ಒಡೆದ ಧ್ವನಿಗಳು ಬಿಟ್ಟರೆ ಅಲ್ಲಿ ಏನೂ ನಮ್ಮ ಧೈರ್ಯಕ್ಕಿಲ್ಲ. ನಾವು ಒಯ್ದಿದ್ದ ಟಾರ್ಚುಗಳು ಆ ಕತ್ತಲಲ್ಲಿ ಮಿಣುಕು ಹುಳದಂತೆ ಮಿಣುಕಿ ನಂದಿಹೋಗಿದ್ದವು. ಹಿಮಪರ್ವತವನ್ನು ಹತ್ತುವಾಗ ಒಂದು ರೀತಿಯ ಕಷ್ಟವಾದರೆ, ಇಳಿಯುವಾಗ ಇನ್ನೊಂದು ರೀತಿಯ ಬವಣೆ. ಪರ್ವತಗಳನ್ನು ಇಳಿಯುವಾಗ ಸಹಜವಾಗಿಯೇ ಕಾಲು ಜಾರುತ್ತದೆ. ಇನ್ನು ಹಿಮವಿರುವಾಗ ನಾವು ಎಷ್ಟೇ ಜಾಗರೂಕರಾಗಿದ್ದರೂ ಹಿಮ ನಮ್ಮನ್ನೆಳೆದೊಯ್ಯುತ್ತದೆ.

ಹೀಗೆ ಇಳಿಯುವಾಗ ಹಿಂದೆಂದೂ ನೋಡಿರದ ಕತ್ತಲೆ, ಪ್ರಪಾತ ಮತ್ತು ಜಾರುವಿಕೆ ಎಲ್ಲವೂ ಸೇರಿ ಹಲವು ಬಾರಿ ನಾವು ಬದುಕುವುದಿಲ್ಲ ಎಂದು ಊಹಿಸಿದ್ದಿದೆ. ಜಾರುತ್ತಾ ಹೋಗಿ ಗಿಡಗಂಟಿಗಳಿಗೆ ಸಿಕ್ಕಿ ಜೀವ ಉಳಿಸಿಕೊಂಡಿದ್ದಿದೆ. ಒಬ್ಬ ಸ್ನೇಹಿತನು ಹಿಮರಾಶಿಯಲ್ಲಿ ಕಳೆದುಹೋಗಿ ಆತ ಸಿಗುವವರೆಗೂ ಅತ್ತಿದ್ದಿದೆ. ಇಷ್ಟೆಲ್ಲ ಸವಾಲುಗಳ ನಡುವೆ ಅಂದು ರಾತ್ರಿ 11ರವರೆಗೆ ಅಂದರೆ ಸುಮಾರು 10 ಗಂಟೆಗಳ ಕಾಲ ನಾವು ಸೇನಾಧಿಕಾರಿಗಳನ್ನು ಹಿಂಬಾಲಿಸಿ ಬರೋಬ್ಬರಿ 25 ಕಿ.ಮೀ ನಡೆದಿದ್ದೆವು. ಸುರಕ್ಷಿತ ಜಾಗಕ್ಕೆ ನಮ್ಮನ್ನು ಸೇರಿಸಿದ ಸೇನೆಯವರೂ ಮುಂದಿನ ರೆಸ್ಕ್ಯೂ ಕಾರ್ಯಕ್ಕೆ ಹೊರಟಿದ್ದರು.

ಆ ಸರಿರಾತ್ರಿಯಲ್ಲಿ ಯಾರೋ ಪುಣ್ಯಾತ್ಮರು ಮನೆಯೊಳಗೆ ಕರೆದು ಕುದಿವ ನೀರು ಕೊಟ್ಟರು. ಮೈಬಿಸಿ ಮಾಡಿಕೊಳ್ಳಲು ವ್ಯವಸ್ಥೆ ಮಾಡಿದರು.

ನಾವೆಲ್ಲರೂ ಉತ್ಸಾಹದಿಂದ ಸಾಹಸಯಾತ್ರೆ ಎಂದು ಹೊರಟಿದ್ದೆವು. ಆದರೆ, ಪ್ರಕೃತಿಯ ಸ್ನೇಹ ಬಯಸಿ ಹೊರಟವರು ಪ್ರಕೃತಿಯ ಕಠೋರತೆಯ ಸೂಚನೆಗಳನ್ನೂ ಅವಲೋಕಿಸಬೇಕು ಎನ್ನುವುದನ್ನ ಈ ಸುದೀರ್ಘ ನಡಿಗೆ ಕಲಿಸಿತು. ಕತ್ತಲಾದ ನಂತರ ನಾವುಗಳ್ಯಾರೂ ಬದುಕಿ ಹಿಂದಿರುಗುತ್ತೇವೆ ಎನ್ನುವ ನಂಬಿಕೆ ಇಟ್ಟುಕೊಂಡಿರಲಿಲ್ಲ. ಅಂದು ನಾವೆಲ್ಲರೂ ಅನುಭವಿಸಿದ ಮನೋವ್ಯಥೆಗಳನ್ನ ಬಹುಶಃ ನನ್ನ ಪದಗಳು ಕಟ್ಟಿಕೊಡಲಾರವು. ಜೀವಭಯವನ್ನು ಬಹಳ ಹತ್ತಿರದಿಂದ ಅನುಭವಿಸಿದ್ದೆವು. ಆದರೆ, ಈ ಯಾತ್ರೆ ನಮ್ಮ ದೇಹದ ಬಗ್ಗೆ, ಮನಸ್ಥೈರ್ಯದ ಬಗ್ಗೆ ಇದ್ದ ವಿಶ್ವಾಸವನ್ನು ನೂರುಪಟ್ಟು ಹೆಚ್ಚಿಸಿತು. ನಮ್ಮ ದೈಹಿಕ ಸಾಮರ್ಥ್ಯಕ್ಕೆ ನಾವೇ ಮಿತಿಯೊಡ್ಡಿಕೊಳ್ಳುತ್ತೇವೆ. ಸಾವು ಎದುರಿಗಿದ್ದರೆ ಮಾತ್ರ ಈ ಸಾಮರ್ಥ್ಯವನ್ನು ಬಳಸುತ್ತೇವೆ ಎನ್ನುವ ಸತ್ಯ ಅರ್ಥವಾಯ್ತು.

ಈಗ ಇದನ್ನೆಲ್ಲಾ ನೆನೆದು ಒಂದಷ್ಟು ನಗುತ್ತೇವೆ, ಗೇಲಿಮಾಡುತ್ತೇವೆ. ಅಂದಿನ ವಿಹ್ವಲ ಕ್ಷಣಗಳು ಇಂದಿನ ತಮಾಷೆಗೆ ವಿಷಯಗಳಾಗಿವೆ. ಅಂದು ಸುರಕ್ಷಿತವಾಗಿ ನಾವು ನೆಲ ಮುಟ್ಟಿದ ನಂತರ ನಮ್ಮ ಶಿಬಿರ ನಾಯಕ, ಹಿಮಾಲಯ್ ಕೆ ಸಾಮ್ನೇ ಹೀರೊ ಮತ್ ಬನೋ.... ಹಿಮಾಲಯ ಖುದ್ ಹೀರೊ ಹೈ ಎಂದ ಮಾತು ಮತ್ತೆ ಮತ್ತೆ ನಮ್ಮನ್ನು ಚಿಂತನೆಗೆ ಹಚ್ಚಿ, ಪ್ರಕೃತಿಯೆದುರು ನಾವು ಸಣ್ಣ ಅಣುಗಳು. ಇರುವಷ್ಟು ದಿನ ಒಡನಾಡಿಯಂತೆ, ಅರಿತು ಬದುಕು ಎಂದು ನನ್ನನ್ನು ಎಚ್ಚರಿಸುತ್ತದೆ. ಈ ಅನುಭವ ನನ್ನನ್ನು ಸಾಹಸ-ಪ್ರವಾಸಗಳ ವಿಷಯದಲ್ಲಿ ಎದೆಗುಂದಿಸದಿದ್ದರೂ ಇನ್ನಷ್ಟು ಅಧ್ಯಯನ, ಪ್ರಯಾಣ ವಿಷಯದಲ್ಲಿ ಅಣಿಗೊಳ್ಳುವಿಕೆಯ ಅಗತ್ಯತೆಯನ್ನು ಅರ್ಥೈಸಿಕೊಟ್ಟಿದೆ. ನಿಸರ್ಗದ ಜೊತೆಗಿನ ಆಪ್ತತೆಯ ಹಂಬಲ ಇನ್ನೂ ಹೆಚ್ಚಿದೆ. ❖

ಮುನ್ನೋಟ 23-01-2022 ರಿಂದ 29-01-2022

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಕೃಷಿ ಯಂತ್ರೋಪಕರಣಗಳನ್ನು ಬಳಸುವವರಿಗೆ ಬರಬೇಕಿದ್ದ ಸಹಾಯಧನ ಈಗ ಬರುತ್ತದೆ. ಎದುರಾದ ಸಮಸ್ಯೆಗಳಿಗೆ ಸ್ನೇಹಿತರಿಂದ ಸೂಕ್ತ ಪರಿಹಾರ ಒದಗಿಬರುತ್ತದೆ. ದೂರ ಪ್ರಯಾಣದಿಂದ ಹೆಚ್ಚಿನ ಖರ್ಚು ಬರುತ್ತದೆ. ವಿದೇಶಿ ಸಂಸ್ಥೆಗಳಲ್ಲಿ ಹೂಡಿದ್ದ ಬಂಡವಾಳ ಈಗ ದೊಡ್ಡಮೊತ್ತವಾಗಿ ವಾಪಸ್ಸು ಬರುತ್ತದೆ. ತಿರುಗಾಟದಿಂದ ದೇಹಾಲಸ್ಯವಾಗಬಹುದು.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಸಾಲಸೋಲಗಳಿಂದ ಮುಕ್ತರಾಗಿ ನೆಮ್ಮದಿ ದೊರಕುವುದು. ಆದಾಯವು ಸಾಮಾನ್ಯವಾಗಿರುತ್ತದೆ. ರೈತಾಪಿ ವರ್ಗದವರಿಗೆ ಅವರು ಬೆಳೆದ ವಸ್ತುಗಳಿಗೆ ತಕ್ಕ ಬೆಲೆ ದೊರೆಯುತ್ತದೆ. ಸಂಗಾತಿಯ ಸಂತೋಷಕ್ಕಾಗಿ ಧನವ್ಯಯವಾಗುತ್ತದೆ. ವಿದ್ಯುತ್ ಉಪಕರಣಗಳ ದುರಸ್ತಿಗಾಗಿ ಹಣ ಖರ್ಚಾಗಬಹುದು. ಹೆಣ್ಣು ಮಕ್ಕಳ ವಿದ್ಯಾಭ್ಯಾಸದಲ್ಲಿ ಪ್ರಗತಿ ಕಾಣಬಹುದು.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದಲ್ಲಿ ಸಫಲತೆಯನ್ನು ಕಾಣುವ ಅವಕಾಶವಿದೆ. ಬಂಧುಗಳ ಮನೆಯಲ್ಲಿ ಧಾರ್ಮಿಕ ಕಾರ್ಯಗಳಿಗಾಗಿ ಹೋಗಿ ಬರುವಿರಿ. ತಂದೆಯಿಂದ ನಿಮ್ಮ ಕೆಲಸಗಳಿಗೆ ಸ್ವಲ್ಪಮಟ್ಟಿನ ಧನಸಹಾಯ ದೊರೆಯುತ್ತದೆ. ಹಣದ ಒಳಹರಿವು ನಿಮ್ಮ ನಿರೀಕ್ಷೆಯ ಮಟ್ಟಕ್ಕೆ ಇರುತ್ತದೆ. ಸರ್ಕಾರಿ ಸಂಸ್ಥೆಗಳು ಅಥವಾ ಸಂಘ-ಸಂಸ್ಥೆಗಳಿಂದ ಬರಬೇಕಾಗಿದ್ದ ಸಹಾಯಧನ ಈಗ ಬರುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಸಣ್ಣ ಮಕ್ಕಳ ಆರೋಗ್ಯದ ಬಗ್ಗೆ ಹೆಚ್ಚಿನ ನಿಗಾವಹಿಸಿರಿ. ಹೊಸ ಉದ್ಯೋಗದಲ್ಲಿ ನಿಮ್ಮ ಶ್ರದ್ಧೆಯಿಂದ ಹಿರಿಯ ಅಧಿಕಾರಿಗಳ ಗಮನಸೆಳೆಯುವಿರಿ. ನಿಮ್ಮ ಕೈಕೆಳಗಿನ ಕೆಲಸಗಾರರೊಡನೆ ತಾಳ್ಮೆಯಿಂದ ವರ್ತಿಸುವುದು ಬಹಳ ಅಗತ್ಯ. ಖರ್ಚು ವೆಚ್ಚದಲ್ಲಿ ನಿಯಂತ್ರಣವನ್ನು ಸಾಧಿಸಿ ಧನ ನಿರ್ವಹಣೆಯನ್ನು ಮಾಡುವಿರಿ. ವಿದ್ಯಾಸಂಸ್ಥೆಗಳನ್ನು ನಡೆಸುತ್ತಿರುವವರಿಗೆ ಇದ್ದ ಕೆಲ ಸಂಕಷ್ಟಗಳು ದೂರವಾಗುತ್ತವೆ.

ಸಿಂಹ — ಮಖ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಮಾತೃ ವರ್ಗದವರಿಂದ ಧನಸಹಾಯ ದೊರೆತು ನಿಮ್ಮ ಯೋಜಿತ ಕೆಲಸ ಕಾರ್ಯಗಳಿಗೆ ಅನುಕೂಲವಾಗುತ್ತದೆ. ವಾಹನ ಚಾಲನೆ ವೇಳೆ ಸಾಕಷ್ಟು ಎಚ್ಚರಿಕೆ ತೆಗೆದುಕೊಳ್ಳಿರಿ. ಬೆಂಕಿಯೊಂದಿಗೆ ಕೆಲಸ ಮಾಡುವವರು ಹೆಚ್ಚಿನ ಎಚ್ಚರಿಕೆಯನ್ನು ತೆಗೆದುಕೊಳ್ಳುವುದು ಬಹಳ ಉತ್ತಮ. ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಹೆಚ್ಚಿನ ನಿಗಾವಹಿಸುವುದು ಅಗತ್ಯ.

ಕನ್ಯಾ — ಉತ್ತರ ಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ವೈಯಕ್ತಿಕ ಜೀವನದಲ್ಲಿ ಸ್ವಲ್ಪಮಟ್ಟಿನ ಅಭಿವೃದ್ಧಿಯನ್ನು ಕಾಣಬಹುದು. ಆಸ್ತಿ ವ್ಯವಹಾರಗಳಲ್ಲಿ ಹೆಚ್ಚಿನ ಪ್ರಗತಿಯನ್ನು ಕಾಣುವಿರಿ. ಹಿರಿಯ ಮಹಿಳಾಮಣಿಗಳಿಗೆ ಗೌರವಾದರಗಳು ದೊರೆಯುತ್ತವೆ. ಪ್ರತಿಭಾಸಂಪನ್ನರಿಗೆ ಉತ್ತಮ ಉದ್ಯೋಗ ದೊರೆಯುವ ಸಾಧ್ಯತೆ ಇದೆ. ಈ ಹಿಂದೆ ಬಂದಿದ್ದ ಆಪಾದನೆಗಳಿಂದ ಮುಕ್ತರಾಗುವ ಅವಕಾಶ ಒದಗಿ ಬರುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖೆ 1,2,3

ಗೃಹ ನಿರ್ಮಾಣಕಾರ್ಯದಲ್ಲಿ ಇದ್ದ ತೊಡಕುಗಳು ನಿವಾರಣೆಯಾಗಿ ಪ್ರಗತಿಯನ್ನು ಕಾಣಬಹುದು. ಹಣದ ಹರಿವು ಕಡಿಮೆ ಇದ್ದರೂ ಆತಂಕಗೊಳ್ಳುವ ಪರಿಸ್ಥಿತಿ ಇರುವುದಿಲ್ಲ. ಮಹಿಳಾ ಕಲಾವಿದರುಗಳಿಗೆ ಉತ್ತಮ ಪ್ರೋತ್ಸಾಹ ದೊರೆತು ಆದಾಯ ಹೆಚ್ಚುತ್ತದೆ. ಪತ್ರಿಕಾರಂಗದಲ್ಲಿ ಇರುವವರಿಗೆ ಹೆಸರು ತರುವಂತಹ ಘಟನೆಗಳು ಸಂಭವಿಸುತ್ತವೆ. ವಾಹನ ರಿಪೇರಿಗಾಗಿ ಹೆಚ್ಚು ಖರ್ಚು ಬರಬಹುದು .

ವೃಶ್ಚಿಕ — ವಿಶಾಖೆ 4 ಅನೂರಾಧ, ಜ್ಯೇಷ್ಠ

ವೃತ್ತಿ ಜೀವನದ ಸಮಸ್ಯೆಗಳಿಗೆ ಅಲ್ಪಮಟ್ಟಿನ ಪರಿಹಾರ ದೊರೆಯುತ್ತದೆ. ಹೋಟೆಲ್ ಉದ್ದಿಮೆದಾರರಿಗೆ ಸರ್ಕಾರದ ಕಡೆಯಿಂದ ಹಿತಕರ ಸಂದೇಶವೊಂದು ಬರುತ್ತದೆ. ಹೊಸ ವಾಹನ ಮಾರಾಟ ಮಾಡುವವರಿಗೆ ಮಾರಾಟದಲ್ಲಿ ಪ್ರಗತಿ ಇರುತ್ತದೆ. ಕುಟುಂಬ ಸಮೇತ ಸಂತೋಷದ ವಿಹಾರಕ್ಕಾಗಿ ಪ್ರಯಾಣ ಬೆಳೆಸುವಿರಿ.

ಧನುಸ್ಸು — ಮೂಲ, ಪೂರ್ವಾಷಾಢ, ಉತ್ತರಾಷಾಢ 1

ಮಕ್ಕಳಿಂದ ನಿಮಗೆ ಧನಸಹಾಯ ಬರುತ್ತದೆ. ಮೂಳೆ ನೋವು ಸ್ವಲ್ಪ ಹೆಚ್ಚಾಗಬಹುದು. ದೈನಂದಿನ ಚಟುವಟಿಕೆಗಳಲ್ಲಿ ಸಾಕಷ್ಟು ಉತ್ಸಾಹವನ್ನು ಕಾಣಬಹುದು. ಆಶಿಸಿದ್ದ ದೇವತಾ ದರ್ಶನವನ್ನು ಮಾಡುವ ಯೋಗವಿದೆ. ಸಮಾಲೋಚನೆ ನಡೆಸಿ ಮಾಡಿಕೊಂಡ ಒಪ್ಪಂದದ ಹಣದ ವ್ಯವಹಾರಗಳಲ್ಲಿ ಲಾಭ ಕಾಣಬಹುದು. ನಿಮ್ಮ ವೈಯಕ್ತಿಕ ಆದಾಯದಲ್ಲಿ ಏರಿಕೆಯನ್ನು ಕಾಣಬಹುದು.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಈ ವಾರ ನಿಮಗೆ ಆತ್ಮಗೌರವ ಹೆಚ್ಚಾಗಿರುತ್ತದೆ. ನಿಮ್ಮ ಆದಾಯವು ತೃಪ್ತಿಪಡುವ ಸ್ಥಿತಿಯಲ್ಲಿರುತ್ತದೆ. ಎಲ್ಲರೊಂದಿಗೂ ಹೊಂದಾಣಿಕೆ ಮಾಡಿಕೊಳ್ಳುವ ಗುಣದಿಂದ ಎಲ್ಲರೂ ನಿಮಗೆ ಸಹಕಾರ ನೀಡುವರು. ಹೆಚ್ಚಿನ ವಿದ್ಯೆಯನ್ನು ಕಲಿಯಲು ದೂರ ಪ್ರಯಾಣ ಮಾಡಬೇಕಾಗುತ್ತದೆ. ಅಡಿಗೆ ಭಟ್ಟರಿಗೆ ಉತ್ತಮ ಕೆಲಸಗಳು ದೊರೆತು ಸಂಪಾದನೆ ಹೆಚ್ಚುತ್ತದೆ.


ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಮನೆಗೆ ಕೆಲವೊಂದು ಗೃಹೋಪಯೋಗಿ ವಸ್ತುಗಳನ್ನು ಖರೀದಿ ಮಾಡುವಿರಿ. ಗೊಂದಲದ ಸ್ಥಿತಿಯಿಂದ ಯುವಕರು ವ್ಯವಹಾರಗಳಲ್ಲಿ ನಷ್ಟವನ್ನು ಅನುಭವಿಸುವ ಸಾಧ್ಯತೆ ಇದೆ. ಮಹಿಳೆಯರ ಸಿದ್ಧಪಡಿಸಿದ ಬಟ್ಟೆಗಳನ್ನು ಮಾರುವವರಿಗೆ ಸಾಕಷ್ಟು ಲಾಭ ದೊರೆಯುತ್ತದೆ. ಎಲೆಕ್ಟ್ರಾನಿಕ್ಸ್ ಉಪಕರಣಗಳನ್ನು ಮಾರಾಟ ಮಾಡುವವರ ವ್ಯವಹಾರ ವಿಸ್ತರಿಸುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಪ್ರಮುಖ ಕೆಲಸಗಳನ್ನು ಮಾಡುವಾಗ ಅತಿಯಾದ ಆತುರ ಬೇಡ. ನೆರೆಹೊರೆಯವರೊಡನೆ ಸಂಬಂಧ ವೃದ್ಧಿಸಿಕೊಳ್ಳುವುದು ಒಳ್ಳೆಯದು. ಪಾಲುದಾರಿಕೆ ವ್ಯವಹಾರದಲ್ಲಿ ಇದ್ದ ಮನಃಸ್ತಾಪ ದೂರವಾಗಿ ಪುನಃ ಒಗ್ಗೂಡಿ ವ್ಯವಹಾರ ನಡೆಸುವಿರಿ. ನಿಮ್ಮ ಆದಾಯವು ಖರ್ಚನ್ನು ಸರಿದೂಗಿಸುವಷ್ಟು ಇರುತ್ತದೆ. ಸಿದ್ಧಪಡಿಸಿದ ಆಹಾರ ವಸ್ತುಗಳನ್ನು ತಯಾರಿಸಿ ಮಾರುವವರಿಗೆ ವ್ಯಾಪಾರದಲ್ಲಿ ಮುನ್ನಡೆ ಇರುತ್ತದೆ.

ಪದಬಂಧ 2723



ಮೇಲಿನಿಂದ ಕೆಳಕ್ಕೆ

1. ಧರಣಿ ಮಂಡಲದ ಮಧ್ಯದಲ್ಲಿ ಹುಟ್ಟಿದ ಪುಣ್ಯಕೋಟಿಯ ಗೀತೆ 5
2. ಸೂಕ್ಷ್ಮವಾಗಿ ನಯವಾದದ್ದು 3
3. ಅಡಿಗೆಮನೆಯ ಪದಾರ್ಥಗಳಿಂದ ತಯಾರಾದ ಔಷಧೀಯ ಪಾನೀಯ 3
4. ಹೊಸ ಲತೆಯಂತೆ ಬೆಳೆದ ಹೆಣ್ಣು 5
6. ಕಾಲಧರ್ಮ ತಲೆಕೆಳಕಾದರೆ ರಾಕ್ಷಸ ಶಿಲ್ಪಿ ಸಿಗುತ್ತಾನೆ 2
9. ರಾಮಾನುಜ, ಸೌಮಿತ್ರಿ ನಂದನ 3
10. ಬುದ್ಧಿಮಟ್ಟಾದವನ ತರಾತುರಿ 3
11. ಅಯೋಧ್ಯಾಪತಿಯ ಬತ್ತಳಿಕೆಯಲ್ಲಿರುವ ಬಾಣ 3
12. ಹಸುಗೂಸಿನಿಂದ ಬರುವ ಅನುಕಂಪ 3
13. ಉಸಿರಾಟಕ್ಕೆ ಬೇಕಾಗುವ ರಾಸಾಯನಿಕ 5
14. ಕೊಡುಗೆಯಾಗಿ ಬಂದಿರುವ ದೀರ್ಘ ನದಿ 3
15. ಮೇಲೇರಿ ಹಾರುವ ಗೆಲುವಿನ ಪತಾಕೆ 5
17. ಫಳಫಳ ಹೊಳಪು ತೋರ್ಕೆಯ ವೈಯಾರ 3
18. ನಾಲಿಗೆಗೆ ಹಿತವಾದ ಮನಸ್ಸಿಗೆ ಮಧುರವಾದ ರುಚಿ 2
19. ಕೈಲಾಸಕ್ಕೆ ಸಮಾನವಾದ ಕೆಲಸ 3

ಎಡದಿಂದ ಬಲಕ್ಕೆ

1. ಹಸುಕರುಗಳನ್ನು ವೃದ್ಧಿಸುವ ಗಿರಿ 4
3. ಕಾವ್ಯ ಸೃಷ್ಟಿಸುವವನ ಅಂತರಂಗ 4
5. ಬೀಳ್ಕೊಡುಗೆಯ ಕೊನೆಯಲ್ಲಿ ಆದಾಯವಿದೆ 3
7. ಕೈಬಿಡಲು ಸೂಕ್ತವಾದ ಸ್ಥಳ 4
8. ದ್ವೀಪದ ಬೆಟ್ಟದ ಮೇಲಿಂದ ಬೀಸುವ ಗಾಳಿ 6
10. ಪಂಪ ಮಹಾಕವಿಯಿಂದ ಆರಂಭವಾದ ಪುಣ್ಯಗಾಥೆ 5
12. ದೇವಸ್ಥಾನದ ಆವರಣದಲ್ಲಿ ಚೌಕಟ್ಟಿನ ಕೊಳ 3
13. ಪ್ರೀತಿ ಗೌರವಗಳ ಸತ್ಕಾರ 3
14. ಬಟ್ಟೆಯ ಬೆಲೆ ಉಟ್ಟಾಗಲೇ ತಿಳಿಯುವುದು 5
16. ಹರಿಕಥಾಮೃತದಲ್ಲಿ ಮಿಂದ ವಿಶ್ವದೊಡೆಯನ ಸೇವಕ 6
19. ಕೃತ್ತಿಕೆಯಲ್ಲಿ ಹುಟ್ಟಿದ ಸ್ಕಂದ 4
20. ಪತ್ರದ ಕೊನೆಯಲ್ಲಿ ವಿನಮ್ರವಾಗಿ ಉಳಿಯುವವ 3
21. ಕೊರಳಿನ ನರ ಹೊರಳಿದಾಗ ತಲೆಯಾಡಿಸಲು ಕಷ್ಟ 4
22. ಕೈಯಿಂದ ಬರುವ ಬೂದು ಬಣ್ಣದ ಹಣ್ಣು 4

ಪದಬಂಧ ಉತ್ತರ -2722

ಮೇಲಿಂದ ಕೆಳಕ್ಕೆ

1. ತೋರಿಕೆ 2.ಪವರು 3.ಸಂವಹನ 4.ತಿದ್ದುಪಡಿ 7.ನೀರಾನೆ 8.ಬಳಸುಹಾದಿ 9.ಗುಡುಗುಡಿ 10.ಮತದಾನ 12.ವಾಗ್ಝರಿ 13.ಮಾತೃಪ್ರೇಮಿ 14.ವರದಾಸ 15.ಕರ್ಣಜ 16.ನಗಾರಿ

ಎಡದಿಂದ ಬಲಕ್ಕೆ

1.ತೋರುದೀಪ 3.ಸಂಕ್ರಾಂತಿ 5.ವರಟುಸ್ವಭಾವ 6.ಕೆಟ್ಟನೀರು 8.ಬಸವನಗುಡಿ 10.ಮನೆಯಂಗಳ 11.ಹಾಗಲವಾಡಿ 13.ಮಾನವತಾವಾದಿ 15.ಕರಿಜನ 17.ದಾನಶೂರಕರ್ಣ 18.ಮಿದಾಸ 19.ಜಯಭೇರಿ

ನೋವಿನ ಅಭಿವ್ಯಕ್ತಿ ಸಹಜೀವಿಗಳಿಗೆ ಮುಟ್ಟಲಿ

ಪ್ರತಿಕ್ರಿಯೆ

ಭಾನುವಾರ ಪುರವಣಿಯ ಜ. 16ರ ಸಂಚಿಕೆಯಲ್ಲಿ ಪ್ರಕಟವಾದ ವಸುಧೇಂದ್ರ ಅವರ 'ನೋವದೆಂತಹುದೊ' ಲೇಖನ ಓದಿದೆ. ತಾತ್ವಿಕವಾಗಿ ಮತ್ತು ಅಮೂರ್ತವಾಗಿ ಅಸಂಖ್ಯಾತ ಬಗೆಯ ನೋವುಗಳಿವೆ ಎಂಬುದು ನಿಜ. ಆದರೆ, ನಿರ್ದಿಷ್ಟವಾಗಿ ಮತ್ತು ವ್ಯಕ್ತಿಗತವಾಗಿ ಪ್ರತಿಯೊಂದು ಬಗೆಯ ನೋವೂ ದೈಹಿಕ ಅಥವಾ/ಮತ್ತು ಮಾನಸಿಕವಾಗಿದ್ದು. ಭೌತಿಕ ಮತ್ತು ವಾಸ್ತವಿಕ ನೆಲೆಗಳಲ್ಲಿ, ಅದರ ಅಭಿವ್ಯಕ್ತಿಯನ್ನು ಮತ್ತು ಸಾಧ್ಯವಿದ್ದರೆ ಪರಿಹಾರವನ್ನು, ಸಹಾನುಕಂಪದೊಂದಿಗೆ ಕೇಳಿಸಿಕೊಳ್ಳಬಲ್ಲ ಕೇಳುಗರನ್ನು ಬೇಡುತ್ತದೆ. ಕೆಲವು ಬಗೆಯ ನೋವುಗಳಿಗೆ ಕೇಳುಗರು ಸಿಗುವಷ್ಟು ಸುಲಭವಾಗಿ ಉಳಿದ ಬಗೆಯ ನೋವುಗಳಿಗೆ ಸಿಗುವುದು ಕಷ್ಟ ಎಂಬ ನೋವೂ ಇಂಥ ನಿರ್ದಿಷ್ಟ ನೋವುಗಳ ಪಟ್ಟಿಯಲ್ಲಿ ಸೇರುತ್ತದೆ. ಲೇಖಕರಿಗೆ ಇಂಥ ನೋವು ಇರಬಹುದೆಂದು ಲೇಖನ ಓದುವಾಗ ಅನ್ನಿಸುತ್ತದೆ.

ಮನುಷ್ಯೇತರ ಜೀವಿಗಳ ನೋವುಗಳು ಬಹುಮಟ್ಟಿಗೆ ಹಸಿವು, ಅಸ್ತಿತ್ವ ಮತ್ತು ಸಂತಾನೋತ್ಪತ್ತಿಯ ನೈಸರ್ಗಿಕ ಒತ್ತಡಗಳಲ್ಲಿ ಕೇಂದ್ರೀಕೃತವಾಗಿ ಅಂಥ ಸಂದರ್ಭಗಳಲ್ಲಿ ಮಾತ್ರ ವ್ಯಕ್ತಗೊಳ್ಳುತ್ತವೆ ಎಂಬುದು ನನ್ನ ತಿಳಿವಳಿಕೆ. ಜೊತೆಗೆ ಅವು ಮನುಷ್ಯರಂತೆ ಪ್ರಜ್ಞಾಪೂರ್ವಕವಾಗಿ ಈ ನೋವುಗಳನ್ನು ಅನುಭವಿಸದಿರಬಹುದು.

ಮನುಷ್ಯರು ಹುಟ್ಟುವಾಗಲೇ ಒಂದು ಸಾಮಾಜಿಕ ಆವರಣದೊಳಗೆ ಬರುತ್ತಾರೆ. ಸಮಾಜದ ಕನಿಷ್ಠ ರೂಪವಾದ, ಅದಾಗಲೇ ಅಸ್ತಿತ್ವದಲ್ಲಿರುವ ಕುಟುಂಬದ ಪರಿಸರದಲ್ಲಿ ಸಾಮಾಜಿಕ ಮನುಷ್ಯರಾಗಿ ಬೆಳೆಯುತ್ತಾರೆ. ಅವರ ಈ ಸಾಮಾಜಿಕ ಅಸ್ತಿತ್ವವು, ಅವರ ಶ್ರಮಸಂಬಂಧಗಳು ಮತ್ತು ಜೀವನಾಧಾರಗಳನ್ನು ನಿಯಂತ್ರಿಸುವ ಆರ್ಥಿಕ ಮತ್ತು ರಾಜಕೀಯ ಶಕ್ತಿಗಳಿಂದಾಗಿ ಸಂಕೀರ್ಣ, ಕ್ಲಿಷ್ಟ, ಮತ್ತು ನೈತಿಕ ಸ್ವರೂಪವನ್ನು ಪಡೆದುಕೊಂಡಿರುತ್ತವೆ. ಹೀಗೆ ಸಾಮಾಜಿಕ ನೆಲೆಯಿಂದ ಹುಟ್ಟುವ ಸಾಮಾಜಿಕ ವ್ಯಕ್ತಿಗಳ ನೋವುಗಳನ್ನು 'ಸ್ವತಂತ್ರ ವ್ಯಕ್ತಿ' ಎಂಬಂಥ 'ವ್ಯಕ್ತಿಗತ' ನೆಲೆಯಲ್ಲಿ ಅರ್ಥ ಮಾಡಿಕೊಳ್ಳಲು ಮತ್ತು ಬಗೆಹರಿಸಿಕೊಳ್ಳಲು ಯತ್ನಿಸಿದಾಗ ಅವು ಅಸಹಾಯಕತೆ, ಅನಾಥತೆ, ಸ್ವಾನುಕಂಪಭರಿತ ಮತ್ತು ತಾತ್ವೀಕರಿಸಿದ ನೋವುಗಳಾಗಿ ಅಭಿವ್ಯಕ್ತಗೊಳ್ಳುತ್ತವೆ. ಲೇಖನದಲ್ಲಿ ಮುನ್ನೆಲೆಗೆ ತರುವ ದಲಿತ ಮತ್ತು ಭಿನ್ನಲೈಂಗಿಕತೆಗೆ ಸಂಬಂಧಿಸಿದ ನೋವುಗಳ ಉದಾಹರಣೆಯಲ್ಲಿ ಈ ಅಂಶ ಸ್ಪಷ್ಟವಾಗಿ ಗೋಚರಿಸುತ್ತದೆ.

ಜಾತಿಮೂಲದ ಅವಮಾನ ಮತ್ತು ಮಾನವ ಘನತೆಯನ್ನು ಘಾಸಿಮಾಡುವ ನೋವುಗಳನ್ನು, ಯಾರು ತಮ್ಮನ್ನು 'ಸಾಮಾಜಿಕ ವ್ಯಕ್ತಿಯಾಗಿ' ನೋಡದೆ, 'ಅಟಾನಮಸ್ ವ್ಯಕ್ತಿ'ಯಾಗಿ ಗ್ರಹಿಸಿ ಅನುಭವಿಸುತ್ತಾರೋ ಅವರಿಗೆ ಈ ನೋವುಗಳ ಬೇರುಗಳು ಮತ್ತು ಪರಿಹಾರಗಳು ಶ್ರಮಸಂಬಂಧಗಳಲ್ಲಿನ ವಿಷಮತೆ ಮತ್ತು ಅಸಮಾನತೆಗಳಲ್ಲಿ, ಅವುಗಳ ನಿವಾರಣೆಯಲ್ಲಿ ಕಾಣಿಸದೆ (ಸಾಮಾಜಿಕ ವ್ಯಕ್ತಿ ಅಲ್ಲದ ಎಂಬ ಅರ್ಥದಲ್ಲಿ) ಅಮೂರ್ತ ವ್ಯಕ್ತಿಗಳ ಪ್ರಜ್ಞೆ, ಧೋರಣೆ, ನೈತಿಕತೆ ಮತ್ತು ಸಂವೇದನೆಗಳ ಸಮಸ್ಯೆಗಳಾಗಿ ಕಾಣಿಸುತ್ತವೆ. ಭಿನ್ನಲೈಂಗಿಕತೆಯನ್ನು ನೈತಿಕ ತೀರ್ಮಾನವಿಲ್ಲದ ಜೈವಿಕ ಅಂಶವನ್ನಾಗಿ ನೋಡಿದರೆ, ಫಲವಂತಿಕೆಯ (ಪ್ರೊಡಕ್ಟಿವ್) ಲೈಂಗಿಕ ಕೂಟ ಮತ್ತು (ಅನ್‌ಪ್ರೊಡಕ್ಟಿವ್) ಫಲವಂತಿಕೆಯಲ್ಲದ ಲೈಂಗಿಕ ಕೂಟಗಳ ಬಗ್ಗೆ ಜನಸಾಮಾನ್ಯರಿಗಿರುವ ಸಾಮಾಜಿಕ ಆಯ್ಕೆ ಹಾಗೂ ನೈತಿಕತೆಯ ಚರಿತ್ರೆ ಅರ್ಥವಾಗುತ್ತದೆ.

ಸಾಮಾಜಿಕ ಮನುಷ್ಯರಾಗಿ ಮಾನವರ ಅಸ್ತಿತ್ವವು ಶ್ರಮಶಕ್ತಿಯ ಬಳಕೆಯಿಂದ, ಜೀವನಾಧಾರಗಳ ಪ್ರಜ್ಞಾಪೂರ್ವಕ ಮತ್ತು ನಿರಂತರ ಉತ್ಪತ್ತಿ- ವಿತರಣೆ, ವರ್ಗ ಮನುಷ್ಯರ ನಡುವಿನ ಶ್ರಮಸಂಬಂಧ, ಹಾಗೂ ಹೊಸ ಶ್ರಮಶಕ್ತಿಯ ಉತ್ಪಾದನೆಗಳ ಮೇಲೆ (ಅಂದರೆ, ಸಂತಾನೋತ್ಪತ್ತಿಯ ಮೇಲೆ) ನಿಂತಿದೆ. ಫಲವಂತಿಕೆಯ ಹೆಣ್ಣು-ಗಂಡುಗಳ ಲೈಂಗಿಕ ಕೂಟದಲ್ಲಿ ಸಂತಾನೋತ್ಪತ್ತಿಯ ಸಾಧ್ಯತೆ (ಹೊಸ ಶ್ರಮಶಕ್ತಿಯ ಉತ್ಪಾದನೆ) ಇರುವುದರಿಂದ ಅಂಥ ಸಂಬಂಧವು ಸಾಮಾಜಿಕವಾಗಿ ಸಮ್ಮತವಾದ ಲೈಂಗಿಕತೆಯಾಗಿ ಉತ್ತೇಜಿಸಲ್ಪಡುತ್ತದೆ. ಆ ಕಾರಣಕ್ಕಾಗಿ ನೈತಿಕವಾಗಿ 'ಸರಿಯಾದದ್ದು' ಮತ್ತು 'ಸ್ವಾಭಾವಿಕ'ವಾದದ್ದು ಎಂಬ (ತಪ್ಪು) ತೀರ್ಮಾನಗಳಿಗೆ ದಾರಿಮಾಡಿಕೊಡುತ್ತದೆ. 'ಮಕ್ಕಳಿರಲವ್ವ ಮನೆತುಂಬಾ' ಎಂಬ ಜಾನಪದೀಯ ಹರಕೆಯಲ್ಲಿ ಪ್ರಧಾನವಾಗಿರುವ ಅಂಶ ಇದು. ಭಿನ್ನ ಲೈಂಗಿಕ ಸಂಬಂಧಗಳ ಬಗ್ಗೆ ಸಾಮಾಜಿಕವಾಗಿ ಇರುವ ಸಾಂಪ್ರದಾಯಿಕ ಅಸಮ್ಮತಿಯೂ ಮೂಲತಃ ಫಲವಂತಿಕೆಯ ಮೂಲದ್ದಾಗಿದ್ದು, ಫಲವಂತಿಕೆಯ ಅಭಾವ ಅಥವಾ ಅಸಾಧ್ಯತೆಯಿಂದಾಗಿ 'ಸರಿಯಲ್ಲದ್ದು' ಎಂಬಂಥ ನೈತಿಕ ಧೋರಣೆಗೆ, 'ಅಸ್ವಾಭಾವಿಕ' ಮತ್ತು 'ಅನೈಸರ್ಗಿಕ' ಎಂಬ ತಪ್ಪು ತೀರ್ಮಾನಗಳಿಗೆ ಎಡೆಮಾಡಿಕೊಟ್ಟಿದೆ.

'ಬಂಜೆ', 'ನಪುಂಸಕ', 'ಮಂಗಳ ಮುಖಿ', ಸಲಿಂಗ ಕಾಮಿ' ಮುಂತಾದ ಪದಗಳ ಹಿಂದಿರುವ ಹೆದರಿಕೆ (ಫೋಬಿಯಾ), ಅಂಥ ಜೈವಿಕ ಭಿನ್ನತೆಗಳ ಬಗ್ಗೆ ಇರುವ ಸಾಮಾಜಿಕ ಹೇವರಿಕೆ, ತಿರಸ್ಕಾರ, ಅಗೌರವಗಳು ಪ್ರಧಾನವಾಗಿ ಫಲವಂತಿಕೆಯ ಮೂಲದ್ದೇ. ಈ ನೇತ್ಯಾತ್ಮಕ ಧೋರಣೆಗಳು ಚರಿತ್ರೆಯಲ್ಲಿ, ಅದರಲ್ಲೂ ಫ್ಯೂಡಲ್, ಫ್ಯಾಸಿಸ್ಟ್, ಮೂಲಭೂತವಾದೀ, ಮತೀಯವಾದೀ ಮತ್ತು ಬಂಡವಾಳವಾದೀ ಸಮಾಜಗಳ ಎಲ್ಲ ಜನಾಂಗ-ಸಂಸ್ಕೃತಿಗಳಲ್ಲೂ ಕಾಣಸಿಗುತ್ತವೆ.

ಭಿನ್ನಲೈಂಗಿಕತೆಯ ವ್ಯಕ್ತಿಗಳ ನೋವುಗಳು, ಆಪ್ತ ಸಮಾಲೋಚಕರು, ಅಂತರಂಗದ ಸಖರು ಅಥವಾ ಸಹಸ್ಥಿತಿ-ಧೋರಣೆಯ ಸದಸ್ಯರ ಗುಂಪುಗಳ (ಉಪ ಸಮಾಜಗಳ) ಜೊತೆಗಿನ ಒಡನಾಟಗಳಲ್ಲಿ, ಪರಸ್ಪರರ ಅಭಿವ್ಯಕ್ತಿಗಳಲ್ಲಿ, ಬೇರೆ ಬೇರೆ ಸ್ತರಗಳಲ್ಲಿ ತಾತ್ಕಾಲಿಕವಾಗಿಯಾದರೂ ಶಮನಗೊಳ್ಳುವುದು ಸಾಧ್ಯ. ಆದ್ದರಿಂದ ಅವು ನಿಷ್ಪ್ರಯೋಜಕವಲ್ಲ. ಆದರೆ ಅದಷ್ಟೇ ಸಾಕಾಗುವುದಿಲ್ಲ. ಜೊತೆಗೆ, ಸಮಾಜದ ಉಳಿದ ವ್ಯಕ್ತಿಗಳಂತೆಯೇ, ಭಿನ್ನಲೈಂಗಿಕತೆಯ ಧೋರಣೆ-ಪ್ರವೃತ್ತಿ-ಆಯ್ಕೆಗಳ (ಓರಿಯಂಟೇಶನ್ನಿನ) ವ್ಯಕ್ತಿಗಳೂ ತಮ್ಮನ್ನು ಸ್ವತಂತ್ರ, ವಿಶಿಷ್ಟ-ಸ್ವಯಂಭೂ ವ್ಯಕ್ತಿಗಳೆಂದು ನೋಡದೆ, ದಲಿತರು, ಶೋಷಿತರು ಹೇಗೋ ಹಾಗೆ ತಾವೂ ಸಾಮಾಜಿಕ ವ್ಯಕ್ತಿಗಳೆಂದು ಅರ್ಥಮಾಡಿಕೊಂಡಾಗ, ಅವರ ನೋವು-ನರಳಿಕೆಗಳು, ಶ್ರಮಸಂಬಂಧಗಳಲ್ಲಿ ಜೊತೆಗೂಡುವ ದಲಿತರು ಮತ್ತು ಇತರ ಶೋಷಿತರ ಬೇರೆ ಬೇರೆ ಬಗೆಯ ನೋವುಗಳ ಪರಿಹಾರದಲ್ಲೂ ಜೊತೆಯಾಗುವುದು ಸಾಧ್ಯವಾಗುತ್ತದೆ. ಹಾಗಿಲ್ಲದೆ ಇದ್ದಾಗ ಸ್ವಾನುಕಂಪ, ಅಸಹಾಯಕತೆ, ಅಪರಿಹಾರ್ಯತೆ ಮತ್ತು ನಿರರ್ಥಕತೆಗಳು ದಾಳಿಮಾಡುತ್ತವೆ.

ಲೇಖನ, ಸಾಹಿತ್ಯ (ಉದಾ. ನಿಮ್ಮದೇ ಬರಹಗಳು), ಸಿನಿಮಾ (ಉದಾ. ನೋವು-ಆತ್ಮೀಯತೆಗಳನ್ನು ಕೇಂದ್ರ ಕಾಳಜಿಯಾಗಿ ಇಟ್ಟುಕೊಂಡು ನಿರ್ಮಿಸಿರುವ 'ಟಚ್ ಮಿ ನಾಟ್') ಮೊದಲಾದ ಅಭಿವ್ಯಕ್ತಿ ಮಾಧ್ಯಮಗಳಲ್ಲಿ ಈ ಬಗೆಯ ನೋವುಗಳನ್ನು ದಾಖಲಿಸಿದಾಗ, ಅಭಿವ್ಯಕ್ತಿಸುವವರು ಅವುಗಳ ಮೊದಲ ಫಲಾನುಭವಿಗಳಾಗಿರುತ್ತಾರೆ. ಜೊತೆಗೆ, ಅವನ್ನು ಓದುವವರು-ನೋಡುವವರಲ್ಲೂ ಈ ಬಗ್ಗೆ ಒಂದಿಷ್ಟು ತಿಳಿವು ಮೂಡುತ್ತದೆ. ನಿಜವಾಗಿ ನೋಡಿದರೆ, ಇಂಥ ಅಭಿವ್ಯಕ್ತಿಗಳು ಹೆಚ್ಚು ಹೆಚ್ಚು ಅಗತ್ಯವಾಗಿರುವುದು ನೋವುಗಳನ್ನು ಅನುಭವಿಸುವವರಿಗಿಂತ ಅವನ್ನು ಅರ್ಥಮಾಡಿಕೊಳ್ಳಬೇಕಾದ ಸಹಜೀವಿಗಳಿಗೇ. ಇದು ನೋವುಗಳ ಸಂತ್ರಸ್ತರನ್ನು ಆಪ್ತ ಸಮಾಲೋಚನೆಗೆ ಕರೆದೊಯ್ಯುವವರ ವಿಷಯದಲ್ಲಿ ಮತ್ತೂ ನಿಜ. ಆದರೆ ಈ ಸತ್ಯವನ್ನು ಎಲ್ಲರೂ ಒಪ್ಪಿಕೊಳ್ಳಲು ಅವರ ವ್ಯಾವಹಾರಿಕ ಸಮಸ್ಯೆಗಳು ಅಡ್ಡಿಬರುತ್ತವೆ. ಹೀಗಾಗಿ ನೋವುಗಳ ಅಭಿವ್ಯಕ್ತಿಯ ಸೌಲಭ್ಯ-ಶಕ್ತಿ-ತಾಳ್ಮೆ ಮತ್ತು ವ್ಯವಧಾನ ಇರುವವರಾದರೂ ಇಂಥ ತಿಳಿವನ್ನು ಸಹಜೀವಿಗಳಿಗೆ ಮುಟ್ಟಿಸುವ ಕೆಲಸವನ್ನು ಮಾಡುತ್ತಾ ಹೋಗಬೇಕು. ಈ ದೃಷ್ಟಿಯಿಂದಲೂ ಈ ಬರಹ ಸ್ವಾಗತಾರ್ಹ.

-ವಿ.ಎನ್.ಲಕ್ಷ್ಮೀನಾರಾಯಣ, ಮೈಸೂರು

ರಾಮಾಯಣ 'ದರ್ಶನ'ಕ್ಕೆ ದಾರಿದೀಪ

ಪಿನಾಕ

ಒಳನೋಟ

ಕುವೆಂಪು ಮತ್ತು ಬೇಂದ್ರೆ–ಕನ್ನಡ ಕಾವ್ಯದ ಎರಡು ಕಣ್ಣುಗಳು. ಈ ಎರಡೂ ಕಾವ್ಯದ ಕಣ್ಣುಗಳಿಂದಲೇ ಸಾಹಿತ್ಯ ಲೋಕದಲ್ಲಿ ವಿಹರಿಸುವ ಹಂಬಲ ಲೇಖಕ ಜಿ.ಕೃಷ್ಣಪ್ಪ ಅವರದು. ದಶಕಗಳ ಕಾಲ ಬೇಂದ್ರೆ ಕಾವ್ಯ ಕಡಲಿನಲ್ಲಿ ಈಜಾಡಿದ ಅವರಿಗೀಗ ಕುವೆಂಪು ಸಾಹಿತ್ಯ ಸಾಗರದ ಆಳಕ್ಕಿಳಿದು ರಸಾನುಭೂತಿ ಪಡೆಯುವ ಹಂಬಲ. ಹೀಗಾಗಿ ಕೆಲವು ವರ್ಷಗಳಿಂದ ಅವರು ಕುವೆಂಪು ಧ್ಯಾನಾಸಕ್ತ. 'ಶ್ರೀ ರಾಮಾಯಣ ದರ್ಶನಂ' ಅಧ್ಯಯನದಲ್ಲಿ ಅವರು ಯಾವ ಪರಿ ಮುಳುಗಿ ಹೋಗಿದ್ದಾರೆಂದರೆ ಅದರಲ್ಲಿ ಕಂಡ ಕಾವ್ಯದರ್ಶನದ ಫಲವೇ 'ಕುವೆಂಪು ಹನುಮದ್ದರ್ಶನ' ಮತ್ತು 'ಶ್ರೀರಾಮಾಯಣ ದರ್ಶನಂ ಪಾತ್ರಗಳ ಕಥಾವಳಿ' ಕೃತಿಗಳು. ಇದೀಗ 'ಕುವೆಂಪು ಶ್ರೀರಾಮಾಯಣ ದರ್ಶನಂ ವಚನ ದೀಪಿಕೆ' ಎಂಬ ಬೃಹತ್ ಸಂಪುಟ ಹಿಡಿದು ಬಂದಿದ್ದಾರೆ.

ಮಹಾಕಾವ್ಯಗಳ ಕಾಲ ಮುಗಿದೇಹೋಯಿತು ಎನ್ನುವಾಗ ಕುವೆಂಪು ಅವರಿಂದ ರಚಿತವಾದ ಆಧುನಿಕ ಸಾಹಿತ್ಯದ ಲೋಕೋತ್ತರ ಕೃತಿ 'ಶ್ರೀರಾಮಾಯಣ ದರ್ಶನಂ'. 'ಹಳೆಯ ಕಥೆ, ಹೊಸ ಯುಗಧರ್ಮವನ್ನು ಮೈಗೂಡಿಸಿಕೊಂಡು, ಎಷ್ಟರಮಟ್ಟಿಗೆ ಹೊಸದಾಗಬಹುದು ಎಂಬುದಕ್ಕೆ ಈ ಮಹಾಕಾವ್ಯ ಉಜ್ವಲ ಉದಾಹರಣೆ. ಮಿಲ್ಟನ್ ಕವಿಯ 'ಪ್ಯಾರಡೈಸ್ ಲಾಸ್ಟ್', 'ಪ್ಯಾರಡೈಸ್ ರಿಗೇನ್ಡ್' ಆದಮೇಲೆ ಯಾವ ಭಾಷೆಯಲ್ಲೇ ಆಗಲಿ ಈ ಪ್ರಮಾಣದ ಒಂದು ಮಹಾಕಾವ್ಯ ಬಂದದ್ದನ್ನು ಕಾಣೆ' ಎಂದು ಗೋವಿಂದ ಪೈ ಅವರು ಹೇಳಿರುವುದು ಸುಮ್ಮನೆಯೇ ಮತ್ತೆ? ಕನ್ನಡ ಸಾಹಿತ್ಯದಲ್ಲಿ ಆಸಕ್ತರಾದ ಯಾರಿಗಾದರೂ ಈ ಕಾವ್ಯದ ಮೇಲೆ ಒಂದು ಮೋಹ ಇದ್ದದ್ದೇ. ಅದರಲ್ಲೂ ಕೃಷ್ಣಪ್ಪನಂಥವರು 'ದರ್ಶನಂ'ನ ಕಡು ವ್ಯಾಮೋಹಿಗಳು. ಹಳೆಗನ್ನಡ ಶೈಲಿಯಲ್ಲಿರುವ ಈ ಮಹಾಕಾವ್ಯಕ್ಕೆ ಅವರೀಗ ಗದ್ಯರೂಪದಲ್ಲಿ ಅರ್ಥ ನೀಡಿದ್ದಾರೆ.

ಕನ್ನಡದ ಈ ಮೇರು ಮಹಾಕಾವ್ಯಕ್ಕೆ 1954ರಷ್ಟು ಹಿಂದೆಯೇ ದೇ.ಜವರೇಗೌಡರು 'ಶ್ರೀರಾಮಾಯಣ ದರ್ಶನಂ ವಚನ ಚಂದ್ರಿಕೆ' ಹೆಸರಿನಲ್ಲಿ ಗದ್ಯರೂಪದಲ್ಲಿ ಅರ್ಥ ನೀಡಿದ್ದಾರೆ. ನಿ.ರಾಜಶೇಖರ ಹಾಗೂ ಟಿ.ಭೀಮಯ್ಯ ಮಾರೇನಹಳ್ಳಿ ಅವರೂ ಅಂತಹ ಪ್ರಯತ್ನ ಮಾಡಿದ್ದಾರೆ. ಈ ಕಾವ್ಯದ ಕುರಿತಂತೆ ಅಧ್ಯಯನ ಮಾಡಿದ, ಲೇಖನ ಬರೆದ ಸಾಹಿತ್ಯಾಸಕ್ತರಿಗೆ ಲೆಕ್ಕವಿಲ್ಲ. ಈಗೇಕೆ ಕೃಷ್ಣಪ್ಪ ಅವರಿಂದ ಈ ಪ್ರಯತ್ನ ಎಂಬ ಪ್ರಶ್ನೆ ಎದುರಾಗಬಹುದು. ಅದಕ್ಕೆ ಆರಂಭಿಕ ಮಾತುಗಳಲ್ಲಿ ಅವರೇ ಸ್ಪಷ್ಟನೆ ಕೊಟ್ಟಿದ್ದಾರೆ. 'ಹಲವರು ಮಾಡಿದ ಇಂತಹ ಸಾಹಸವನ್ನು ನಾನೂ ಏಕೆ ಮಾಡಬಾರದು' ಎಂಬ ಇಚ್ಛೆಯಿಂದ ಈ ಪ್ರಯತ್ನಕ್ಕೆ ಕೈಹಾಕಿದೆ' ಎಂದು. ಬಾಳಸಂಧ್ಯೆಯಲ್ಲಿ ಅವರ ಅಧ್ಯಯನದ, ಬರವಣಿಗೆಯ ಈ ಉತ್ಸಾಹ ಯುವಕರಿಗೂ ಪ್ರೇರಣೆದಾಯಕ.


ಕುವೆಂಪು ಅವರ ಮಹಾಕಾವ್ಯವು ನಾಲ್ಕು ಸಂಪುಟಗಳಲ್ಲಿ ವಿಸ್ತರಿಸಿದೆ. ಅವುಗಳೇ ಅಯೋಧ್ಯಾ ಸಂಪುಟ, ಕಿಷ್ಕಿಂದಾ ಸಂಪುಟ, ಲಂಕಾ ಸಂಪುಟ ಮತ್ತು ಶ್ರೀ ಸಂಪುಟ. ಈ ನಾಲ್ಕೂ ಸಂಪುಟಗಳ ಗದ್ಯರೂಪ ಈ ಕೃತಿಯಲ್ಲಿದೆ. ಗದ್ಯರೂಪ ನೀಡಿದ ಬಗೆ ಹೇಗಿದೆ ಎಂಬುದನ್ನು ಅಯೋಧ್ಯಾ ಸಂಪುಟದ ಮೊದಲ ಐದು ಸಾಲುಗಳ ಉದಾಹರಣೆಯಿಂದಲೇ ನೋಡಬಹುದು:

'ಶ್ರೀ ರಾಮ ಕಥೆಯಂ ಮಹರ್ಷಿ ನಾರದ ವೀಣೆಯಿಂ ಕೇಳ್ದು, ಕಣ್ದಾವರೆಯೊಳಶ್ರುರಸಮುಗುವನ್ನೆಗಂ ರೋಮಹರ್ಷಂದಾಳ್ದು ಸಹೃದಯಂ ವಾಲ್ಮೀಕಿ ತಾಂ ನಡೆತಂದನಾತ್ಮಸುಖಿ, ಕೇಳ್, ತಮಸಾ ನದೀ ತಟಿಗೆ, ತೇಜಸ್ವಿ, ತರುಣಂ ತಪೋವಲ್ಕಲ ವಸ್ತ್ರ ಶೋಭಿ.'

'ದರ್ಶನಂ'ಗೆ ಇಂಗ್ಲಿಷ್ ರೂಪ ನೀಡಿದ ಶಂಕರ ಮೊಕಾಶಿ ಪುಣೇಕರ ಅವರು ಈ ಸಾಲುಗಳಿಗೆ ನೀಡಿದ ಗದ್ಯರೂಪ ಹೀಗಿದೆ: 'ಶ್ರೀರಾಮನ ಕಥೆಯನ್ನು ಮಹರ್ಷಿ ನಾರದನ ವೀಣೆಯಿಂದ ಕೇಳಿ, ತಪಸ್ವಿಯೂ, ಸಹೃದಯನೂ, ತೇಜಸ್ವಿಯೂ ಆದ ತರುಣ ವಾಲ್ಮೀಕಿಯು ತನ್ನ ಕಮಲದಂತಹ ಕಣ್ಣುಗಳಲ್ಲಿ ಆನಂದಭಾಷ್ಪಗಳು ಉದುರುವಷ್ಟು ರೋಮಾಂಚನಗೊಂಡ. ನಾರುಡೆಯನ್ನು ಧರಿಸಿದ್ದ ಅವನು ಆತ್ಮಾನಂದದಿಂದ ಸುಖಿಸುತ್ತಾ ತಮಸಾ ನದಿ ತೀರಕ್ಕೆ ನಡೆದು ಹೊರಟ.'

ಕೃಷ್ಣಪ್ಪ ಅವರು ಹೀಗೆ ಬರೆಯುತ್ತಾರೆ: 'ಶ್ರೀರಾಮನ ಕಥೆಯನ್ನು ಮಹರ್ಷಿ ನಾರದರ ವೀಣೆಯಿಂದ ಕೇಳಿ, ತಾವರೆಯ ಕಣ್ಣುಗಳಲ್ಲಿ ಆನಂದಾಶ್ರುಗಳು ಹೊಮ್ಮುವಂತೆ ಸಹೃದಯ ವಾಲ್ಮೀಕಿ ರೋಮಾಂಚಿತನಾದನು. ನಾರುಮಡಿಯಿಂದ ಶೋಭಾಯಮಾನವಾದ ತೇಜಸ್ವಿ, ತರುಣ ಆತ್ಮಸುಖಿಯಾದ ಅವನು ತಮಸಾನದಿ ತೀರದ ಕಡೆ ನಡೆದನು'. ಮೊಕಾಶಿ ಅವರ ವ್ಯಾಖ್ಯಾನದಲ್ಲಿ ಕಾವ್ಯದ ಭಾವಕ್ಕೆ ಸರಳವಾದ ಗದ್ಯರೂಪ ನೀಡಲಾಗಿದ್ದರೆ, ಕೃಷ್ಣಪ್ಪ ಅವರದು ಸಾಲು, ಸಾಲಿನ ಯಥಾರ್ಥವಾದ ಗದ್ಯರೂಪ. ಎರಡಕ್ಕೂ ಅವುಗಳದೇ ಆದ ವೈಶಿಷ್ಟ್ಯವಿದೆ. ಕೃಷ್ಣಪ್ಪನವರು ಯಥಾರ್ಥವನ್ನು ಇಟ್ಟುಕೊಂಡೇ ಇನ್ನಷ್ಟು ಸರಳವಾಗಿ ಗದ್ಯರೂಪ ನೀಡಬಹುದಿತ್ತೇ ಎಂಬ ಪ್ರಶ್ನೆ ಅಲ್ಲಲ್ಲಿ ಹಾದು ಹೋಗುತ್ತದೆ.

ರಸಾನುಭೂತಿಗೆ ಮೂಲ ಮಹಾಕಾವ್ಯವಿದ್ದರೆ, ಅರ್ಥೈಸಿಕೊಳ್ಳುವುದಕ್ಕೆ ಈ ಗದ್ಯರೂಪವಿದೆ. ಸಾಹಿತ್ಯದ ಸಂಶೋಧನಾರ್ಥಿಗಳು ಮೂಲ ಹಾಗೂ ಗದ್ಯರೂಪ ಕೃತಿಗಳೆರಡನ್ನೂ ಮುಂದಿಟ್ಟುಕೊಂಡು ಕಾವ್ಯದ ಒಂದೊಂದು ಸಾಲಿನ ಕುರಿತೂ ಅಧ್ಯಯನ ಮಾಡಬಹುದು. ಒಳಗೂ ಇಳಿಸಿಕೊಳ್ಳಬಹುದು. 'ಶ್ರೀ ರಾಮಾಯಣ ದರ್ಶನಂ ನಿಘಂಟು' ಅಂತೂ ವಚನ ದೀಪಿಕೆಯ ಹೆಗ್ಗುರುತು. ಕಾವ್ಯದಲ್ಲಿ ಬಳಕೆಯಾದ ಪ್ರತಿಯೊಂದು ಕ್ಲಿಷ್ಟಪದದ ಅರ್ಥವಿವರಣೆಯೂ ಇಲ್ಲಿದೆ. ಕಾವ್ಯದ ಅಧ್ಯಯನ ಮಾಡುವವರಿಗೆ ಅದೊಂದು ದಾರಿದೀಪವಾಗಿದೆ. ಅಂದಹಾಗೆ, ಈ ಕೃತಿ ಕೃಷ್ಣಪ್ಪ ಅವರ ಬಲುದೊಡ್ಡ ಕಾಣಿಕೆಯಾಗಿ ಕನ್ನಡ ಸಾಹಿತ್ಯದಲ್ಲಿ ನಿಲ್ಲಲಿದೆ. ❖



ಪು: 768 ₹800


ಕುವೆಂಪು ಶ್ರೀರಾಮಾಯಣ ದರ್ಶನಂ ವಚನ ದೀಪಿಕೆ
ಲೇ: ಡಾ.ಜಿ.ಕೃಷ್ಣಪ್ಪ
ಪ್ರ: ಅನ್ನಪೂರ್ಣ ಪಬ್ಲಿಷಿಂಗ್ ಹೌಸ್
ಸಂ: 9448291802

ಒಳಗಿಗೂ ಕನ್ನಡಿ ಕಾಲಕ್ಕೂ ಕನ್ನಡಿ

ಮಹತಿ

ಆತ್ಮಕಥೆಯ ಬರವಣಿಗೆ ಲೇಖಕನ ಪಾಲಿಗೆ ತಾನು ಸಾಗಿಬಂದ ಹಾದಿಯ ನೆನಪುಗಳನ್ನು ನವೀಕರಿಸಿಕೊಳ್ಳುವ ವಿಶಿಷ್ಟ ಸಂದರ್ಭ. ಈ ನವೀಕರಣ ವೈಯಕ್ತಿಕವಾದುದೂ ಹೌದು, ಸಮಷ್ಟಿಯದೂ ಹೌದು. ಆ ಕಾರಣದಿಂದಲೇ ಆತ್ಮಕಥೆಯೊಂದರ ಮುಖಾಮುಖಿ ಓದುಗನ ಪಾಲಿಗೆ ಲೇಖಕನ ಜೊತೆಗೆ, ಕಾಲಘಟ್ಟವೊಂದನ್ನು ಅರಿತುಕೊಳ್ಳುವ ಅವಕಾಶವೂ ಆಗುತ್ತದೆ. ದ್ವಾರನಕುಂಟೆ ಪಾತಣ್ಣನವರ 'ನನ್ನೊಳಗಣ ನಾನು' ಆತ್ಮಕಥೆಯ ಮಹತ್ವ ಇರುವುದು ಕೃತಿ 'ಕಾಲಕನ್ನಡಿ' ಆಗಿರುವುದರಲ್ಲಿ.

ಪಾತಣ್ಣನವರು ಎಚ್‌ಎಂಟಿ ಕೈಗಡಿಯಾರಗಳ ಕಾರ್ಖಾನೆಯಲ್ಲಿ ಅಧಿಕಾರಿಯಾಗಿ ದುಡಿದವರು. ವೃತ್ತಿಯ ಅನುಭವಗಳು ಕೃತಿಯ ಪ್ರಮುಖ ಭಾಗ. ಔದ್ಯಮಿಕ ಕರ್ನಾಟಕದ ಸುವರ್ಣ ಕಲಶದಂತಿದ್ದ ಎಚ್‌ಎಂಟಿ ಕಾರ್ಖಾನೆಯ ಉನ್ನತಿ ಹಾಗೂ ಅವನತಿಯ ಚಿತ್ರಣದ ಅಧಿಕೃತ ವಿವರಗಳನ್ನು ಲೇಖಕರು ದಾಖಲಿಸಿದ್ದಾರೆ. 3 ಲಕ್ಷ ಕಾರ್ಮಿಕರು 77 ದಿನಗಳ ದಿನಗಳ ಕಾಲ ನಡೆಸಿದ ಮುಷ್ಕರದ ವಿವರಗಳಿವೆ. ರಾಜಕಾರಣಿಗಳ ಹಟ ಮತ್ತು ದುಷ್ಟತನದಿಂದಾಗಿ ಮುಷ್ಕರ ವಿಫಲವಾಗುವುದರ ವಿಷಾದದ ಚಿತ್ರಣ ಕೃತಿಯಲ್ಲಿದೆ. ಮನುಷ್ಯನ ಒಂದೊಂದೇ ಅಂಗವನ್ನು ಮಾರಾಟ ಮಾಡಿದಂತೆ ಕಾರ್ಖಾನೆಯ ಭಾಗಗಳೂ ವಿಲೇವಾರಿ ಆದ ದುರಂತದ ಕಥನ, ಸಾರ್ವಜನಿಕ ಸಂಸ್ಥೆಗಳನ್ನು ರಾಜಕೀಯ ವ್ಯವಸ್ಥೆ ಹೇಗೆ ಅರಾಜಕಗೊಳಿಸಬಹುದು ಎನ್ನುವುದರ ವರ್ತಮಾನದ ಕಥೆಯನ್ನೂ ಹೇಳುವಂತಿದೆ.



ನನ್ನೊಳಗಣ ನಾನು
ಲೇ: ದ್ವಾರನಕುಂಟೆ ಪಾತಣ್ಣ
ಪ್ರ: ಸ್ನೇಹ ಪ್ರಕಾಶನ, ಬೆಂಗಳೂರು.
ಸಂ: 9686073837

ಪು: 396 ₹320

ಎಚ್‌ಎಂಟಿ ಕಾರ್ಖಾನೆಯ ಇತಿಹಾಸದ ಏಳುಬೀಳುಗಳು ಪಾತಣ್ಣನವರ 'ಬದುಕಿನ ಗಡಿಯಾರ'ದ ಚಲನೆಯೂ ಆಗಿವೆ. ಜೀತಗಾರನಾಗಿದ್ದ ತಂದೆಯ ಮಗನೊಬ್ಬ ಹಳ್ಳಿಯಿಂದ ನಗರಕ್ಕೆ ಬರುವುದು, ಶಿಕ್ಷಣದ ಮೂಲಕವೇ ಸ್ವಾಭಿಮಾನ–ಸ್ವಾವಲಂಬನೆಯ ಬದುಕನ್ನು ಕಟ್ಟಿಕೊಳ್ಳುವುದರ ಜೊತೆಗೆ, ಪ್ರವೃತ್ತಿಯ ರೂಪದಲ್ಲಿ ಸಾಹಿತ್ಯದ ಓದು–ಬರವಣಿಗೆಯನ್ನು ರೂಢಿಸಿಕೊಳ್ಳುವ ಹೋರಾಟದ ಕಥನ ಕುತೂಹಲಕರವಾಗಿದೆ. ಅಪ್ಪನ ಇಚ್ಛೆಯಂತೆ ಕೃಷಿ–ಪಶುಪಾಲನೆಯ ಚಟುವಟಿಕೆಗಳಲ್ಲಿ ಕುಟುಂಬಕ್ಕೆ ನೆರವಾಗಿ ಇರುವುದನ್ನು ಬಯಸದೆ, ಶಿಕ್ಷಣದ ಮೂಲಕವೇ ಬದುಕನ್ನು ರೂಪಿಸಿಕೊಳ್ಳುವ ಪಾತಣ್ಣನವರ ಛಲ, ಕುಟುಂಬವೊಂದು (ಸಮುದಾಯವೊಂದು) ಬದಲಾವಣೆಯ ಬೆಳಕಿಗೆ ತನ್ನನ್ನೊಡ್ಡಿಕೊಂಡ ಮಹತ್ವದ ಗಳಿಗೆಯೂ ಆಗಿದೆ.

ಕಾರ್ಖಾನೆಯ ಔದ್ಯಮಿಕ ಪರಿಸರದಲ್ಲಿ ದಕ್ಷತೆ ಮತ್ತು ವೃತ್ತಿಪರತೆಯಿಂದ ಉನ್ನತ ಸ್ಥಾನಗಳನ್ನು ಅಲಂಕರಿಸಿದ್ದ ಪಾತಣ್ಣನವರು ಕಾರ್ಮಿಕರ ಸಂಘಟನೆಯಲ್ಲಿ ಸಕ್ರಿಯರಾಗಿದ್ದವರು. ಎಚ್‌ಎಂಟಿ ಕಾರ್ಖಾನೆಗೆ ಸಾಂಸ್ಕೃತಿಕ ಸ್ವರೂಪ ತಂದುಕೊಡುವಲ್ಲಿ ಅವರ ಪಾತ್ರವೂ ಇತ್ತು. ಆ ಸಂಘಟನಾ ಚಾತುರ್ಯ ನಂತರದ ದಿನಗಳಲ್ಲಿ 'ಕನ್ನಡ ಚಳವಳಿ'ಯಲ್ಲಿ ಅವರನ್ನು ಸಕ್ರಿಯರಾಗುವಂತೆ ಮಾಡಿದರೆ, ಸಾಂಸ್ಕೃತಿಕ ಸಹಚರ್ಯ ಬರವಣಿಗೆಯಲ್ಲಿ ತೊಡಗಿಕೊಳ್ಳಲು ಪ್ರೇರಣೆಯಾಯಿತು. ತನ್ನ ಸರಳತೆಯಿಂದ, ಜೀವನಪ್ರೀತಿಯಿಂದ ಹಾಗೂ ಔದ್ಯಮಿಕ ಕರ್ನಾಟಕದ ಪ್ರಮುಖ ಅಧ್ಯಾಯವೊಂದರ ಚಿತ್ರಣದ ಮೂಲಕ 'ನನ್ನೊಳಗಣ ನಾನು' ಕೃತಿ ಗಮನಸೆಳೆಯುತ್ತದೆ. ❖

ಉರಿವ ಕಣ್ಣೊಳಗೆ ಕುದಿವ ಕಣ್ಣೀರು

ಪದ್ಮನಾಭ ಭಟ್

ವಿಮರ್ಶೆ

ನಾಟಕ, ಲೇಖನ, ಅನುವಾದ ಹೀಗೆ ಸಾಹಿತ್ಯದ ಬೇರೆ ಪ್ರಕಾರಗಳಲ್ಲಿ ಕೃಷಿ ಮಾಡಿರುವ ವಿಕಾಸ್ ಅವರ ಮೊದಲ ಕಥಾಸಂಕಲನ 'ನೀಲವ್ವ'. ನಿರಂತರವಾಗಿ ತುಳಿತಕ್ಕೊಳಗಾಗುತ್ತಲೇ ಇರುವ ಸಮುದಾಯದ ಜನರ ಬರ್ಬರ ಬದುಕಿನ 'ಇತಿ' ಮತ್ತು ಆ ಬದುಕನ್ನು ಕಥೆಯಾಗಿಸುವಲ್ಲಿ ಎದುರಿಸಿದ 'ಮಿತಿ' ಎರಡೂ ಸೇರಿಯೇ ಈ ಕೃತಿಯ ಜಗತ್ತು ರೂಪುಗೊಂಡಿದೆ.

'ನೀಲವ್ವ' ಈ ಕೃತಿಯ ಹೆಸರಷ್ಟೇ ಅಲ್ಲ, ಈ ಸಂಕಲನದ ಮೊದಲ ಕಥೆಯ ಶೀರ್ಷಿಕೆಯೂ ಹೌದು. ಕಥೆಯಲ್ಲಿ ಒಂದೆರಡು ಮಾತನ್ನಷ್ಟೇ ಆಡುವ ಈ ನೀಲವ್ವ, ವಿಕಾಸ್ ಅವರ ಕಥನಜಗತ್ತಿನ ಅಂತಃಕರಣದಂತೆ ಭಾಸವಾಗುತ್ತಾಳೆ. 'ಒಂದು ಹೆಜ್ಜೆ' ಕಥೆಯ ಅವ್ವ, 'ಜಗವೆಂಬ ಜೈಲಿನಲಿ' ಕಥೆಯ ಗಂಟಪ್ಪ, 'ಜಡೆಪ್ಪನ ಮಗಳು ರಮ್ಯ' ಕಥೆಯ ಜಡೆಪ್ಪ, 'ದೇವರ ಬಾವಿ'ಯ ಸುಂಕ – ಹೀಗೆ ಇಲ್ಲಿನ ಹಲವು ಪಾತ್ರಗಳ ಅಂತರಂಗದಲ್ಲಿ ಹರಿದು ಈ ಕಥನಪ್ರಪಂಚವನ್ನು ಸೇರಿಸಿ ಕಟ್ಟಿರುವ ದಾರದಂತೆ ಭಾಸವಾಗುತ್ತಾಳೆ.

ಮೇಲುವರ್ಗದವರಿಂದ ಬರ್ಬರವಾಗಿ ಶೋಷಣೆ ಅನುಭವಿಸಿ ಮಾತು ಕಳೆದುಕೊಂಡು ಮಲಗಿರುವ ತಳವರ್ಗದ ಜನರ ಪ್ರತಿನಿಧಿಯಂತೆ ಕಾಣಿಸುವ ನೀಲವ್ವ ಬಾಯಿಬಿಡುವುದು, ತನಗಾದ ಅನ್ಯಾಯಕ್ಕೆ ಪ್ರತೀಕಾರ ತೆಗೆದುಕೊಳ್ಳಲು ತನ್ನ ಮಗ ಚಂದ್ರು ಅದೇ ಅನ್ಯಾಯದ ದಾರಿ ಹಿಡಿದಾಗ. ಅದುವರೆಗೂ ಮಲಗಿದ್ದಲ್ಲೇ ಮಲಗಿದ್ದ ನೀಲವ್ವ 'ಸಾಕ್ಷಿ ಹೇಳಬೇಕು' ಎಂದು ಹೇಳುತ್ತ ಎದ್ದು ಕೂಡುತ್ತಾಳೆ. ಅವಳು ಸಾಕ್ಷಿ ಹೇಳುವುದು ತನ್ನ ಮೇಲೆ ಅತ್ಯಾಚಾರವೆಸಗಿದ ಬಸಪ್ಪ ಸಾಹುಕಾರನ ವಿರುದ್ಧವಾ ಅಥವಾ ಅವನ ಮಗಳ ಮೇಲೆ ಅತ್ಯಾಚಾರವೆಸಗಿ ಬಂದ ತನ್ನ ಮಗ ಚಂದ್ರುವಿನ ವಿರುದ್ಧವಾ ಎನ್ನುವುದನ್ನು ಕಥೆಗಾರರು ಬಾಯಿಬಿಟ್ಟು ಹೇಳುವುದಿಲ್ಲ. ಹೀಗೆ ಹೇಳದಿರುವುದರಿಂದಲೇ ಕಥೆಯ ಅಂತ್ಯಕ್ಕೆ ಇಡೀ ಕಥೆಯನ್ನು ಬೆಳಗಬಲ್ಲ ಧ್ವನಿಶಕ್ತಿ ದಕ್ಕಿದೆ. ಆದರೆ ಅಮ್ಮನನ್ನು ಮಗುವಿನ ಹಾಗೆಯೇ ನೋಡಿಕೊಳ್ಳುತ್ತಿದ್ದ ತಾಯಿಹೃದಯದ ಚಂದ್ರು, ಸಾಹುಕಾರನ ಮಗಳ ಮೇಲೆ ಅತ್ಯಾಚಾರ ಎಸಗುವುದು ಮತ್ತು 'ಆ ನನ್ಮಗ ನಮ್ಮವ್ವನ್ ಮೈ ಮುಟ್ಟಿದ್ದಕ್ಕೆ ನಾನು ಅವನ ಮಗಳ ಮೈ ಮುಟ್ಟಿನ್ವಿ. ಅವನ ಪ್ರಾಣ ತೆಗೆಯಾದ್ರಿಂದ ನಯಾ ಪೈಸೆದ ಸಮಾಧಾನ ಆಯ್ತಿತ್ತಿಲ್ಲ. ಆದ್ರೆ ಈಗ ನೋಡು ನೆಮ್ದಿಯಾಗಿ ನಿದ್ದೆ ಮಾಡ್ತಿನ್ವಿ' ಎನ್ನುವಷ್ಟು ಕ್ರೌರ್ಯವನ್ನು ಮನಸೊಳಗೆ ತುಂಬಿಕೊಳ್ಳುವುದು ಹೇಗೆ ಎಂಬ ಪ್ರಶ್ನೆಯನ್ನು ಮಾತ್ರ ಈ ಕಥೆ ಹಾಗೆಯೇ ಉಳಿಸಿಬಿಡುತ್ತದೆ.


ಸಮಾಜದಲ್ಲಿ ವಿವೇಕ ಬೆಳೆಸಬೇಕಾದ ಶಿಕ್ಷಣ ಸಂಸ್ಥೆಗಳಲ್ಲಿಯೇ ಇರುವ ಜಾತಿ, ಆಹಾರ ರಾಜಕೀಯದ ಕ್ರೂರ ಸ್ವರೂಪದ ಕುರಿತು ಹೇಳುವ ಕಥೆ 'ಒಂದು ಹೆಜ್ಜೆ'. ಸುಶಿಕ್ಷಿತ ಮಗನ ಸ್ವಾಭಿಮಾನ ಕುಸಿಯುವ ಹೊತ್ತಿಗೆ ಅನಕ್ಷರಸ್ಥಳಾದ 'ಅವ್ವ' ಊರುಗೋಲಾಗಿ, ಮಾನವೀಯತೆಯ ಕಣ್ಣಾಗಿ ಒದಗಿಬರುತ್ತಾಳೆ. 'ನಾವು ಒಂದು ಹೆಜ್ಜೆ ಮುಂದಿಡೋಣ, ಅವರೂ ಇನ್ನೊಂದು ಹೆಜ್ಜೆ ಮುಂದಿಡಲು ಕಾಯೋಣ' ಎನ್ನುವುದು ಅವ್ವನ ಮಾತು. ಸ್ವಾಭಿಮಾನವನ್ನು ಕಳೆದುಕೊಳ್ಳದೆ ಮಾನವೀಯ ಹಸ್ತ ಚಾಚುವ ಆಶಯದ ಈ ಕಥೆ, ಇದರಿಂದ ಎಲ್ಲ ಬದಲಾಗಿಬಿಡುತ್ತದೆ ಎಂಬ ಭ್ರಮೆಯನ್ನೂ ಹೊಂದಿಲ್ಲ. ಹಾಗಾಗಿಯೇ ನಾಯಕ ಕೊಟ್ಟ ಬುತ್ತಿಯನ್ನು ಪೂರ್ಣಿಮಾ ಮೇಡಂ ತೆರೆಯುತ್ತಾರೆಯೇ? ನಾಯಕನ ಬುತ್ತಿಯಲ್ಲಿ ಏನಿರಬಹುದು? ಎಂಬ ಪ್ರಶ್ನೆಗಳನ್ನು ಉಳಿಸಿಯೇ ಕಥೆ ಕೊನೆಗೊಳ್ಳುತ್ತದೆ.

ವಸ್ತು ಮತ್ತು ಆಶಯಗಳ ದೃಷ್ಟಿಯಿಂದ ಗಮನಾರ್ಹ ಕಥೆ 'ಚಿನ್ನದ ಕನ್ನಡಕ'. ಆದರೆ ಅವುಗಳನ್ನು ಕಲಾತ್ಮಕವಾಗಿ ಕಟ್ಟಿಕೊಡುವಲ್ಲಿ ವಿಫಲರಾಗಿರುವುದರಿಂದ ಅನುಭವವೇ ಆಗಿ ಒದಗಿಬರಬೇಕಾದ ವಸ್ತು, ವಿಚಾರಗಳಾಗಿ ದಾಟುತ್ತಿರುತ್ತವೆ. ಮನಸ್ಸಲ್ಲಿ ಮೂಡಿದ ವಿಚಾರಕ್ಕೆ ಅನುಗುಣವಾಗಿ ಘಟನೆಗಳನ್ನು ಪೋಣಿಸುತ್ತ ಹೋದ ಹಾಗೆ ಭಾಸವಾಗುತ್ತದೆ. ಹೀಗಾಗಿಯೇ ಕಥೆಯ ಕೊನೆಯಲ್ಲಿ, ಬಿಸಿಯಾಗಿದ್ದ ಅಂಬೇಡ್ಕರರ ಪ್ರತಿಮೆಯನ್ನು ಶಫಿ, ಸೂರಿ, ಹನುಮಂತ, ಹನುಮಕ್ಕರೆಲ್ಲ ಸೇರಿ ತಬ್ಬಿ ಮುದ್ದಾಡಿ ತಣ್ಣಗಾಗಿಸುವ ಅಪೂರ್ವವಾದ ಸನ್ನಿವೇಶವೂ ತುಸು ವಿಚಾರವಾಗಿಯಷ್ಟೇ ನಮಗೆ ದಕ್ಕುತ್ತದೆ.

'ತೆರೆಮರೆಯ ಯೋಧ', 'ಹುಲುಗ', 'ತಲೆ ತಲಾಂತರ', 'ಮಳೆ ಬಂದಾಗ' ಕಥೆಗಳಲ್ಲಿಯೂ ವಿಚಾರಗಳು, ಆಶಯಗಳೇ ವಾಚ್ಯವಾಗಿ ಮುನ್ನೆಲೆಗೆ ಬಂದು ಕಥನಕೌಶಲ ಹಿಂದಕ್ಕೆ ಸರಿದಿದ್ದರಿಂದ ತುಸು ಸೊರಗಿದಂತೆ ಕಾಣಿಸುತ್ತವೆ. 'ತೆರೆಮರೆಯ ಯೋಧ' ಕಥೆಯಲ್ಲಿ ಸೈನಿಕ ದಿನೇಶ್ ತಾನು ಸನ್ಮಾನಗೊಳ್ಳಬೇಕಾದ ವೇದಿಕೆಯ ಮೇಲೆ ಪೌರಕಾರ್ಮಿಕ ಭರಮಪ್ಪನನ್ನು ಸನ್ಮಾನಿಸುವ ಚಿತ್ರಣವಿದೆ. ಅದಕ್ಕೆ ಕಾರಣವಾದ ಸಾಮಾಜಿಕ ಕಾಳಜಿಯ ಸುದೀರ್ಘ ಭಾಷಣವನ್ನೂ ಅವನು ಮಾಡುತ್ತಾನೆ. ತೆರೆಮರೆಯಲ್ಲಿ ಸಮಾಜದ ಒಳಿತಿಗಾಗಿ ಕೆಲಸ ಮಾಡುತ್ತಿರುವವರಿಗೂ ವೇದಿಕೆ ಸಿಗಬೇಕು ಎಂಬ ಸದಾಶಯದ ಈ ಕಥೆ, ನಮ್ಮ ದೇಶದ ಪ್ರಧಾನಿಗಳು ಪೌರಕಾರ್ಮಿಕರ ಪಾದ ತೊಳೆದ 'ಡ್ರಾಮಾ'ವನ್ನು ನೆನಪಿಸುವುದು ವಿಪರ್ಯಾಸ. ಮತ್ತು ಆ ನೆನಪೇ ಈ ಕಥೆಯ ವೈಫಲ್ಯದ ಕಾರಣವನ್ನೂ ಸೂಚಿಸುತ್ತದೆ. 'ಮಳೆ ಬಂದಾಗ' ಕಥೆ, ತಳವರ್ಗದ ಜನರಿಗೆ ಎದುರಾಗಿ, ಮೇಲುವರ್ಗ – ನಗರದ ಜನರನ್ನು ಕಟಕಟೆಯಲ್ಲಿ ಭರದಲ್ಲಿ 'ಕಪ್ಪು–ಬಿಳುಪು' ಜಾಡಿಗೆ ಬಿದ್ದು ಕುಸಿಯುತ್ತದೆ.

'ಜಡೆಪ್ಪನ ಮಗಳು ರಮ್ಯ' ಈ ಸಂಕಲನ ಇನ್ನೊಂದು ಗಮನಾರ್ಹ ಕಥೆ. ಮನುಷ್ಯನ ಅಸ್ತಿತ್ವದ ಗುರುತಷ್ಟೇ ಆಗಿರುವ ಹೆಸರೇ ಅವರಿಗೆ ಶಾಪವೂ ಆಗಿಬಿಡುವ ಅಮಾನವೀಯ ಪರಿಸ್ಥಿತಿಯ ಕುರಿತು ಈ ಕಥೆ ಮಾತಾಡುತ್ತದೆ. ಸಮಾಜದಲ್ಲಿ ಹೆಸರೇ ಮನುಷ್ಯನ 'ಜಾಗ'ವನ್ನು ನಿರ್ಧರಿಸುವ ವಿಪರ್ಯಾಸ ಮತ್ತು ಹೆಸರಿನೊಟ್ಟಿಗೆ ತಮ್ಮ ಬದುಕನ್ನೂ ಬದಲಿಸಿಕೊಳ್ಳಲು ಹರಸಾಹಸಪಡುತ್ತಿರುವ ಜನರ ದುರಂತ ಎರಡನ್ನೂ ಈ ಕಥೆ ಕಾಡುವ ಹಾಗೆ ಕಟ್ಟಿಕೊಡುತ್ತದೆ.

ವಿಕಾಸ್ ಅವರಲ್ಲಿ ಅಸಮಾನತೆ, ಜಾತಿ ತಾರತಮ್ಯ, ಶೋಷಣೆಯ ವಿರುದ್ಧ ಹರಿಹಾಯುವ, ಬದಲಾವಣೆಗಾಗಿ ಹಪಹಪಿಸುವ 'ಆ್ಯಕ್ಟಿವಿಸ್ಟ್' ಇದ್ದಾನೆ. ಹಾಗೆಯೇ ಈ ಎಲ್ಲ ಅನಿಷ್ಟಗಳನ್ನು ಬದುಕಿನ ಅನುಭವಗಳ ಮೂಲಕವೇ ಎದುರಿಸುವ ಮಾತೃಹೃದಯಿ ಕಥೆಗಾರನೂ ಇದ್ದಾನೆ. ಈ ಸಂಕಲನದ ಹಲವು ಕಥೆಗಳಲ್ಲಿ ಪ್ರತ್ಯೇಕವಾಗಿ ಕಾಣಿಸುವ ಈ ಇಬ್ಬರು, ಸೃಜನಶೀಲ ಕಲಾಕುಲುಮೆಯಲ್ಲಿ ಬೆರೆತು ಒಂದಾಗಬೇಕಾಗಿದೆ. ಆಗ ವಿಕಾಸ್ ಅವರ ಕಥನಗಾರಿಕೆ ಸ್ವಂತಿಕೆಯನ್ನೂ, ಹೊಸ ಧ್ವನಿಶಕ್ತಿಯನ್ನೂ ಪಡೆದುಕೊಳ್ಳುವುದರಲ್ಲಿ ಅನುಮಾನವಿಲ್ಲ. ❖




ನೀಲವ್ವ (ಕಥಾಸಂಕಲನ)
ಲೇ: ವಿಕಾಸ್ ಆರ್. ಮೌರ್ಯ
ಪ್ರ: ಅಭಿರುಚಿ ಪ್ರಕಾಶನ
ಸಂ: 9980560013

ಪು: 120 ₹100

ಸರೋದ್ ಮಾಂತ್ರಿಕನ ಸ್ವರಯಾತ್ರೆ

ಮೊದಲ ಓದು



ಸರೋದ್ ಸ್ವರಯಾನ
ಸಂ: ಗಣೇಶ ಅಮೀನಗಡ , ರಘುಪತಿ ತಾಮ್ಹನ್‌ಕರ್
ಪ್ರ: ಕವಿತಾ ಪ್ರಕಾಶನ, ಮೈಸೂರು
ಸಂ: 9880105526

ಪು: 188 ₹275

ವಿಶ್ವಪ್ರಸಿದ್ಧ ಸರೋದ್ ವಾದಕರಲ್ಲಿ ಪಂಡಿತ್ ರಾಜೀವ ತಾರಾನಾಥರು ಅಗ್ರಗಣ್ಯರು. 90ರ ಹೊಸ್ತಿಲಿನಲ್ಲಿರುವ ಸರೋದ್ ಮಾಂತ್ರಿಕನ ಆ ಸ್ವರಯಾನವನ್ನು ದಾಖಲಿಸುವ ಲೇಖನಗಳ ಸಂಕಲನವೇ 'ಸರೋದ್ ಸ್ವರಯಾನ'.

ರಾಜೀವ ತಾರಾನಾಥ ಅವರ ಕುರಿತು ಈಗಾಗಲೇ ಹಲವು ಕೃತಿಗಳು ಪ್ರಕಟವಾಗಿವೆ. ಈ ನುಡಿತೋರಣ 'ಸರೋದ್ ಸ್ವರಯಾನ'ದಲ್ಲಿ ಚಂದ್ರಶೇಖರ ಕಂಬಾರ, ನ.ರತ್ನ, ಸುಮಂಗಲಾ, ರಹಮತ್ ತರೀಕೆರೆ ಮುಂತಾದವರು ಬರೆದ ಲೇಖನಗಳನ್ನು ಆಯ್ದು ಪ್ರಕಟಿಸಲಾಗಿದೆ. ಜೊತೆಗೆ ರಾಜೀವ ತಾರಾನಾಥ ಅವರು ನುಡಿಸಿದ ತಮ್ಮ ಜೀವನದ ಚಿತ್ರಣ, ಸಂಗೀತ ಪಯಣವನ್ನು ಕೀರ್ತಿನಾಥ ಕುರ್ತಕೋಟಿ, ಯು.ಆರ್. ಅನಂತಮೂರ್ತಿ, ಜಯಂತ ಕಾಯ್ಕಿಣಿ, ಗಿರೀಶ ಕಾಸರವಳ್ಳಿ, ಶ್ರೀದೇವಿ ಕಳಸದ ಅವರು ಮಾತುಕತೆಯ ಸಂದರ್ಶನಗಳ ಮೂಲಕ ಇಲ್ಲಿ ಕಟ್ಟಿಕೊಟ್ಟಿದ್ದಾರೆ.

ಇಲ್ಲಿನ ಸಂದರ್ಶನಗಳಲ್ಲಿ ಪ್ರಶ್ನೆಗಳ ಪುನರುಕ್ತಿ ಇದ್ದರೂ, ರಾಜೀವ ತಾರಾನಾಥ ಅವರ ಉತ್ತರಗಳಲ್ಲಿ ಮಾಹಿತಿ ವಿಸ್ತರಿಸುತ್ತಾ ಹೋಗುತ್ತದೆ. ಉದಾಹರಣೆಯಾಗಿ, ಒಂದೆಡೆ ಅನಂತಮೂರ್ತಿಯವರು 'ಸಾಹಿತ್ಯ ಮತ್ತು ಸಂಗೀತದಲ್ಲಿ ನಿಮಗೆ ಹೆಚ್ಚು ಹತ್ತಿರ ಯಾವುದು?' ಎಂದಾಗ 'ಸಂಗೀತ' ಎಂದಷ್ಟೇ ಉತ್ತರಿಸಿ ಮಾತು ಮುಗಿಸಿದ್ದ ತಾರಾನಾಥರು, ಜಯಂತ ಕಾಯ್ಕಿಣಿ ಜೊತೆಗೆ ಮಾತಿಗಿಳಿಯುತ್ತಾ, 'ಹಾಡುವುದು ಹಾಗೂ ಸರೋದ್ ವಾದನ ಅದೊಂದು ತುರಿಸು ರೀ, ಜೀವಕ್ಕಿಂತ ಹೆಚ್ಚಲ್ಲ. ಆ ತುರಿಸಿನಿಂದ ಅದೆಷ್ಟು ಹಿತಪಡ್ತೀರಲ್ಲ. ಅದಿಲ್ಲದೇ ನಿಮಗೆ ಇರೋಕ್ಕೆ ಆಗುತ್ಯೇ? ಸಾಯೋ ತನಕ ಇರುತ್ತೆ. ಹಾಗೇ ಅದು ಆಗಬೇಕು' ಎಂದು ಸುದೀರ್ಘವಾಗುತ್ತಾರೆ. ಇದೇ ರೀತಿ ಪ್ರತಿ ಮರುನುಡಿಯ ಗಾಢತೆಯೂ ಪುಟ ಉರುಳಿದಂತೆ ಹೆಚ್ಚುತ್ತದೆ. ಲೇಖನಗಳನ್ನು ಆಯ್ಕೆ ಮಾಡುವಲ್ಲಿ ಸಂಪಾದಕರಾದ ಗಣೇಶ ಅಮೀನಗಡ , ರಘುಪತಿ ತಾಮ್ಹನ್‌ಕರ್ ವೈವಿಧ್ಯಕ್ಕೆ ಒತ್ತು ನೀಡಿದ್ದಾರೆ. ಇದರಿಂದ ತಾರಾನಾಥರ ವ್ಯಕ್ತಿತ್ವವನ್ನು ಭಿನ್ನನೋಟಗಳಿಂದ ನೋಡಲು ಸಾಧ್ಯವಾಗುತ್ತದೆ. ತಾರಾನಾಥರ ಸಂಗೀತ ಪಯಣದ ದಾಖಲೆಯಾಗಿರುವ ಈ ಕೃತಿ ಸಂಗೀತಗಾರರಿಗೆ, ಸಂಗೀತಾಸಕ್ತರಿಗೆ, ಸಾಹಿತ್ಯಾಸಕ್ತರಿಗೆ ಆಕರದಂತಿದೆ. ❖

ಹೌದು, ಇದು ಮಾಮೂಲಿ ಮಾತಲ್ಲ...

ಎನ್‌ಎಂಎಚ್


ಅವಲೋಕನ

'ಉದ್ಯೋಗ ಬೇಡುವ ಬದಲು ಉದ್ದಿಮೆ ಕಟ್ಟಿ ಉದ್ಯೋಗದಾತನಾಗು' ಎಂಬುದು ವ್ಯಕ್ತಿತ್ವ ವಿಕಸನ ಶಿಬಿರಗಳಲ್ಲಿ ಸಾಮಾನ್ಯವಾಗಿ ಕೇಳಿಬರುವ ಮಾತು. ಇದನ್ನು ಪತ್ರಿಕೋದ್ಯಮಕ್ಕೆ ಅನ್ವಯಿಸುವುದು ಸುಲಭದ ಸಂಗತಿಯಲ್ಲ. ಅದರಲ್ಲೂ ಸಾಮಾನ್ಯ ಪತ್ರಕರ್ತರೊಬ್ಬರು ಮೂರ್ನಾಲ್ಕು ದಶಕಗಳ ಹಿಂದೆಯೇ ಅಂತಹದ್ದೊಂದು ಸಾಹಸಕ್ಕೆ ಮುಂದಾಗುವುದು ಪತ್ರಿಕೋದ್ಯಮದಲ್ಲಿ ಮಹತ್ವದ ಹೆಜ್ಜೆ ಗುರುತೇ ಸರಿ. ವೃತ್ತಿ ಬದುಕಿನ ಬಗ್ಗೆ ಅಗಾಧ ಪ್ರೀತಿ, ಕಟಿಬದ್ಧ ಸಾಮಾಜಿಕ ಕಳಕಳಿ, ಅದಮ್ಯವಾದ ಬರವಣಿಗೆಯ ತುಡಿತದಿಂದಷ್ಟೇ ಅಂತಹದ್ದೊಂದು ಪ್ರಯತ್ನ ಸಾಧ್ಯ.

ಪತ್ರಿಕೋದ್ಯಮದ ಅಆಇಈ ಅನ್ನು ತರಗತಿ ಕೋಣೆಗಳಲ್ಲಿ ಕಲಿತು ಬಂದು, ಪತ್ರಿಕಾಲಯದ ಮೊಗಸಾಲೆಗಳಲ್ಲಿ 'ಗಟ್ಟಿಕಾಳುಗಳಿಗಿಂತ ಜೊಳ್ಳುಗಳೇ ಹೆಚ್ಚು' ಎಂಬ ಗೊಣಗಾಟಕ್ಕೆ ಕಾರಣರಾಗುವ ನವಪೀಳಿಗೆಯ ಪತ್ರಕರ್ತರ ಹಿಂದೆ, ಇಂತಹ ಯಾವುದೇ ಮೌಲ್ಯಗಳಿಂದ ಬಹುತೇಕ ಹೊರತಾದ, ಪ್ರಾಯೋಗಿಕ ಕಲಿಕೆಯ ಗಂಧಗಾಳಿ ಇರದ ಅಂಶಗಳೇ ಹೆಚ್ಚಾಗಿ ಕೆಲಸ ಮಾಡುತ್ತವೆ. ದಿನದಿನಕ್ಕೂ ಸೂಕ್ಷ್ಮವಾಗುತ್ತಿರುವ ಪತ್ರಿಕೋದ್ಯಮದ ಇಂತಹ ಜಟಿಲ ಸಮಸ್ಯೆಗಳಿಗೆ ಧೀಮಂತ ಪತ್ರಕರ್ತ ವಡ್ಡರ್ಸೆ ರಘುರಾಮ ಶೆಟ್ಟಿ ಅವರ ಬದುಕು– ಬರಹ ಸಮರ್ಪಕ ಉತ್ತರವಾಗಬಲ್ಲದು.

ಪತ್ರಿಕಾ ವೃತ್ತಿಯು ಪತ್ರಿಕೋದ್ಯಮ ಆಗಿ ಬದಲಾದ 1991ರ ಹೊಸ ಆರ್ಥಿಕ ನೀತಿಯ ನಂತರದ ಕಾಲಘಟ್ಟಕ್ಕೆ ಮುನ್ನವೇ ಓದುಗರಿಂದ ಷೇರು ಹಣ ಸಂಗ್ರಹಿಸಿ, 1984ರಲ್ಲಿ ಅವರು ಆರಂಭಿಸಿದ 'ಮುಂಗಾರು' ಪತ್ರಿಕೆ ಆ ಕಾಲಕ್ಕಷ್ಟೇ ಅಲ್ಲ ಇಂದಿಗೂ ಒಂದು ದಾಖಲೆಯೇ. ಸಂಪಾದಕನ ಹೆಸರು ಕೇಳುತ್ತಿದ್ದಂತೆಯೇ ಕಣ್ಣರಳಿಸುವ ಶಿಷ್ಯಪಡೆ, ಎರಡು ಬಗೆಯಲ್ಲಿ ಪತ್ರಿಕೋದ್ಯಮಕ್ಕೆ ಮಾದರಿಯಾಗಿ ನಿಲ್ಲಬಲ್ಲ ಕಸುವನ್ನು ತಾನು ಸ್ಥಗಿತಗೊಂಡ ಎರಡೂವರೆ ದಶಕಗಳ ಬಳಿಕವೂ ಉಳಿಸಿಕೊಂಡಿದೆ ಎಂದಾದರೆ, ಅಂತಹದ್ದೊಂದು ಪತ್ರಿಕೆ ಭೌತಿಕವಾಗಿ ಸೋತಿದ್ದರೂ ನೈತಿಕವಾಗಿ ಗೆದ್ದಿದೆ ಎಂದೇ ಅರ್ಥ. ವಡ್ಡರ್ಸೆ ಅವರ ಬರಹದ ಅಕ್ಷರ ಅಕ್ಷರದಲ್ಲೂ ಪುಟಿಯುವ ಜನಪರ ಕಾಳಜಿ ಒಬ್ಬ ವೃತ್ತಿನಿರತ ಪತ್ರಕರ್ತನಿಗೆ ಮೇರು ಮಾದರಿಯಾದರೆ, ಅದೆಲ್ಲಾ ಇದ್ದೂ 'ವ್ಯಾಪಾರಿ ಜಾಣ್ಮೆ'ಯ ಭದ್ರ ಬುನಾದಿ ಇಲ್ಲದಿದ್ದರೆ ಅಂತಹದ್ದೊಂದು 'ಆದರ್ಶ ಸೌಧ' ಕಣ್ಣೆದುರೇ ಕುಸಿದುಹೋಗುವ ದುರಂತಮಯ ಚಿತ್ರಣವನ್ನು, ಆ ಮೂಲಕ ಪತ್ರಿಕೆಯೊಂದನ್ನು ಮುನ್ನಡೆಸಲು ಬೇಕಾದ ಆಡಳಿತಾತ್ಮಕ ಒಳಸುಳಿಗಳನ್ನು ಪತ್ರಿಕೆಯ ಮಾಲೀಕರಾಗುವ ಕನಸು ಹೊತ್ತವರಿಗೆ 'ಮುಂಗಾರು' ನೀಡುತ್ತದೆ.


ಕಾಲಗರ್ಭದಲ್ಲಿ ಹುದುಗಿಹೋಗಬಹುದಾಗಿದ್ದ ವಡ್ಡರ್ಸೆ ಅವರ ಬರಹಗಳನ್ನು ದಶಕಗಳ ಕಾಲ ಜತನದಿಂದ ಕಾಯ್ದುಕೊಂಡು ಬಂದು, ಪುಸ್ತಕದ ರೂಪ ಕೊಟ್ಟಿರುವ 'ಮುಂಗಾರು ಪ್ರಾಡಕ್ಟ್' ದಿನೇಶ್ ಅಮಿನ್‌ಮಟ್ಟು ಅವರೇ ಒಂದರ್ಥದಲ್ಲಿ ಈಗ 'ಬೇರೆಯೇ ಮಾತು'ವಿನ ವಾರಸುದಾರ. ಗುರುವಿನ ಮೇಲೆ ಭಕ್ತಿಯೊಟ್ಟಿಗೆ ಅದಮ್ಯ ಪ್ರೀತಿಯೂ ಇದ್ದರಷ್ಟೇ ಶಿಷ್ಯನೊಬ್ಬ ಮಾಡಬಹುದಾದ ಕೆಲಸ ಇದು. ವೈಚಾರಿಕ ಕ್ರಾಂತಿಗೆ ನಾಂದಿ ಹಾಡುವ 'ಚಿಂತನೆಯ ಬೆಳೆ', ರಾಜಕೀಯ ನೇತಾರರ ವ್ಯಕ್ತಿಚಿತ್ರಣ ಕಟ್ಟಿಕೊಡುವ 'ನಮ್ಮವರು' ಮತ್ತು ಪತ್ರಿಕೆಯೊಂದು ಓದುಗರಿಗೆ ಕೊಡಬೇಕಾದ ಪ್ರಾಶಸ್ತ್ಯವನ್ನು ಎತ್ತಿಹಿಡಿಯುವ 'ಓದುಗರೊಡನೆ ಸಂಪಾದಕ' ಎಂಬ ಮೂರು ವಿಭಾಗಗಳಲ್ಲಿ ಇರುವ ವಡ್ಡರ್ಸೆ ಅವರ ಬರಹಗಳು ಇಂದು ಬರೆದವೇನೋ ಎಂಬಷ್ಟು ಪ್ರಸ್ತುತವಾಗಿವೆ. ಪತ್ರಿಕೆ– ಓದುಗರ ನಡುವಿನ ನವಿರಾದ ಸಂಬಂಧಕ್ಕೆ ಗಟ್ಟಿ ನೆಲೆಯನ್ನು ಒದಗಿಸುತ್ತವೆ. ಅಂದಹಾಗೆ, ಆರಂಭದಲ್ಲಿ ಮೂಡಿಸಿದ್ದ ಸಂಚಲನವನ್ನು ಈಗ ಕೇಳಿದರೂ ಮೂಡಿಸುವಂತಿರುವ ಈ ಪತ್ರಿಕೆಯ ಘೋಷವಾಕ್ಯ 'ಚಿಂತನೆಯ ಮಳೆ ಹರಿಸಿ ಜನಶಕ್ತಿಯ ಬೆಳೆ ತೆಗೆವ ಮುಂಗಾರು'. ❖



ಪು: 408 ₹380

ಬೇರೆಯೇ ಮಾತು
ಲೇ: ವಡ್ಡರ್ಸೆ ರಘುರಾಮ ಶೆಟ್ಟಿ
ಸಂ: ದಿನೇಶ್ ಅಮಿನ್‌ಮಟ್ಟು
ಪ್ರ: ಅಹರ್ನಿಶಿ ಪ್ರಕಾಶನ, ಶಿವಮೊಗ್ಗ
ಸಂ: 9449174662/ 9448628511

ಮೋನು ಸ್ಮೃತಿ...



ಬ್ಯಾಂಕ್ ಅಧಿಕಾರಿಯಾಗಿದ್ದ ಬೊಳುವಾರು ಮಹಮದ್ ಕುಂಞಿ ಅವರು ಬರೀ ಹಣಕಾಸಿನ ಲೆಕ್ಕಾಚಾರದಲ್ಲಿ ಕಳೆದು ಹೋದವರಲ್ಲ. 'ಇಗೋ ತಗೊಳ್ಳಿ' ಎಂದು ಒಂದರ ಬೆನ್ನಹಿಂದೆ ಮತ್ತೊಂದರಂತೆ ಸೊಗಸಾದ ಕಥೆಗಳನ್ನೂ ಕೊಡುತ್ತಾ ಹೋದ ಅಪ್ಪಟ ಕಥೆಗಾರ. 'ಅತ್ತ ಇತ್ತಗಳ ಸುತ್ತಮುತ್ತ', 'ದೇವರುಗಳ ರಾಜ್ಯದಲ್ಲಿ', 'ಅಂಕ', 'ಆಕಾಶಕ್ಕೆ ನೀಲಿ ಪರದೆ', 'ಒಂದು ತುಂಡುಗೋಡೆ'. 'ರೊಟ್ಟಿ ಪಾತುಮ್ಮ'... ಹೀಗೆ ಸಾಲು ಸಾಲು ಕಥಾ ಸಂಕಲನಗಳು ಅವರಿಂದ ಬಂದಿವೆ. ಮಕ್ಕಳ ಸಾಹಿತ್ಯಕ್ಕೂ ವಿಶಿಷ್ಟ ಕೊಡುಗೆ ನೀಡಿರುವ ಅವರು 'ತಟ್ಟು ಚಪ್ಪಾಳೆ ಪುಟ್ಟ ಮಗುವೇ' ಮೂಲಕ ಚಿಣ್ಣರನ್ನೆಲ್ಲ ಕುಣಿಸಿದವರು. 'ಓದಿರಿ', 'ಸ್ವಾತಂತ್ರ್ಯದ ಓಟ'ದಂತಹ ಪ್ರಮುಖ ಕಾದಂಬರಿಗಳನ್ನೂ ಕೊಟ್ಟವರು. ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರಕ್ಕೆ ಪಾತ್ರರಾದ ಸಾಹಿತಿ. ಬಂಡಾಯ ಸಾಹಿತ್ಯ ಸಂಘಟನೆಯಲ್ಲಿ ಸಕ್ರಿಯವಾಗಿದ್ದ ಚಳವಳಿಗಾರ.

10ನೇ ಪುಟದಿಂದ...

ಕನ್ನಡ/ಇಂಗ್ಲಿಷ್ ಶಾಲೆಗೆ ಸೇರಿದ್ದ ಆ ಹೆಣ್ಣುಮಕ್ಕಳಲ್ಲಿ ಹಲವರು, ಇಂದು ಸುಪ್ರಸಿದ್ಧ ವೈದ್ಯೆಯರುಗಳಾಗಿ, ವಕೀಲೆಯರುಗಳಾಗಿ, ನ್ಯಾಯಾಧೀಶೆಯರುಗಳಾಗಿ, ಅಧ್ಯಾಪಕಿಯರುಗಳಾಗಿ, ಎಂಜಿನಿಯರುಗಳಾಗಿ, ಸಾಹಿತಿಗಳಾಗಿ, ಪತ್ರಕರ್ತೆಯರಾಗಿ, ದೃಶ್ಯಮಾಧ್ಯಮಗಳ ನಿರೂಪಕಿಯರುಗಳಾಗಿ, 'ಮುತ್ತುಪ್ಪಾಡಿ'ಯ ಜನಬದುಕಿಗೆ ಹೊಸ 'ಗಂತಿಬಿಂಬ'ವಾಗುತ್ತಿದ್ದಾರೆ.

ಹೊಸ ಸಮುದಾಯವೊಂದು, ಮುಖ್ಯವಾಗಿ ಹೆಣ್ಣು ಸಮುದಾಯವು, ಅಲೌಕಿಕ ಓದಿನ ಜೊತೆಗೆ ಲೌಕಿಕ ಓದಿಗೂ ತೆರೆದುಕೊಂಡಾಗ ಏನೇನೆಲ್ಲ ಆದೀತು ಎಂಬುದಕ್ಕೆ, ಇಂದೆಲ್ಲ ನಮ್ಮ ಕಾಲೇಜುಗಳು ಕಾಲ ಕಾಲಕ್ಕೆ ಪ್ರಕಟಿಸುತ್ತಿರುವ ಬಹುತೇಕ 'ರ್‍ಯಾಂಕ್ ಪಟ್ಟಿ'ಗಳು ಹಾಗೂ ಲ್ಯಾಪ್ ಟಾಪ್‌ಗಳನ್ನು ಹೆಗಲಿಗೇರಿಸಿಕೊಂಡು, ಸ್ವಾಭಿಮಾನದಿಂದ ವಿಮಾನಗಳಲ್ಲಿ ಓಡಾಡುತ್ತಿರುವ ನವತರುಣಿಯರ ಕಣ್ಣುಗಳಲ್ಲಿ ಹೊಳೆಯುತ್ತಿರುವ 'ಸ್ವಾತಂತ್ರ್ಯದ ಓಟ'ಗಳು ಸಾಕ್ಷಿ ಹೇಳುತ್ತಿವೆ.

- **ಗಟ್ಟಿಯಾಗಿ ಮಾತನಾಡಲಾಗದ ಸಮುದಾಯವೊಂದರಿಂದ ಬಂದವರು ನೀವು. ಗಟ್ಟಿಯಾಗಿ ಬರೆಯಲು ಹೇಗೆ ಸಾಧ್ಯವಾಯಿತು?**

ಎರಡು ಕಾರಣಗಳುಂಟು. ಮೊದಲನೆಯದು ಮಾನಸಿಕ, ಎರಡನೆಯದು ದೈಹಿಕ. ಎರಡನೆಯದನ್ನೇ ಮೊದಲು ಹೇಳುವೆ.

ಒಂದುವೇಳೆ ನಾನು ಗಟ್ಟಿಯಾಗಿ ಮಾತನಾಡಲು ಅವಕಾಶವಿರುವ ಸಮುದಾಯದಿಂದ ಬಂದಿರುತ್ತಿದ್ದರೂ ನನ್ನಿಂದ ಅದು ಸಾಧ್ಯವಾಗುತ್ತಿರಲಿಲ್ಲ. ಯಾಕೆಂದರೆ, ಬಾಲ್ಯದಿಂದಲೇ ನಾನೊಬ್ಬ ಉಗ್ಗುರೋಗಿ. ಬಾಲ್ಯದಲ್ಲಿ ನಾನು ಗುರುತಿಸಲ್ಪಡುತ್ತಿದ್ದದ್ದೇ 'ಬೆಬ್ಬೆ ಮಮ್ಮದೆ' ಎಂದು. ಪಿಯುಸಿ ಮುಗಿಸುವವರೆಗೂ, ನನ್ನ ಹೆಸರನ್ನು ಹೇಳಲೂ ಸಾಧ್ಯವಾಗುತ್ತಿದ್ದಿರಲಿಲ್ಲ. ಆ ಬಳಿಕದ ದಿನಗಳಲ್ಲಿ, ಡಾ. ಪಿ.ಎಸ್. ಭಟ್ ಎಂಬ ಪುತ್ತೂರಿನ ಸರ್ಕಾರಿ ಆಸ್ಪತ್ರೆಯ ವೈದ್ಯರ ಕೃಪೆಯಿಂದ, ಹೊಸದಾಗಿ ಮಾತು ಕಲಿತಿದ್ದವನು ನಾನು. ಆ ರೋಗದಿಂದ ಇಂದೂ ಸಂಪೂರ್ಣವಾಗಿ ಮುಕ್ತವಾಗಿಲ್ಲ. ಇಷ್ಟಾದರೂ ಹೇಗೆ ಸಾಧ್ಯವಾಯಿತು ಎಂಬುದನ್ನು, ನನ್ನಂತಹ ಬೇರೆ ಉಗ್ಗು ರೋಗಿಗಳಿಗೂ ನೆರವಾಗುವಂತೆ ಆತ್ಮಕತೆಯಲ್ಲಿ ವಿವರಿಸಿರುವೆ.

ಇನ್ನು, ನನ್ನ ಗಟ್ಟಿಯಾದ ಬರಹಕ್ಕೆ ಮೊದಲ ಕಾರಣ ನನ್ನ ಅಪ್ಪ. ಮಕ್ಕಳನ್ನಾರನ್ನೂ ಮದರಸಕ್ಕೆ ಕಳುಹಿಸಿದವರಲ್ಲ ಅವರು. ನಮಗೆಲ್ಲ ಮನೆಯಲ್ಲೇ ಕುರ್‌ಆನ್ ಓದಿಸಿದ್ದರು. ನಮ್ಮನ್ನು 'ಕಾಫರರ ಕನ್ನಡ' ಶಾಲೆಗೂ ಸೇರಿಸಿದ್ದರು. ಅಷ್ಟೇ ಅಲ್ಲ. ಗಂಡು ಮಕ್ಕಳಾಗಿ ಹುಟ್ಟಿರದಿದ್ದ ನನ್ನ ಅಕ್ಕ ಮತ್ತು ತಂಗಿಯನ್ನೂ ಸೇರಿಸಿಬಿಟ್ಟಿದ್ದರು. ಶಾಲೆ ಓದಿನಿಂದಾಗಿ ನನಗೆ ನಾನೆಲ್ಲಿದ್ದೇನೆ, ನಾನೆಲ್ಲಿರಬೇಕು ಎಂಬುದು ಹೊಳೆದಿತ್ತು.

ಶಾಲೆ ಓದಿನ ಕಾರಣದಿಂದಾಗಿಯೇ, ಬಾಲ್ಯದಲ್ಲಿ ಎದುರಿಸಬೇಕಾಗಿ ಬಂದ ರಗಳೆಗಳ ವಿರುದ್ಧದ ಬಂಡಾಯವೇ ನನ್ನ ಬರವಣಿಗೆಗಳನ್ನು ಗಟ್ಟಿಗೊಳಿಸಿತು. ಮುಸ್ಲಿಮ್ ಹೆಣ್ಣುಮಕ್ಕಳನ್ನು ಶಾಲೆಗೆ ಕಳುಹಿಸಿ ಎಂಬುದೊಂದೇ ನನ್ನ ಬರವಣಿಗೆಗಳ ಪ್ರಮುಖ ಅಜೆಂಡಾ ಆಯಿತು. ಆದ್ದರಿಂದಲೇ, ನಾಲ್ಕು ದಶಕಗಳ ಹಿಂದೆ ಪ್ರಕಟವಾಗಿದ್ದ ನನ್ನ ಮೊತ್ತಮೊದಲ ಕಾದಂಬರಿಯನ್ನು, 'ಶಾಲೆಗೆ ಹೋಗುವ ಹುಡುಗಿಗೆ' ಎಂದೇ ಅರ್ಪಣೆ ಮಾಡಿಕೊಂಡಿದ್ದೆ.

- **ಎಲ್ಲವನ್ನೂ ರಾಜಕೀಯ ಆಪೋಶನ ತೆಗೆದುಕೊಳ್ಳುತ್ತಿರುವ ಈ ಮುಸ್ಸಂಜೆ ಹೊತ್ತಲ್ಲಿ, ನಿಮ್ಮಂತಹ ಬಂಡಾಯ ಬರಹಗಾರ ಕೇವಲ ಬರೆಯುತ್ತಾ ಕುಳಿತರೆ ಪ್ರಯೋಜನ ಇದೆಯಾ?**

'ಇಲ್ಲ' ಎಂಬುದು ಪೂರ್ತಿ ನಿಜವಲ್ಲ.

ಕೊರೊನಾಪೂರ್ವದ ನಾಲ್ಕು ದಶಕಗಳಲ್ಲಿ, 'ಬರವಣಿಗೆಗಳ ಜೊತೆಯಲ್ಲೇ, ಕರ್ನಾಟಕ ಸಮುದಾಯ ಸಂಘಟನೆ'ಯ ಅಧ್ಯಕ್ಷನಾಗಿ, 'ಬಂಡಾಯ ಸಾಹಿತ್ಯ ಸಂಘಟನೆ'ಯ ರಾಜ್ಯಸಂಚಾಲಕನಾಗಿ ಬೀದಿಗಿಳಿದು ಕೆಲಸ ಮಾಡಿದ್ದವನು ನಾನು, ರಾಜ್ಯದ ಮೂಲೆ ಮೂಲೆಗಳಿಗೂ ಹೋಗಿ, ಜನಪರ ಚಳವಳಿಗಳಲ್ಲಿ ತೊಡಗಿಸಿಕೊಂಡು, ಹೊಸ ಹೊಸ ಗೆಳೆಯರನ್ನು ಗಳಿಸಿಕೊಂಡವನು ನಾನು. ಆದ್ದರಿಂದ, ನಿಮ್ಮ ಆರೋಪ ನನಗೆ ಅನ್ವಯವಾಗದು.

ಹಾಗೆಂದ ಮಾತ್ರಕ್ಕೆ, ಬೀದಿಗಿಳಿಯದೆ ಬರೆಯುತ್ತಾ ಕುಳಿತವರಿಂದ ಪ್ರಯೋಜನವಿಲ್ಲ ಎಂಬ ಆರೋಪವೂ ಸರಿಯಲ್ಲ. ಹೋರಾಟದ ಸಾಗರಕ್ಕೆ ಸಾವಿರ ನದಿಗಳಿರುತ್ತವೆ.

- **ನಿಮ್ಮ ಕಥೆ, ಕಾದಂಬರಿಗಳ ಲೋಕದಲ್ಲಿ ನಾಟಕೀಯತೆಯೇ ಶಕ್ತಿ ಮತ್ತು ದೌರ್ಬಲ್ಯ ಎನ್ನುವವರಿದ್ದಾರೆ, ಒಪ್ಪುತ್ತೀರಾ? ಇಲ್ಲ-ಹೌದುಗಳಿಗೆ ಕಾರಣ ತಿಳಿಸಿ.**

ಹಹ್ಹ, ನಾವೆಲ್ಲ ಓದಬಯಸುವುದು ನಮ್ಮ ಮಾತುಗಳನ್ನು ಮಾತ್ರ. ಓದುತ್ತಿರುವ ಬರಹವೊಂದರಲ್ಲಿ ನಮ್ಮ ಮಾತುಗಳು ಧ್ವನಿಸುತ್ತಿದ್ದರೆ, ಆಲಿಸುತ್ತಿರುವ ವೇದಿಕೆಯ ಉಪನ್ಯಾಸಗಳಲ್ಲಿ ನಮ್ಮ ಮಾತುಗಳೇ ಕೇಳಿಸುತ್ತಿದ್ದರೆ, 'ಭೇಷ್' ಎಂದು ಚಪ್ಪಾಳೆ ತಟ್ಟುತ್ತೇವೆ. ನಮ್ಮ ಮಾತುಗಳಲ್ಲದಿದ್ದರೆ ತಿರಸ್ಕರಿಸುತ್ತೇವೆ. ಇದು ಲೋಕನಿಯಮ. ಇದನ್ನು ಅಳೆಯಲು ಯಾವುದೇ ಮಾನದಂಡಗಳಿಲ್ಲ.

- **ನಿಮ್ಮನ್ನು ಓದುವವರು ದೊಡ್ಡ ಸಂಖ್ಯೆಯಲ್ಲಿದ್ದಾರೆ. ಈ ಓದು ಅವರನ್ನು ಬದಲಾಯಿಸಿದೆಯೆ?**

'ಹೌದು'. ನನ್ನ ಇಷ್ಟೂ ವರ್ಷಗಳ ಎಲ್ಲ ಬರಹಗಳ ಪ್ರಮುಖ 'ಆಶಯ' ಮುತ್ತುಪ್ಪಾಡಿಯ ಮುಸ್ಲಿಮ್ ಹೆಣ್ಣು ಮಕ್ಕಳಿಗೆ, ಉಳಿದ ಮಕ್ಕಳಂತೆ ಬದುಕಲು 'ಸ್ವಾತಂತ್ರ್ಯ' ನೀಡುವುದು. ಅದು ಯಶಸ್ವಾಗಿದೆ ಎಂಬುದಕ್ಕೆ, ನಿಮ್ಮ ಎರಡನೆಯ ಪ್ರಶ್ನೆಗೆ ನೀಡಿದ ಉತ್ತರದಲ್ಲಿ ಸಾಕ್ಷಿಗಳನ್ನು ಒದಗಿಸಿದ್ದೇನೆ.

ನಮ್ಮ ರಾಜ್ಯವನ್ನಾಳಿರುವ ಮುಖ್ಯಮಂತ್ರಿಗಳಲ್ಲಿ ಒಬ್ಬರಾದ ಎಚ್. ಡಿ. ಕುಮಾರಸ್ವಾಮಿಯವರು, ಮಂಗಳೂರಿನ ಚುನಾವಣಾ ಪ್ರಚಾರ ಸಭೆಯೊಂದರಲ್ಲಿ, 'ನಮ್ಮ ಪಕ್ಷವನ್ನು ಗೆಲ್ಲಿಸಿದರೆ, ನಿಮ್ಮೂರನ್ನು ಬೊಳುವಾರರ ಮುತ್ತುಪ್ಪಾಡಿಯಂತೆ ಬದಲಾಯಿಸುತ್ತೇನೆ' ಅಂತ ಭರವಸೆ ನೀಡಿದ್ದನ್ನು ಬರಿಯ ತಮಾಷೆ ಎನ್ನುತ್ತೀರಾ?

- **ಆತ್ಮಕತೆ ನಿಮ್ಮ ಕೊನೆಯ ಬರವಣಿಗೆಯಾ? ಅಥವಾ ಇನ್ನೂ ಬರೆಯುವುದು ಉಳಿದಿದೆಯಾ?**

'ಮೋನು ಸ್ಮೃತಿ'ಯ ಕೊನೆಯ ಪುಟದಲ್ಲಿ ಮುದ್ರಿತವಾಗಿರುವ ಈ ಕೆಳಗಿನ ಪ್ಯಾರಾದಲ್ಲಿ, ನಿಮ್ಮ ಪ್ರಶ್ನೆಗೆ ಉತ್ತರಗಳುಂಟು:

'ಜೀವಂತವಾಗಿಯಾಗಲೀ, ತೀರಿಕೊಂಡ ಬಳಿಕವಾಗಲೀ ಒಮ್ಮೆಯೂ ಕಂಡಿರದಿದ್ದ ಮನುಷ್ಯನೊಬ್ಬನನ್ನು ಕೊಂದ ಆರೋಪವನ್ನು ಹೊತ್ತುಕೊಂಡು, ಸುಮಾರು ಎಂಟು ತಿಂಗಳ ಕಾಲ ಭೂಗತನಾಗಿದ್ದು, ಅಂತಿಮವಾಗಿ ಮಂಗಳೂರಿನ ಜಿಲ್ಲಾ ಕಾರಾಗೃಹದ ಕತ್ತಲಲ್ಲಿ ಕಂಬಿ ಎಣಿಸಿದ್ದ 'ಆ ದಿನಗಳನ್ನು' ಪ್ರತ್ಯೇಕವಾಗಿಯೇ ದಾಖಲಿಸಬೇಕೆಂಬ ಆಸೆಯಿಂದ, ಇದರಲ್ಲಿ ಸೇರಿಸಿಕೊಂಡಿಲ್ಲ. ಅಂತೆಯೇ, ಕಾನ್ಪುರದ ಐಐಟಿ ಮತ್ತು ಇಂದೋರ್‌ನ ಐಐಎಂನಲ್ಲಿ ಓದಿದ್ದ ಲಖನೌದ ಚಂದದ ಹುಡುಗರಿಬ್ಬರನ್ನು ಅನುಕ್ರಮವಾಗಿ 'ಜೆಹಾದ್ ಲವ್' ಮತ್ತು 'ಲವ್ ಜೆಹಾದ್' ಮಾಡಿಕೊಂಡಿದ್ದ ನನ್ನಿಬ್ಬರು ಹೆಣ್ಣುಮಕ್ಕಳು, ಹೇಳದೆ ಕೇಳದೆ ಉತ್ತರ ಪ್ರದೇಶದಿಂದ ಪಲಾಯನ ಮಾಡಿದ್ದರಿಂದ, ಅವರಿಬ್ಬರ ಮೂವರು ಮುದ್ದುಮಕ್ಕಳನ್ನು ತಬ್ಬಿ ಮುದ್ದಾಡುವ ಆಸೆಯಿಂದ ಜುಬೇದಾಳೊಂದಿಗೆ ಆರು ಬಾರಿ ಏಳು ಕಡಲು ದಾಟಿದ್ದು; ಅಲ್ಲಿ ಅಮೆರಿಕದಲ್ಲಿ ನಾನಿದ್ದ ಸುಮಾರು ಮೂರು ವರ್ಷಗಳ ಒಟ್ಟಾರೆ ಅವಧಿಯಲ್ಲಿ ಕಣ್ಣಿಗೆ ಬಿದ್ದ ಕಸಕಡ್ಡಿಗಳು, ಪುರಾತನ ಕಾಲದಲ್ಲಿ ನಾನು ಓದಿಕೊಂಡಿದ್ದ ಸುಪ್ರಸಿದ್ಧ 'ಪ್ರವಾಸ ಕಥನ'ಗಳ ಬಗ್ಗೆ ಸಣ್ಣ ಅನುಮಾನ ಮೂಡಿಸಿದ್ದು... ಇತ್ಯಾದಿ, 'ಅಂತಿಮ ಸತ್ಯ'ಗಳನ್ನೆಲ್ಲ, 'ಪ್ರವಾಸ ಕಥನ'ದ ರೂಪದಲ್ಲೇ ಸಂದರ್ಭಸಹಿತ ವಿವರಿಸಲೆಂದು ಇದರಲ್ಲಿ ಸೇರಿಸಿಕೊಂಡಿಲ್ಲ. ಈಗಲೇ ಕೃತಿ 350 ಪುಟಗಳನ್ನು ದಾಟಿದೆ.

ಪರಿಪೂರ್ಣವಾದದ್ದು ಯಾವುದೂ ಭೂಮಿಯ ಮೇಲೆ ಇರುವುದಿಲ್ಲವಂತೆ.

ನನ್ನ 'ಮುತ್ತುಪ್ಪಾಡಿ'ಯೂ ಪರಿಪೂರ್ಣವಲ್ಲ; 'ಮೋನು ಸ್ಮೃತಿ'ಯೂ ಅಲ್ಲ. ಧರ್ಮರಾಯನಿರುವಲ್ಲಿ ಶಕುನಿಗಳೂ ಇರುತ್ತಾರೆ; 'ನಾವು ಮತ್ತು ಅವರು' ಎಂಬಂತಹ, ಕಟಿಪಿಟಿಗಳನ್ನು ಮಾಡುತ್ತಲೇ ಇರುತ್ತಾರೆ. ಯಾವ ದಿನದಂದು, ತಮ್ಮ ಒಂದೇ ಒಂದು ಹೆಣ್ಣುಮಗು ಕೂಡಾ ಆಧುನಿಕ ಶಿಕ್ಷಣದಿಂದ ವಂಚಿತವಾಗಿಲ್ಲ ಎಂಬುದಾಗಿ, ಮುತ್ತುಪ್ಪಾಡಿಯ ಮಹನೀಯರೆಲ್ಲ ಹೆಮ್ಮೆಯಿಂದ ಸಾಬೀತುಪಡಿಸುತ್ತಾರೋ, ಯಾವ ದಿನದಂದು 'ನಾವೆಲ್ಲರೂ ಒಂದೇ' ಎಂಬ ವೇದಿಕೆಯ ಮಾತುಗಳು, ನಿಜವಾದ ಅರ್ಥದಲ್ಲಿ ನಮ್ಮೆಲ್ಲರ ಸಮುದಾಯಗಳೊಳಗೆ ಬೇರೂರುತ್ತವೆಯೋ, ಆ ಶುಭ ದಿನದಂದು ನಾನು ಬರವಣಿಗೆಯನ್ನು ಕೊನೆಗೊಳಿಸುತ್ತೇನೆ. ❖




ನೃತ್ಯಲೋಕದ ಮಹಾರಾಜ!

ಯಾವ ಆಡಂಬರದ ಪೋಷಾಕುಗಳಿಲ್ಲ, ಆಭರಣಗಳಂತೂ ಇಲ್ಲವೇ ಇಲ್ಲ. ಆದರೂ ಆ ನೃತ್ಯದ ವೈಭವವೇ ವೈಭವ. ಕಥಕ್ ಮಾಂತ್ರಿಕ ಬಿರ್ಜು ಮಹಾರಾಜ್ ಸೃಷ್ಟಿಸಿದ್ದ ಗೆಜ್ಜೆನಾದದ ಮಾರ್ದವತೆ ಹಾಗಿತ್ತು. ಈಗ ಅವರಿಲ್ಲ. ಆದರೆ, ಆ ಗೆಜ್ಜೆನಾದ ಇನ್ನೂ ನಿನಾದಿಸುತ್ತಿದೆ...

ಎ.ವಿ. ಸತ್ಯನಾರಾಯಣ

ಕಥಕ್ ಮಾಂತ್ರಿಕ ಪಂಡಿತ್ ಬಿರ್ಜು ಮಹಾರಾಜ್ ಈಗ ನಮ್ಮ ನಡುವೆ ಇಲ್ಲ. ತಮ್ಮ ಘೂಂಘರು (ಗೆಜ್ಜೆ) ನಿನಾದವನ್ನು ಮಾತ್ರ ಅವರು ಬಿಟ್ಟು ಹೋಗಿದ್ದಾರೆ. ಅವರ ಸಾವಿರಾರು ಶಿಷ್ಯರು, ಆ ಘೂಂಘರು ನಿನಾದವನ್ನು ಮುಂದೆಯೂ ಹೊರಡಿಸುತ್ತಲೇ ಇರುತ್ತಾರೆ. ಬಿರ್ಜು ಮಹಾರಾಜ್ ಅವರ ನೃತ್ಯ ಬೃಂದಾವನದಲ್ಲಿ ಗೋಪಿಯರನ್ನು ಸೆಳೆದ ಕೃಷ್ಣನ ಮುರಳಿಯಂತೆ – ಮೋಹಕ, ಚುಂಬಕ. ಅವರ ನೃತ್ಯ ಪ್ರದರ್ಶನದಲ್ಲಿ ಕಲಾ ರಸಿಕರಂತೂ ಮಂತ್ರಮುಗ್ಧರಾಗಿ ತನ್ಮಯರಾಗುತ್ತಿದ್ದರು. ಪರಿಪೂರ್ಣತೆಗೆ ಅವರ ಮನಸ್ಸು ಸದಾ ತುಡಿಯುತ್ತಿತ್ತು. ಅದಕ್ಕಾಗಿ ಅವರು ಅಭ್ಯಾಸದ ಮಂತ್ರವನ್ನು ತಮ್ಮ ಎಲ್ಲ ಶಿಷ್ಯಂದಿರಿಗೂ ಹೇಳಿಕೊಡುತ್ತಿದ್ದರು. ಅವರ ಮಾತಿನಲ್ಲೇ ಹೇಳುವುದಾದರೆ, 'ಕಾಫಿ ಪಿತೇ ಬಿ ತತ್ಕಾರ್, ಖಾತೆ ಬಿ ತತ್ಕಾರ್'. ಅಂತರಾರ್ಥ - ಅಭ್ಯಾಸ, ಅಭ್ಯಾಸ ಮತ್ತು ಅಭ್ಯಾಸ.

ಬಿರ್ಜು ಮಹಾರಾಜ್ ಅವರೇ ತಿಳಿಸುವಂತೆ, ಹೃದಯದ ಬಡಿತ, ಹಕ್ಕಿಯ ಕಲರವ, ಹಾರಾಟ ಎಲ್ಲವೂ ತಾಳಮೇಳಗಳ ಜೋಡಣೆ. ಇಂತಹ ತಾಳಮೇಳ ಸರ್ವಂತರ್ಯಾಮಿ ಎಂದೂ ಅವರು ಹೇಳುತ್ತಿದ್ದರು. ನೃತ್ಯಕ್ಕೂ ಅಂತಹ ಸಹಜವಾದ ತಾಳಮೇಳ ಬೇಕೆನ್ನುವುದು ಅವರ ಬಯಕೆಯಾಗಿತ್ತು. ಶಿಷ್ಯಂದಿರಿಗೆ ಮನ ಮುಟ್ಟುವಂತೆ ನೃತ್ಯದ ಪ್ರತಿಯೊಂದು ಪಟ್ಟನ್ನೂ ಅವರು ಹೇಳಿಕೊಡುತ್ತಿದ್ದರು. ಇಳಿ ವಯಸ್ಸಿನಲ್ಲೂ ತಮ್ಮ ನೃತ್ಯ ಪ್ರದರ್ಶನದಲ್ಲಿ ರಸಿಕರನ್ನು ಮೋಡಿಮಾಡಿ ಕಟ್ಟಿಹಾಕುವ ಕಲೆಗಾರಿಕೆ ಅವರಿಗೆ ಸಿದ್ಧಿಸಿತ್ತು. ತಮ್ಮ ನೃತ್ಯ ಕೌಶಲದಿಂದ, ಸಂಪ್ರದಾಯಕ್ಕೆ ಧಕ್ಕೆ ಬಾರದಂತೆ, ಸತ್ಯಜಿತ್ ರೇ ಅವರ ಶತರಂಜ್ ಕೆ ಖಿಲಾಡಿ, ಸಂಜಯ್ ಲೀಲಾ ಬನ್ಸಾಲಿ ಅವರ ದೇವದಾಸ್ ಮತ್ತು ಬಾಜಿರಾವ್ ಮಸ್ತಾನಿ, ಕಮಲ್ ಹಾಸನ್ ಅವರ ವಿಶ್ವರೂಪಂ ಚಲನಚಿತ್ರಗಳಿಗೆ ಅದ್ಭುತವಾಗಿ ಅವರು ನಾಟ್ಯ ಸಂಯೋಜನೆ ಮಾಡಿದ್ದರು. ಮಾಧುರಿ ದೀಕ್ಷಿತ್ ಅವರಿಗೆ ಬಿರ್ಜು ಮಹಾರಾಜ್ ಅವರು ಮಾಡಿದ ಕೊರಿಯೋಗ್ರಫಿಯನ್ನು ಮೆಚ್ಚದ ಪ್ರೇಕ್ಷಕರೇ ಇಲ್ಲ.



ಬಿರ್ಜು ಮಹಾರಾಜ್

ಒಂದು ಘಟನೆ ನೆನಪಾಗುತ್ತದೆ. ಹಲವು ವರ್ಷಗಳ ಹಿಂದಿನ ಮಾತು. ಕಥಕ್‌ನ ಈ ದಂತಕಥೆಯನ್ನು ಬರಮಾಡಿಕೊಳ್ಳಲು ಕೆಲವು ಮಕ್ಕಳನ್ನು ನಿಲ್ಲಿಸಲಾಗಿತ್ತು. ಮಕ್ಕಳು ಹಿಡಿದಿದ್ದ ಹೂವು ಪಡೆಯಲು ಬಾಗಿದ ಆ ಮಹಾನ್ ಕಲಾವಿದ, 'ಕಥಕ್ ಕುರಿತು ನಿನಗೇನಾದರೂ ಗೊತ್ತೆ ಮರಿ' ಎಂದು ಪ್ರಶ್ನಿಸಿದರು. ತಕ್ಷಣ ಆ ಹುಡುಗಿ, 'ಓಹೋ ಗೊತ್ತು. ಆ ನೃತ್ಯವನ್ನು ಬಿರ್ಜು ಮಹಾರಾಜರು ಮಾಡುತ್ತಾರೆ' ಎಂದು ಮುಗ್ಧವಾಗಿ ಉತ್ತರಿಸಿದ್ದಳು. ತನ್ನ ಎದುರು ನಿಂತ ಆ ಮಹಾನ್ ವ್ಯಕ್ತಿಯೇ ಬಿರ್ಜು ಮಹಾರಾಜ್ ಎನ್ನುವುದು ಆಕೆಗೆ ಗೊತ್ತಿರಲಿಲ್ಲ. 'ಹೌದು, ಅವರು ಕಥಕ್ ನೃತ್ಯವನ್ನು ಮಾಡುತ್ತಾರೆ. ಅಷ್ಟೇ ಅಲ್ಲ, ಆ ನೃತ್ಯವನ್ನೇ ಬದುಕುತ್ತಾರೆ' ಎಂದು ಬಿರ್ಜು ಅವರು ಹೇಳಿದ್ದರು. ಕಥಕ್ ಎಂದರೆ ಅವರ ಜೀವವೇ ಆಗಿತ್ತು.

ಯಾವ ಆಡಂಬರದ ಪೋಷಾಕುಗಳಿಲ್ಲ, ಆಭರಣಗಳಂತೂ ಇಲ್ಲವೇ ಇಲ್ಲ. ಆದರೂ ಆ ನೃತ್ಯದ ವೈಭವವೇ ವೈಭವ. ಅವರ ಅಭಿನಯ ಮತ್ತು ನೃತ್ಯ ಯಾವ ರೀತಿ ಇರುತ್ತಿತ್ತು ಅಂದರೆ 'ಯಥೋ ಹಸ್ತ ತಥೋ ದೃಷ್ಟಿ, ಯಥೋ ದೃಷ್ಟಿ ತಥೋ ಮನಃ, ಯಥೋ ಮನಃ ತಥೋ ಭಾವ, ಯಥೋ ಭಾವ ತಥೋ ರಸಃ' ಎನ್ನುವ ಮಾತಿನ ಕೃತಿರೂಪವಾಗಿತ್ತು. ಹೌದು, ಅವರ ಅಭಿನಯ ವರ್ಣನಾತೀತವಾದುದು.

1938ರ ಫೆಬ್ರುವರಿ 4ರಂದು ಜನಿಸಿದ ಅವರ ಮೊದಲ ಹೆಸರು ದುಃಖಹರನ್/ಬ್ರಿಜ್ ಮೋಹನನಾಥ್ ಮಿಶ್ರ. ಎಳೆಯ ವಯಸ್ಸಿನಲ್ಲೇ ತಂದೆಯ ತೊಡೆಯ ಮೇಲೆ ಕುಳಿತು ತಿಹಾಯ್ ಮತ್ತು ಕಥಕ್ ನೃತ್ಯದ ಬೋಲ್‌ಗಳನ್ನು ಪಠಿಸುತ್ತಿದ್ದರು. ಚಿಕ್ಕ ವಯಸ್ಸಿನಲ್ಲೇ ತಂದೆಯನ್ನು ಕಳೆದುಕೊಂಡ ಬಿರ್ಜು ಮಹಾರಾಜ್, ತಾಯಿಯಿಂದ ಠುಮ್ರಿ ಮತ್ತು ಧುನ್, ಚಿಕ್ಕಪ್ಪ ಶಂಭು ಮಹಾರಾಜ್ ಮತ್ತು ಲಚ್ಚು ಮಹಾರಾಜ್ ಅವರಲ್ಲಿ 'ಲಖನೌ ಕಾಲ್ಕ ಬಿಂದಾದಿನ್' ಘರಾನಾ ಮಾದರಿಯ ಕಥಕ್ ಶಿಕ್ಷಣ ಪಡೆದರು. ಮುಂದೆ ಕಪಿಲಾ ವಾತ್ಸಾಯನ ಅವರ ಮಾರ್ಗದರ್ಶನ ಸಹ ಅವರಿಗೆ ಸಿಕ್ಕಿತು.

ದೆಹಲಿಯ ಭಾರತೀಯ ಕಲಾಕೇಂದ್ರ ಮತ್ತು ಕಥಕ್ ಕೇಂದ್ರದಲ್ಲಿ ನಿರ್ದೇಶಕರ ಹುದ್ದೆಯನ್ನೂ ಅವರು ಅಲಂಕರಿಸಿದರು. ಬಳಿಕ ತಮ್ಮದೇ ಆದ ಕಲಾಶ್ರಮ ಮೂಲಕ ಸಾವಿರಾರು ನೃತ್ಯ ಆಸಕ್ತರಿಗೆ ಕಥಕ್ ಶಿಕ್ಷಣ ನೀಡಿದರು. ಏಳು ವರ್ಷ ಅಭ್ಯಾಸ ಮಾಡಿದವರಿಗೆ ಮಾತ್ರ ರಂಗಮಂಚದ ಮೇಲೆ ಪ್ರದರ್ಶನಕ್ಕೆ ಅವಕಾಶ ಎನ್ನುವುದು ಅವರ ನಿಯಮವಾಗಿತ್ತು. ಅಂದರೆ ಸರಿಯಾದ ಕಲಿಕೆಗೆ ಅವರು ಅಷ್ಟೊಂದು ಮಹತ್ವ ನೀಡುತ್ತಿದ್ದರು.

ಬಿರ್ಜು ಮಹಾರಾಜರು ವ್ಯಾಪಾರಿ ಮನೋಭಾವದವರು ಆಗಿರಲಿಲ್ಲ. ಶ್ರೀಸಾಮಾನ್ಯನು ಕೂಡ ಅವರಲ್ಲಿ ಶಿಕ್ಷಣ ಪಡೆಯಬಹುದಿತ್ತು. ಅವರ ಪ್ರಕಾರ ನೃತ್ಯ ಕಲಾವಿದನಿಗೆ ಸಂಗೀತ ಜ್ಞಾನ ಮತ್ತು ತಬಲಾ ವಾದನ ಕೌಶಲ ಅತ್ಯಗತ್ಯ. ಭಕ್ತಿಯನ್ನು ಪ್ರಕಟಿಸಲು ಲಿಂಗ ಭೇದ ಬೇಡ, ವಯಸ್ಸಿನ ಅಂತರ ಇಲ್ಲ ಎಂದು ಪ್ರತಿಪಾದಿಸುತ್ತಿದ್ದರು.

ಬಿರ್ಜು ಮಹಾರಾಜರು ಕಥಕ್ ಕಲೆಗೆ ಪುನರುಜ್ಜೀವನ ನೀಡಿದವರು. ಬಹುತೇಕ ಪ್ರತಿಯೊಬ್ಬ ಸಮಕಾಲೀನ ನೃತ್ಯಗಾರನು, ಅವರ ಪ್ರತಿಭೆಯಿಂದ ಪ್ರಭಾವಿತನಾಗಿದ್ದಾನೆ ಎಂಬುದರಲ್ಲಿ ಸಂಶಯವಿಲ್ಲ. ಬಿರ್ಜು ಅವರು ಪೌರಾಣಿಕ, ಐತಿಹಾಸಿಕ ಮತ್ತು ಸಾಮಾಜಿಕ ವಿಷಯಗಳ ಮೇಲೆ ಗುಂಪು ಸಂಯೋಜನೆ, ನೃತ್ಯ ನಾಟಕಗಳ ಪ್ರವರ್ತಕರೂ ಹೌದು. ಅವರ ಕೆಲವು ಜನಪ್ರಿಯ ನಿರ್ಮಾಣಗಳಲ್ಲಿ 'ಕೃಷ್ಣಾಯನ್', 'ಕಥಾ ರಘುನಾಥ್ ಕಿ', 'ಶಾನ್ ಇ ಅವಧ್', 'ಲಯ ಪರಿಕ್ರಮ'ಗಳು ಸಹ ಸೇರಿವೆ. ಜನರ ದೈನಂದಿನ ಕಥೆಗಳೇ ಅವರ ನೃತ್ಯ ರೂಪಕಗಳಿಗೆ ವಸ್ತುಗಳಾಗಿದ್ದವು.

ಬಿರ್ಜು ಮಹಾರಾಜ್ ಅವರದು ಬಹುಮುಖ ಪ್ರತಿಭೆ. ಅವರೊಬ್ಬ ನೃತ್ಯ ಕಲಾವಿದ, ಗಾಯಕ, ತಾಳವಾದ್ಯ ಪರಿಣಿತ, ಸಂಗೀತಗಾರ, ನೃತ್ಯ ಸಂಯೋಜಕ, ವರ್ಣಚಿತ್ರಕಾರ, ಕವಿ ಮತ್ತು ವಿನಮ್ರ ಶಿಕ್ಷಕ ಎಲ್ಲವೂ ಆಗಿದ್ದರು. ಪದ್ಮಭೂಷಣ, ಕಾಳಿದಾಸ್ ಸಮ್ಮಾನ್, ಸೋವಿಯತ್ ಲ್ಯಾಂಡ್ ನೆಹರೂ ಪ್ರಶಸ್ತಿಗಳು ಅವರಿಗೆ ಸಂದಿವೆ. ಕೇವಲ ಸ್ಪಿಂಗ್ ಮಾಡುವುದು ಕಥಕ್ ಅಲ್ಲ, ಸರ್ಕಸ್ ಎನ್ನುವ ಅವರ ಮಾತು ಇಂದಿನ ಪೀಳಿಗೆಗೆ ಸದಾ ದಾರಿದೀಪವಾಗಿರಲಿದೆ



ಬಿರ್ಜು ಮಹಾರಾಜರ ನೃತ್ಯ ವೈಭವದ ಪರಿ...

ಹೃದಯದಲಿ ಇದೇನಿದು?

10ನೇ ಪುಟದಿಂದ...

ಭಾರತದಲ್ಲಿ ನಡೆಯಬಹುದೇ?

1997ರಲ್ಲಿ ಡಾ. ಧನಿರಾಮ್ ಭರುಹಾ ಎಂಬ ಅಸ್ಸಾಮಿನ ಹೃದಯ ತಜ್ಞರು ಮೆದುಳು ನಿಷ್ಕ್ರಿಯವಾಗಿದ್ದ ಪುರ್ನೋ ಸೈಕಿಯಾ ಎಂಬ 32 ವರ್ಷದ ವ್ಯಕ್ತಿಯೊಬ್ಬನಿಗೆ ಹಂದಿಯ ಹೃದಯ, ಮೂತ್ರಪಿಂಡ ಹಾಗೂ ಶ್ವಾಸಕೋಶಗಳನ್ನು ಕಸಿ ಮಾಡಿದ್ದರು. ದುರಾದೃಷ್ಟವಶಾತ್ ಆ ವ್ಯಕ್ತಿ ಬದುಕಲಿಲ್ಲ. ಇದು ದೇಶಾದ್ಯಂತ ಸುದ್ದಿಯಾದದ್ದಲ್ಲದೇ ಇದಕ್ಕೆ ಕಾರಣರಾದ ಡಾ. ಭರುಹಾರನ್ನು ನಲವತ್ತು ದಿನಗಳ ಕಾಲ ಜೈಲಿಗಟ್ಟಲಾಗಿತ್ತು. ಅಸ್ಸಾಂ ಸರ್ಕಾರ ಇದಕ್ಕಾಗಿ ರಚಿಸಿದ ಸಮಿತಿಯು ಈ ಪ್ರಯೋಗವನ್ನು ಅನೈತಿಕ ಹಾಗೂ ಕಾನೂನುಬಾಹಿರ ಎಂದು ವರದಿ ನೀಡಿತು. ಇಷ್ಟಾಗಿಯೂ ಒಂದಲ್ಲಾ ಒಂದು ದಿನ ತಮ್ಮ ಪ್ರಯತ್ನಗಳಿಗೆ ಫಲ ಸಿಕ್ಕೇ ಸಿಕ್ಕುತ್ತದೆ ಎಂಬ ಆಶಾಭಾವನೆಯಲ್ಲಿ ಡಾ.ಭರುಹಾ ಇದ್ದರು. ಅದಕ್ಕೆ ಪೂರಕವೆಂಬಂತೆ ಇತ್ತೀಚಿನ ಪ್ರಯೋಗ ಯಶಸ್ವಿಯಾಗಿದೆ.



ವಂಶವಾಹಿ ಮಾರ್ಪಾಡಿಗೊಳಗಾದ ಹಂದಿಯ ಹೃದಯ ಅಳವಡಿಸಿಕೊಂಡ ಡೇವಿಡ್ ಬೆನ್ನೆಟ್ (ಬಲ) ಶಸ್ತ್ರಚಿಕಿತ್ಸಕ ಬಾರ್ಟಲಿ ಪಿ. ಗ್ರಿಫಿತ್ ಅವರೊಂದಿಗೆ. ಅಮೆರಿಕದ ಯೂನಿವರ್ಸಿಟಿ ಆಫ್ ಮೇರಿಲ್ಯಾಂಡ್ ಮೆಡಿಕಲ್ ಸೆಂಟರ್‌ನಲ್ಲಿ ಈ ಶಸ್ತ್ರಚಿಕಿತ್ಸೆ ನಡೆದಿದೆ.

ನೈತಿಕತೆಯ ಪ್ರಶ್ನೆ

ಪ್ರತಿಯೊಂದು ಕುಲಾಂತರಿ ಸಂಗತಿಗಳಿಗೆ ಸದಾ ತಳುಕು ಹಾಕಿಕೊಂಡಿರುವ ವಿಷಯವೇ ನೈತಿಕತೆ. ಇದೊಂದು ಅಭೂತಪೂರ್ವ ಯಶಸ್ವೀ ಪ್ರಯೋಗ ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ ನೈತಿಕತೆಯ ಪ್ರಶ್ನೆ ಬಂದಾಗ ಹಲವಾರು ಕಗ್ಗಂಟುಗಳು ಧುತ್ತನೆ ಪ್ರತ್ಯಕ್ಷವಾಗುತ್ತವೆ. ಈ ಕಸಿ ಶಸ್ತ್ರಚಿಕಿತ್ಸೆಗೆ ಒಳಗಾಗುವ ವ್ಯಕ್ತಿ ಜೀವನಪರ್ಯಂತ ಹಲವಾರು ಇಮ್ಯುನೋ ಸಪ್ರೆಸೆಂಟ್ಸ್ ಎಂಬ ಔಷಧಗಳನ್ನು ತೆಗೆದುಕೊಳ್ಳುತ್ತಲೇ ಇರಬೇಕಾಗುತ್ತದೆ. ಅಲ್ಲದೇ ಯಾವುದೇ ಸಂದರ್ಭದಲ್ಲಿಯೂ ಅವನ ದೇಹ ಕಸಿ ಮಾಡಿದ ಅಂಗಾಂಗಗಳನ್ನು ತ್ಯಜಿಸಬಹುದು, ಇಂತಹ ಸಾಧ್ಯತೆಗಳು ಸದ್ಯದ ಮಟ್ಟಿಗಂತೂ ಜಾಸ್ತಿಯಿವೆ. ಪೇಟಾದಂತಹ ಸಂಸ್ಥೆಗಳು ಈ ತಂತ್ರಜ್ಞಾನವನ್ನು ಪ್ರಬಲವಾಗಿ ವಿರೋಧಿಸುತ್ತಿವೆ. ಇನ್ನೊಂದು ಜೀವಿಯನ್ನು ಕೊಲ್ಲುವ ಹಕ್ಕು ನಮಗಿಲ್ಲ, ಪ್ರಾಣಿಗಳಿಗೂ ಬದುಕುವ ಹಕ್ಕಿದೆ ಎಂಬುದು ಅವರ ವಾದ. ಇನ್ನು ಹಂದಿಯ ವರ್ಜ್ಯವಿರುವ ಯಹೂದಿಗಳು ಹಾಗೂ ಮುಸಲ್ಮಾನರು ಇದನ್ನು ಯಾವ ರೀತಿಯಲ್ಲಿ ಸ್ವೀಕರಿಸುವರು ಎಂಬುದು ಚರ್ಚಿಸಬೇಕಾದ ವಿಷಯವೇ ಹೌದು.

ಈ ತಂತ್ರಜ್ಞಾನವು ವೈದ್ಯಕೀಯ ಕ್ಷೇತ್ರದಲ್ಲಿ ಬಿರುಗಾಳಿ ಎಬ್ಬಿಸಿರುವುದಂತೂ ನಿಜ. ಮಾನವನ ಜೀವನದ ಮುಂದೆ ಅನ್ಯಜೀವಿಗಳ ಜೀವ ನಗಣ್ಯ ಎಂಬ ಭಾವನೆಯನ್ನು ನಾವಪ್ಪಿಕೊಂಡು ಅಷ್ಟೋ ಕಾಲವಾಗಿದೆ. ಮನುಷ್ಯನ ಜೀವ ಉಳಿಕೆಯ ಪ್ರಶ್ನೆ ಬಂದರೆ ಉಳಿದೆಲ್ಲವೂ ಶೂನ್ಯ. ಬಹಳ ಮುಖ್ಯವಾಗಿ ಬೆನ್ನೆಟ್ ಈ ಕಸಿ ಚಿಕಿತ್ಸೆಯಿಂದ ಹೇಗೆ ಚೇತರಿಸಿಕೊಳ್ಳುತ್ತಾರೆ ಎನ್ನುವುದರ ಮೇಲೆ ಈ ಪ್ರಯೋಗದ ಯಶಸ್ಸು ನಿಂತಿದೆ. ಆತ ದೀರ್ಘಾಯುಷಿಯಾಗಲಿ ಎಂದು ಹಾರೈಸೋಣ.

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಶಬ್ದಗಳೊಡನೆ ಸರಸ

ಪ್ರಾಣಿಗಳನ್ನು ಗುರುತಿಸಿ

A. ಅನುಸ್ವಾರ ಹೊಂದಿರುವ ಎರಡಕ್ಷರದ ಐದು ಪ್ರಾಣಿಗಳನ್ನು ಗುರುತಿಸಿ

1. __ ಂ __
2. __ ಂ __
3. __ ಂ __
4. __ ಂ __
5. __ ಂ __

B. ದೀರ್ಘ ಸ್ವರ ಹೊಂದಿರುವ ಎರಡು ಅಕ್ಷರಗಳ ಐದು ಪ್ರಾಣಿಗಳನ್ನು ಗುರುತಿಸಿ

1. __ ೀ __
2. __ ೀ __
3. __ ೀ __
4. __ ೀ __
5. __ ೀ __

C. ಒತ್ತಕ್ಷರ ಹೊಂದಿರುವ ಎರಡು ಅಕ್ಷರಗಳ ನಾಲ್ಕು ಪ್ರಾಣಿಗಳನ್ನು ಗುರುತಿಸಿ

1. __ __
2. __ __
3. __ __
4. __ __

ಕೊಂಚತಂತ್ರ

ಈ ಬಾರಿ ಪದ್ಮ ಪ್ರಶಸ್ತಿ ಪಡೆದ ಕರ್ನಾಟಕದ ಮೂವರ ಹೆಸರನ್ನು HMT ಎಂಬ ಮೂರು ಅಕ್ಷರಗಳ ಮೂಲಕ ಸುಲಭವಾಗಿ ನೆನಪಿಡಬಹುದು

H = ಹಾಜಬ್ಬ
M = ಮಂಜಮ್ಮ ಜೋಗತಿ
T = ತುಳಸಿಗೌಡ



ಅದಲು ಬದಲು ಕಂಚಿ ಕದಲು...


ಇಲ್ಲಿರುವ ಪದಗಳ ಅಕ್ಷರಗಳನ್ನು ಬಳಸಿಕೊಂಡು ಅಷ್ಟೇ ಅಕ್ಷರಗಳ ಬೇರೊಂದು ಪದ ರಚಿಸಬಲ್ಲಿರಾ?

1. ಕೆಳದಿಗಿಳಿ = ________
2. ನಾಯಿತಿವಿ = ________
3. ಪ್ರಭಾಸುತ = ________
4. ಮರನೂತ = ________


ಗಣಿತದಲ್ಲಿ ಗರ್ದಿ ಗಮ್ಮತ್ತು

A. ದೊಡ್ಡಾಟ: ಇಲ್ಲಿ ಕೊಟ್ಟಿರುವ ಆಕೃತಿಯ ಪ್ರತಿ ಚೌಕದಲ್ಲಿ 1ರಿಂದ 12 ಸಂಖ್ಯೆಗಳನ್ನು ತುಂಬಬೇಕು. ಆದರೆ ನಿಯಮ ಪಾಲಿಸಬೇಕು.

ನಿಯಮ: ಒಮ್ಮೆ ಒಂದು ಸಂಖ್ಯೆಯನ್ನು ಒಂದು ಚೌಕದಲ್ಲಿ ತುಂಬಿದ ಮೇಲೆ ಆ ಸಂಖ್ಯೆಯನ್ನು ಅದರ ಅಕ್ಕಪಕ್ಕ ಅಥವಾ ಮೇಲೆ ಕೆಳಗೆ ಅಥವಾ ಯಾವುದೇ ಮೂಲೆಯಲ್ಲಿ ಮತ್ತೆ ತುಂಬಬಾರದು. ಹೀಗೆ 1ರಿಂದ 12ರವರೆಗಿನ ಸಂಖ್ಯೆಗಳನ್ನು ಚೌಕದಲ್ಲಿ ಹೊಂದಿಸಿ– ಆನಂದಿಸಿ.



B. ಸಣ್ಣಾಟ: ಮೇಲಿನ ನಿಯಮ ಅನುಸರಿಸಿ 1ರಿಂದ 8 ಸಂಖ್ಯೆಗಳನ್ನು ಹೊಂದಿಸಿ– ಆನಂದಿಸಿ



ದೃಶ್ಯ ಚಿತ್ರ ಶ್ರೇಷ್ಠ ಕಥೆಯ — ಗುರುಭಕ್ತ ಏಕಲವ್ಯ

• ಕಲೆ-ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ



ಈತ ಮಹಾಭಾರತ ಕಥೆಯಲ್ಲಿ ಬರುವ ಏಕಲವ್ಯ. ಈತ ಬೇಟೆಗಾರರ ಪಂಗಡಕ್ಕೆ ಸೇರಿದ ರಾಜಕುಮಾರ. ಬಿಲ್ವಿದ್ಯೆಯಲ್ಲಿ ನಿಪುಣನಾಗಿದ್ದ. ಶಸ್ತ್ರ ವಿದ್ಯೆಯನ್ನು ಬಹುಬೇಗ ಕಲಿಯಬಲ್ಲ ಛಾತಿ ಅವನಗಿತ್ತು



ಅದೇ ಕಾಲದಲ್ಲಿ ದ್ರೋಣಾಚಾರ್ಯರು ಕುರುವಂಶದ (ಕೌರವ-ಪಾಂಡವ) ರಾಜಕುಮಾರರಿಗೆ ಬಿಲ್ವಿದ್ಯೆ ಕಲಿಸುತ್ತಿದ್ದರು. ಶಬ್ದವೇದಿ ವಿದ್ಯೆಯೂ ಅದರಲ್ಲಿ ಪ್ರಮುಖವಾದದ್ದು



ದ್ರೋಣಾಚಾರ್ಯರು ಬಿಲ್ವಿದ್ಯೆ ಕಲಿಸುತ್ತಿದ್ದದ್ದನ್ನು ಏಕಲವ್ಯ ನೋಡಿದ. ತನಗೂ ಕಲಿಸಬೇಕೆಂದು ಆಚಾರ್ಯರ ಬಳಿ ಕೇಳಿದ. ಕ್ಷತ್ರಿಯರಿಗಲ್ಲದೇ ಬೇರಾರಿಗೂ ವಿದ್ಯೆ ಕಲಿಸುವುದಿಲ್ಲ ಎಂದು ಅವರು ಹೇಳಿದರು



ಕೊನೆಗೆ ಏಕಲವ್ಯ ದ್ರೋಣಾಚಾರ್ಯರ ಪ್ರತಿಮೆ ಮಾಡಿ ಅದನ್ನೇ ಗುರು ಎಂದು ಭಾವಿಸಿ ಬಿಲ್ವಿದ್ಯೆ ಅಭ್ಯಾಸ ಮಾಡತೊಡಗಿದ. ಅವನಿಗೆ ಅರ್ಜುನನಷ್ಟೇ ಬಿಲ್ವಿದ್ಯೆ ಕೌಶಲ ಸಿದ್ಧಿಸಿತು



ಒಂದು ದಿನ ದೂರದಲ್ಲಿ ಘರ್ಜಿಸಿದ ಸಿಂಹವೊಂದಕ್ಕೆ ಏಕಲವ್ಯ ಶಬ್ದವೇದಿ ವಿದ್ಯೆ ಮೂಲಕ ಬಾಣ ಪ್ರಯೋಗ ಮಾಡಿದ. ಶಬ್ದವೇದಿ ವಿದ್ಯೆ ಅವನಿಗೂ ಸಿದ್ಧಿಸಿರುವುದು ದ್ರೋಣಾಚಾರ್ಯರಿಗೆ ಗೊತ್ತಾಯಿತು



ಏಕಲವ್ಯನಿದ್ದಲ್ಲಿಗೆ ಬಂದ ದ್ರೋಣಾಚಾರ್ಯರು ಈ ವಿದ್ಯೆ ಕಲಿತದ್ದಕ್ಕಾಗಿ ಗುರುದಕ್ಷಿಣೆಯಾಗಿ ಎಡಗೈ ಹೆಬ್ಬೆರಳನ್ನು ನೀಡುವಂತೆ ಕೇಳಿದರು. ಏಕಲವ್ಯ ಮರುಮಾತನಾಡದೆ ಕತ್ತರಿಸಿ ಕೊಟ್ಟ. ಗುರುಭಕ್ತಿಯ ಕಾರಣಕ್ಕೆ ಪುರಾಣದಲ್ಲಿ ಹೆಸರಾದ

ಟ್ವೆಂಟಿ – 20 ಮ್ಯಾಚ್

A. ಈ ಪ್ರಶ್ನೆಗಳಿಗೆ A ಅಥವಾ B ಉತ್ತರ ಹೊಂದಿಸಿ

1. ಕಯಾದು ಯಾರು?	A. ಭಕ್ತ ಮಾರ್ಕಂಡೇಯನ ತಾಯಿ B. ಭಕ್ತ ಪ್ರಹ್ಲಾದನ ತಾಯಿ
2. ಕನ್ನಡದ ಮೊತ್ತಮೊದಲ ಗದ್ಯ ಗ್ರಂಥ ಯಾವುದು?	A. ವಡ್ಡಾರಾಧನೆ B ಕವಿರಾಜ ಮಾರ್ಗ
3. ಭಾರತದಲ್ಲಿಯೇ ಹುಟ್ಟಿದ ಎರಡು ಗುಂಪು ಆಟಗಳು ಯಾವುವು?	A. ಕ್ರಿಕೆಟ್, ವಾಲಿಬಾಲ್ B. ಕಬಡ್ಡಿ, ಕೊಕ್ಕೊ
4. ಜಡ ನೀರಿನ ಸಂಕೇತವೇನು?	A. D2O B. H2O
5. ಜಾಗತಿಕ ಮಹಿಳಾ ದಿನವನ್ನು ಎಂದು ಆಚರಿಸುತ್ತಾರೆ?	A. ಏಪ್ರಿಲ್ 8 B. ಮಾರ್ಚ್ 8
6. ಪೆಂಗ್ವಿನ್‌ಗಳು ಎಲ್ಲಿ ವಾಸಿಸುತ್ತವೆ?	A. ಅಟ್ಲಾಂಟಿಕ್ ಖಂಡ B. ಏಷ್ಯಾ ಖಂಡ
7. ರೇಖಾಗಣಿತದ ಜನಕ ಯಾರು?	A. ಭಾಸ್ಕರಾಚಾರ್ಯ B. ಯೂಕ್ಲಿಡ್
8. 'ಚೋಮನದುಡಿ' ಇದು ಯಾರ ಕೃತಿ?	A. ಶಿವರಾಮ ಕಾರಂತ B. ಮಾಸ್ತಿ ವೆಂಕಟೇಶ ಅಯ್ಯಂಗಾರ್
9. ಅತಿ ಸಣ್ಣ ಪಕ್ಷಿ ಯಾವುದು?	A ಹಮ್ಮಿಂಗ್ ಬರ್ಡ್ B. ಗುಬ್ಬಿ
10. ಅಕ್ಟೋಪಸ್ ಪ್ರಾಣಿಗೆ ಎಷ್ಟು ಕೈಗಳಿರುತ್ತವೆ?	A. ಹತ್ತು B. ಎಂಟು

B. ಈ ಲೆಕ್ಕಗಳಿಗೂ ತಾಳೆಗಳಿಗೂ ಹೊಂದಿಸಿ

1.	857-318	=	A. 29
2.	346-137	=	B. 112
3.	148-93	=	C. 191
4.	765-345	=	D. 101
5.	999-801	=	E. 420
6.	476- 375	=	F. 55
7.	844-448	=	G. 198
8.	747-718	=	H. 209
9.	367 - 176	=	I. 396
10.	548 - 436	=	J. 539

ಪದ ಹಿಗ್ಗು

ಇಲ್ಲಿ ಕೊಟ್ಟಿರುವ ಮಧ್ಯದ ಅಕ್ಷರಕ್ಕೆ ಮೇಲಿನ ಪಟ್ಟಿಯ ಪದವನ್ನು ಹಿಗ್ಗಿಸಿ ಆಚೀಚೆ ತುಂಬಿದರೆ ಮೂರು ಅಕ್ಷರದ ಪದವಾಗುತ್ತದೆ ಹೊಂದಿಸಿ.

1. ಮಾನ್ಯ 2. ಪಡೆ 3. ಗೋಳ 4. ಕಾಸು
5. ಗುಣಿ 6. ಬಾಜಿ 7. ಸೇವೆ 8. ಚಿತೆ

1.		ಡಿ		5.		ಮಾ	
2.		ಲಿ		6.		ರಾ	
3.		ಲಾ		7.		ಗ	
4.		ತು		8.		ರ	



ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಹಿಗ್ಗು: 1. ಸುರುಳಿ 2. ಅಯ್ಯಪ್ಪ 3. ಇಮ್ಮಡಿ 4. ಸದ್ಗತಿ 5. ಸಕಾಲ 6. ಶಾಮಲೆ 7. ಕನ್ನಡಿ 8. ಸೋನಿಯಾ

ಅದಲು ಬದಲು ಕಂಚಿ ಕದಲು:
1. ಮೊಲದ ಬೇಟೆ 2. ನಲಿವಿನ ಆಟ
3. ಕಡಲತೀರ 4. ಮಗುಹಾರು

ಪದಹುಡುಕಾಟ: ಚನ್ನವೀರ ಕಣವಿ

ಟ್ವೆಂಟಿ-20 ಮ್ಯಾಚ್:
1- I 2 -E 3-G 4-C 5-K 6-L 7-N 8-B 9-O 10- J
11-H 12-P 13-Q 14-R 15-T 16-F 17-S 18-M 19-D 20-A

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ನೀಡಿದ ಆಯ್ದ ಮೂವರು ಪುಟಾಣಿಗಳು



ನಿಹಾರಿಕ ಪಿ., ಮಂಡ್ಯ



ಪ್ರತೀಕ್ಷಾ ಕೆ. ಕುಲಕರ್ಣಿ, ಕುಷ್ಟಗಿ



ಸೃಜನಾ ಟಿ.ಆರ್., ಹೊಸಪೇಟೆ

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇ- ಮೇಲ್ ವಿಳಾಸ:

majakoora@prajavani.co.in

ಮಾರ್ಚ್ 27, ಏಪ್ರಿಲ್ 2ರಿಂದ ಟೂರ್ನಿಗೆ ಸಂಭವನೀಯ ದಿನಾಂಕಗಳು

ಪುಣೆ, ಮುಂಬೈನಲ್ಲಿ ಐಪಿಎಲ್: ಒಲವು

ನವದೆಹಲಿ (ಪಿಟಿಐ): ಈ ವರ್ಷದ ಇಂಡಿಯನ್ ಪ್ರೀಮಿಯರ್ ಲೀಗ್ ಟಿ20 ಕ್ರಿಕೆಟ್ ಟೂರ್ನಿಯನ್ನು ಭಾರತದಲ್ಲಿಯೇ ಆಯೋಜಿಸಬೇಕು ಎಂದು ಫ್ರ್ಯಾಂಚೈಸಿಗಳ ಮಾಲೀಕರು ಒಲವು ತೋರಿಸಿದ್ದಾರೆ.

ಶನಿವಾರ ನಡೆದ ಸಭೆಯಲ್ಲಿ ಈ ಕುರಿತು ಚರ್ಚೆ ನಡೆಯಿತೆಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮುಂಬೈ ಮತ್ತು ಪುಣೆಯಲ್ಲಿ ಟೂರ್ನಿಯನ್ನು ಆಯೋಜಿಸಬೇಕು. ಕೋವಿಡ್ ಪರಿಸ್ಥಿತಿ ತೀರಾ ಗಂಭೀರವಾಗಿದ್ದರೆ ಮಾತ್ರ ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ ಆಯೋಜಿಸುವತ್ತ ಯೋಚಿಸಬೇಕು. ಅದು ಬಿಟ್ಟರೆ ದಕ್ಷಿಣ ಆಫ್ರಿಕಾದಲ್ಲಿಯೂ ಆಯೋಜಿಸುವ ಆಯ್ಕೆಯನ್ನು ಇಟ್ಟುಕೊಳ್ಳಬೇಕು ಎಂದು ಸಲಹೆ ನೀಡಿದ್ದಾರೆ.

ಹೊಸದಾಗಿ ಸೇರ್ಪಡೆಯಾಗಿರುವ ಎರಡು ತಂಡಗಳೂ ಸೇರಿದಂತೆ ಎಲ್ಲ ಫ್ರ್ಯಾಂಚೈಸಿಗಳೂ ಭಾರತದಲ್ಲಿಯೇ ಟೂರ್ನಿ ಆಯೋಜನೆಗೆ ಒತ್ತು ನೀಡಿವೆ.

ಆದರೆ ಶ್ರೀಲಂಕಾದಲ್ಲಿ ಆಯೋಜಿಸುವ ಕುರಿತು ಯಾವುದೇ ಮಾತುಕತೆಯೂ ನಡೆಯಲಿಲ್ಲ ಎಂದು ತಿಳಿದುಬಂದಿದೆ.


ಏಪ್ರಿಲ್ 2ರಿಂದ ಟೂರ್ನಿ?: ಟೂರ್ನಿಯನ್ನು ಮಾರ್ಚ್ 27 ಅಥವಾ ಏಪ್ರಿಲ್ 2ರಿಂದ ಆರಂಭಿಸಬೇಕು ಎಂದು ನಿರ್ಧರಿಸಲಾಗಿದೆ.

ಕೆಲವರು ಮಾರ್ಚ್ 27ರಂದೇ ಆರಂಭವಾಗಬೇಕು ಎಂದು ಹೇಳಿದರು. ಆದರೆ ಬಹುತೇಕರು ಏಪ್ರಿಲ್ 2 ಸೂಕ್ತ ಎಂದು ಪ್ರತಿಪಾದಿಸಿದರು.

ಭಾರತ ತಂಡವು ಮಾರ್ಚ್ 18ರಂದು ಲಖನೌನಲ್ಲಿ ಶ್ರೀಲಂಕಾ ವಿರುದ್ಧದ ಟಿ20 ಸರಣಿಯ ಕೊನೆಯ ಪಂದ್ಯವನ್ನು ಆಡಲಿದೆ. ಲೋಧಾ ಸಮಿತಿಯ ಶಿಫಾರಸಿನ್ವಯ ರೂಪುಗೊಂಡಿರುವ ನಿಯಮದ ಪ್ರಕಾರ ಬಿಸಿಸಿಐ ಯಾವುದೇ ಅಂತರರಾಷ್ಟ್ರೀಯ ಪಂದ್ಯದ 14 ದಿನಗಳ ನಂತರವಷ್ಟೇ ಐಪಿಎಲ್ ಆರಂಭಿಸಬೇಕು. ಆದ್ದರಿಂದ ಏಪ್ರಿಲ್ 2 ಸೂಕ್ತ ಎಂಬ ಅಭಿಪ್ರಾಯ ಕೇಳಿಬಂದಿದೆ.

ಶ್ರೇಯಸ್, ಚಾಹಲ್‌ಗೆ ಭಾರಿ ಮೌಲ್ಯದ ನಿರೀಕ್ಷೆ

ಭಾರತ ತಂಡದ ಬ್ಯಾಟರ್ ಶ್ರೇಯಸ್ ಅಯ್ಯರ್, ಸ್ಪಿನ್ನರ್ ಯಜುವೇಂದ್ರ ಚಾಹಲ್ ಮತ್ತು ಆಸ್ಟ್ರೇಲಿಯಾದ ಡೇವಿಡ್ ವಾರ್ನರ್ ಅವರಿಗೆ ಈ ಬಾರಿಯ ಐಪಿಎಲ್ ಹರಾಜು ಪ್ರಕ್ರಿಯೆಯಲ್ಲಿ ಭರ್ಜರಿ ಮೌಲ್ಯ ಲಭಿಸುವ ಸಾಧ್ಯತೆ ಇದೆ.


ಶ್ರೇಯಸ್ ಅಯ್ಯರ್


ಯಜುವೇಂದ್ರ ಚಾಹಲ್

ಈ ಬಾರಿ ಒಟ್ಟು 10 ತಂಡಗಳು ಟೂರ್ನಿಯಲ್ಲಿ ಕಣಕ್ಕಿಳಿಯಲಿವೆ. ಮುಂದಿನ ತಿಂಗಳು ನಡೆಯುವ ಹರಾಜು ಪ್ರಕ್ರಿಯೆಯಲ್ಲಿ ಎಲ್ಲ ತಂಡಗಳೂ ಆಟಗಾರರನ್ನು ಖರೀದಿಸಲಿವೆ.

ಶ್ರೇಯಸ್, ಚಾಹಲ್ ಜೊತೆಗೆ ಅನುಭವಿ ಆಟಗಾರ ಶಿಖರ್ ಧವನ್, ಇಶಾನ್ ಕಿಶನ್, ಆಲ್‌ರೌಂಡರ್ ಶಾರ್ದೂಲ್ ಠಾಕೂರ್, ಮಧ್ಯಮವೇಗಿ ದೀಪಕ್ ಚಾಹರ್, ಹೋದ ಬಾರಿ ಅತಿ ಹೆಚ್ಚು ವಿಕೆಟ್ ಪಡೆದಿದ್ದ ಹರ್ಷಲ್ ಪಟೇಲ್, ಆವೇಶ್ ಖಾನ್, ಸ್ಪಿನ್ನರ್ ರಾಹುಲ್ ಚಾಹರ್ ಮತ್ತು ಆಲ್‌ರೌಂಡರ್ ವಾಷಿಂಗ್ಟನ್ ಸುಂದರ್ ಅವರಿಗೂ ಬೇಡಿಕೆ ಕುದುರುವ ಸಾಧ್ಯತೆ ಇದೆ ಎನ್ನಲಾಗಿದೆ.

ಐಎಸ್‌ಎಲ್ ಟೂರ್ನಿ: ಎಫ್‌ಸಿ ಗೋವಾ ತಂಡ ಎದುರಾಳಿ

ಬಿಎಫ್‌ಸಿಗೆ ಜಯದ ಭರವಸೆ

ಪ್ರಜಾವಾಣಿ ವಾರ್ತೆ


ಬಿಎಫ್‌ಸಿಯ ಪ್ರಿನ್ಸ್ ಇಬಾರ ಅಭ್ಯಾಸ ನಡೆಸಿದರು

ಬೆಂಗಳೂರು: ಎಫ್‌ಸಿ ಗೋವಾ ಮತ್ತು ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ತಂಡಗಳು ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಟೂರ್ನಿಯಲ್ಲಿ ಗೆಲುವಿನ ನಿರೀಕ್ಷೆಯೊಂದಿಗೆ ಭಾನುವಾರ ಕಣಕ್ಕೆ ಇಳಿಯಲಿವೆ. ಗೋವಾದ ಬ್ಯಾಂಬೊಲಿಮ್‌ನ ಅಥ್ಲೆಟಿಕ್ ಕ್ರೀಡಾಂಗಣದಲ್ಲಿ ಹಣಾಹಣಿ ನಡೆಯಲಿದೆ.

ಮೂರು ಡ್ರಾ ಸೇರಿದಂತೆ ಸತತ ಐದು ಪಂದ್ಯಗಳಲ್ಲಿ ಸೋಲರಿಯದ ಬೆಂಗಳೂರು ಎಫ್‌ಸಿ ಸದ್ಯ ಭರವಸೆಯಲ್ಲಿದೆ. 11 ತಂಡಗಳು ಪಾಲ್ಗೊಂಡಿರುವ ಟೂರ್ನಿಯ ಪಾಯಿಂಟ್ ಪಟ್ಟಿಯ 10ನೇ ಸ್ಥಾನದಲ್ಲಿದ್ದ ಬಿಎಫ್‌ಸಿ ಡಿಸೆಂಬರ್ ಮಧ್ಯದಿಂದ ಉತ್ತಮ ಸಾಮರ್ಥ್ಯ ತೋರುತ್ತಿದೆ.

ಹೀಗಾಗಿ ಸದ್ಯ ಎಂಟನೇ ಸ್ಥಾನಕ್ಕೆ ಜಿಗಿದಿದೆ. ಗೋವಾ ಎದುರು ಗೆದ್ದರೆ 16 ಪಾಯಿಂಟ್‌ಗಳೊಂದಿಗೆ ಆರನೇ ಸ್ಥಾನಕ್ಕೇರಲಿದೆ. ಹಾಲಿ ಚಾಂಪಿಯನ್ ಮುಂಬೈ ಸಿಟಿ ಎಫ್‌ಸಿ ಎದುರಿನ ಪಂದ್ಯದಲ್ಲಿ 3–0 ಅಂತರದ ಜಯ ಗಳಿಸಿರುವುದು ತಂಡದ ಆತ್ಮವಿಶ್ವಾಸವನ್ನು ಹೆಚ್ಚಿಸಿದೆ.

ಮಾರ್ಕೊ ಪೆಜೊವೊಲಿ ಕೋಚ್ ಆಗಿರುವ ತಂಡದಲ್ಲಿ ಪ್ರಿನ್ಸ್ ಇಬಾರ ಮಿಂಚುತ್ತಿದ್ದಾರೆ. ಅವರಿಗೆ ರೋಷನ್ ಸಿಂಗ್ ಉತ್ತಮ ಸಹಕಾರ ನೀಡುತ್ತಿದ್ದಾರೆ. ಇಬಾರ ಗಳಿಸಿರುವ ಒಟ್ಟು 4 ಗೋಲುಗಳ ಪೈಕಿ 3ಕ್ಕೆ ರೋಷನ್ 'ಅಸಿಸ್ಟ್' ಮಾಡಿದ್ದರು.

ನಿರಾಶೆಯಲ್ಲಿ ಗೋವಾ: ಗೋವಾ ತಂಡ ಈ ಬಾರಿ ನಿರೀಕ್ಷೆಗೆ ತಕ್ಕಂತೆ ಆಡುತ್ತಿಲ್ಲ. ಹಿಂದಿನ ಎರಡು ಪಂದ್ಯಗಳಲ್ಲಿ ಬಲಿಷ್ಠವಲ್ಲದ ತಂಡಗಳ ವಿರುದ್ಧ ಜಯ ಗಳಿಸಲು ತಂಡಕ್ಕೆ ಸಾಧ್ಯವಾಗಿಲ್ಲ. ಒಟ್ಟು 12 ಪಂದ್ಯಗಳ ಪೈಕಿ ಮೂರರಲ್ಲಿ ಮಾತ್ರ ಗೆದ್ದಿರುವ ತಂಡ ಐದರಲ್ಲಿ ಸೋತಿದೆ. ಅದರ ಖಾತೆಯಲ್ಲಿ ಇರುವುದು 13 ಪಾಯಿಂಟ್ ಮಾತ್ರ.

ಬೆಂಗಳೂರು ಕೂಡ ಮೂರು ಪಂದ್ಯಗಳಲ್ಲಿ ಗೆಲುವು ಸಾಧಿಸಿದೆ. ಆದರೆ ನಾಲ್ಕರಲ್ಲಿ ಡ್ರಾ ಮಾಡಿಕೊಳ್ಳಲು ಸಾಧ್ಯವಾಗಿದೆ. ಹಿಂದಿನ ಬಾರಿ ಎರಡು ತಂಡಗಳು ಮುಖಾಮುಖಿಯಾದಾಗ ಗೋವಾ 2–1ರಲ್ಲಿ ಗೆದ್ದಿತ್ತು.

ಚೆನ್ನೈಯಿನ್‌ಗೆ ಜಯ

ಶನಿವಾರ ರಾತ್ರಿ ನಡೆದ ಪಂದ್ಯದಲ್ಲಿ ಚೆನ್ನೈಯಿನ್ ಎಫ್‌ಸಿ 2–1ರಲ್ಲಿ ನಾರ್ತ್ ಈಸ್ಟ್ ಯುನೈಟೆಡ್ ವಿರುದ್ಧ ಜಯ ಗಳಿಸಿತು. ಚೆನ್ನೈಯಿನ್ ಪರವಾಗಿ ಬೊರಿಸುಯಿಕ್ (52ನೇ ನಿಮಿಷ) ಮತ್ತು ಕೊಮಾನ್ (58ನೇ ನಿ) ಗೋಲು ಗಳಿಸಿದರೆ ನಾರ್ತ್ ಈಸ್ಟ್‌ಗಾಗಿ ದನ್ಮಾವಿಯಾ (35ನೇ ನಿ) ಗೋಲು ಗಳಿಸಿದರು.

ಇಂದಿನ ಪಂದ್ಯ

ಬೆಂಗಳೂರು ಎಫ್‌ಸಿ–ಎಫ್‌ಸಿ ಗೋವಾ
ಸ್ಥಳ: ಬ್ಯಾಂಬೊಲಿಮ್
ರಾತ್ರಿ 7.30

ಎಟಿಕೆ ಮೋಹನ್ ಬಾಗನ್–ಒಡಿಶಾ ಎಫ್‌ಸಿ
ಸ್ಥಳ: ಫತೋರ್ಡ
ರಾತ್ರಿ 9.30

ಲೈವ್: ಸ್ಟಾರ್ ಸ್ಪೋರ್ಟ್ಸ್

ಆನ್‌ಲೈನ್ ಚೆಸ್ ಟೂರ್ನಿ ಫೆ.2ಕ್ಕೆ

ಬೆಂಗಳೂರು: ಗ್ರಾಮಾಂತರ ಜಿಲ್ಲಾ ಚೆಸ್ ಸಂಸ್ಥೆ ಆಯೋಜಿಸಿರುವ ಆನ್‌ಲೈನ್ ಚೆಸ್ ಟೂರ್ನಿ ಫೆಬ್ರುವರಿ ಎರಡರಂದು ನಡೆಯಲಿದೆ. ಒಟ್ಟು ₹ 45 ಸಾವಿರ ಬಹುಮಾನ ಮೊತ್ತ ಇರುವ ಟೂರ್ನಿಯಲ್ಲಿ 7,9,11,14 ವರ್ಷದೊಳಗಿನವರ ಮತ್ತು ಮುಕ್ತ ವಿಭಾಗದಲ್ಲಿ ಸ್ಪರ್ಧೆಗಳು ನಡೆಯಲಿವೆ. www.chessfee.com ಮೂಲಕ ಹೆಸರು ನೋಂದಾಯಿಸಬಹುದು. ಮಾಹಿತಿಗೆ ಎ.ಚಿದಾನಂದ (9663405589) ಅವರನ್ನು ಸಂಪರ್ಕಿಸಬಹುದು.